# ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

(ಹೊನ್ನಾಳಿ ತಾಲೂಕನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕರು


ಮಾರ್ಗದರ್ಶಕರು

ಶ್ರೀ ಎ.ಎಸ್. ಪ್ರಭಾಕರ

ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

# ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

(ಹೊನ್ನಾಳಿ ತಾಲೂಕನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕರು

ವಿಜಯಲಕ್ಷ್ಮಿ. ಆರ್

ಮಾರ್ಗದರ್ಶಕರು

ಶ್ರೀ ಎ.ಎಸ್. ಪ್ರಭಾಕರ

ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪

# ದೃಢೀಕರಣ ಪತ್ರ

ಶ್ರೀ ವಿಜಯಲಕ್ಷ್ಮಿ .ಆರ್ ಇವರು ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ (ಹೊನ್ನಾಳಿ ತಾಲೂಕನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

ಎ.ಎಸ್. ಪ್ರಭಾಕರ
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪ್ರಮಾಣ ಪತ್ರ

ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ (ಹೊನ್ನಾಳಿ ತಾಲೂಕನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎ.ಎಸ್. ಪ್ರಭಾಕರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ


ವಿಜಯಲಕ್ಷ್ಮಿ .ಆರ್
ಸಂಶೋಧಕಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪರಿವಿಡಿ

# ದಾವಣಗೆರೆ ಜಿಲ್ಲೆ



## ಹೊನ್ನಾಳಿ ತಾ. ನಕ್ಷೆ





# ಅಧ್ಯಾಯ ೧

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಭಾರತಾದ್ಯಾಂತ ನೆಲೆಸಿರುವ ಸಮುದಾಯಗಳಲ್ಲಿ ಲಂಬಾಣಿಗಳು ತಮ್ಮ ಬಾಹ್ಯ ಚಹರೆಗಳ ಮೂಲಕ ನಮ್ಮ ಗಮನವನ್ನು ಸೆಳೆಯುತ್ತಾರೆ. ಸ್ತ್ರೀಯರ ಅತ್ಯಾಕರ್ಷಕ ವೇಷಭೂಷಣ ಆಭರಣಗಳಿಂದ ಇವರನ್ನು ಲಂಬಾಣಿಗರೆಂದು ಬೇಗ ಗುರುತಿಸಬಹುದು. ತಮ್ಮ ವಿಶಿಷ್ಟ ಸಾಂಸ್ಕೃತಿಕ ಚಹರೆಯನ್ನು ಕಾಪಾಡಿಕೊಂಡು ಊರುಗಳಿಂದ ದೂರ ತಮ್ಮದೇ ಆದ ಪ್ರತ್ಯೇಕ ತಾಂಡಾಗಳನ್ನು ಕಟ್ಟಿಕೊಂಡು ತಮ್ಮ ಕುಟುಂಬಗಳ ಮತ್ತು ರಕ್ತ ಸಂಬಂಧಿಗಳ ಜೊತೆ ತಮ್ಮದೇ ಆದ ಆಚಾರ ವಿಚಾರ, ಸಂಪ್ರದಾಯ, ವಿಧಿ, ನಿಷೇಧ, ಕುಲದೈವ, ಭಾಷೆ, ಕುಲ ಪಂಚಾಯಿತಿ, ವೇಷಭೂಷಣಗಳಿಂದ ಇತರ ಸಮುದಾಯಗಳಿಗಿಂತ ಭಿನ್ನವಾಗಿಯೇ ಜೀವಿಸುತ್ತಿದ್ದಾರೆ. ನಗರ ಮತ್ತು ಹಳ್ಳಿಗಳಿಂದ ದೂರ ತಾಂಡಾಗಳಲ್ಲಿ ವಾಸಿಸುವ ಇವರನ್ನು ಲಂಬಾಣಿ, ಬಣಜಾರ, ಬಂಜಾರಾ, ಸುಕಾಲಿ, ನಾಯ್ಕ ಮುಂತಾದ ಹಲವಾರು ಹೆಸರುಗಳಿಂದ ಗುರುತಿಸುತ್ತಾರೆ. ಭಾರತದಾದ್ಯಂತ ಹರಡಿರುವ ಲಂಬಾಣಿಗಳು ಒಂದೇ ಜಾತಿಯವರಾದರೂ, ತಾವು ಅನುಸರಿಸುವ ಕಸುಬುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಹೆಸರುಗಳು ಬಂದಿವೆ. ಇವರನ್ನು "ಬಂಜಾರಿ, ನಟ್‌ಬಂಜಾರಿ, ಸಿಂಕ್‌ಬಂಜಾರಿ, ಬಡಿಬಂಜಾರಿ, ದಿಗೋರಾ, ಬಾಮಶಿಯಾ, ಬ್ರಿಜ್‌ವಾಸಿ, ಚಾರಣ, ಗೋರ್, ದಿಗೋರಾ ಗಮಲೀಯ, ಗವಾರಿಯಾ, ಗವಾಲಿಯಾ, ಗೋರ್‌ಬಂಜಾರಾ, ಜೋಗಿ, ಲಬಾನ್, ಕಚಿಕಿವಾಲೆ, ಕಂಚನ, ಕಂಗೀ, ಕಂಗಸಿಯಾ, ಲಮಾನ್, ಲೋಬಾನ್, ಲಬಾನಿ, ಲಂಬಾಡಾ, ಲಾಥೋರ್, ರಾಥೋರ್, ನಾಯ್ಕ, ನಾಯಕ್, ನಾಯ್ಕಡಾ, ನಾಯಕಾ, ರೋಹಿನಾನ್, ಸಿಂಗಾರಿ, ಸಿಂಗಾಡ್ಯ, ವಂಜಾರ, ಬಣಜಾರ, ವನಚಾರಿ, ಸುಕಾಲಿ"[೧] ಮುಂತಾದ ಹಲವಾರು ಹೆಸರುಗಳಿಂದ ಬೇರೆ ಬೇರೆ ಪ್ರಾಂತ್ಯಗಳಲ್ಲಿ, ಸ್ಥಳಗಳಲ್ಲಿ ಕರೆಯಲಾಗುತ್ತದೆ.

"ಲಂಬಾಣಿಗಳನ್ನು ಬಂಜಾರ, ಲಯಾನಿ, ಲಂಬಾಡಾ, ಹಾಗೂ ಲಂಬಾನಿಗಳೆಂದು ಗುರುತಿಸಲಾಗುತ್ತದೆ. ಲಂಬಾನಿ ಎನ್ನುವ ಪದ ಸಂಸ್ಕೃತದ ಲವಣ ಎಂಬ ಶಬ್ದದಿಂದ ಬಂದಿದೆ. ಲವಣ ಎಂದರೆ ಉಪ್ಪು ಎಂದು, ಇದು ಇವರ ವ್ಯಾಪಾರದ ಒಂದು ಮೂಲಭೂತ ಸರಕಾಗಿತ್ತು. ಬಂಜಾರ ಎಂಬ ಲಂಬಾಣಿಗಳ ಇನ್ನೊಂದು ಹೆಸರು ಕೂಡಾ ಸಂಸ್ಕೃತದ ವನಚಾರಾ (ಕಾಡಿನಲ್ಲಿ ಅಲೆದಾಡು)"[೨] ಎಂಬ ಪದದಿಂದ ಬಂದಿರಬಹುದು. ಲಂಬಾಣಿಗಳು ಅಲೆಮಾರಿ ಸಮುದಾಯವಾಗಿದ್ದು ಪ್ರಾಚೀನ ಕಾಲದಿಂದಲೂ ಜೀವನೋಪಾಯಕ್ಕಾಗಿ ಆಹಾರ ಧಾನ್ಯಗಳನ್ನು, ಹತ್ತಿ, ತುಪ್ಪಟ ಹಾಗೂ ಅತ್ಯಾವಶ್ಯಕ ಜೀವನೋಪಾಯ ಸಾಮಗ್ರಿಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಎತ್ತಿನ ಬಂಡಿಯ ಮೂಲಕ ಸಾಗಿಸುತ್ತಿದ್ದ ವ್ಯಾಪಾರಿ ಸಮುದಾಯವಾಗಿದೆ.

ಬಂಜಾರರ ಮೂಲವನ್ನು ನಿಖರವಾಗಿ ಹೇಳುವುದು ತುಂಬಾ ಕಷ್ಟ ಹಾಗೂ ವಿದ್ವಾಂಸರಲ್ಲಿ ಭಿನ್ನ ಮತವಿದ್ದರೂ "ರಾಜಸ್ಥಾನದ ಮೇವಾರ ಪ್ರದೇಶದಿಂದ ದೇಶದ ಎಲ್ಲಾ ದಿಕ್ಕುಗಳಿಗೂ ಪಸರಿಸಿರಬಹುದೆಂದು ಹೇಳಬಹುದು. ಉತ್ತರಕ್ಕೆ ಕಾಶ್ಮೀರದವರೆಗೂ ದಕ್ಷಿಣದಲ್ಲಿ ದಖಿನ್ ಮತ್ತು ಅದರಾಚೆಗೂ ಪೂರ್ವದಲ್ಲಿ ಉತ್ತರ ಪ್ರದೇಶದ ಪೂರ್ವದವರೆಗೂ ಪಸರಿಸಿದ್ದಾರೆ"[೩] ಇವರು "ದೆಹಲಿ ಚಕ್ರವರ್ತಿಗಳು ದಕ್ಷಿಣ ಭಾರತದ ಜೊತೆ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಮೊಘಲರು ಮತ್ತು ಅಪಘನ್‌ರ ಸೈನ್ಯಕ್ಕೆ ಸರಕು  ಸಾಗಾಣಿಕೆದಾರರಾಗಿದ್ದರು"[೪]

"ದಕ್ಷಿಣ ಭಾರತದ ಮೇಲೆ ಮೊಘಲರು ಆಕ್ರಮಣಕ್ಕೆ ತೊಡಗಿದ್ದ ಕಾಲದಲ್ಲಿ ಪಶುಗಳನ್ನು ತಮ್ಮ ಉಪಯೋಗಕ್ಕಾಗಿ ಒದಗಿಸುವ ಜವಾಬ್ದಾರಿಯನ್ನು ಉತ್ತರ ಮತ್ತು ಪಶ್ಚಿಮ ಭಾರತದ ವ್ಯಾಪಾರಿ ಬುಡಕಟ್ಟು ಜನಾಂಗವಾದ ಬಂಜಾರರಿಗೆ ವಹಿಸಲಾಗಿತ್ತು. ಈ ರೀತಿಯಲ್ಲಿ ಆಂಧ್ರಪ್ರದೇಶ ಮತ್ತು ದಕ್ಷಿಣದ ಅನ್ಯ ಸಮೀಪವರ್ತಿ ಕ್ಷೇತ್ರದಲ್ಲಿ ಬಂಜಾರುಗಳು ಪ್ರವಾಸ ಮಾಡಿದರು. ಅಂತಿಮವಾಗಿ ಇವರು ದಕ್ಷಿಣದಲ್ಲಿ ನೆಲೆಯೂರಿದರು"[೫] ಜಿ.ಎ. ಗಿಯರ್‌ಸನ್ ಅವರು "ಬಂಜಾರರು ಅನುಭವವುಳ್ಳ ಸರಕು ಸಾಗಣಿಕೆದಾರರಾಗಿ ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ನೆಲೆಸಿದ್ದರೆಂದು"[೬] ಅಭಿಪ್ರಾಯ ಪಡುತ್ತಾರೆ. ಲಂಬಾಣಿಗರು "ಮೂಲತಃ ರಾಜಸ್ಥಾನದವರಾಗಿದ್ದು ತಮ್ಮ ರಾಸುಗಳ ಮೇಲೆ ಆಹಾರ ಖಾದ್ಯ ಪದಾರ್ಥಗಳನ್ನು ಹೇರಿಕೊಂಡು ಎಲ್ಲೆಡೆ ವ್ಯಾಪಾರ ಕೈಗೊಂಡವರಾಗಿದ್ದರು"[೭] ಲವಣಗಳ ವ್ಯಾಪಾರವನ್ನು ಕೈಗೊಳ್ಳುತ್ತಿದ್ದರು. ತಮ್ಮ ತಂಡಗಳೊಂದಿಗೆ ಕೆಲ ಕಾಲ ತಂಗಿ ನಂತರ ಮುಂದೆ ಸಾಗುತ್ತಿದ್ದರು. "ಬಂಜಾರರು ಉತ್ತರ ಭಾರತದಿಂದ ಬಂದಿದ್ದಾರೆ. ಅವರೆಲ್ಲಾ ಮಾರ್ವಾರ್ ಪ್ರದೇಶಕ್ಕೆ ಸೇರಿದವರು. ಇದು ಇವರ ಮೂಲ ಸ್ಥಾನ. ಇವರು ತಾವು ಕ್ಷತ್ರಿಯರು ಹಾಗೂ ರಜಪೂತ ಪೂರ್ವಿಕ ವಂಶದವರೆಂದು ಪ್ರತಿಪಾದಿಸುತ್ತಾರೆ. ಇವರು ಮೊಘಲ್ ಸೈನಿಕರ ಜೊತೆ ದಕ್ಷಿಣ ಭಾರತಕ್ಕೆ ಬಂದರು. ಹಾಗೂ ಬಂಜಾರರು ಆಹಾರ ಧಾನ್ಯಗಳನ್ನು ಮತ್ತು ಉಪ್ಪನ್ನು ಮಾರುವ ವ್ಯಾಪಾರಿಗಳಾಗಿದ್ದು, ತಮ್ಮ ಎತ್ತಿನ ಬಂಡಿಯಲ್ಲಿ ಹತ್ತಿ, ದವಸ ಧಾನ್ಯ, ಉಪ್ಪು ಉಣ್ಣೆ, ತುಪ್ಪಟ ಇನ್ನಿತರೆ ಆವಶ್ಯಕ ಸರಕು ದಿನಸಿ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ಎಲ್ಲಾ ಪ್ರದೇಶಗಳಲ್ಲೂ ತಮ್ಮ ಪ್ರಾಬಲ್ಯವನ್ನು ವ್ಯಾಪಾರದ ಮೂಲಕ ಹೊಂದಿದ್ದರು. ರೈಲ್ವೆ ಹಾಗೂ ರಸ್ತೆ ಅಭಿವೃದ್ಧಿಯ ನಂತರ ತಮ್ಮ ಮೂಲ ವೃತ್ತಿಯಾದ ವ್ಯಾಪಾರದಿಂದ ಹಿನ್ನಡೆ ಸಾಧಿಸುತ್ತಾ ಬಂದರು"[೮]

ಬಂಜಾರರನ್ನು ವಿದ್ವಾಂಸರು ತಮ್ಮದೇ ರೀತಿಯಲ್ಲಿ ಹಲವಾರು ಹೆಸರುಗಳಿಂದ ಗುರುತಿಸಿದ್ದಾರೆ. ಲಂಬಾಣಿಗಳನ್ನು "ಒಣಜಾರಿ, ಗೋರಮಾಡಿ, ಲಂಬಾಣಿ, ಬ್ರಿಂಜಾರಿ ಬಂಜಾರಿ, ಬೋಯ್‌ಪುರಿ, ಸುಗಾಲಿ ಸುಕಾಲಿ"[೯]ಗಳೆಂದು ಕರೆಯುವರು "ಲಮಾನಿ, ವಂಜಾರಿಗಳು, ಬಂಜಾರಿಗಳು, ಬಂಜಾರಿ, ಬ್ರಿಂಜಾರಿ, ಲಮಾನ್ಸ್, ಲಂಬಾಡೀಸ್, ಲಂಬಾರ್ಸ್, ಸುಕಾಲರ್ಸ್"[೧೦] ಎಂದೂ ಬಂಜಾರಾ, ಲಮಾನಿ, ಲಂಬಾಡಾಗಳೆಂದು[೧೧] ಗುರುತಿಸಿದ್ದಾರೆ. ಅಲೆಮಾರಿಗಳಾದ ಇವರು ಉಪ್ಪು ಹಾಗೂ ಇತರೇ ಮುಖ್ಯವಾದ ಆಹಾರ ಸಾಮಗ್ರಿಗಳನ್ನು ೧೯ನೆಯ ಶತಮಾನದ ಕೊನೆಯ ಭಾಗದವರೆಗೂ ಎಲ್ಲೆಡೆ ಸಾಗಿಸುತ್ತಿದ್ದರು"[೧೨] ಬಂಜಾರ, ಬ್ರಿಂಜಾರಿ, ಲಂಬಾಡಿ, ಲಮಾನಿ, ವನಜಾರ, ಗೋರ್"[೧೩] ಬನಜಾರರು ಸಾಂಪ್ರದಾಯಿಕವಾಗಿ ತಮ್ಮ ಎತ್ತಿನ ಬಂಡಿಗಳ

ಮೇಲೆ ಪಶುಗಳ ಮೇಲೆ ಆಹಾರ ಧಾನ್ಯಗಳನ್ನು ಉಪ್ಪು, ತೆಂಗಿನಕಾಯಿ, ಒಣಮೀನು ಮುಂತಾದವುಗಳನ್ನು ದೇಶದೆಲ್ಲೆಡೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ವ್ಯಾಪಾರವು ಸಾಂಪ್ರದಾಯಿಕ ಕುಲ ಕಸುಬಾಗಿತ್ತು"[೧೪]

ಕಿಟೆಲ್ ನಿಘಂಟುವಿನಲ್ಲಿ ಲಂಬಾಣಿಗರನ್ನು Lambadi- ಲಮ್ಬಾಡಿ ಲಮಾಣಿ, ಲಮ್ಬಾಣಿ A lambaduee (or Brinjari) a migratory caste who trade in Salt grain bullocks etc. and ofter have the charactor of being Thives ಸುಕಾಲಿಗ, ಇಲಮ್ಬಾಡಿ, ಲಮ್ಮಾಗಳು, ಲಮ್ಬಾಣಿ (Lambani)ಗಳೆಂದು ಕರೆದಿದ್ದಾರೆ"[೧೫]. ಗ್ರಾಂಥಿಕ ಆಧಾರವಾಗಿ, ಎಚ್.ಎಂ. ಎಲಿಯಟ್‌ರವರು ಬಂಜಾರ ಪದವು ದಂಡಿಯ ದಶಕುಮಾರ ಚರಿತೆಯಲ್ಲಿ ಬರುವ ಪ್ರಮತಿ ಕತೆಯಲ್ಲಿ ಉಲ್ಲೇಖಿತ ವಾಗಿದೆಯೆಂದು ಹೇಳುತ್ತಾರೆ. ಆ ಪದದ ನಿಷ್ಪತ್ತಿಯನ್ನು ಪರ್ಷಿಯನ್ ಮೂಲದಲ್ಲಿ ಗುರುತಿಸಲು ಪ್ರಯತ್ನಿಸುತ್ತಾರೆ. ದಶಕುಮಾರ ಚರಿತೆಯ ಮೊದಲ ಮುದ್ರಣದ ಪ್ರತಿಯಲ್ಲಿ ಬಂಜಾರ ಎಂಬ ಪದ ಬಳಕೆಯಿರದೆ ಅದರ ಬದಲಾಗಿ Mahati Migame Nigamanam ಎಂಬ ಪದಧ ಬಳಕೆಯಾಗಿರುವುದು ದಂಡಿಯ ದಶಕುಮಾರ ಚರಿತೆಯಲ್ಲಿ ಲಂಬಾಣಿ ಜನಾಂಗವನ್ನು ಕುರಿತ ಮಾಹಿತಿಗಳು ಅವರ ಪ್ರಾಚೀನತೆಯನ್ನು ಗುರುತಿಸಲು ದೊರೆತ ಅಮೂಲ್ಯ ಆಕರಗಳಾಗಿವೆ. ದಂಡಿಯು ಸಂಸ್ಕೃತ ಸಾಹಿತ್ಯದ ಶ್ರೇಷ್ಟ ಕವಿ. ಈತನ ಕಾಲ ಸುಮಾರು ಕ್ರಿ.ಶ. ೭ ನೇ ಶತಮಾನ[೧೬]. ಹಾಗೆಯೇ ಮತ್ತೊಂದೆಡೆ ಲಂಬಾಣಿಗರು ಕ್ರಿ.ಪೂ. ೩೨೪ರಲ್ಲಿ ಸ್ಥಾಪನೆಯಾದ ಮೌರ್ಯ ಚಕ್ರಾಧಿಪತ್ಯದಲ್ಲಿ ಬಂಜಾರರು ವ್ಯಾಪಾರ ವೃತ್ತಿಯಲ್ಲಿ ನಿರತರಾಗಿದ್ದರೆಂಬ ವಿಚಾರ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. "Such as the modern Brinjaras whose business was to supply merchents and others with armed protection of a quasi - proffessional character? while refraining from a decisive pronuctiation, we cannot but live, For which the gilds of medieval Europe supply A fair anology" ಮೌರ್ಯ ಕಾಲದ ವ್ಯಾಪಾರ ವಹಿವಾಟುಗಳನ್ನು ವಿವರಿಸುತ್ತಾ ಲೇಖಕರು ಬಂಜಾರ ಎಂಬ ಈಗಿನ ಹೆಸರು ಆ ಕಾಲದ ಜನಾಂಗಕ್ಕಿಲ್ಲದಿದ್ದರೂ ಆ ಕಾಲದಲ್ಲಿ ವ್ಯಾಪಾರವನ್ನು ಮಾಡುತ್ತಿದ್ದ ಜನರು ಲಂಬಾಣಿಗಳೇ ಆಗಿದ್ದರೆಂಬುದಾಗಿ ಅಭಿಪ್ರಾಯಪಡುತ್ತಾರೆ. ಆದ್ದರಿಂದ ಲಂಬಾಣಿ ಜನಾಂಗವು ಕ್ರಿ. ಪೂ. ೩ನೇ ಶತಮಾನದಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದರೆಂದು ತಿಳಿದು ಬರುತ್ತದೆ"[೧೭].

ಲಂಬಾಣಿಗರು ಶತಮಾನಗಳ ಹಿಂದಿನಿಂದಲೂ ವ್ಯಾಪಾರವನ್ನೇ ತಮ್ಮ ಮುಖ್ಯ ಕುಲ ಕಸುಬನ್ನಾಗಿ ಹೊಂದಿದ್ದು. ಎಲ್ಲಾ ಪ್ರದೇಶದಲ್ಲೂ ತಮ್ಮ ಛಾಪನ್ನು ಮೂಡಿಸಿದ್ದರೆಂಬುದು ಇತಿಹಾಸದ ಪುಟಗಳಿಂದ ಸ್ಪಷ್ಟವಾಗುತ್ತದೆ. ಲಂಬಾಣಿಗರು ಹಿಂದಿನಿಂದಲೂ ಕೂಡ ತಮ್ಮ ನಿಷ್ಠೆ, ಶ್ರಮ ಜೀವನಕ್ಕೆ, ಕಷ್ಟಪಟ್ಟು ದುಡಿಯುವಿಕೆಗೆ ಸ್ವಾಭಿಮಾನ ಶೌರ್ಯಕ್ಕೆ ಹೆಸರುವಾಸಿಯಾಗಿದ್ದಾರೆ. ರಾಜಮಹಾರಾಜರ, ಬ್ರಿಟೀಷ್ ಅಧಿಕಾರಿಗಳ, ನವಾಬರ, ವಜೀರರ, ಸೈನಿಕರ ಮೆಚ್ಚುಗೆಗೆ ಪಾತ್ರರಾಗಿದ್ದು, ಸೈನಿಕರಿಗೆ ಆಹಾರ ಮತ್ತು ಯುದ್ಧ ಸಾಮಗ್ರಿಗಳನ್ನು ಅದೆಷ್ಟೇ ಕಷ್ಟವಿದ್ದರೂ ಕೂಡಾ ಹೆದ್ದಾರಿಗಳಿಲ್ಲದಿದ್ದಾಗ್ಯೂ ಅಸ್ತವ್ಯಸ್ತ ಕಾಡು ಬೆಟ್ಟಗಳನ್ನು ಹಾದು ಹೋಗುತ್ತಿದ್ದರು. ಇವರ ಪ್ರಾಮಾಣಿಕತೆ, ನಿಷ್ಟೆ ಶ್ರದ್ದೆಗೆ ಎಲ್ಲರೂ ಗೌರವ ನೀಡುತ್ತಿದ್ದರು.

ಕುಂಬ್ರಲೇಜ್ ಅವರು ತಮ್ಮ ಗ್ರಂಥದಲ್ಲಿ “ಶಹಜಾನನ ಆಡಳಿತದ ಕಾಲಾವಧಿಯಲ್ಲಿ ಅವನ ವಜೀರನಾದ ಅಸಫ್‌ಜಾನನ ಜೊತೆ ದಖಿನ್‌ಗೆ ಬಂಜಾರುಗಳು ಬಂದಿದ್ದು, ೧೬೩೦ ಅಥವಾ ಅದರ ಆಸುಪಾಸಿನಲ್ಲಿ ದಕ್ಷಿಣದ ಬಿಜಾಪುರದ ಆದಿಲ್‌ಶಾಹಿಯ ಮೇಲೆ ಆಕ್ರಮಣ ಮಾಡಲು ಮೊಗಲ್ ಸೈನ್ಯದ ಜೊತೆಗೆ ದಕ್ಷಿಣಕ್ಕೆ ಬಂದರೆಂಬುದಾಗಿ”[೧೮] ವಿವರಿಸಲಾಗುತ್ತದೆ. ಇವರು ಸೈನ್ಯಕ್ಕೆ ಆಹಾರ ಸಾಮಾಗ್ರಿ ಯುದ್ಧ ಸರಕು ಸರಂಜಾಮುಗಳನ್ನು ನಿರ್ಭಯವಾಗಿ ಒದಗಿಸುತ್ತಿದ್ದರು. “ಬಂಜಾರುಗಳ ಮುಖಂಡ ರಾಠೋಡ್ ವಂಶದ ಭಂಗಿ ಹಾಗೂ ಜಂಗಿ ಮತ್ತು ಜಾಧವ ವಂಶದ ಭಗವಾನದಾಸರಿದ್ದು, ಭಂಗಿ ಹಾಗೂ ಜಂಗಿಯವರ ಹತ್ತಿರ ೧,೮೦,೦೦೦ ಜಾನುವಾರುಗಳಿದ್ದವು. ಭಗವನ್ ದಾಸನ ಹತ್ತಿರ ೫೨,೦೦೦ ಜಾನುವಾರುಗಳಿದ್ದವು. ಯಾವಾಗ ಭಂಗಿ ಜಂಗಿಗೆ ತಮ್ಮ ಜಾನುವಾರುಗಳಿಗೆ ಹುಲ್ಲು ಮತ್ತು ನೀರು ಒದಗಿಸುವಲ್ಲಿ ತೊಂದರೆಗಳಾಗಿದ್ದು ಅಂತಹ ಸಂದರ್ಭಗಳಲ್ಲಿ ಅಸಪ್‌ಜಾನ್ ಹತ್ತಿರ ಸೌಲಭ್ಯ ಒದಗಿಸುವಂತೆ ಕೇಳಿದರು. ಇವರ ಸೇವೆಯಿಂದ ಸಂತೃಪ್ತನಾಗಿದ್ದ ಹಾಗೂ ಸರಕು ಸಾಗಾಣಿಕೆಯಿಂದ ಆಗಬಹುದಾದ ತೊಂದರೆಯನ್ನು ಮನಗಂಡ ಅಸಫ್‌ಖಾನನು ಅವರಿಗೆ ಸುವರ್ಣಾಕ್ಷರಗಳಿಂದ ಮುದ್ರಿತವಾದ ತಾಮ್ರ ಪಟದ ಮೇಲೆ ಅಧಿಕಾರವನ್ನು ನೀಡಿದನು. ಅದು ಈ ರೀತಿ ಇದೆ.

ರಂಜಾನ್ ಕಪಾನಿ
ಛಪ್ಪರ್ ಕಾ ಘಾಸ್
ದಿನ್ ತೆ ತೀನ್ ಖೂನ್ ಮಾಫ್
ಔರ್ ಜಹಾ ಅಸಫ್‌ಖಾನಕೆ ಘೋಡೆ
ವಹಾ ಜಂಗಿ ಭಂಗಿ ಕೆ ಬೈಲ್ ಖಡೆ

ಭಂಗಿ ಜಂಗಿ ನಾಯಕರೆ ನಿಮ್ಮ ಜಾನುವಾರುಗಳಿಗೆ ನೀರಿನ ಕೊರತೆಯಾದರೆ ನನ್ನನ್ನು ಹಿಂಬಾಲಿಸುತ್ತಿರುವ ಸೈನಿಕರ ಮನೆಯಲ್ಲಿನ ರಂಜಿಣಿಗಿ (ಪಾತ್ರೆ)ಗಳಲ್ಲಿ ತುಂಬಿರುವ ನೀರನ್ನು ಉಪಯೋಗಿಸಿ ಕೊಳ್ಳಬಹುದು, ಹುಲ್ಲು ಮೇವಿನ ಕೊರತೆಯಾದರೆ ಊರಿನ ಗುಡಿಸಲುಗಳ ಛಾವಣಿ ಹುಲ್ಲನ್ನು ಬಳಸಿಕೊಳ್ಳಬಹುದು. ಸೈನ್ಯಕ್ಕೆ ಆಹಾರ ಸಾಮಾಗ್ರಿಗಳನ್ನು ಸಾಗಿಸುವ ಮಾರ್ಗದಲ್ಲಿ ತೊಂದರೆಯಾದಲ್ಲಿ ತಮ್ಮ ಆತ್ಮರಕ್ಷಣೆಗಾಗಿ ದಿನಕ್ಕೆ ಮೂರು ಕೊಲೆಗಳಿಗೆ ಕ್ಷಮಾಪಣೆ ನೀಡಲಾಗುತ್ತದೆ. ಎಲ್ಲೆಲ್ಲಿ ಅಸಪ್‌ಖಾನನ ಕುದುರೆಗಳಿವೆಯೋ ಅಲ್ಲಿ ಭಂಗಿ ಜಂಗಿ ನಾಯಕರುಗಳ ಜಾನುವಾರುಗಳಿರುತ್ತವೆ. ಈ ಮೌಲ್ಯಯುತ ರಾಜಮುದ್ರೆಯು ಇಂದಿಗೂ ಭಂಗಿ ನಾಯಕನ ಉತ್ತರಾಧಿಕಾರಿಗಳ ಹತ್ತಿರ ಸುರಕ್ಷಿತವಾಗಿದೆ.[೧೯] ಈ ಬರಹದಿಂದ ಅಸಪ್‌ಜಾನನು ಲಂಬಾಣಿ ಸಮುದಾಯದ ಮೇಲಿಟ್ಟ ಪ್ರೀತಿ, ವಿಶ್ವಾಸ, ನಂಬಿಕೆ ವ್ಯಕ್ತವಾಗುತ್ತದೆ. ಹಾಗೆಯೇ ಇವನ್ನೆಲ್ಲಾ ಪಡೆಯಲು ಲಂಬಾಣಿಗರು ಅರ್ಹರಾಗಿದ್ದುದನ್ನು ಹಾಗೂ ಮೊಗಲ್ ಸೈನ್ಯಗಳಿಗೆ ಆಹಾರ ಧಾನ್ಯಗಳನ್ನು ಆವಶ್ಯಕ ವಸ್ತುಗಳನ್ನು ಪೂರೈಸುತ್ತಿದ್ದು, ಸಾವಿರಾರು ಜಾನುವಾರುಗಳನ್ನು ಹೊಂದಿರುವ ಪಶುಪಾಲಕ ವ್ಯಾಪಾರಿ ಸಮುದಾಯವೆಂಬುದನ್ನು ತಿಳಿಯಬಹುದಾಗಿದೆ.

೧೮೯೧ರಲ್ಲಿ ಪ್ರಕಟಗೊಂಡ ಐಬೆಸ್ಟನ್‌ನ ಪುಸ್ತಕ “ಪಂಜಾಬ ಕೀ ಜಾತೀಯಾ”ದಲ್ಲಿ ಬಂಜಾರರು ಮಧ್ಯಭಾರತ, ದಖಿನ್ ಹಾಗೂ ರಜಪುತಾನದ ಪ್ರಾಂತ್ಯದಲ್ಲಿ ಪಸರಿಸಿರುವ ಯಾತ್ರಾ ಮಹಾನ್

ವ್ಯಾಪಾರಿಗಳಾಗಿದ್ದರು. ಹಾಗೂ ಮೊಗಲ್ ಅಫ್ಘನ್ ಸಾಮ್ರಾಜ್ಯಗಳ ಅಂತರ್ಗತ ಶಾಹಿ ಸೈನ್ಯಗಳಿಗೆ ಸರಬರಾಜು ಮಾಡುವ ಸೇನಾಖಾನ ವಿಭಾಗದ ಪ್ರಮುಖ ಕಮೀಷನರ್ ಆಗಿದ್ದರು''[೨೦].

ಹೀಗೆ ಲಂಬಾಣಿಗಳ ಚಾರಿತ್ರಿಕವಾಗಿ ಹಲವು ಹಂತಗಳನ್ನು ದಾಟಿ ಬಂದಿದ್ದಾರೆ. ಇಂಡಿಯಾವನ್ನು ಆಳಿದ ಬಹುತೇಕ ಎಲ್ಲಾ ಪ್ರಭುತ್ವಗಳ ಕಾಲಘಟ್ಟದ ಪ್ರಭಾವಗಳ ಮೂಲಕ ಹಾದು ಬಂದರೂ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಅಲ್ಲದೆ ತಮ್ಮ ಅಲೆಮಾರಿ ಪಯಣದುದ್ದಕ್ಕೂ ಆಯಾ ಪ್ರದೇಶದ ಸಂಸ್ಕೃತಿಯ ಜೊತೆ ಸಂಘರ್ಷಿಸುತ್ತಾ ತಮ್ಮ ಅನನ್ಯತೆಗಳನ್ನು ಲಂಬಾಣಿಗಳು ಉಳಿಸಿಕೊಂಡಿದ್ದಾರೆ. ಆದರೆ ಇವರು ತಮ್ಮ ಪಾರಂಪರಿಕ ಆರ್ಥಿಕ ಮೂಲಗಳನ್ನು ಕಳೆದುಕೊಂಡು, ಸಾಮಾಜಿಕ ಅಧಿಕಾರಗಳನ್ನು ಕಳೆದುಕೊಂಡು ಅಲೆಮಾರಿಗಳಾದರು. ಭಾರತದ ಪಶ್ಚಿಮ ರಾಜ್ಯಗಳಲ್ಲಿ ಬಹುತೇಕ ವ್ಯಾಪಕವಾಗಿ ವಾಸಿಸುತ್ತಿರುವ ಲಂಬಾಣಿಗರು ತಾವು ವಾಸಿಸುತ್ತಿರುವ ಯಾವುದೇ ಪ್ರದೇಶದಲ್ಲಿ ಸಹಜವಾಗಿ ತಮ್ಮ ಸಾಂಸ್ಕೃತಿಕ ಚಟುವಟಿಕೆಗಳನ್ನು ಉಳಿಸಿಕೊಂಡೇ ಬಂದಿದ್ದಾರೆ. ಲಂಬಾಣಿಗರ ಬಹಳ ಮುಖ್ಯವಾದ ಶಕ್ತಿಯೆಂದರೆ ಸ್ಥಳೀಯ ಪ್ರಭಾವಗಳನ್ನು ಜೀರ್ಣಿಸಿಕೊಂಡು ತಮ್ಮ ಚಹರೆಗಳನ್ನು ಕಾಪಾಡಿಕೊಳ್ಳುವುದು. ಆದರೆ ಈ ದೇಶದ ಶ್ರೇಣೀಕರಣದಲ್ಲಿ ಶ್ರಮಜೀವಿಗಳಾದ ಲಂಬಾಣಿಗಳು ಕಟ್ಟಕಡೆಯವರಾಗಿದ್ದಾರೆ. ತಮ್ಮ ಪಾರಂಪರಿಕ ಆರ್ಥಿಕ ಮೂಲಗಳು ನಾಶಗೊಂಡ ಮೇಲೆ ತೀರಾ ಕುರುಚಲು ಅರಣ್ಯಗಳಲ್ಲಿ ನೆಲೆಸಿದ ಲಂಬಾಣಿಗಳು ಸಹಜವಾಗಿಯೇ ಕೃಷಿಕರಾದರು. ಇಲ್ಲವೆ ಕಾಡಿನ ಉಪ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಲಾರಂಭಿಸಿದರು. ಆದರೆ ಅಲ್ಲೂ ಅವರು ಕೃಷಿ ಭೂಮಿಯ ಒಡೆಯರಾಗಲಿಲ್ಲ. ಕೃಷಿಕೂಲಿಗಳಾಗಿ, ಜೀತವನ್ನು ಒಪ್ಪಿಕೊಂಡು ಬದುಕತೊಡಗಿದರು. ನಂತರ ಇವರ ಬದುಕಿನಲ್ಲಿ ಮಹತ್ವ ಬದಲಾವಣೆ ಆದಂತೆ ಕಾಣುವುದು ಮೀಸಲಾತಿ ಸಿಕ್ಕ ಮೇಲೆ. ಮೀಸಲಾತಿ ಇವರ ಬದುಕಲ್ಲಿ ಗುರುತಿಸಬಹುದಾದಷ್ಟು ಬದಲಾವಣೆಯನ್ನು ತಂದಿರುವುದು ಸ್ಪಷ್ಟವಾಗಿದೆ. ಆದರೆ ಈ ಬದಲಾವಣೆ ಲಂಬಾಣಿ ಸಮುದಾಯದ ಎಲೈಟ್ ಜನರಿಗೆ ಮಾತ್ರ ಸೀಮಿತವಾಗಿದೆ.

ಒಂದು ಸಮುದಾಯ ಸಾಮಾಜಿಕ ಅಧಿಕಾರಗಳನ್ನು ಹೊಂದಬೇಕಾದರೆ, ಅದು ನಿಶ್ಚಿತ ಆರ್ಥಿಕ ಮೂಲಗಳನ್ನು ಕಂಡುಕೊಳ್ಳಬೇಕು. ಲಂಬಾಣಿಗರ ಸಮಾಜದ ರೂಪಾಂತರಗಳಲ್ಲಿ ಅವರ ಆರ್ಥಿಕ ಚಟುವಟಿಕೆಗಳಲ್ಲಾದ ಏರಿಳಿತಗಳ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗಾಗಿ ಲಂಬಾಣಿಗಳಲ್ಲಾದ ಬದಲಾವಣೆಗಳಿಗೆ ಕಾರಣಗಳನ್ನು ಕಂಡುಕೊಳ್ಳಬೇಕಿದೆ. ಒಂದು ಸಮುದಾಯ ಯಾವ ಕಾರಣಗಳಿಗಾಗಿ ಬದಲಾಗುವ ಕಾತರಿಸುತ್ತದೆ? ಆ ಬದಲಾವಣೆಗಳು ಯಾವ ಅಂಶಗಳಿಂದ ಸಂಭವಿಸುತ್ತವೆ? ಎಂಬ ಕುರಿತು ವಿವರಿಸಿಕೊಳ್ಳಬೇಕಿದೆ. ಕರ್ನಾಟಕದಲ್ಲಿ ಲಂಬಾಣಿಗಳ ಬದುಕಲ್ಲಿ ಸಂಭವಿಸಿರಬಹುದಾದ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳನ್ನು ನಾನು ಈ ಸಂಪ್ರಬಂಧದಲ್ಲಿ ವಿವರಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಅದಕ್ಕಾಗಿ ಹೊನ್ನಾಳ್ಳಿ ತಾಲೂಕಿನ ನಾಲ್ಕು ಮಾದರಿ ತಾಂಡಾಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಈ ನಾಲ್ಕು ತಾಂಡಾಗಳು ಭೌಗೋಳಿಕವಾಗಿ, ಸಾಮಾಜಿಕ ಮತ್ತು ಆರ್ಥಿಕವಾಗಿ ಭಿನ್ನ ಪರಿಸರದಲ್ಲಿ ಬದುಕುತ್ತಿವೆ. ಈ ನಾಲ್ಕು ತಾಂಡಾಗಳ ಸಮಗ್ರ ಮಾಹಿತಿ ಮತ್ತು ಅಂಕಿಅಂಶಗಳನ್ನು ಸಂಗ್ರಹಿಸಿ ಈ ಪ್ರಬಂಧದ ನಾಲ್ಕು ಅಧ್ಯಾಯಗಳನ್ನು ರೂಪಿಸಲಾಗಿದೆ.

## ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ನಿರ್ದಿಷ್ಟ ಪ್ರಶ್ನಾವಳಿಯನ್ನು ರೂಪಿಸಿ ಕೊಳ್ಳಲಾಗಿತ್ತು. ಈ ಪ್ರಶ್ನಾವಳಿಯಿಂದ ಪಡೆದುಕೊಂಡ ಅಂಕಿ ಅಂಶಗಳನ್ನು ಈ ಅಧ್ಯಯನದುದ್ದಕ್ಕೂ ಬಳಸಿಕೊಳ್ಳಲಾಗಿದೆ. ಪ್ರತಿಯೊಂದು ಕುಟುಂಬದ ವಿವರವಾದ ಮಾಹಿತಿಯನ್ನು ಸಂದರ್ಶನದ ಮುಖಾಂತರ ಅಧ್ಯಯನದ ಅಗತ್ಯಕ್ಕೆ ತಕ್ಕಂತೆ ಪಡೆಯಲಾಗಿದೆ. ಪ್ರಸ್ತುತ ಅಧ್ಯಯನವು ನಾಲ್ಕು ತಾಂಡಾಗಳನ್ನು ಆಯ್ದುಕೊಂಡು ತಾಂಡಾಗಳಲ್ಲಿ ಪ್ರತಿಯೊಂದು ಕುಟುಂಬಗಳಿಂದ ಮಾಹಿತಿಯನ್ನು ಸಹಭಾಗಿತ್ವ ಅವಲೋಕನದಿಂದ ಪಡೆದು, ಪ್ರತಿಯೊಂದು ಲಂಬಾಣಿ ಕುಟುಂಬದ ಸದಸ್ಯರ ಜೊತೆಗಿನ ಸಂವಾದದ ಮುಖಾಂತರ ತಾಂಡಾಗಳ ಹಲವಾರು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಾಹಿತಿಯನ್ನು ಪಡೆಯಲಾಗಿದೆ.

ತಾಂಡಾಗಳಲ್ಲಿನ ಶಿಕ್ಷಣದ ಬಗ್ಗೆ, ಉದ್ಯೋಗ, ಆದಾಯ ಎಲ್ಲವನ್ನೂ ಪ್ರತ್ಯೇಕವಾಗಿ ಗುರುತಿಸಲಾಗಿದೆ. ಲಂಬಾಣಿಗರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಪ್ರಸ್ತುತದಲ್ಲಿ ಹೇಗಿದೆ ಎಂಬುದನ್ನು ಸೂಕ್ಷ್ಮ ಅಧ್ಯಯನದ ಮುಖಾಂತರ ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಾಗಿದೆ. ಪ್ರಾಥಮಿಕ ಅಂಕಿ ಅಂಶಗಳನ್ನು ವಿಶ್ಲೇಷಣೆಗೆ ಬೇಕಾಗುವ ರೀತಿಯಲ್ಲಿ ಕೋಷ್ಟಕಗಳಲ್ಲಿ ನೀಡಲಾಗಿದೆ. ಮತ್ತು ಅನುಷಾಂಗಿಕ ಮಾಹಿತಿಯನ್ನು ತಾಲೂಕು ಕಛೇರಿ ಹೊನ್ನಾಳಿಯಿಂದ ಈವರೆಗೆ ಈ ಸಮುದಾಯ ಕುರಿತು ನಡೆದ ಅಧ್ಯಯನಗಳಿಂದ ಕೂಡ ಪಡೆಯಲಾಗಿದೆ. ಹಾಗೂ ಅಲ್ಲಲ್ಲಿ ಆ ತರಹದ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

## ೧. ಅಧ್ಯಯನದ ವ್ಯಾಪ್ತಿ

ಲಂಬಾಣಿಗರು ಇಡೀ ದೇಶಾದ್ಯಂತ ಪಸರಿಸಿದ್ದಾರೆ. ಕರ್ನಾಟಕದಲ್ಲಿ ದಕ್ಷಿಣ ಕನ್ನಡ, ಕೊಡಗು, ಮಂಡ್ಯ ಜಿಲ್ಲೆಗಳನ್ನುಳಿದು ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಜನರಿದ್ದಾರೆ. ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಚಿಕ್ಕಬಾಸೂರು ತಾಂಡ, ಸೂರಗೊಂಡನಕೊಪ್ಪ ತಾಂಡ, ಗುಡ್ಡಳ್ಳಿ ತಾಂಡ, ಮಲೆಕುಂಬಳೂರು ತಾಂಡಗಳನ್ನು ಅವುಗಳ ವೈಶಿಷ್ಟ್ಯತೆಗಳಿಗನುಗುಣವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ನಾಲ್ಕು ಭಿನ್ನ ಮಾದರಿಯ ತಾಂಡಗಳನ್ನು ಈ ಕೆಳಗಿನ ವೈಶಿಷ್ಟ್ಯತೆಗಳಿಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

೧. ತಾಂಡಾಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರೆದ ತಾಂಡಗಳ ಮಾದರಿಯ ಅವಶ್ಯಕತೆಯ ದೃಷ್ಟಿಯಿಂದ.

೨. ತಾಂಡಾಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಂತಹ ತಾಂಡಗಳ ಮಾದರಿಯ ಅಗತ್ಯಕ್ಕಾಗಿ.

೩. ತಾಂಡಾಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರೆಯಲು ಕಾರಣವಾದ ಅಂಶಗಳನ್ನು ಅಧ್ಯಯನ ಮಾಡಲು.

೪. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿಯಲು ಕಾರಣವಾದ ಅಂಶಗಳನ್ನು ಅಧ್ಯಯನ ಮಾಡಲು ಹೊನ್ನಾಳಿ ತಾಲೂಕಿನ ನಾಲ್ಕು ಭಿನ್ನ ಮಾದರಿಯ ತಾಂಡಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸೂರಗೊಂಡನಕೊಪ್ಪ ಅರೆಮಲೆನಾಡು ಪ್ರದೇಶ, ಮಲೆ ಕುಂಬಳೂರು ನೀರಾವರಿ ಪ್ರದೇಶ, ಗುಡ್ಡಳ್ಳಿ ತಾಂಡಾವು ಒಣಭೂಮಿಯ ಗುಡ್ಡಗಾಡು ಪ್ರದೇಶ, ಚಿಕ್ಕಬಾಸೂರು ತಾಂಡ ಅಭಿವೃದ್ಧಿಯನ್ನು ಹೊಂದುತ್ತಿರುವ ಕಂದಾಯ ಗ್ರಾಮವಾಗಿದ್ದು, ನೀರಾವರಿ ಮತ್ತು ಒಣಭೂಮಿ ಹೊಂದಿರುವ ಪ್ರದೇಶ. ನಾಲ್ಕೂ ತಾಂಡಾಗಳಲ್ಲಿ ಲಂಬಾಣಿ ಸಮುದಾಯಗಳಿದ್ದು ಒಂದೇ ರೀತಿಯ ಆಚಾರ, ವಿಚಾರ, ಭಾಷೆ, ಕುಲದೈವವನ್ನು ಹೊಂದಿದ್ದಾರೆ. ಚಿಕ್ಕಬಾಸೂರು ತಾಂಡ ಅರೆ ನೀರಾವರಿ, ಸಾರಿಗೆ ಸಂಪರ್ಕ, ಶಿಕ್ಷಣದ ಸೌಲಭ್ಯವನ್ನು ಪಡೆದುಕೊಂಡಿದೆ. ಆರ್ಥಿಕ ಮಟ್ಟ ಸುಧಾರಿಸುತ್ತಿದೆ.

ಗುಡ್ಡಳ್ಳಿತಾಂಡಾವು ಒಣಭೂಮಿಯನ್ನು ಹೊಂದಿರುವ ಹಿಂದುಳಿದ ಪ್ರದೇಶವಾಗಿದೆ. ಅಲ್ಲದೆ ಇಲ್ಲಿನ ಜನ ಬಡತನದ ರೇಖೆಗಿಂತ ಕೆಳಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ. ಸೂರಗೊಂಡನಕೊಪ್ಪ ಮಲೆನಾಡು ಪ್ರದೇಶವಾಗಿದ್ದು ತಕ್ಕಮಟ್ಟಿಗೆ ಮಳೆ ಬೆಳೆ ಕಾಣುವ ತಾಂಡ. ಆದರೆ ಯಾರು ಜಮೀನನ್ನು ಹೊಂದಿರುವರೋ ಆ ಲಂಬಾಣಿಗರು ಮಾತ್ರ ಆರ್ಥಿಕವಾಗಿ ಸ್ವಲ್ಪ ಉತ್ತಮವಾಗಿದ್ದಾರೆ. ಉಳಿದಂತೆ ಇಲ್ಲಿ ಕೂಡಾ ಸಾರಿಗೆ ವ್ಯವಸ್ಥೆ ಸರಿಯಾಗಿಲ್ಲದೆ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿದ್ದಾರೆ. ಕಡಿಮೆ ಭೂ ಹಿಡುವಳಿಯನ್ನು ಹೊಂದಿದ್ದಾರೆ.

ಬೆಡಗುಗಳ ಆಧಾರವಾಗಿ ಲಂಬಾಣಿಗರು ನೆಲೆಸಿದ್ದಾರೆ. ಚಿಕ್ಕಬಾಸೂರು ತಾಂಡಾದಲ್ಲಿ ಮೇಘಾವತ್ ಬೆಡಗಿನವರ ಸಂಖ್ಯೆ ಹೆಚ್ಚಾಗಿದೆ. ಗುಡ್ಡಳ್ಳಿಯಲ್ಲಿ ಡುಂಗಾವತ್ ಬೆಡಗಿನವರು, ಸೂರಗೊಂಡನಕೊಪ್ಪದಲ್ಲಿ ಖಿಮಾವತ್ ಬೆಡಗಿನವರು, ಮಲೆಕುಂಬಳೂರಿನಲ್ಲಿ ಈಶ್ಲಾವತ್ ಬೆಡಗಿನವರು ಹೆಚ್ಚಾಗಿದ್ದಾರೆ, ಈ ತಾಂಡಾಗಳಲ್ಲಿ ಲಂಬಾಣಿಗರು ತಮ್ಮ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡಿದ್ದಾರೆ. ಜೊತೆಗೆ ಇತ್ತೀಚೆಗೆ ಸ್ಥಳೀಯರಾಗಿ ಮಾರ್ಪಡುತ್ತಿದ್ದಾರೆ. ಈ ಬೆಡಗುಗಳಲ್ಲಿ ಭಾಷಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಭಿನ್ನತೆಗಳು ಕಂಡುಬರುತ್ತವೆ. ಈ ವಿಭಿನ್ನತೆಯ ಕಾರಣವಾಗಿ ಇವರ ಮನೆಗಳಲ್ಲಿ ವೈವಿಧ್ಯತೆ ಕಂಡುಬರುವುದು.

ಮತ್ತೊಂದು ಮುಖ್ಯ ಅಂಶವೆಂದರೆ ಅಲೆಮಾರಿಗಳಾಗಿ ಈ ತಾಂಡಾದಲ್ಲಿ ಇವರುಗಳು ಬಂದಾಗ ಅಲೆಮಾರಿ ಪಶುಪಾಲಕರಾಗಿ ನೂರಾರು ದನಕರುಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮೇಯಿಸುತ್ತಾ ಅಲೆಯುತ್ತಿದ್ದರು. ಹೀಗೆ ಅಲೆಮಾರಿಗಳಾಗಿ ಬಂದಾಗ ಒಂದು ಪಂಗಡದವರು, ಬೆಡಗಿನವರು ಗುಂಪು ಗುಂಪಾಗಿ ಬಂದವರಾಗಿದ್ದು ಕಾಲಕ್ರಮೇಣ ಇಲ್ಲಿ ನೆಲೆ ನಿಲ್ಲುತ್ತಾ ಬಂದಿರುವುದಾಗಿ ತಿಳಿಸಿದರು. ಯಾವ ಬೆಡಗಿನವರು ಒಟ್ಟಾಗಿ ಬಂದಿದ್ದರೋ ಆ ಪ್ರದೇಶದ ತಾಂಡಾದಲ್ಲಿ ಇವರ ಜನಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ.

ಇದೇ ರೀತಿ ಈ ನಾಲ್ಕು ತಾಂಡಾದ ಆಯ್ಕೆಗೆ ಮುಖ್ಯ ಕಾರಣ, ಲಂಬಾಣಿ ಸಮುದಾಯದವರು ಈ ಪ್ರದೇಶಗಳಿಗೆ ವಲಸೆ ಬಂದು ನೂರಾರು ವರ್ಷಗಳು ಕಳೆದಿವೆ. ವಲಸೆ ಬಂದವರಲ್ಲಿ ಉತ್ತರ

[illegible]

ಕರ್ನಾಟಕದ ಕಡೆಯಲ್ಲಿ ನೆಲೆ ನಿಂತವರು ರಾಠೋಡ್, ಪವ್ಹಾರ್, ಜಾದಾವ್, ಚವ್ಹಾಣ್ ಎಂಬ ಬೆಡಗುಗಳ ಅಡ್ಡ ಹೆಸರುಗಳನ್ನು ತಮ್ಮ ಹೆಸರಿನ ಮುಂದೆ ಬಳಸದೆ ನಾಯ್ಕ ಎಂದು ಇಟ್ಟುಕೊಂಡಿದ್ದಾರೆ. ಈ ನಾಲ್ಕು ತಾಂಡಾಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಭೌಗೋಳಿಕ ವಿವರಗಳನ್ನು ತಿಳಿಯಲು ಹಾಗೂ ಇವುಗಳಲ್ಲಿನ ವೈವಿಧ್ಯತೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಈ ತಾಂಡಾಗಳಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆಗಳಿಗೆ ಕಾರಣಗಳೇನು? ಒಂದು ತಾಂಡಾದ ಅಭಿವೃದ್ಧಿಗೆ, ಅನಭಿವೃದ್ಧಿಗೆ ಕಾರಣಗಳೇನು? ಎಂದು ತಿಳಿಯುವುದಕ್ಕೋಸ್ಕರವಾಗಿ ಈ ತಾಂಡಾಗಳನ್ನು ಅವುಗಳ ವೈವಿದ್ಯತೆಗಳಿಗನುಸಾರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಒಂದೇ ತಾಲೂಕಿನಲ್ಲಿರುವ ತಾಂಡಗಳಾಗಿದ್ದರೂ ವೈವಿಧ್ಯತೆಯನ್ನು, ಅಭಿವೃದ್ಧಿ, ಅನಭಿವೃದ್ಧಿಯನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಒಂದು ಪ್ರದೇಶದ ತಾಂಡವನ್ನು ಮತ್ತೊಂದು ತಾಂಡಾಕ್ಕೆ ಹೋಲಿಸಿದರೆ ಕೆಲವು ಸೂಕ್ಷ್ಮ ಬದಲಾವಣೆಯನ್ನು ಕಾಣಬಹುದು. ಈ ಬದಲಾವಣೆಯನ್ನು ಸೂಕ್ಷ್ಮವಾಗಿ, ತುಲನಾತ್ಮಕವಾಗಿ ವಿವರಿಸಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

## ಅಧ್ಯಯನಕ್ಕೆ ಆಯ್ದುಕೊಂಡ ತಾಂಡಾಗಳ ಭೌಗೋಳಿಕ ವಿವರಗಳು

ಕರ್ನಾಟಕ ರಾಜ್ಯದ ೨೭ ಜಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆಯಲ್ಲಿನ ಹೊನ್ನಾಳಿ ಒಂದು ವಿಶಿಷ್ಟ ತಾಲೂಕಾಗಿದೆ. ಜಿಲ್ಲೆಯ ವಿಸ್ತೀರ್ಣ, ೫೯೯೮ ೮೭ ಚ.ಕಿ.ಮಿ.ಗಳಷ್ಟು ಇದೆ. ದಾವಣಗೆರೆ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕು. ಉತ್ತರದಲ್ಲಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕು, ಪಶ್ಚಿಮದಲ್ಲಿ ಹರಿಹರ, ಹೊನ್ನಾಳಿ ತಾಲೂಕುಗಳು, ದಕ್ಷಿಣದಲ್ಲಿ ಚೆನ್ನಗಿರಿ ತಾಲೂಕುಗಳಿಂದ ಈ ತಾಲೂಕು ಸುತ್ತುವರೆದಿದೆ. ಜಿಲ್ಲೆಯ ಸುತ್ತ ಉತ್ತರದ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣದ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ ಪಶ್ಚಿಮೋತ್ತರದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದ ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟಿದೆ.

## ಹೊನ್ನಾಳಿ ತಾಲೂಕಿನ ಪರಿಚಯ

ಹಿಂದೆ ಶಿವಮೊಗ್ಗ ಜಿಲ್ಲೆಗೆ ಒಳಪಟ್ಟಿದ್ದ ಹೊನ್ನಾಳಿ ತಾಲೂಕು ದಿನಾಂಕ ೧೫.೮.೧೯೯೭ ರಂದು ನೂತನ ದಾವಣಗೆರೆ ಜಿಲ್ಲೆಗೆ ಸೇರಿಸಲ್ಪಟ್ಟು ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳಲ್ಲಿ ಒಂದಾಯಿತು. ಪೂರ್ವದಲ್ಲಿ ಚನ್ನಗಿರಿ, ಉತ್ತರದಲ್ಲಿ ಹರಿಹರ, ದಾವಣಗೆರೆ ತಾಲೂಕುಗಳು. ಹಾವೇರಿ ಜಿಲ್ಲೆ ಪಶ್ಚಿಮದಲ್ಲಿ ಶಿಕಾರಿಪುರ, ಧಾರವಾಡದ ಹಿರೇಕೆರೂರು, ಭದ್ರಾವತಿ, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟು ಸುಮಾರು ಚ.ಕಿ.ಮೀ.ಗ್ಳಳಲ್ಲಿ ೮೮೮೦ ಇರುತ್ತದೆ. ಈ ತಾಲೂಕಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿಸ್ತೀರ್ಣ ಈ ಕೆಳಗಿನಂತಿದೆ.

| | |
|---|---|
| ಅ. ಪಟ್ಟಣ ಪ್ರದೇಶ | ೩.೧೪೨ |
| ಆ. ಗ್ರಾಮೀಣ ಪ್ರದೇಶ | ೮೮೪.೮೫೮ |
| ತಾಲೂಕಿನ ಭೌಗೋಳಿಕ ವಿಸ್ತೀರ್ಣ ಹೆಕ್ಟೇರುಗಳಲ್ಲಿ ೮೮೭೯೪ | |
| ಅ. ಸರ್ಕಾರಿ | ೩೯೭೦೩ |
| ಆ. ಹಿಡುವಳಿ | ೫೯೦೯೧ |

## ೩. ಆಡಳಿತಾತ್ಮಕ ಮತ್ತು ಭೌಗೋಳಿಕ ವಿಸ್ತೀರ್ಣ

ತಾಲೂಕಿನಲ್ಲಿ ಎರಡು ಪಟ್ಟಣಗಳಿವೆ. ನಾಲ್ಕು ಹೋಬಳಿ ಕೇಂದ್ರಗಳಿವೆ. ಹೊನ್ನಾಳಿ ಕಸಬಾ, ಗೋವಿನಕೋವಿ, ಸಾಸುವೆಹಳ್ಳಿ, ಬೆಳಗುತ್ತಿ ಇವೆ. ಇದರಲ್ಲಿ ಗೋವಿನಕೋವಿ ಮತ್ತು ಸಾಸ್ವೆಹಳ್ಳಿ ವಿಭಾಗಗಳನ್ನು ಪ್ರಥಮ, ದ್ವಿತೀಯ ಭಾಗ ಎಂದು ವಿಂಗಡಿಸಲಾಗಿದೆ. ಹಾಗೂ ಸುಮಾರು ೧೭೩ ಹಳ್ಳಿಗಳಿವೆ

ಅ. ಚರಕ್ ಗ್ರಾಮಗಳು ೧೫೦

ಆ. ಬೇಚರಕ್ ಗ್ರಾಮಗಳು ೨೩

ಇ. ಮುಜರಿ ಗ್ರಾಮಗಳು ೦೨

**ತಾಲೂಕಿನ ಜನಸಂಖ್ಯೆ ೨೦೦೧ ಜನಗಣತಿ ಪ್ರಕಾರ**

| | |
|---|---|
| ಅ. ನಗರ | ೨,೨೨,೪೯೦ |
| ಆ. ಗ್ರಾಮೀಣ | ೨,೦೬,೯೧೬ |
| ಇ. ಗಂಡಸರು | ೧,೧೩,೫೦೦ |
| ಈ. ಹೆಂಗಸರು | ೧,೦೮,೯೯೦ |
| ಉ. ಪರಿಶಿಷ್ಟ ಜಾತಿಗಳ ಜನಸಂಖ್ಯೆ | ೩೯,೮೦೦ |
| ಊ. ಪರಿಶಿಷ್ಟ ಪಂಗಡಗಳ ಜನಸಂಖ್ಯೆ | ೯,೦೦೦ |

**ನೈಸರ್ಗಿಕ ಸಂಪನ್ಮೂಲಗಳು**

ಈ ಜಿಲ್ಲೆಯ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿರುವ ಬೋಳು ಪರ್ವತಗಳಿವೆ. ಕುದುರೆಕೊಂಡ ಬೆಟ್ಟದ ಸಾಲು ಹಾಗೂ ಸಣ್ಣಪುಟ್ಟ ಗುಡ್ಡಗಳಿವೆ. ಅತಿ ಎತ್ತರದ ಶಿಖರವೆಂದರೆ ಕಲ್ಪರಂಗನ ಬೆಟ್ಟ. ೧೦೩೧ ಮೀಟರ್ ಎತ್ತರವಿದೆ. ಶಿವಮೊಗ್ಗ ಜಿಲ್ಲೆಯಿಂದ ಗಮನಿಸಿದರೆ ಹೊನ್ನಾಳಿ, ಚೆನ್ನಗಿರಿ ತಾಲೂಕುಗಳು ಮಳೆ ಕಡಿಮೆ ಬೀಳುವ ಪ್ರದೇಶಗಳಾಗಿದ್ದು, ಮರಳು ಮಿಶ್ರಿತ ಕೆಂಪು ಮಣ್ಣು, ಮಧ್ಯಮ ಕಪ್ಪು ಮಣ್ಣು, ಜೇಡಿ, ಮರಳು ಮಿಶ್ರಿತ ಜೇಡಿ ಮಣ್ಣಿನ ಭೂಮಿಯಾಗಿದೆ. ಹವಾಗುಣ ಉತ್ತಮವಾಗಿದೆ. ತಾಲೂಕಿನ ಖನಿಜಗಳೆಂದರೆ, ಬಳಪದಕಲ್ಲು, ತಾಲೂಕಿನ ಈಶಾನ್ಯ ಮತ್ತು ವಾಯುವ್ಯದಲ್ಲಿ ಸುಣ್ಣಕಲ್ಲು ದೊರೆಯುತ್ತದೆ. ಇಲ್ಲಿ ದೊರೆಯುವ ಬೆಣಚುಕಲ್ಲು, ಹೊನ್ನಾಳಿ ಬೆಣಚುಕಲ್ಲೆಂದೇ ಹೆಸರಾಗಿದೆ.

ತುಂಗಾ ಮತ್ತು ಭದ್ರಾ ನದಿಗಳು ಶಿವಮೊಗ್ಗಕ್ಕೆ ೧೬ ಕಿ.ಮೀ. ದೂರದಲ್ಲಿ ಕೂಡಲಿಯಲ್ಲಿ ಸಂಗಮವಾಗಿ, ತುಂಗಾಭದ್ರ ನದಿಯಾಗಿ ಹೊನ್ನಾಳಿ ತಾಲೂಕಿನ ಮುಖ್ಯ ನದಿಯಾಗಿದೆ. ೧೯೭೩ರ ಗಣತಿಯಂತೆ ೧೦೮ ಕೆರೆಗಳಿವೆ. ೨೪೦ ಭಾವಿಗಳಿವೆ. ಇತ್ತೀಚಿನ ಗಣತಿಯಂತೆ ೧೦೪೦ ಕೊಳವೆ ಬಾವಿಗಳಿವೆ. ತುಂಗಭದ್ರಾ ನದಿ, ಹಿರೆಹಳ್ಳ ಹಾಗೂ ಭದ್ರಾ ಚಾನಲ್‌ನ ವ್ಯವಸ್ಥೆಯಿಂದ ಉತ್ತಮ ಬೆಳೆಯಾಗುತ್ತದೆ. ಹುಲ್ಲುಗಾವಲು, ಕುರುಚಲು ಕಾಡುಗಳೂ ಇವೆ. ಇಲ್ಲಿನ ಮುಖ್ಯ ಕಸುಬು ವ್ಯವಸಾಯ. ಈ ತಾಲೂಕು ಜಿಲ್ಲಾ ಗ್ರಾಮಾಂತರಗಳಲ್ಲಿ ರಸ್ತೆ ಮಾರ್ಗಗಳನ್ನು ಹೊಂದಿದ್ದು, ಹೊನ್ನಾಳಿಗೆ

[illegible]

ರಾಜ್ಯದ ಹೆದ್ದಾರಿ ರಸ್ತೆ ಸಂಪರ್ಕವಿದೆ. ಪಟ್ಟಣ ಪಂಚಾಯಿತಿ ಇದ್ದು, ಒಟ್ಟು ಗ್ರಾಮ ಪಂಚಾಯಿತಿ ೪೭ ಇದೆ.

ಅ. ತಾಲೂಕಿನಲ್ಲಿ ಪ್ರಾಥಮಿಕ ಶಾಲೆಗಳು ೨೪೦

ಆ. ಪ್ರೌಢ ಶಾಲೆಗಳು ೩೯

ಇ. ಪದವಿ ಪೂರ್ವ ಕಾಲೇಜುಗಳು ೦೮

**ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಭೌಗೋಳಿಕ ವಿವರಗಳು**

**ಚಿಕ್ಕಬಾಸೂರು ತಾಂಡ**

ಚಿಕ್ಕಬಾಸೂರು ತಾಂಡ ತಾಲೂಕು ಕೇಂದ್ರವಾಗಿರುವ ಹೊನ್ನಾಳಿ ನಗರದಿಂದ ೮ ಕಿ.ಮೀ. ದೂರದಲ್ಲಿದೆ. ಕಂದಾಯ ಗ್ರಾಮವಾಗಿ ಪರಿವರ್ತನೆಯಾಗಿರುವುದರಿಂದ ವಿಜಯಾಪುರವೆಂದು ಕರೆಯಲಾಗುತ್ತಿದೆ. ಈ ತಾಂಡ ಬೆನಕನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಶಿವಮೊಗ್ಗ, ಭದ್ರಾವತಿ, ಹೊನ್ನಾಳಿಗೆ ಹೋಗುವ ಮಾರ್ಗದಲ್ಲಿ ಈ ತಾಂಡ ಇದೆ. ಚಿಕ್ಕ ಬಾಸೂರು ಒಂದು ಊರಿನ ಹೆಸರು. ಅದರ ಹತ್ತಿರ ತಾಂಡವಿರುವ ಕಾರಣ ಈ ತಾಂಡಾಕ್ಕೆ ಚಿಕ್ಕ ಬಾಸೂರು ತಾಂಡ, ದೊಡ್ಡ ತಾಂಡ, ವಿಜಯಪುರ ತಾಂಡ ಎಂದು ಕರೆಯಲಾಗುತ್ತಿದೆ.

ಈ ತಾಂಡಾದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಒಟ್ಟು ಸುಮಾರು ೧೪೫೦ ಜನರಿದ್ದು ಅವರಲ್ಲಿ ಹೆಂಗಸರು ೭೨೫ ಪುರುಷರು ೭೨೭ ಜನರಿದ್ದಾರೆ. ಈ ಗಣತಿಯ ಪ್ರಕಾರ ೨೬೨ ಮನೆಗಳಿವೆ. ಇಲ್ಲಿ ಲಂಬಾಣಿಗರ ಸಂಖ್ಯೆಯೇ ಅಧಿಕವಾಗಿದ್ದು ಐದಾರು ಆದಿದ್ರಾವಿಡ, ಎರಡು ಲಿಂಗಾಯಿತರ ಮನೆಗಳಿವೆ. ತಾಂಡಾದಲ್ಲಿ ನೀರಿನ ಕಾಲುವೆ ಇದೆ. ಮೂರು ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯು ಹರಿದು ಹೋಗುತ್ತಿದ್ದು, ದನಕರುಗಳಿಗೆ ಹೊಲಗದ್ದೆಗಳಿಗೆ ಈ ಕಾಲುವೆ ಹಾಗೂ ನದಿಯ ನೀರನ್ನು ಬಳಸಿಕೊಳ್ಳಲಾಗುತ್ತಿದೆ. ನೀರಾವರಿಯ ಭೂಮಿಯ ಕಾರಣವಾಗಿ ವಾಣಿಜ್ಯ ಬೆಳೆಯಾದ ಕಬ್ಬು, ಭತ್ತ, ಅಡಿಕೆ, ತೆಂಗು ತರಕಾರಿಗಳನ್ನು, ಬಾಳೆ, ಮಾವು, ಹಲಸು, ಸೀತಾಫಲ ಹಣ್ಣುಗಳನ್ನು ಬೆಳೆಯುತ್ತಾರೆ. ಭೂಒಡೆತನ ಮೇಲ್ವರ್ಗದವರ ಕೈಯಲ್ಲಿದ್ದು, ಹೆಚ್ಚು ಭೂಹಿಡುವಳಿಯನ್ನು ಮೇಲ್ಜಾತಿಯವರೇ ಹೊಂದಿದ್ದಾರೆ. ಭೂ ಸುಧಾರಣೆ ಕಾಯಿದೆಯ ನಂತರ ಕೆಳವರ್ಗದವರಿಗೂ ಕೆಲವರಿಗೆ ಎರಡು, ಮೂರು ಎಕರೆ ಜಮೀನು ದೊರೆತಿದೆ. ಆದರೆ ತಾಂಡಾದಲ್ಲಿರುವ ಭೂಮಿಯು ಒಣಭೂಮಿಯಾಗಿರುವ ಕಾರಣ ಇವರಲ್ಲಿ ಹೆಚ್ಚಿನ ಜನ ಕೂಲಿಯನ್ನೇ ಮಾಡಿ ಜೀವನ ನಡೆಸಬೇಕಾಗಿದೆ. ನೀರಾವರಿ ಭೂಮಿಯನ್ನು ಹೊಂದಿರುವ ಕೆಲವೊಂದು ಕುಟುಂಬಗಳನ್ನು ಬಿಟ್ಟರೆ ಭೂರಹಿತ ಕುಟುಂಬಗಳೇ ಹೆಚ್ಚಾಗಿವೆ.

ತಾಂಡಾದಲ್ಲಿ ಐದಾರು ಬೋವಿ, ಎರಡು ಲಿಂಗಾಯಿತ ಕುಟುಂಬಗಳನ್ನು ಬಿಟ್ಟರೆ ಉಳಿದೆಲ್ಲಾ ಲಂಬಾಣಿಗರ ಮನೆಗಳೇ ಹೆಚ್ಚಾಗಿವೆ. ತಾಂಡದಲ್ಲಿ ಮಹಿಳೆಯರು ಹೆಚ್ಚಿನ ಸ್ಥಾನಮಾನಗಳನ್ನು ಹೊಂದಿದ್ದಾರೆ. ಆದರೆ ಎಲ್ಲರೂ ಅಲ್ಲ. ಇವರು ಮನೆಯಲ್ಲೂ ಹೊಲದಲ್ಲೂ ದುಡಿದು ಸಂಸಾರವನ್ನು ಸಾಗಿಸಿದರೂ ಗಂಡನ ಕುಡಿತಕ್ಕೆ ಇದು ಸಾಕಾಗುತ್ತಿಲ್ಲ. ಕುಡಿತವು ಈ ತಾಂಡಾದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ.

ದುಡಿದ ಹೆಚ್ಚಿನ ಪಾಲನ್ನು ಕುಡಿತಕ್ಕೇ ವ್ಯಯಿಸುವರು. ಆದರೂ ಚಿಕ್ಕ ಬಾಸೂರು ತಾಂಡಾದಲ್ಲಿ ಐದು ಜನ ಮಹಿಳೆಯರು ಸರಕಾರಿ ನೌಕರಿಯನ್ನು ಮಾಡುತ್ತಿದ್ದಾರೆ. ಕೆಲವರು ಶಿಕ್ಷಣವನ್ನೂ ಸಹ ಪಡೆಯುತ್ತಿದ್ದಾರೆ. ಚಿಕ್ಕಬಾಸೂರು ತಾಂಡವು ಉತ್ತಮ ಸಾರಿಗೆ ಸಂಪರ್ಕವನ್ನು ಪಡೆದಿದೆ. ಶಿವಮೊಗ್ಗ, ಭದ್ರಾವತಿ, ಹೊನ್ನಾಳಿ ನಗರಗಳಿಗೆ ಹೋಗುವಾಗ ಈ ತಾಂಡಾದ ಮೂಲಕ ಹಾದು ಹೋಗಬೇಕು. ಅರ್ಧ ಗಂಟೆಗೆ ಒಂದರಂತೆ ಬಸ್ಸುಗಳು ಇತರ ವಾಹನಗಳು ಈ ತಾಂಡದ ಮೂಲಕ ಹಾದು ಹೋಗುತ್ತವೆ. ತಾಂಡಾದಲ್ಲಿ ಒಂದು ಬಸ್ಸಿನ ನಿಲ್ದಾಣವಿದೆ.

ತಾಂಡಾದಲ್ಲಿ ಒಟ್ಟು ೧೬ ಬೆಡಗುಗಳು ಇವೆ. ಇವುಗಳಲ್ಲಿ ಬಾಣಾವತ್ ಬೆಡಗಿನವರು ೭ ಡುಂಗಾವತ್ ೧೦ ಈಶ್ಲಾವತ್ ೧೧, ಕೂಡಾವತ್, ಕಾಳವಾಳ, ಕೋರ್ರಾ ೧೩, ಖೋತಾವತ್ ೨, ಮೆಘಾವತ್ ೧೧೨, ಮೂಡ್ ೧೨, ಪಾಲಾತ್ಯ ೩, ರಾಮಾವತ್ ೨೨, ಸಭಾವಟ ೧೪, ವಡತ್ಯಾ ೩೯, ಝುರಪಲಾ ೫ ಇದೆ. ಮೆಘಾವತ್ ಬೆಡಗಿನವರ ಸಂಖ್ಯೆಯೇ ಹೆಚ್ಚಿದೆ.

**ಮಲೆಕುಂಬಳೂರು**

ಹೊನ್ನಾಳಿಯಿಂದ ದಾವಣಗೆರೆಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮ ಬರುತ್ತದೆ. ಇದು ಹೊನ್ನಾಳಿಯಿಂದ ೨೭ ಕಿ.ಮೀ. ದಾವಣಗೆರೆಯಿಂದ ೩೦ ಕಿ.ಮೀ. ದೂರದಲ್ಲಿದೆ. ಈ ಊರು ಗ್ರಾಮ ಪಂಚಾಯಿತಿಯಾಗಿದ್ದು ತಾಂಡಾವಾಸಿಗಳ ಜನಸಂಖ್ಯೆ ೪೬೪ ಇರುತ್ತದೆ. ಇದರಲ್ಲಿ ಪುರುಷರು ೨೪೪ ಸ್ತ್ರೀಯರ ಸಂಖ್ಯೆ ೨೩೦ ಇದ್ದು ನಾಲ್ಕು ಕೇರಿಯಲ್ಲಿ ಪ್ರತ್ಯೇಕವಾಗಿ ತಾಂಡಾವನ್ನು ಕಟ್ಟಿಕೊಂಡು ಲಂಬಾಣಿಗರು ವಾಸಿಸುತ್ತಿದ್ದಾರೆ. ಇವರ ಜನಸಂಖ್ಯೆ ೪೬೪ ಇರುತ್ತದೆ. ಈ ತಾಂಡಾದಲ್ಲಿ ಒಟ್ಟು ೭೫ ಕುಟುಂಬಗಳಿವೆ.

ಮಲೆಕುಂಬಳೂರಿನಲ್ಲಿ ಬ್ರಾಹ್ಮಣರ, ಲಿಂಗಾಯತರ, ಕುರುಬರ, ಆದಿದ್ರಾವಿಡ, ಆಂಧ್ರದ ರೆಡ್ಡಿ, ವಿಶ್ವಕರ್ಮ, ಚೆಲುವಾದಿಗಳ ಮನೆಗಳಿವೆ. ಊರಿನಲ್ಲಿ ನೀರಿನ ಕಾಲುವೆಯು ಹಾದು ಹೋಗುತ್ತಿದ್ದು, ಒಂದು ಕೆರೆಯೂ ಇದೆ. ಇವರ ಮಾತೃಭಾಷೆ ಗೋರಬೋಲಿಯಾಗಿದೆ. ಊರಿನಲ್ಲಿ ಒಂದು ಅಂಗನವಾಡಿ, ಸರಕಾರಿ ಪ್ರಾಥಮಿಕ ಶಾಲೆ, ಖಾಸಗಿ ಶಾಲೆ ಮತ್ತು ಪ್ರೌಢ ಶಾಲೆಗಳಿವೆ. ಹತ್ತು ಚಿಕ್ಕ ಹೋಟೆಲ್ಲುಗಳಿದ್ದು, ಒಂದು ದಿನಸಿ ಅಂಗಡಿ ಹಾಗೂ ಇಪ್ಪತ್ತು ಸಣ್ಣ ದಿನಸಿ ಅಂಗಡಿಗಳಿವೆ. ಕಾಲೇಜಿಗೆ ಮೂರು ಕಿ.ಮೀ. ದೂರದ ಕುಂದೂರಿಗೆ ಹೋಗಬೇಕು. ಅಥವಾ ದಾವಣಗೆರೆ, ಶಿವಮೊಗ್ಗ, ಹೊನ್ನಾಳಿಗೆ ಹೋಗಬೇಕು. ಆಸ್ಪತ್ರೆ, ಬ್ಯಾಂಕ್, ಅಂಚೆ, ಬಸ್ಸು ನಿಲ್ದಾಣದ ಸೌಲಭ್ಯವಿದೆ. ಸಾರಿಗೆ ಸೌಲಭ್ಯ ಉತ್ತಮವಾಗಿದ್ದು ದೂರವಾಣಿ ಸೌಕರ್ಯವನ್ನು ಪಡೆದಿದ್ದಾರೆ.

ಇಡೀ ಊರಿಗೆ ಮೂರ್ನಾಲ್ಕು ಬಾವಿಗಳಿವೆ. ಕುಡಿಯಲು ನಲ್ಲಿಯ ನೀರು ಬರುತ್ತದೆ. ತಾಂಡಾದಲ್ಲಿ ವಾಸಿಸುವ ಲಂಬಾಣಿಗರು ಅತ್ಯಂತ ಕಡಿಮೆ ಜಮೀನನ್ನು ಹೊಂದಿದ್ದು, ಮೇಲ್ಜಾತಿ ಜನಗಳೇ ಅತಿ ಹೆಚ್ಚಿನ ಭೂಮಿಯ ಒಡೆತನವನ್ನು ಹೊಂದಿದ್ದಾರೆ. ಒಬ್ಬೊಬ್ಬರು ನೂರೈವತ್ತು ಎಕರೆಗಳಷ್ಟು ನೀರಾವರಿ ಜಮೀನನ್ನು ಹೊಂದಿದ್ದಾರೆ. ಆದರೆ ತಾಂಡಾದವರು ಕೆಲವರಿಗೆ ಮಾತ್ರ ಅರ್ಧ, ಒಂದು, ಎರಡು ಎಕರೆಯಷ್ಟು ಅರೆ ನೀರಾವರಿ ಜಮೀನಿದೆ. ಉಳಿದ ಲಂಬಾಣಿಗರು ಭೂರಹಿತ ಕೂಲಿ ಕಾರ್ಮಿಕರಾಗಿದ್ದಾರೆ.

## ಗುಡ್ಡಳ್ಳಿತಾಂಡ

ಗುಡ್ಡಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಗುಡ್ಡಳ್ಳಿ ತಾಂಡಾವು ಹೊನ್ನಾಳಿಯಿಂದ ಸುಮಾರು ೨೫ ಕಿ.ಮೀ. ದೂರದಲ್ಲಿ, ಶಿವಮೊಗ್ಗದಿಂದ ೩೦ ಕಿ.ಮೀ. ದೂರದಲ್ಲಿದೆ. ಈ ತಾಂಡಾದಲ್ಲಿ ಒಟ್ಟು ೬೫ ಕುಟುಂಬಗಳಿದ್ದು ಸುಮಾರು ೩೧೦ ಜನಸಂಖ್ಯೆಯನ್ನು ಹೊಂದಿದೆ. ಈ ತಾಂಡವು ಗುಡ್ಡ ಬೆಟ್ಟದ ಮಧ್ಯದಲ್ಲಿರುವ ಒಂದು ಸಣ್ಣ ತಾಂಡವಾಗಿದೆ. ಈ ತಾಂಡಾದಿಂದ ೩ಕಿ.ಮೀ. ದೂರದಲ್ಲಿ ತೀರ್ಥರಾಮೇಶ್ವರ ಕ್ಷೇತ್ರದ ಎತ್ತರದ ಬೆಟ್ಟಸಾಲು ಉದ್ದಕ್ಕೂ ಹಬ್ಬಿದೆ. ಈ ಬೆಟ್ಟದ ಸಾಲು ಸೌಳಂಗದಿಂದ ಶಿಕಾರಿಪುರ ತಾಲೂಕಿನ ಇಳೂರುವರೆಗೆ ಹಬ್ಬಿದೆ. "ಬೆಳಗುತ್ತಿ ಕ್ಷೇತ್ರವನ್ನು ೧೨-೧೩ನೇ ಶತಮಾನದಲ್ಲಿ ಅವಂತಿ ಬೆಳಗವರ್ತಿ, ಬೆಳಗವತ್ತಿ, ಎಂದು ಶಾಸನಗಳು ಕರೆಯುವುದು ಈಗ ಬೆಳಗಿತ್ತು ಶಾಶ್ವತನಾಮ ಉಳಿದಿದೆ. ಇಲ್ಲಿ ಮುಖ್ಯವಾಗಿ ಬೆಳಗುತ್ತಿ ಸಿಂಧ್ಯರು ಮತ್ತು ವಿಜಯನಗರದರಸರು ಆಳ್ವಿಕೆ ನಡೆಸಿದ್ದಾರೆ. ಸಿಂಧ್ಯರು ಉತ್ತರ ಭಾರತದ ಒಂದು ರಾಜಮನೆತನದವರು ಇವರ ಮೂಲ ಪುರುಷ ನಿಡುದಳಿಸಿಂಧ್ಯ ಕ್ರಿ.ಶ. ೪೦೦ರಲ್ಲಿ ಮಹಾರಾಷ್ಟ್ರದ ಇರಂಬರಗೆಯಲ್ಲಿ ಆಳುತ್ತಿದ್ದ ಈ ವಂಶವು ಶಾಖೆಗಳಾಗಿ ಯಲಬುರ್ಗ, ಕುರುಗೋಡು ಮತ್ತು ಬೆಳಗುತ್ತಿಯಲ್ಲಿ ಆಳಿದರು. ಸಿಂಧ್ಯರು ಬೆಳಗುತ್ತಿಯ ಬಗ್ಗೆ ಸುಮಾರು ೩೦ ಶಿಲಾಶಾಸನ ಇವೆ ಎಂದು ಇತಿಹಾಸಕಾರರು ಹೇಳುತ್ತಾರೆ."[೨೧]

ವಿಜಯನಗರದರಸರು ಮತ್ತು ಬೆಳಗುತ್ತಿ : "೧೪-೧೬ನೇ ಶತಮಾನದಲ್ಲಿ ಬೆಳಗುತ್ತಿ ಒಂದು ಸ್ವತಂತ್ರ್ಯ ಪಾಳೆಯಪಟ್ಟಿನ ಕೇಂದ್ರ ವಿಜಯನಗರದಲ್ಲಿ ಒಂದನೇ ಬುಕ್ಕರಾಯನು ಆಳುತ್ತಿರುವಾಗ, ಬೇಡಕುಲಕ್ಕೆ ಸೇರಿದ ಕನ್ನೆನಾಯಕ (ಚೆನ್ನನಾಯಕ ಎಂದು ಕೆಲವು ಕಡೆ ಹೇಳಿದೆ) ಚಂದ್ರಗುತ್ತಿ ಸುತ್ತಲೂ ಮಲೆನಾಡು ಪ್ರದೇಶದಲ್ಲಿ ಮತ್ತು ಬೆಳಗುತ್ತಿಯನ್ನು ಒಳಗೊಂಡಂತೆ. ಕೆಲವು ಕಡೆ ಕಾಡು ಕಡಿದು ಕೋಟೆಕಟ್ಟಿಸಿಕೊಂಡು ಎಂಭತ್ತು ಸಾವಿರ ಯೋಧಪಡೆಯನ್ನಿರಿಸಿಕೊಂಡು ಆಳುತ್ತಿದ್ದ. ಎಂದು ತಿಳಿದು ಬರುತ್ತದೆ. ಬೆಳಗುತ್ತಿಯಲ್ಲಿ ಶ್ರೀ ಚೆನ್ನಕೇಶವ ದೇವಾಲಯವಿದೆ. ಸಿದ್ದೇಶ್ವರ ದೇವಾಲಯ ೮ ವೀರಗಲ್ಲುಗಳು ಪೂರ್ವದ ಕಡೆ ೨ ವೀರಗಲ್ಲುಗಳು, ದಕ್ಷಿಣದ ಗೋಡೆಯ ಬಳಿ ೨, ದಾನಶಾಸನಗಳು ೩, ಒಂದು ಶಾಸನ ಸುಮಾರು ೮೦ ಸಾಲಿನ ಶಿಲಾಶಾಸನಗಳಿವೆ. ಶ್ರೀ ಚೆನ್ನಕೇಶವ ದೇವಾಲಯ ಅದ್ಭುತ, ಸುಂದರ ಕೆತ್ತನೆಯ ಗೋಪುರಗಳ ವಿನ್ಯಾಸದ ವೈಭವವನ್ನು ಹೊಂದಿದೆ. ಹೀಗೆ ಎರಡು ಐತಿಹಾಸಿಕ ಸುಪ್ರಸಿದ್ಧ ವೀಕ್ಷಣೀಯ ಸ್ಥಳಗಳ ಹತ್ತಿರ ಗುಡ್ಡಳ್ಳಿ ತಾಂಡ ಇದೆ"[೨೨]

## ಸೂರಗೊಂಡನಕೊಪ್ಪ ತಾಂಡ

ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಈ ತಾಂಡವು ಸೂರಗೊಂಡನಕೊಪ್ಪ ಊರಿನ ಜೊತೆಯಲ್ಲಿಯೇ ಪ್ರತ್ಯೇಕವಾಗಿ ಎರಡು ಓಣಿಗಳಲ್ಲಿ ವಾಸವಾಗಿರುವ ಲಂಬಾಣಿಗರು ಸೂರಗೊಂಡನಕೊಪ್ಪ ತಾಂಡದವರು ಎಂದು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ತಾಂಡದಲ್ಲಿ ೬೨ ಕುಟುಂಬಗಳು ವಾಸಿಸುತ್ತಿದ್ದು ಸುಮಾರು ೩೦೬ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಮಹಿಳೆಯರು ೧೫೦ ಪುರುಷರು ೧೫೬ ರಷ್ಟಿದ್ದಾರೆ. ತಾಂಡಾದಲ್ಲಿ ಒಟ್ಟು ಒಂಭತ್ತು ಬೆಡಗೆನವರು ವಾಸಿಸುತ್ತಿದ್ದು ಡುಂಗಾವತ್ ೨, ಈಶ್ಲಾವತ್

೩, ಕೋಲಾ ೨, ಖೀಮಾವತ್ ೨೫, ಮೇರಾಜೋತ್ ೯, ಮೇಘಾವತ್೩, ಮೂಡ್ ೬, ರಾಜಾವತ್ ೧, ವಡತ್ಯಾ ೧೧, ಕುಟುಂಬಗಳು ವಾಸಿಸುತ್ತಿದ್ದಾರೆ. ಖೀಮಾವತ್ ಬೆಡಗಿನವರ ಸಂಖ್ಯೆ ಹೆಚ್ಚಾಗಿದ್ದು ಮೊದಲು ತಾಂಡಾದಲ್ಲಿ ಖೀಮಾಮತ್ ಕುಟುಂಬ ಒಂದೇ ವಾಸಿಸುತ್ತಿದ್ದು ಕಾಲಕ್ರಮೇಣ ಬೇರೆ ಬೆಡಗಿನವರು ವಿವಾಹ ಸಂಬಂಧಗಳಿಂದ ಬಂದು ನೆಲೆಸಿದ್ದಾರೆ. ಅಂದರೆ ವಲಸೆ ಬಂದ ಸಂದರ್ಭದಲ್ಲಿ ಈ ತಾಂಡಾದಲ್ಲಿ ಒಂದೇ ಬೆಡಗಿನ ರಕ್ತ ಸಂಬಂಧಿ ಕುಟುಂಬದವರು ಬಂದಿದ್ದಾಗಿ ತಿಳಿಸಿದರು. ಈಗಲೂ ತಾಂಡಾದಲ್ಲಿ ಇದೇ ಬೆಡಗಿನವರ ಸಂಖ್ಯೆ ಹೆಚ್ಚಾಗಿದೆ.

ಸೂರಗೊಂಡನಕೊಪ್ಪ ಅಂದ ತಕ್ಷಣವೇ ನೆನಪಿಗೆ ಬರುವ ಹೆಸರು ಸೇವಾಭಾಯಾ. ಈತ ಲಂಬಾಣಿಗರ ಸಾಂಸ್ಕೃತಿಕ ವೀರ. ಈ ಕಾರಣದಿಂದ ದೇಶಾದ್ಯಂತ ನೆಲೆಸಿರುವ ಲಂಬಾಣಿಗರಿಗೆ ಪ್ರೇಕ್ಷಣೀಯ ಸ್ಥಳವಾಗಿದೆ. "ಸೌಳಂಗ ಗ್ರಾಮದ ಹತ್ತಿರ ಚಿನ್ನಿಕಟ್ಟೆಯ ಒಳದಾರಿಯಲ್ಲಿ ಎರಡು ಫರ್ಲಾಂಗ್ ದೂರ ನಡೆದಲ್ಲಿ, ರಸ್ತೆಯ ಪಕ್ಕಕ್ಕೆ ಗಾವುದ ದೂರದಲ್ಲಿ ಬೆಟ್ಟವಿದೆ. ಈ ಬೆಟ್ಟವೇ ಸೇವಾಭಾಯಾ ಅವರ ಜನ್ಮಸ್ಥಾನ. ೧೫.೨.೧೭೩೯ರಲ್ಲಿ ಸೇವಾಭಾಯ ಜನಿಸಿದರು. ಇವರ ತಂದೆಯ ಹೆಸರು ಭೀಮಾನಾಯ್ಕ, ತಾಯಿ ಧರ್ಮಿಣಿಬಾಯಿ. ಮಕ್ಕಳಿಲ್ಲದ ಈ ದಂಪತಿಗಳು ಮಾರಿಯಮ್ಮ ದೇವತೆಯನ್ನು ಆರಾಧಿಸಿದ್ದರಿಂದ ಸೇವಾಭಾಯ ಜನ್ಮ ತಳೆದರು."[೨೩] ತಾಂಡಾದಲ್ಲಿ ವಸತಿ ವ್ಯವಸ್ಥೆಯನ್ನು ಗಮನಿಸಿದಲ್ಲಿ ೬೨ ಮನೆಗಳಿವೆ. ೫ ಗುಡಿಸಲು ಮನೆಗಳಾಗಿದ್ದು, ಉಳಿದ ೫೭ ಮನೆಗಳಲ್ಲಿ ಸರಕಾರದ ಜನತಾ ಮನೆಗಳು ಹಾಗೂ ಹಂಚಿನ ಮನೆಗಳಿವೆ. ಇವುಗಳಲ್ಲಿ ಬಹುಪಾಲು ಮನೆಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿದವುಗಳಾಗಿವೆ. ತಾಂಡಾದಲ್ಲಿ ಬಹುತೇಕ ಭೂರಹಿತರೇ ಅಧಿಕವಾಗಿದ್ದು ಕೂಲಿ, ಜೀತ, ಇವರ ಜೀವನಾಧಾರ ಕಸುಬಾಗಿವೆ. ಮಳೆ ಬೆಳೆ ಚೆನ್ನಾಗಿ ಆದಲ್ಲಿ ಅಲ್ಪಸ್ವಲ್ಪ ಜಮೀನು ಇದ್ದವರಿಗೆ ಜೀವನ ಹೇಗೋ ನಡೆಯುತ್ತದೆ. ಇಲ್ಲವೆಂದಲ್ಲಿ ಇವರ ಪರಿಸ್ಥಿತಿಯು ಕಷ್ಟಕರ. ಭೂರಹಿತರು ಯಥಾ ಪ್ರಕಾರ ಕೂಲಿ ಮಾಡಲು, ಹೋಟಲ್ಲಿನಲ್ಲಿ ಕೆಲಸ ಮಾಡಲು ನಗರಗಳತ್ತ ವಲಸೆ ಹೋಗಿದ್ದಾರೆ. ಈ ತಾಂಡಾದಲ್ಲಿ ಎರಡು ಅಂಗಡಿಗಳನ್ನು ಹೊಂದಿರುವ ಕುಟುಂಬವು ವ್ಯಾಪಾರದ ಜೊತೆಗೆ ಕೃಷಿಯನ್ನು ಮಾಡುತ್ತದೆ. ತಾಂಡಾವು ಆಧುನಿಕ ಸರಕಾರಿ ಸೌಲಭ್ಯಗಳನ್ನು ಪಡೆಯಲಾಗಿಲ್ಲ. ಬೀದಿ ದೀಪಗಳ, ರಸ್ತೆಯ, ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಸೂರಗೊಂಡನಕೊಪ್ಪದಲ್ಲಿ ಮುಸ್ಲಿಂ, ಆದಿದ್ರಾವಿಡ, ಲಿಂಗಾಯಿತ, ವಿಶ್ವಕರ್ಮ ಜನಾಂಗದವರು ವಾಸಿಸುತ್ತಿದ್ದಾರೆ. ಲಂಬಾಣಿಗರು ಇಲ್ಲಿ ಪ್ರತ್ಯೇಕವಾಗಿ ತಾಂಡಾದಲ್ಲಿ ವಾಸಿಸುತ್ತಿದ್ದಾರೆ. ಊರಲ್ಲಿ ಕೆರೆಯಿದ್ದು, ದನಕರುಗಳಿಗೆ, ಬೇಸಾಯಕ್ಕೆ, ದೈನಂದಿನ ಕೆಲಸ ಕಾರ್ಯಗಳಿಗೆ ಈ ಕೆರೆಯನ್ನು ಆಶ್ರಯಿಸಿದ್ದಾರೆ. ಕೆರೆಯನೀರನ್ನು ಬೇಸಾಯಕ್ಕೆ ಬಳಸಿಕೊಳ್ಳುತ್ತಾರೆ. ಆದರೆ ನೀರಾವರಿ ಭೂಮಿಯು ಮೇಲ್ಜಾತಿಯವರ ಸ್ವಾಮ್ಯದಲ್ಲಿದ್ದು, ತಾಂಡದವರು ಒಬ್ಬರು ಕೂಡಾ ನೀರಾವರಿ ಭೂಮಿಯನ್ನು ಹೊಂದಿರುವುದಿಲ್ಲ. ತಾಂಡಾದ ಜನರು ಹೆಚ್ಚಾಗಿ ಎರಡು ಮೂರು ಎಕರೆ ಒಣಭೂಮಿಯನ್ನು ಹೊಂದಿದ್ದರೂ, ಇದು ಬಗರ್ ಹುಕುಂ ಜಮೀನಾಗಿದೆ. ಒಣಭೂಮಿಯನ್ನೇ ಹೆಚ್ಚಾಗಿ ತಾಂಡಾದವರು ಹೊಂದಿದ್ದು, ಸುತ್ತಲೂ ಹೆಚ್ಚಾಗಿ ಬೆಟ್ಟ ಗುಡ್ಡ, ಕಾಡು ಇದೆ.

## ಅಧ್ಯಯನದ ಉದ್ದೇಶಗಳು

✧ ಸಾಮಾಜಿಕ ಬದಲಾವಣೆಗೆ ಒಂದೇ ಸಮುದಾಯದ ಹಲವು ಗುಂಪುಗಳು ಯಾವ ಬಗೆಯಲ್ಲಿ ಸ್ಪಂದಿಸುತ್ತವೆ? ಈ ಬದಲಾವಣೆಗಳಿಗಿರುವ ಗತಿಯು ಯಾವ ಯಾವ ಭೌತಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಎಂಬುದನ್ನು ಕಂಡುಕೊಳ್ಳಲು ಭಿನ್ನ ಭೌಗೋಳಿಕ ಹಿನ್ನಲೆಯ ಮತ್ತು ಸಾಮಾಜಿಕ ಆರ್ಥಿಕ ಸ್ಥಿತಿಯಲ್ಲಿರುವ ನಾಲ್ಕು ತಾಂಡಾಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ.

✧ ಸಾಮಾಜಿಕ ಬದಲಾವಣೆ ಎನ್ನುವುದು, ಮನುಷ್ಯನ ಲೌಕಿಕ ಬದುಕಿನ ಅವಸ್ಥಾಂತರ ಮಾತ್ರವಲ್ಲ, ಮನುಷ್ಯ ಆಧುನಿಕನಾಗುವ, ಹೊಸಜಗತ್ತಿನ ಮುಕ್ತ ಪರಿಸರದಲ್ಲಿ ತನ್ನನ್ನು ಮುಕ್ತವಾಗಿಸಿಕೊಳ್ಳುವ ವಿಮೋಚನೆಯ ಪ್ರಕ್ರಿಯೆಯೂ ಹೌದು. ಕೆಳಜಾತಿಗಳಿಗೆ, ಈ ಬಗೆಯ ವಿಮೋಚನೆಯು ಸಾಮಾಜಿಕ ಅವಮಾನವವನ್ನು ಮೀರಲು ನೆರವಾಗುತ್ತದೆ. ಲಂಬಾಣಿಗಳಂತಹ ಅಲೆಮಾರಿ ಸಮಾಜಗಳು ಹೇಗೆ ತಮ್ಮ ಪಾರಂಪರಿಕ ನೆಲೆಗಳಿಂದ ಆಧುನಿಕ ಜಗತ್ತಿಗೆ ಹೊಂದಿಕೊಳ್ಳಲು ಹೆಣಗಿದವು? ಎಂಬುದೇ ಒಂದು ಅಧ್ಯಯನ ಯೋಗ್ಯ ವಿಷಯ.

✧ ನಾನು ಆಯ್ಕೆ ಮಾಡಿಕೊಂಡ ತಾಂಡಾಗಳು ಹೊನ್ನಾಳಿ ತಾಲೂಕಿನ ಭಿನ್ನ ಭೌಗೋಳಿಕ ಪರಿಸರದಲ್ಲಿವೆ. ಒಂದೇ ತಾಲೂಕಿನಲ್ಲಿದ್ದರೂ ಈ ತಾಂಡಾಗಳು ಹಲವು ಭಿನ್ನ ಸ್ತರಗಳಲ್ಲಿ ಬಾಳುತ್ತಿವೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಭೌಗೋಳಿಕವಾಗಿ ಈ ತಾಂಡಾಗಳು ಮುಂದುವರೆದ, ಮುಂದುವರೆಯುತ್ತಿರುವ, ಮುಂದುವರೆಯಲು ಇರುವ ತೊಡಕುಗಳಿಂದ ನರಳುತ್ತಿರುವ ಮತ್ತು ಹಿಂದುಳಿದಿರುವ ಎಲ್ಲಾ ಗ್ರಾಮಗಳ ಮಾದರಿಯಗಳಂತಿವೆ. ಈ ಕಾರಣಕ್ಕಾಗಿ ಪ್ರಸ್ತುತ ನಾಲ್ಕು ತಾಂಡಾಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

✧ 'ಸಾಮಾಜಿಕ ಬದಲಾವಣೆ' ಎಂಬುದನ್ನು ನಾನು ಇಲ್ಲೇ ಸ್ಪಷ್ಟಪಡಿಸುತ್ತಿದ್ದೇನೆ. ಲಂಬಾಣಿಯಂತಹ ಅಲೆಮಾರಿ ಸಮುದಾಯದ ಪಾರಂಪರಿಕ ಲೌಕಿಕ ಬದುಕಿನಲ್ಲಿ ಸಂಭವಿಸಿದ ಸ್ಥಿತ್ಯಂತರಗಳನ್ನು ನಾನು ಇಲ್ಲಿ 'ಸಾಮಾಜಿಕ ಬದಲಾವಣೆ' ಮತ್ತು 'ಮುಂದುವರೆಯುವಿಕೆ' ಎಂದು ಭಾವಿಸಿದ್ದೇನೆ.

✧ ಈ ಸಾಮಾಜಿಕ ಬದಲಾವಣೆ ಮತ್ತು ಮುಂದುವರಿಕೆಯು ಆ ಸಮುದಾಯ ತನ್ನ ಸಮಕಾಲೀನತೆಗೆ ತಾನು ತೆರೆದುಕೊಳ್ಳುವ ಮತ್ತು ವರ್ತಮಾನಕ್ಕನುಗುಣವಾಗಿ ಒಟ್ಟು ಸಮಾಜದ ವಾಹಿನಿಯಲ್ಲಿ ಅವಕಾಶಗಳನ್ನು ಪಡೆಯುವ ಮತ್ತು ಅವಕಾಶಗಳಿಂದ ವಂಚಿತವಾಗುವ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ.

ಅಧ್ಯಯನಕ್ಕೆ ನಾನು ಆಯ್ಕೆ ಮಾಡಿಕೊಂಡಿರುವ ತಾಂಡಾಗಳು ನಾಲ್ಕು ಭಿನ್ನ ಮಾದರಿಯ ಸಾಮಾಜಿಕ ಆರ್ಥಿಕ ಹಿನ್ನಲೆಗಳನ್ನು ಪ್ರತಿನಿಧಿಸುತ್ತವೆ. ಈ ಕಾರಣಕ್ಕಾಗಿ ನಾಲ್ಕು ತಾಂಡಾಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಸಮಗ್ರ ಚಿತ್ರಣವನ್ನು ಇಲ್ಲಿ ನೀಡಲಾಗಿದೆ.

[illegible]

## ಅಡಿಟಿಪ್ಪಣೆಗಳು

೧. ಪರ್‌ಸ್ಪೆಕ್ಟೀವ್ ವೀವ್ ಆಫ್ ಬಂಜಾರಸ್ ಆಫ್ ಇಂಡಿಯಾ

೨. ದಿ.ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ನಂಜುಂಡಯ್ಯ ಮತ್ತು ಅಯ್ಯರ್, ಪು.೧೩೫, ೧೩೬, ೧೯೨೮

೩. ಅದೇ, ಪು. ೧೨೮, ೧೩೬.

೪. ದಿ.ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಗ್ಯಾರಿಯರ್‌ಸನ್, ಪು. ೨೫೬, ೧೯೬೮

೫. ಭಾರತೀಯ ಜನಜಾತೀಯ, ರೂಪಚಂದ್ರವರ್ಮ, ಪು.೫, ೨೦೦೩

೬. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಗಿಯರ್‌ಸನ್, ಪು. ೨೦೭, ೧೯೦೯

೭. ಮೆಕೆಂಝಿ, ೧೮೮೧, ಪು.೧೫೨. ಥರಸ್ಟನ್, ೧೯೦೯, ಪು.೨೧೪. ನಂಜುಂಡಯ್ಯ ಮತ್ತು ಅಯ್ಯರ್, ೧೯೨೮, ಪು.೧೩೬. ಚಿದಾನಂದಮೂರ್ತಿ, ೧೯೭೦. ಪು.೯

೮. ದಿ.ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್, ಅಯ್ಯರ್, ಪು.೧೩೫, ೧೩೬, ೧೯೨೮

೯. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಸಂ. ೪, ಥರಸ್ಟನ್, ಪು.೨೦೭, ೧೯೦೯

೧೦. ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ, ಸಂ.೨, ಎಂಥೋವನ್, ಪು.೩೩, ೧೯೯೦

೧೧. ಪೀಪಲ್ ಆಫ್ ಇಂಡಿಯಾ, ಕರ್ನಾಟಕ ೨೬, ಭಾಗ.೨, ಹಲಬರ್ ಬಿ.ಜಿ., ಪು.೮೮೦, ೨೦೦೩

೧೨. ಪೀಪಲ್ ಆಫ್ ಇಂಡಿಯಾ, ಕೆ.ಎಸ್. ಸಿಂಗ್, ಪು,

೧೩. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ನಂಜುಂಡಯ್ಯ ಮತ್ತು ಅಯ್ಯರ್, ಪು.೧೩೬, ೧೯೨೮

೧೪. ಲಂಬಾಣಿ ಜನಪದ ಸಾಹಿತ್ಯ, ನಾಯಕ ಡಿ.ಬಿ., ಪುಟ.೧, ೨೦೦೨

೧೫. ಕಿಟಲ್ ಕನ್ನಡ ಇಂಗ್ಲೀಷ್ ನಿಘಂಟು, ಪು. ೧೩೫೬

೧೬. ಲಂಬಾಣಿ ಸಂಸ್ಕೃತಿ, ಉದ್ಧೃತ ಸಣ್ಣರಾಮ, ಪು.೨೮, ೧೯೯೯

೧೭. ಲಂಬಾಣಿ ಸಂಸ್ಕೃತಿ, ಉದ್ಧೃತ ಸಣ್ಣರಾಮ, ಪು.೩೧, ೧೯೯೯

೧೮. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಥರಸ್ಟನ್. ಪು.೨೧೩, ೧೯೦೯

೧೯. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ನಂಜುಂಡಯ್ಯ ಹಾಗೂ ಅಯ್ಯರ್, ಪು.೧೩೪, ೧೯೨೮

೨೦. ಉದ್ಧೃತ ಭಾರತದ ಬಂಜಾರ ಪತ್ರಿಕೆ, ಪು.೨, ೩, ೨೦೦೨

೨೧. ದಾವಣಗೆರೆ ಇದು ನಮ್ಮ ಜಿಲ್ಲೆ, ಗಿರಿಜಾ .ಟಿ. ಪು.೫೪೩, ೨೦೦೧

೨೨. ಅದೇ ಪು.೫೪೪

೨೩. ಅದೇ ಪು.೬೦೭

# ಅಧ್ಯಾಯ ೨

# ಲಂಬಾಣಿಗರ ಸಾಮಾಜಿಕ ಸ್ಥಿತಿಗತಿಗಳು

೨

# ಲಂಬಾಣಿಗರ ಸಾಮಾಜಿಕ ಸ್ಥಿತಿಗತಿಗಳು

ಲಂಬಾಣಿಗರು ಹಳ್ಳಿ, ಗ್ರಾಮಗಳಿಂದ ದೂರ ತಮ್ಮದೇ ಆದ ಪ್ರತ್ಯೇಕ ತಾಂಡಾಗಳನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ತಾಂಡವು ನಾಯಕನ ಮುಂದಾಳತ್ವದಲ್ಲಿ ನಡೆಯುತ್ತದೆ. ಇಂದಿಗೂ ಈ ರೀತಿಯಲ್ಲಿಯೇ ತಾಂಡದ ನಾಯಕ ವಿವಾಹ ಸಭೆ ಸಮಾರಂಭಗಳಲ್ಲಿ, ಹಬ್ಬ, ಜಾತ್ರೆ, ಸಾವು ನೋವು, ನ್ಯಾಯ ತೀರ್ಮಾನ ಮುಂತಾದ ಸಂದರ್ಭಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾನೆ. ಆದರೆ ಇಂದು ಈತನ ಪ್ರಭಾವ ಕಡಿಮೆಯಾಗಿರಬಹುದು. ಆದರೆ ಇಂದಿಗೂ ತಾಂಡದಲ್ಲಿ ನಾಯಕನ ಪಾತ್ರ ಮಹತ್ವದ್ದಾಗಿ ಅನುವಂಶೀಯವಾಗಿ ನಾಯಕ ಸ್ಥಾನ ಮುಂದುವರೆದಿರುವುದು ಗಮನಾರ್ಹವಾಗಿದೆ. ಲಂಬಾಣಿಗರು ಇತರ ಲಂಬಾಣಿಗರನ್ನು ಗೋರ್, ಗೋರ್‌ಮಾಟಿ, ಗೋರ್‌ಭಾಯಿ ಎಂದು ಕರೆಯುತ್ತಾರೆ. ಉಳಿದ ಇತರ ಸಮುದಾಯದವರನ್ನು ಕೋರ್‌ಮಾಟಿಗಳೆಂದು ಕರೆಯುತ್ತಾರೆ.

ಹೀಗೆ ವಾಸಿಸುತ್ತಿರುವ ಇವರು "ಉತ್ತರ ಭಾರತದಿಂದ ದಕ್ಷಿಣಕ್ಕೆ ವ್ಯಾಪಾರಕ್ಕಾಗಿ ವಲಸೆ ಬಂದಿರುವವರು ಕಾಲಾಂತರದಲ್ಲಿ ಅಲ್ಲಲ್ಲಿ ತಂಡೋಪ ತಂಡವಾಗಿ ತಮ್ಮದೇ ಆದ ಜನ ಸಮುದಾಯದ ತಾಂಡಾಗಳನ್ನು ನಿರ್ಮಿಸಿಕೊಂಡು ಸಾವಿರಾರು ವರ್ಷಗಳಿಂದ ತಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಂಡು ಬದುಕಿದ್ದಾರೆ. ಈಗೀಗ ನವನಾಗರೀಕತೆಯ ಪ್ರಭಾವ ಅವರ ಮೇಲೆ ಅವರೂ ಅವರಲ್ಲಿ ಅಷ್ಟಾಗಿ ಬದಲಾವಣೆ ಕಂಡುಬರುವುದಿಲ್ಲ"[1] ಒಂದೊಂದು ತಾಂಡಾದಲ್ಲಿ ಐದು ಹತ್ತು ಕುಟುಂಬಗಳಿಂದ ಸಾವಿರ ಕುಟುಂಬವಿರುವ ದೊಡ್ಡ ತಾಂಡಾಗಳು ಕೂಡ ಅಸ್ತಿತ್ವದಲ್ಲಿವೆ. ಇವರು ವಾಸಿಸುವ ತಾಂಡಾಗಳಿಗೆ ಪ್ರತ್ಯೇಕ ಹೆಸರಿರುವುದಿಲ್ಲ. ಯಾವ ಹಳ್ಳಿಯ ಸಮೀಪದಲ್ಲಿರುತ್ತದೆಯೋ ಆ ಹಳ್ಳಿಯ ಹೆಸರಿನ ಮುಂದೆ ತಾಂಡವನ್ನು ಸೇರಿಸುತ್ತಾರೆ. ಚಿಕ್ಕಬಾಸೂರು ಒಂದು ಊರಿನ ಹೆಸರು, ಇದರ ಸಮೀಪದಲ್ಲಿರುವ ತಾಂಡ, ಚಿಕ್ಕಬಾಸೂರು ತಾಂಡವಾಗಿದೆ. ಹೀಗೆ ಲಂಬಾಣಿಗರು ವಾಸವಿರುವ ಸ್ಥಳವನ್ನು ಹಳ್ಳಿಯ ಹೆಸರಿನೊಂದಿಗೆ ಕರೆಯುತ್ತಾರೆ. ಲಂಬಾಣಿಗರು ಅಲೆಮಾರಿಗಳಾಗಿದ್ದ ಸಂದರ್ಭದಲ್ಲಿ ತಮ್ಮ ನಾಯಕನ ಜೊತೆ ಗುಂಪು ಗುಂಪಿನಲ್ಲಿ ವಾಸಿಸುತ್ತಿದ್ದರು. ಇವರು ಎಲ್ಲಿಯೂ ಶಾಶ್ವತವಾಗಿ ನೆಲೆಸದೆ, ವ್ಯಾಪಾರದ ನಿಮಿತ್ತ ಅಲೆಮಾರಿಗಳಾಗಿ ತಾತ್ಕಾಲಿಕ ವಸತಿಗಳನ್ನು ರಚಿಸಿಕೊಂಡು ವಾಸಿಸುತ್ತಿದ್ದರು. ಪ್ರಪಂಚವು ತ್ವರಿತಗತಿಯಲ್ಲಿ ಬದಲಾಗುತ್ತಿದೆ. ಪ್ರಾಚೀನ ಸಮಾಜದಲ್ಲಿ ಬದಲಾವಣೆಯು ನಿಧಾನವಾಗಿದ್ದುದರಿಂದ ಮತ್ತು ಅತ್ಯಲ್ಪ ಪ್ರಮಾಣದಾದ್ದರಿಂದ ಆ ಸಮಾಜವು ಸ್ಥಗಿತ ಹಾಗೂ ಜಟಿಲವಾಗಿತ್ತು. "ಬದಲಾವಣೆಯು ಪ್ರಕೃತಿ ನಿಯಮ. ಅದೊಂದು ಸ್ವಾಭಾವಿಕ ಪ್ರಕ್ರಿಯೆ. ಈ ದಿನ ಏನಿರುತ್ತದೆಯೋ ಅದು ನಾಳೆ ಬದಲಾವಣೆಗೆ ಒಳಗಾಗಿರುತ್ತದೆ"[2] ಲಂಬಾಣಿ ಸಮುದಾಯ ಬದಲಾವಣೆಯ ಪ್ರಕ್ರಿಯೆಯಿಂದ ಹೊರತಾಗಿ ಉಳಿಯದೆ

ಈಗಿನ ದಿನದಲ್ಲಿ ಅವರು ವಾಸಿಸುವ ಮನೆ ಗುಡಿಸಿಲಿನದು ಆಗಿರದೆ, ಹಂಚಿನ ಮನೆಯಾಗಿದೆ. ಸರಕಾರದ ಅಂಬೇಡ್ಕರ್ ಆಶ್ರಯ ಮನೆಯೋಜನೆ, ಜನತಾ ಆಶ್ರಯ ಮನೆಯೋಜನೆಯ ಫಲ ಸ್ವರೂಪವಾಗಿ ತಾಂಡದಲ್ಲಿ ಹಂಚಿನ ಮನೆಗಳು ಇದ್ದು, ಆರ್ಥಿಕ ಸ್ಥಿತಿವಂತರು ಆರ್.ಸಿ.ಸಿ. ಕಟ್ಟಡಗಳಲ್ಲಿ ವಾಸಿಸುತ್ತಿದ್ದಾರೆ. ಶತಮಾನಗಳ ಹಿಂದೆ ಇದ್ದ ಗ್ರಾಮಗಳ ಸ್ವರೂಪ ಇಂದು ಅಗಾಧ ಪ್ರಮಾಣದಲ್ಲಿ ಬದಲಾಗಿರುವುದನ್ನು ಕಾಣಬಹುದು. "ಅಲ್ಲಲ್ಲಿ ಸರಕಾರದ ಬಗರ್‌ಹುಕುಂ ಜಮೀನ್ನು ಸಾಗುವಳಿ ಮಾಡುತ್ತ ಒಂದು ಕಡೆ ನೆಲೆ ನಿಲ್ಲುವಂತಾಗಿದ್ದಾರೆ. ವ್ಯಾಪಾರ ವೃತ್ತಿ ಸ್ಥಗಿತಗೊಂಡಿದೆ. ಅವರು ಬದುಕಿನ ಹೊರ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ"[೩] ಹೀಗೆ ಬದಲಾವಣೆಗೆ ಒಳಪಡುತ್ತಾ ತಾಂಡಾಗಳು ಇಂದು ಕೇಂದ್ರೀಕೃತ ಹಳ್ಳಿಗಳಾಗಿ ಕಂಡುಬಂದಿದ್ದು "ವಾಸಸ್ಥಾನವು ಒಂದೇ ಕಡೆ ಒಂದು ನಿರ್ಧಿಷ್ಟ ಪ್ರದೇಶದಲ್ಲಿದ್ದು ಮನೆಗಳೆಲ್ಲಾ ಒಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡಿವೆ"[೪] ಇವುಗಳನ್ನು ಕೇಂದ್ರೀಕೃತ ಹಳ್ಳಿಗಳೆಂದು ಕರೆಯುತ್ತಾರೆ. ವಾಸದ ಮನೆಗಳು ಹಂಚಿನ ಗುಡಿಸಿಲಿನ ಮನೆಗಳು ಅಥವಾ ಎರಡು ನಮೂನೆಗಳು ಇದ್ದು ಮನೆ ಮನೆಗಳ ನಡುವೆ ಹೆಚ್ಚು ಜಾಗವಿಲ್ಲದೆ ಮನೆಗಳಿಗೆ ಸೇರಿದ ಹಾಗೆ ಕೊಟ್ಟಿಗೆ ಹಾಗೂ ಮನೆಗಳ ಹಿಂದೆ ಹಿತ್ತಲುಗಳಿವೆ. ತಾಂಡಗಳ ಸುತ್ತ ರೈತರ ವ್ಯವಸಾಯದ ಜಮೀನು ಹರಡಿಕೊಂಡಿದೆ. ಒಬ್ಬರನ್ನೊಬ್ಬರು ಅನ್ಯೋನ್ಯವಾಗಿ ಅರಿತು ಹೊಂದಿಕೊಂಡು ಬಾಳುತ್ತಿದ್ದಾರೆ. ತಾಂಡಗಳು ಇಂದು ಶಾಶ್ವತ ಹಳ್ಳಿಗಳಾಗಿವೆ.

### ೧. ಅಲೆಮಾರಿ ಸಮುದಾಯವೊಂದು ನೆಲೆ ನಿಲ್ಲುವ ಪ್ರಕ್ರಿಯೆ

ಲಂಬಾಣಿಗರನ್ನು ಲಂಬಾಣಿ, ಬ್ರಿಂಜಾರಿ, ಬಂಜಾರಿ, ಬೋಯ್‌ಪುರಿ, ಸುಗಾಲಿ ಅಥವಾ ಸುಕಾಲಿ[೫] ಗಳೆಂದು ಕರೆಯುವರು. ಇವರ ಮೂಲವನ್ನು "Northern India, probably marwar, as their orginal Home. they claim tobe Kshatriyas and to be descended from Rajput ancestors[೬] ಇದೇ ರೀತಿಯಲ್ಲಿ ಹಲವಾರು ವಿದ್ವಾಂಸರು ಲಂಬಾಣಿಗಳ ಮೂಲಸ್ಥಾನ ರಾಜಸ್ಥಾನವೆಂದು ಗುರುತಿಸುತ್ತಾರೆ. "ಲಂಬಾಣಿಗರು ಉತ್ತರದಿಂದ ಬಹುಶಃ ರಾಜಪುತಾಣದಿಂದ ದಕ್ಷಿಣಕ್ಕೆ ಬಂದು ನೆಲೆಸಿರುವರು. ಇವರು ಸುಮಾರು ೩೦೦ ವರ್ಷಗಳ ಹಿಂದೆ ೧೭ನೆಯ ಶತಮಾನದಲ್ಲಿ ಅಥವಾ ಅದಕ್ಕಿಂತ ಮುಂಚೆ ಮಹಮ್ಮದೀಯರ ಸೇನೆಯ ಜೊತೆಯಲ್ಲಿ ಬಂದರು. ಇವರ ಬಳಿ ಸಾವಿರಾರು ದನಕರುಗಳಿದ್ದವು. ಅಲೆಮಾರಿಗಳಾಗಿದ್ದ ಅವರು ಮಾರ್ಗ ಮಧ್ಯದಲ್ಲಿ ಪ್ರತ್ಯೇಕವಾಗಿ ಬಿಡಾರ ಹೂಡುತ್ತಿದ್ದ ಪ್ರವೃತ್ತಿ ಈಗಲೂ ಅವರಲ್ಲಿ ಕಂಡುಬರುತ್ತದೆ"[೭]

ಜಿ.ಎ.ಗ್ರಿಯರ್‌ಸನ್ ಅವರು "the well known tribe westren and Southern India" ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ದೇಶಾದ್ಯಾಂತ ತಮ್ಮ ದನಕರುಗಳ ಮೇಲೆ ಸರಕು ಸಾಗಿಸುವ ವ್ಯಾಪಾರಿ ಸಮುದಾಯವಾಗಿದ್ದ ಲಂಬಾಣಿಗರು They used tolive by pack-Bullock trade and they still remember the names of some the generrals who employed their forebers. When peace and the Raliways came and did away with these callings they fell back for a time upen crime as a livelihood but they have

now mostly taken to Agricultur and graging.[೮] ಹೀಗೆ ಲಂಬಾಣಿ ಸಮುದಾಯದವರು ದೇಶಾದ್ಯಂತ ಅಲೆಯುತ್ತಾ ವ್ಯಾಪಾರ ಮಾಡುವ ಪಾರಂಪರಿಕ ವೃತ್ತಿಯನ್ನು ಹೊಂದಿ ಶಾಂತ ಚಿತ್ತರಾಗಿದ್ದರು. ಆಧುನಿಕತೆಯ ಕೊಡುಗೆಯಾದ ರೈಲು ಬಂದು ವೃತ್ತಿಹೀನರಾಗಿ ಅಪರಾಧಿ ಚಟುವಟಿಕೆಗಳಲ್ಲಿ ಅನಿವಾರ್ಯವಾಗಿ ತೊಡಗುವಂತಾದರು. ಕಾಲಕ್ರಮೇಣ ಕೃಷಿಯನ್ನು ಅವಲಂಬಿಸಿದರು. ಅಲೆಮಾರಿ ಸಮುದಾಯ ಅನಿವಾರ್ಯವಾಗಿ ವೃತ್ತಿ ಬದಲಿಸಿ ಅಲೆಮಾರಿತ್ವ ತೊರೆದು ಒಂದೆಡೆ ನೆಲೆ ನಿಲ್ಲುವ ಪ್ರಕ್ರಿಯೆಯನ್ನು ಕಾಣಬಹುದಾಗಿದೆ.

ಕಾಲಕ್ರಮೇಣ ಬ್ರಿಟೀಷರ ಆಗಮನದಿಂದ ನಮ್ಮ ಸಮಾಜದಲ್ಲಿ ಅಗಾಧ ಬದಲಾವಣೆಗಳು ಉಂಟಾದವು. ೧೮ನೆಯ ಶತಮಾನದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮ ಕೈಗಾರಿಕೆಗಳು, ಆಧುನಿಕತೆಯ ಅಲೆಯು ಇಲ್ಲೂ ಉಂಟಾಯಿತು. ಹೊಸ ಹೊಸ ಆವಿಷ್ಕಾರ, ತಂತ್ರಜ್ಞಾನಗಳ ಅಳವಡಿಕೆಗಳು ವಿಜ್ಞಾನ ಕ್ಷೇತ್ರದಲ್ಲಿ ಉಂಟಾದವು. ಪರಿಣಾಮ, ರೈಲು ಇತರೆ ವಾಹನಗಳು ಹಾಗೂ ರಸ್ತೆ ಅಭಿವೃದ್ಧಿಯಿಂದ  ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪೂರೈಸುವ ಆಮದು ರಫ್ತಿನ ಕಾರ್ಯ ವಾಹನಗಳ ಪಾಲಾಯಿತು. ವರ್ತಕ ಲಂಬಾಣಿಗಳು ದಿನದಿಂದ ದಿನಕ್ಕೆ ತಮ್ಮ ಮೂಲ ವೃತ್ತಿಯಾದ ವ್ಯಾಪಾರ ವಹಿವಾಟಿನಿಂದ ದೂರವಾಗತೊಡಗಿದರು. ವಾಹನಗಳ ಬಳಕೆ ಹೆಚ್ಚಾದಂತೆಲ್ಲಾ ಲಂಬಾಣಿಗಳಿಗೆ ಒಳ ಪ್ರದೇಶಗಳಲ್ಲಿ ಸಿಗುತ್ತಿದ್ದ ಸಾಗಾಣಿಕೆಯ ಕೆಲಸ ಭಾಗಶಃ ನಿಂತು ಹೋಯಿತು. ಇಂತಹ ಸಂದರ್ಭದಲ್ಲಿ ಮೂಲ ಪಾರಂಪರಿಕ ವೃತ್ತಿಯಾದ ವ್ಯಾಪಾರವನ್ನು ಬದಲಿಸುವ ಪ್ರಮೇಯ ಉಂಟಾಯಿತು. ಜೀವನಕ್ಕಾಗಿ ಲಂಬಾಣಿಗರು ಹೊಸ ವೃತ್ತಿಯನ್ನು ಅವಲಂಬಿಸಿದ್ದರು. ಹೊಸ ವೃತ್ತಿ ಆದಾಯವನ್ನು ನೀಡುವಲ್ಲಿ ವಿಫಲವಾಯಿತು. ಇಂತಹ ಒಂದು ಸಂದರ್ಭದಲ್ಲಿದ್ದ ಅಲೆಮಾರಿ ಲಂಬಾಣಿ ಸಮುದಾಯವು ಕಾಲಕ್ರಮೇಣ ಕುಲಕಸುಬಾಗಿದ್ದ ವ್ಯಾಪಾರ ನಿಂತು ಹೋದ ಸಂದರ್ಭದಲ್ಲಿ ಬದಲಿ ವೃತ್ತಿಯನ್ನಾಗಿ ದೈಹಿಕ ಶಕ್ತಿಯನ್ನು ಆಶ್ರಯಿಸಿ ಯಾವ ಭೌಗೋಳಿಕ ನೆಲೆಯಲ್ಲಿ ನಿಂತರೋ ಅದಕ್ಕೆ ತಕ್ಕ ಹಾಗೆ ಯಾರ ಅವಲಂಬನೆ ಇಲ್ಲದೆ, ಬಂಡವಾಳವಿಲ್ಲದೆ, ಕಾಡಿನ ಉತ್ಪನ್ನಗಳಾದ ಕಟ್ಟಿಗೆ, ಬಾರೇ ಹಣ್ಣು, ನೆಲ್ಲಿಕಾಯಿ, ಕವಳೆ, ಸೀಗೆ, ಜೇನು, ಬಿದಿರು ಮುಂತಾದ ಕಾಡಿನ ಉಪ ಉತ್ಪನ್ನಗಳನ್ನು ಮಾರಿ  ಬದುಕಲಾರಂಭಿಸಿದರು.

"ಭಾರತದ ಉದ್ದಗಲಕ್ಕೂ ಕಾಡು ಮಾರ್ಗಗಳಲ್ಲಿ ಓಡಾಡಿಕೊಂಡು ವ್ಯಾಪಾರ ಮಾಡುತ್ತಿದ್ದ ಲಂಬಾಡಿ, ಬನಿಯಾ, ಬೋಹಾರ, ಪಾರ್ಸಿ, ಸೌದಾಗಾರ ಮೊದಲಾದ ಬುಡಕಟ್ಟುಗಳು ಬ್ರಿಟೀಷರ ರಸ್ತೆ ಅಭಿವೃದ್ಧಿಯಿಂದ ಅಘಾತಗೊಂಡವು. ವೃತ್ತಿಹೀನವಾದವು. ವ್ಯಾಪಾರ ವೃತ್ತಿಯನ್ನು ಕಳೆದುಕೊಂಡು ಕಂಗಾಲಾಗಿದ್ದ ಈ ಬುಡಕಟ್ಟುಗಳನ್ನು ಹತ್ತಿಕ್ಕಲು ಕ್ರಿ.ಶ.೧೮೭೧ ರಲ್ಲಿ ಕ್ರಿಮಿನಲ್ ಆಕ್ಟನ್ನು ತರಲಾಯಿತು. ಕ್ರಿಮಿನಲ್ ಬುಡಕಟ್ಟುಗಳ ಪಟ್ಟಿಯಲ್ಲಿ ಲಂಬಾಣಿಗಳನ್ನು ಸೇರಿಸಿ ಅವರುಗಳ ಮೇಲೆ ತೀವ್ರ ನಿಗಾ ಇಡಲು ಪೋಲಿಸರನ್ನು ಜಾಗೃತಗೊಳಿಸಲಾಯಿತು"[೯] ಹೀಗೆ ಅಪರಾಧಿಗಳೆಂದು ಪರಿಗಣಿಸಲ್ಪಟ್ಟ ನಂತರ ಇವರ ಜೀವನ ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟಿತು.

"ಭಾರತದ ಮೂಲೆಮೂಲೆಗೆ ಸಂಚರಿಸಿ ಆಹಾರ ಧಾನ್ಯಗಳ ವ್ಯಾಪಾರ ಮಾಡುತ್ತಿದ್ದ ಲಂಬಾಣಿಗರು ಬ್ರಿಟಿಷರ ಕ್ರೂರ ದೃಷ್ಠಿಗೆ ತುತ್ತಾಗಿ ಕ್ರಿಮಿನಲ್ಸ್‌ಗಳೆಂದು ಪರಿಗಣಿತರಾದರು. ಬ್ರಿಟಿಷರು ಅಭಿವೃದ್ಧಿ

ಪಡಿಸಿದ ಸಾರಿಗೆ ಸಂಪರ್ಕ ಮತ್ತು ರೈಲ್ವೆ ಮಾರ್ಗಗಳಿಂದಾಗಿ ಇಡೀ ಬುಡಕಟ್ಟು ನಿರುದ್ಯೋಗದ ತಾಪಕ್ಕೆ ಗುರಿಯಾಗಿ ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಒಳಗಾಯಿತು. ವ್ಯಾಪಾರಿ ವೃತ್ತಿಯಿಂದ ಅಲೆಮಾರಿಗಳಾಗಿದ್ದ ಲಂಬಾಣಿಗಳು ವೃತ್ತಹೀನರಾಗಿ ಅಲ್ಲಲ್ಲಿ ನೆಲೆನಿಂತು ವಾಸ ಮಾಡಲಾರಂಭಿಸಿದರು. ನಿಶ್ಚಿತ ವೃತ್ತಿಯಿಲ್ಲದ ಅವರು ಈ ಸಂಕ್ರಮಣ ದಿನಗಳಲ್ಲಿ ನೆಲೆ ನಿಂತಲ್ಲಿ ಕೂಲಿ ನಾಲಿಯನ್ನು ಮಾಡಿ ಜೀವನ ನಿರ್ವಹಣೆ ಮಾಡಲಾರಂಭಿಸಿದಂತೆ ಕಂಡುಬರುತ್ತದೆ. ಅಂದಿನ ನಿರುದ್ಯೋಗ ಸಂಕಷ್ಟದ ದಿನಗಳಲ್ಲಿ ಒಬ್ಬಿಬ್ಬರು ಮಾಡಿರಬಹುದಾದ ಸಣ್ಣ ಪುಟ್ಟ ಅಪರಾಧಗಳಿಗೆ ಇಡೀ ಜನಾಂಗವನ್ನು ಕ್ರಿಮಿನಲ್ಸ್‌ಗಳೆಂದು ಆರೋಪಿಸಲಾಗಿದೆ.[೧೦] ವ್ಯಾಪಾರ ವೃತ್ತಿಯು ನಿಂತ ಮೇಲೆ ಲಂಬಾಣಿ ಬುಡಕಟ್ಟು ಜನರು ತಾವು ವ್ಯಾಪಾರ ನಿಮಿತ್ತ ತೆರಳಿದ್ದ ಭಾಗದಲ್ಲಿಯೇ ವಸತಿ ಮಾಡಿ ಗ್ರಾಮ ಜೀವನವನ್ನು ಪ್ರಾರಂಭಿಸಿದ್ದು ಅಲೆಮಾರಿಗಳಾದ ಲಂಬಾಣಿಗರು ಗ್ರಾಮೀಣ ಜನರೊಂದಿಗೆ ಜೀವಿಸದೆ ಪ್ರತ್ಯೇಕ ತಾಂಡಗಳನ್ನು ಕಟ್ಟಿಕೊಂಡು ಅಲೆಮಾರಿತನದಿಂದ ಅರೆ ಅಲೆಮಾರಿಗಳಾಗಿ, ಜಮೀನ್ದಾರರ ಭೂ ಮಾಲೀಕರ ಬಳಿ ಕೂಲಿ ಆಳುಗಳಾಗಿ ಜೀತದಾಳುಗಳಾಗಿ ಕೂಲಿ ಮಾಡತೊಡಗಿದರು. ಪರಿಸ್ಥಿತಿಯನ್ನು ಅರಿತುಕೊಂಡು ತಮ್ಮ ಸುತ್ತಮುತ್ತಲಿನ ಪರಿಸ್ಥಿತಿಗೆ ಅನುಗುಣವಾಗಿ ವಾಸ್ತವ್ಯವನ್ನು ಹೂಡಿದರು. ಸಾಧ್ಯವಾದರೆ ನೆಲೆ ಒಂದು ಕಡೆ ಮಾಡಿ ಕೂಲಿಯನ್ನು ಮಾಡಲು ವಲಸೆ ಹೋಗುತ್ತಿದ್ದರು. ಅದಕ್ಕೆ ಪೂರಕವಾಗಿ ಬದುಕಲು ಅವಶ್ಯಕವಾದ ಜೀವನ ವಿಧಾನವನ್ನು ರೂಢಿಸಿಕೊಂಡರು. "ಈ ಸಂಕ್ರಮಣ ದಿನಗಳಲ್ಲಿ ಲಂಬಾಣಿ ಜನಾಂಗ ಹೊಟ್ಟೆಪಾಡಿಗಾಗಿ ನಿರಂತರವಾಗಿ ತಳಕಾಡಿತು. ಕಾಡಿನ ಅನುಭವದ ಫಲವಾಗಿ ಹಣ್ಣುಹಂಪಲುಗಳನ್ನು ಅಥವಾ ಸೌದೆಯನ್ನು ತಲೆಯ ಮೇಲೆ ಹೊತ್ತೊಯ್ದು ಹತ್ತಿರದ ಪಟ್ಟಣಗಳಲ್ಲಿ ಮಾರಿ ಒಣ ಪುಡಿಗಾಸಿನಲ್ಲಿ ಒಡಲು ತುಂಬಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ."[೧೧] ಆದರೆ ಬಹು ದಿನಗಳವರೆಗೆ ಜೀವನ ನಿರ್ವಹಣೆ ಮಾಡಲು ಸಾಧ್ಯವಾದಲಿಲ್ಲ. ಕ್ರಮೇಣ ಕೃಷಿಕೂಲಿ ಹಾಗೂ ಕಾಡು ಬಯಲಾದಂತೆ ಅಲ್ಲಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಲಾರಂಭಿಸಿದ್ದಾರೆ. ಶಿಕ್ಷಣ ಹೊಂದುವ ಪ್ರಯತ್ನ ಮಾಡುತ್ತಾ ಅಲೆಮಾರಿ ಸಮುದಾಯವಾದ ಲಂಬಾಣಿಗಳು ಕಾಲದ ಪರಿಸ್ಥಿತಿಗೆ ಒಳಪಟ್ಟು ಒಂದೇ ಕಡೆ ತಾಂಡಗಳನ್ನು ಕಟ್ಟಿಕೊಂಡು ನೆಲೆ ನಿಲ್ಲುವಂತಾಯಿತು.

## ೨. ಸಾಮಾಜಿಕ ಬದಲಾವಣೆಯತ್ತ

ಯಾವುದೆ ಮುಂದುವರೆದ, ಮುಂದುವರೆಯದ ಸಮುದಾಯವಾಗಿರಲಿ ಅದರ ಆರ್ಥಿಕ ಮೂಲಗಳು ಆ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತವೆ. "Lamadi grain and salt carriers cattle- breeders and cattle dealers. found all over the domenious"[೧೨] ಲಂಬಾಣಿಗಳು ಅಲೆಮಾರಿಗಳಾಗಿ ತಮ್ಮ ಸಾಂಪ್ರದಾಯಿಕ ಎತ್ತಿನ ಬಂಡಿಗಳ ಮೇಲೆ ಅಹಾರ ಪದಾರ್ಥ ಗಳನ್ನು ಲವಣ, ಉಪ್ಪು ಸಾಗಿಸುತ್ತಿದ್ದಾಗ, ಸಾವಿರಾರು ದನಕರುಗಳನ್ನು ಹೊಂದಿ ಆರ್ಥಿಕವಾಗಿ ಸಬಲ ರಾಗಿದ್ದರು. "They were A nomadic Community Who trajnsported salt and Others goods uniti The end of the 19th century. with The introduction of the railways and the laying of roads by the British"[೧೩]

ಹೀಗೆ ಆಧುನಿಕ ಯಂತ್ರಗಳು ಸರಕುಗಳನ್ನು ಸಾಗಿಸುವ ಕಾರ್ಯವನ್ನು ಮಾಡುತ್ತಿದ್ದಾಗ ಲಂಬಾಣಿಗರು ನಿರುದ್ಯೋಗಿಗಳಾಗುತ್ತಾ ಬಂದರು. ಪಾರಂಪರಿಕ ವೃತ್ತಿಯನ್ನೇ ಬಿಡುವ ಅನಿವಾರ್ಯತೆ, ಕೈಗಾರಿಕೆಗಳ ಸ್ಥಾಪನೆಯಿಂದ ಉಂಟಾಯಿತು. ಪಾರಂಪರಿಕ ವೃತ್ತಿಯಿಂದ ಜೀವನ ನಿರ್ವಹಣೆ ಸಾಧ್ಯವಿಲ್ಲವೆಂದಾಗ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು. ಕಾಡಿನ ಉಪ ಉತ್ಪನ್ನಗಳ ಸಂಗ್ರಹಣೆ ಮತ್ತು ಕೃಷಿಯನ್ನು ಈ ಸಮುದಾಯ ಅವಲಂಬಿಸಲಾರಂಭಿಸಿತು. ಜೊತೆಗೆ ಬಹುಸಂಖ್ಯೆಯಲ್ಲಿ ಕೃಷಿ ಕೂಲಿಗಳಾಗಿ ಸ್ಥಳೀಯ ಭೂಮಾಲಿಕ ಕುಟುಂಬಗಳನ್ನು ಅವಲಂಬಿಸಿ ಬದುಕಲಾರಂಭಿಸಿದರು. ನಂತರ ಕೂಲಿಯನ್ನೇ ಮುಂದುವರೆಸುತ್ತಾ ಕೃಷಿ, ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಾ, ಶಿಕ್ಷಣವನ್ನು ಪಡೆಯಲು ಪ್ರಯತ್ನಿಸಿದರು. ಶಿಕ್ಷಣ ಪಡೆದ ಕೆಲವರು ಮೀಸಲಾತಿಯಿಂದಾಗಿ ಸರಕಾರಿ ನೌಕರಿ ಪಡೆದರು. ಆದರೆ ಇವರ ಸಂಖ್ಯೆ ಅತ್ಯಲ್ಪ.

ತಾಂಡದಲ್ಲಿ ಹೆಚ್ಚಿನ ಭೂ ಹಿಡುವಳಿಯನ್ನು ಹೊಂದಿದವರು ಮತ್ತು ಅದರಲ್ಲಿ ನೀರಾವರಿ ತೋಟಗಳಿರುವವರು ಬೆಳೆ ಚೆನ್ನಾಗಿ ಬಂದಾಗ ಲಾಭ ಪಡೆದವರು ಆರ್ಥಿಕವಾಗಿ ಪ್ರಬಲವಾಗುತ್ತಿದ್ದಾರೆ. ಶಿಕ್ಷಣವನ್ನು ಹೊಂದಿದವರು ತಮ್ಮ ಸಾಮರ್ಥ್ಯ ಕೌಶಲ್ಯದ ಮೇರೆಗೆ ಪಾರಂಪರಿಕ ವೃತ್ತಿಯನ್ನು ಬಿಟ್ಟು ಹೊಸಹೊಸ ವೃತ್ತಿಯ ಕಡೆ ಚಲಿಸುತ್ತಿದ್ದಾರೆ. ಈ ರೀತಿ ಚಲನೆಗೆ ಒಳಗಾಗಿ ಸಮುದಾಯವು ಆರ್ಥಿಕ ಚಟುವಟಿಕೆಗಳಲ್ಲಿ ಪ್ರಬಲವಾಗುತ್ತಾ ಉತ್ಪಾದನಾ ಸಾಧನಗಳ ಮೇಲೆ ಪ್ರಾಬಲ್ಯ ಹೊಂದಿ ತನ್ನ ಸ್ಥಾನಮಾನವನ್ನು ಉತ್ತಮ ಪಡಿಸಿಕೊಳ್ಳುವ ಪ್ರಯತ್ನದಲ್ಲಿದೆ.

ಲಂಬಾಣಿ ಸಂಮುದಾಯವು ಅಲೆಮಾರಿ ಸಮುದಾಯವಾಗಿದ್ದ ಸಮಯದಲ್ಲಿ ವ್ಯಾಪಾರಕ್ಕೆ ಪಶುಪಾಲನೆಗೆ ಹೆಚ್ಚಿನ ಆದ್ಯತೆಯನ್ನು ನೀಡಿತ್ತು. ನಂತರ ಆಧುನಿಕತೆಯ ಸಂದರ್ಭದಲ್ಲಿ ಪಾರಂಪರಿಕ ವೃತ್ತಿ ನಾಶವಾದ ಮೇಲೆ, ಪಾರಂಪರಿಕ ವೃತ್ತಿಯ ಬಗ್ಗೆ ಒಂದು ರೀತಿಯ ತಿರಸ್ಕಾರ ಅಥವಾ ಕೀಳರಿಮೆ ಬೆಳೆದು ಸಮುದಾಯ ಧಾವಿಸುತ್ತದೆ. ಲಂಬಾಣಿಗರು ಕೆಲವು ಕಡೆ ಶಿಕ್ಷಣವನ್ನು, ಉದ್ಯೋಗವನ್ನು, ರಾಜಕೀಯ ಅಧಿಕಾರವನ್ನು, ಉನ್ನತ ಹುದ್ದೆಗಳನ್ನು, ಪಡೆದಿದ್ದಾರೆ. ಆದರೆ ಉಳಿದವರು, ಇನ್ನು ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದು ಕೂಲಿಯನ್ನು ಮಾಡುತ್ತಾ ಇಡೀ ಜೀವನ ಸವೆಸುತ್ತಿದ್ದಾರೆ. ಆದರೆ ಇತ್ತೀಚಿಗೆ ಶಿಕ್ಷಣವನ್ನು ಮಂದಗತಿಯಲ್ಲಿ ಇವರು ಹೊಂದುತ್ತಿದ್ದು, ಸಾಮಾಜಿಕ ಬದಲಾವಣೆಗೆ ಒಳಗಾಗಿ ಆಧುನಿಕತೆಯಲ್ಲಿ ತಮ್ಮನ್ನು ತೊಡಗಿಸಿ ಸಾಮಾಜಿಕ ಸ್ಥಾನಮಾನವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಸಮುದಾಯವು ಮೇಲ್ ಅಂತಸ್ತನ್ನು, ಗೌರವವನ್ನು, ಪಡೆಯಬೇಕೆಂಬ ಬಯಕೆ ಹಾಗೂ ಸ್ಪರ್ಧೆಯು ಇದ್ದು ನೆರೆಹೊರೆ ಸಮುದಾಯಗಳಂತೆ ಅಥವಾ ಅವುಗಳಿಗಿಂತ ಉತ್ತಮ ಸ್ಥಾನಮಾನವನ್ನು ಹೊಂದಬೇಕು ಎಂದು ಸಮುದಾಯ ಪ್ರವೃತ್ತಿ ಪ್ರಯತ್ನಿಸುತ್ತಿದೆ. ಸ್ಪರ್ಧಾತ್ಮಕ ಪ್ರಪಂಚದ ರಾಜಕಾರಣ ಇದಕ್ಕೆ ಉತ್ತಮವಾದ ಉದಾಹರಣೆಯಾಗಿದೆ. ಇಂದು ಆರ್ಥಿಕವಾಗಿ ಬಲವಾಗಿರುವ ಸಮುದಾಯಗಳು ಇಂದು ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ವಲಯದಲ್ಲಿ ಏಕಸ್ವಾಮ್ಯತೆಯನ್ನು ಹೊಂದಿವೆ.

ಸಾಮಾಜಿಕ ಬದಲಾವಣೆ ಒಂದು ಪ್ರಕ್ರಿಯೆ ಪ್ರತಿಯೊಂದು ಸಮುದಾಯ ತನ್ನ ಪಾರಂಪರಿಕ ವಲಯದಿಂದ ಸಹಜವಾಗಿಯೇ ವರ್ತಮಾನದ ಕಡೆಗೆ ಸಾಗುತ್ತಿರುತ್ತದೆ. ವರ್ತಮಾನದ ಸಾಮಾಜಿಕ ಬದುಕನ್ನು ಪ್ರಭಾವಿಸುವ ಮುಖ್ಯವಾಹಿನಿಯು ಸಾಂಪ್ರದಾಯಿಕ ಸಮಾಜಗಳನ್ನು ಸದಾ ಆಕರ್ಷಿಸುತ್ತಲೇ ಇರುತ್ತದೆ. ಪರಂಪರೆ ಎಂಬುದು ಮುಂದುವರೆಯುವಿಕೆಗೆ ಕಂಟಕಪ್ರಾಯವೆಂಬ ಸ್ಥಿತಿ ಇಂಡಿಯಾದಲ್ಲಿ ರೂಪಗೊಂಡಿರುವ ಹಿನ್ನೆಲೆಯಲ್ಲಿ ಎಲ್ಲಾ ಸಮುದಾಯಗಳು ತಮ್ಮ ಮೂಲಸ್ಥಿತಿಯಿಂದ ಬೇರೆಡೆಗೆ ಚಲಿಸಲು ಹಾತೊರೆಯುತ್ತಿರುತ್ತವೆ. ಪಾರಂಪರಿಕ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳುವುದು ಕೆಳಜಾತಿಗಳಿಗೆ ಒಂದು ಅನಿವಾರ್ಯದ ಸಂಗತಿಯಾಗುತ್ತಾ ಬಂದಿದೆ. ಅದಕ್ಕಾಗಿಯೇ ಇಲ್ಲಿನ ಸಮುದಾಯಗಳು ತಮ್ಮ ಪಾರಂಪರಿಕ ಚಹರೆಗಳನ್ನು ಕಳಚಿಕೊಂಡು ಬದಲಾವಣೆಯ ಕಡೆಗೆ ಚಲಿಸುತ್ತಿರುತ್ತವೆ.

## ೩. ಸಾಮಾಜಿಕ ಸ್ಥಾನಮಾನಗಳನ್ನು ಯಾವ ಸಂಗತಿಗಳು ನಿರ್ಧರಿಸುತ್ತವೆ ?

ಸಾಮಾಜಿಕ ಅಸಮಾನತೆ ಮಾನವ ಸಮಾಜದಲ್ಲಿ ಒಂದು ಸೂಕ್ಷ್ಮವಾದ ವಿಚಾರವಾಗಿದೆ. ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶವಿರಬೇಕೆಂಬುದು ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ಅಪೇಕ್ಷಣೀಯವಾದುದು. ಸಮಾಜದಲ್ಲಿ ಸಂಪತ್ತುಳ್ಳವರು ಸಕಲ ಸೌಲಭ್ಯವನ್ನು ಹೊಂದಲು ಶಕ್ತರಾಗಿರುತ್ತಾರೆ. ಇದು ಅವರ ಸಾಮರ್ಥ್ಯವನ್ನು ಸೂಚಿಸುತ್ತದೆ. ವ್ಯಕ್ತಿಯ ವರ್ಗವನ್ನು ಆತನ ಆರ್ಥಿಕ ಸ್ಥಿತಿಯಿಂದ ನಿರ್ಧರಿಸಬಹುದಾಗಿದೆ. ಒಂದು ಸಮಾಜದ ಆರ್ಥಿಕ ಚಟುವಟಿಕೆಗಳು ಸಾಮಾಜಿಕ ಸ್ಥಾನಮಾನಗಳನ್ನು ರೂಪಿಸುವ ನಿರ್ಣಾಯಕ ಅಂಶಗಳಾಗಿವೆ. ಯಾರು ಆರ್ಥಿಕವಾಗಿ ಸಬಲನಾಗಿರುವನೋ ಅವನು ಸಮಾಜದಲ್ಲಿ ಅಂತಸ್ತು, ಘನತೆ, ಅಧಿಕಾರ, ಶಿಕ್ಷಣ ಮತ್ತು ಉನ್ನತ ಸ್ಥಾನಮಾನಗಳು ಸಹಜವಾಗಿ ಪಡೆಯುತ್ತಾನೆ. ಸಮಾಜದಲ್ಲಿ ಎಲ್ಲರು ಒಂದೇ ರೀತಿಯಲ್ಲಿ ಸವಲತ್ತುಗಳನ್ನು ಹೊಂದಿರುವುದಿಲ್ಲ. ಇದರಲ್ಲಿ ತಾರತಮ್ಯವಿದ್ದು ಸವಲತ್ತು ಪಡೆದವರು ಸಮಾಜದಲ್ಲಿ ಮೇಲಿನ ಸ್ತರದಲ್ಲೂ, ಅವುಗಳನ್ನು ಪಡೆಯದವರು ಕೆಳಸ್ತರದಲ್ಲೂ ಇರುವುದು ಸರ್ವೇ ಸಾಮಾನ್ಯ. ಈ ರೀತಿ ಸ್ತರ ರಚನೆಯಾಗಿರದ ಸಮಾಜವು ಕಲ್ಪನೆಯಾಗಿಯೇ ಇರುತ್ತದೆ. ವ್ಯಕ್ತಿಯ ಆರ್ಥಿಕ ಸ್ಥಿತಿಗತಿ ಆತನ ಸಾಮಾಜಿಕ ಸ್ಥಾನಮಾನವನ್ನು ರೂಪಿಸುತ್ತಿರುತ್ತದೆ. ಆದಾಯವು ಮುಖ್ಯವಾಗಿ ಗಣನೆಯಾಗಿ ಪರಿಗಣಿಸಿದರೆ ಹಾಗೂ ಶಿಕ್ಷಣ, ಉದ್ಯೋಗ, ತಾಂತ್ರಿಕ ಅರ್ಹತೆ ಹೆಚ್ಚಾಗಿರುವವರು ಹೆಚ್ಚಿನ ಅಂತಸ್ತನ್ನು, ಶಿಕ್ಷಣ ಮತ್ತು ಪರಿಣತಿ ಇಲ್ಲದ್ದರಿಂದ ರೈತರು ಹೆಚ್ಚು ಗೌರವ ಸ್ಥಾನವನ್ನು ಪಡೆದಿಲ್ಲ.

ತಾಂಡದಲ್ಲಿ ಆರ್ಥಿಕವಾಗಿ ಉದ್ಯೋಗದಲ್ಲಿರುವವರು ಅವರಲ್ಲು ಇಂಜಿನಿಯರ್ ಹಾಗೂ ಡಾಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವವರು. ಶಿಕ್ಷಕ, ಪೋಲಿಸ್, ಉಪನ್ಯಾಸಕರಾಗಿ ಕಾರ್ಯನಿರ್ವಹಿಸುವವರಿಗಿಂತ ಹೆಚ್ಚಿನ ಗೌರವವಾದಾರಗಳನ್ನು ಹೊಂದಿದ್ದಾರೆ. ಇವರ ಆದಾಯ ತಾಂತ್ರಿಕ ಅರ್ಹತೆ ಹೆಚ್ಚಾಗಿರುವುದರಿಂದ ಮತ್ತು ಸಾರ್ವಜನಿಕ ಕಲ್ಯಾಣ ಕಾರ್ಯಗಳಲ್ಲಿ ಹೆಚ್ಚು ಜವಾಬ್ದಾರಿ ಹೋರುವುದರಿಂದ ಇವರಿಗೆ ಹೆಚ್ಚಿನ ಅಂತಸ್ತಿದೆ. ಆದರೆ ತಾಂಡದಲ್ಲಿ ರೈತರು ಸಣ್ಣಪುಟ್ಟ ವ್ಯಾಪಾರ ಮಾಡುತ್ತಿರುವವರು ಶಿಕ್ಷಣ, ಪರಣಿತಿ ಹೊಂದದೆ ಹೆಚ್ಚು ಗೌರವ ಸ್ಥಾನ ಪಡೆದಿಲ್ಲ. ಆದಾಯದಲ್ಲಿರುವ ವ್ಯತ್ಯಾಸವು ಸಾಮಾಜಿಕ ಅಸಮಾನತೆಯನ್ನು ಕಲ್ಪಿಸುತ್ತದೆ.

ಉತ್ಪಾದನಾ ಸಾಧನಗಳ ಒಡೆಯರಾಗಿರುವವರು ಆಸ್ತಿವಂತರಾಗಿದ್ದು, ಹೆಚ್ಚು ಶಿಕ್ಷಣವನ್ನು ಹೊಂದಿ ತಮ್ಮ ಸ್ಥಾನಮಾನ ಹೆಚ್ಚಿಸಿಕೊಂಡಿದ್ದಾರೆ. ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಉನ್ನತ, ತಾಂತ್ರಿಕ ಶಿಕ್ಷಣ, ತರಬೇತಿಯನ್ನು ಕೌಶಲ್ಯತೆ ಹೊಂದಿರುವ ವ್ಯಕ್ತಿಗಳು ಆರ್ಥಿಕವಾಗಿ ಸಬಲರಾಗಿದ್ದು, ತಾಂಡದಲ್ಲಿ ಗೌರವವನ್ನು, ಆಸ್ತಿ, ಅಂತಸ್ತು, ಆಧುನಿಕ ಸೌಲಭ್ಯಗಳನ್ನು ಹೊಂದಿದ್ದಾರೆ. ಜಮೀನು ಹೆಚ್ಚು ಹೊಂದಿರುವವರು ತಾಂಡದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದು, ಆದರೆ ಸರಕಾರಿ ಉದ್ಯೋಗ ಹೊಂದಿರುವವರನ್ನು ಹೋಲಿಸಿದರೆ ಕಡಿಮೆಯ ಸ್ಥಾನಮಾನವನ್ನು ಹೊಂದಿರುವುದನ್ನು ನೋಡಲಾಯಿತು.

ಹಲವು ದಶಕಗಳವರೆಗೂ ಭಾರತದಲ್ಲಿ ಜಾತಿಗಳು ಸಾಮಾಜಿಕ ಸ್ಥಾನವನ್ನು ನಿರ್ಧರಿಸುವ ಸೂಚಕಗಳಾಗಿದ್ದವು. ಬಡಬ್ರಾಹ್ಮಣನಿಗೂ ಉನ್ನತ ಗೌರವ ಸ್ಥಾನಮಾನ ಲಭಿಸಿದ್ದವು. ಅಂದರೆ ಇಂದು ಜಗತ್ತಿನೆಲ್ಲೆಡೆ ಸಾಮಾನ್ಯವಾಗಿ ಆರ್ಥಿಕ ಚಟುವಟಿಕೆ, ಆರ್ಥಿಕ ಅಂಶಗಳು ಸಮಾಜದಲ್ಲಿ ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಗುರುತಿಸುವ ಸಾಧನಗಳಾಗಿ ಮಾರ್ಪಟ್ಟಿವೆ. ಶಿಕ್ಷಣ ಬೌದ್ಧಿಕಮಟ್ಟ ಉದ್ಯೋಗ ಪಡೆದ ಕೌಶಲ್ಯಪೂರಿತ ಸಂಪನ್ಮೂಲ ವ್ಯಕ್ತಿಗಳು ಸಮಾಜದಲ್ಲಿ ಗಣ್ಯರಾಗಿರುವುದನ್ನು ಕಾಣುತ್ತೇವೆ. ಅಂದರೆ ಆರ್ಥಿಕ ಚಟುವಟಿಕೆಗಳು ಇಂದೂ ಸಮಾಜದಲ್ಲಿ ಸಾಮಾಜಿಕ ಸ್ಥಾನಮಾನ ನಿರ್ಧರಿಸುವ ನಿಯಂತ್ರಕಗಳಾಗಿವೆ. "ಅಧಿಕಾರವು ಜಾತಿಯ ಮೇಲೆ ಅಥವಾ ವರ್ಗದ ಮೇಲೆ ಅವಲಂಬಿಸ ಬೇಕೆಂದಿಲ್ಲ"[೧೪] ನಾನು ಅಧ್ಯಯನಕ್ಕೆ ಒಳಪಡಿಸಿದ ತಾಂಡಾಗಳು ಇದಕ್ಕೆ ಜ್ವಲಂತ ಉದಾಹರಣೆ.

## ೪. ಸಾಮಾಜಿಕ ಬದಲಾವಣೆಗೆ ಕಾರಣಗಳು

ಬದಲಾವಣೆ ಜೀವಂತ ಸಮುದಾಯಗಳ ಪ್ರಾಥಮಿಕ ಲಕ್ಷಣ. ಸಮುದಾಯವೊಂದು ಹೀಗೆ ಬದಲಾಗಲು ಹಲವಾರು ಅಂಶಗಳು ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಕಾರಣವಾಗಿರುತ್ತವೆ. ಸಮುದಾಯವೊಂದು "ಕಾಲದ ಅನಿವಾರ್ಯತೆಯ ಫಲವಾಗಿ ಏರ್ಪಡುವ ಉಬ್ಬರ ಇಳಿತಗಳನ್ನು ಸಾವಧಾನ ವಾಗಿ ಗಮನಿಸುತ್ತಲೇ ಇರುತ್ತದೆ. ಬದಲಾಗುವ ಕಾಲಮಾನದ ಲಯಕ್ಕೆ ಅದು ತನ್ನನ್ನು ವಿಸ್ತರಿಸಿಕೊಳ್ಳುವ ಅಥವಾ ತನ್ನ ಸಂವೇದನಗಳನ್ನು ಆ ಬದಲಾದ ಲಯಕ್ಕೆ ಹೊಂದಿಕೊಳ್ಳುವ ಪ್ರಯತ್ನವನ್ನು ಸಮುದಾಯ ಯಾವತ್ತೂ ಜೀವಂತವಾಗಿಟ್ಟುಕೊಂಡಿರುತ್ತದೆ. ಸ್ವೀಕರಿಸುವಾಗ ಸಮುದಾಯದ ಆಳದಲ್ಲಿನ ಚಾರಿತ್ರಿಕ ಹಸಿವು, ಪ್ರತಿರೋಧಿಸುವಾಗ ಕಾಡುವ ಅನನ್ಯತೆಯ ಭಯ. ಇವೆರಡು ಒಂದು ಸಮುದಾಯ ಸಂಸ್ಕೃತಿ ಕೋಶದ ಮಿಡಿತವನ್ನು ಒಂದು ಅರ್ಥಪೂರ್ಣ ಲಯಕ್ಕೆ ಹೊಂದಿಸಿವೆ"[೧೫] ಹೀಗೆ ಸಮುದಾಯವೊಂದರ ಬದುಕು ಏಕಾಏಕಾಗಿ ಬದಲಾಗದೆ ಕಾಲದ ಅನಿವಾರ್ಯತೆ ಇದಕ್ಕೆ ಮುಖ್ಯವಾಗಿರುತ್ತದೆ.

ಸಮುದಾಯವೊಂದರ ಲೌಕಿಕ ಬದುಕು ಬದಲಾವಣೆಗಳಾಗುವುದಕ್ಕೆ ಸಮುದಾಯದ ಒಳಗೇ ಇರುವ ಹೊಸದರ ಕಡೆ ಚಲಿಸುವ ಪ್ರವೃತ್ತಿಯೂ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ಸಮುದಾಯವೊಂದರ ಅದರಲ್ಲಿಯೂ ನನ್ನ ಅಧ್ಯಯನದ ವ್ಯಾಪ್ತಿಗೆ ಬರುವ ಲಂಬಾಣಿ ಸಮುದಾಯವು ಪ್ರಸ್ತುತದಲ್ಲಿ ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟಿದೆ. ಹೀಗೆ ಬದಲಾಗುತ್ತಿರುವುದಕ್ಕೆ ಮುಖ್ಯವಾಗಿ ಶಿಕ್ಷಣ, ಕೈಗಾರೀಕಿಕರಣ, ನಗರೀಕರಣ, ಆಧುನಿಕತೆ, ಹೊಸಹೊಸ ಉದ್ಯೋಗವಕಾಶಗಳು, ವೈಜ್ಞಾನಿಕ ಆವಿಷ್ಕಾರಗಳು,

[illegible]

ಸಾರಿಗೆ, ಸಂಪರ್ಕ ಮಾಧ್ಯಮಗಳು ಕಾರಣವಾಗಿವೆ. ಅಲ್ಲದೆ ಆಧುನಿಕ ಜಗತ್ತಿನ ಮುಕ್ತ ಅವಕಾಶಗಳು, ವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಅವಕಾಶಗಳಿಂದಾಗಿ ಸಮುದಾಯಗಳು ಹೊಸ ದಿಕ್ಕಿನ ಕಡೆಗೆ ಚಲಿಸುತ್ತಿವೆ. ಜಗತ್ತಿನ ವೇಗದ ಲಯಕ್ಕೆ ಅದೇ ತೀವ್ರತೆಯಲ್ಲಿ ಸ್ಪಂದಿಸಲಾಗದಿದ್ದರೂ ಮೂಕ, ಅಸಹಾಯಕ ಸಮುದಾಯಗಳು ರೂಪಾಂತರಗೊಳ್ಳಲು ಹಾತೊರೆಯುತ್ತಿವೆ. ಆಧುನಿಕ ಬದುಕು ಹೀಗೆ ಎಲ್ಲ ಸಮುದಾಯಗಳನ್ನು ಹೊಸತೆರೆಡೆಗೆ ಚಲಿಸಲು ಪ್ರಚೋದಿಸುತ್ತಿದೆ. ಹೀಗಾಗಿ ಆಧುನಿಕತೆಯು ಸಮುದಾಯಗಳ ಅಂತರಂಗವನ್ನು ಬದಲಾವಣೆಯ ಕಡೆ ಎಳೆದೊಯ್ಯುತ್ತಿದೆ.

ಆದರೆ ಆಧುನಿಕತೆ ಸಮುದಾಯವೊಂದರ ಮೇಲ್ಮೈ ಲಕ್ಷಣಗಳನ್ನು ಮಾತ್ರ ಬದಲಾಯಿಸಿದೆ ಹೊರೆತು ಅಲ್ಲಿನ ಇಡಿ ಜೀವನ ವಿಧಾನವನ್ನ ಬದಲಾಯಿಸಿ, ಶಾಂತಿ, ಸಂವೃದ್ಧಿಯನ್ನ ನೀಡಿಲ್ಲ. "ಆಧುನಿಕ ವ್ಯವಸ್ಥೆ ಇಂದು ಅನೇಕ ಬುಡಕಟ್ಟುಗಳಿಗೆ ತಿನ್ನಲು ಮರದ ಹೊಟ್ಟನ್ನು ನೀಡಿದೆ. ಇಲ್ಲವೆ ಉಪವಾಸ ಕೆಡವಿ ಸಾಯಿಸಿದೆ ಆಳುವ ವ್ಯವಸ್ಥೆ ಏನೇ ಬದಲಾವಣೆಗಳನ್ನ ತರಲೆತ್ನಿಸಿದರೂ, ಆ ಅಭಿವೃದ್ಧಿ ಯೋಜನೆಗಳು ಅವರನ್ನ ಶೋಷಣೆಗೊಳಮಾಡಿವೆ."[೧೬] ತಾಂಡಗಳ ಅಭಿವೃದ್ಧಿ ಹೆಸರಿನಲ್ಲಿ ಲಕ್ಷಾಂತರ ರೂ. ಮಂಜೂರಾದರು, ಇದರ ಬಹುಪಾಲು ಹಣವು ತಾಂಡಗಳ ಗಡಿಯನ್ನು ಸಹ ದಾಟಿ ಬರದೆ ಮಧ್ಯವರ್ತಿಗಳ ಪಾಲಾಗುತ್ತಿದೆ.

ಕೈಗಾರೀಕರಣ, ಜಾಗತೀಕರಣಗಳು ಸಹ ತಾಂಡಗಳ ಸ್ವರೂಪವನ್ನು ಮತ್ತು ನಮ್ಮ ಸಮಾಜದ ಸ್ವರೂಪವನ್ನು ಬದಲಾಯಿಸಿದೆ ಎಂದು ಒಪ್ಪಿಕೊಂಡರೂ, ಎಷ್ಟು ಜನ ಜಾಗತಿಕ ಪ್ರಕ್ರಿಯೆಯಲ್ಲಿ ಉದ್ಯೋಗವನ್ನು ಪಡೆದಿದ್ದಾರೆ? ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ. ಕೈಗಾರಿಕೆ ಮತ್ತು ಜಾಗತೀಕರಣಕ್ಕೆ ಉನ್ನತ ತಾಂತ್ರಿಕ, ವೈಜ್ಞಾನಿಕ ಶಿಕ್ಷಣ ತರಬೇತಿ, ಕೌಶಲ್ಯತೆ ಬೇಕು. ತಾಂತ್ರಿಕ ಶಿಕ್ಷಣ ಪಡೆಯಲು ಕೆಳಜಾತಿಗಳಿಗೆ ಸಾಧ್ಯವಾಗುವುದಿಲ್ಲ. ಜಾಗತೀಕರಣದ ಹೆಸರಿನಲ್ಲಿ ಶ್ರೀಮಂತ ಮೇಲ್ಜಾತಿಯವರು ಅಭಿವೃದ್ಧಿ ಹೊಂದುತ್ತಾರೆಯೇ ಹೊರೆತು ಕೆಳಸಮುದಾಯಗಳಲ್ಲ. ನೂರು ಜನರ ಉದ್ಯೋಗ, ಅಭಿವೃದ್ಧಿಗೋಸ್ಕರ ಲಕ್ಷಾನುಗಟ್ಟಲೇ ಜನರು ಬೀದಿ ಪಾಲಾಗುತ್ತಿದ್ದಾರೆ.

ಲಂಬಾಣಿಗರ ಬದುಕು ಬದಲಾಗಿರುವುದು ಅವರ ಉಡುಗೆ ತೊಡುಗೆ, ಜೀವನ ಶೈಲಿ ಮುಂತಾದುವುಗಳಲ್ಲಿ. ಆದರೆ ಇವರ ಆರ್ಥಿಕ ಬದುಕು ಮೊದಲಿನಂತೆಯೇ ಹಿಂದುಳಿದಿದ್ದು ಬಡವರು ಬಡವರಾಗುತ್ತಲೇ ಇದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಾ ಹೋಗುತ್ತಿರುವುದು ನಾನು ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಿದ್ದೇನೆ. ಇದು ಕೇವಲ ಲಂಬಾಣಿ ಸಮುದಾಯವೊಂದರ ಪರಿಸ್ಥಿತಿಯಲ್ಲಾ. ಎಲ್ಲಾ ಕೆಳ ಹಿಂದುಳಿದ ಸಮುದಾಯಗಳ ಲೌಕಿಕ ಬದುಕು ಇದರಿಂದ ಹೊರೆತಾಗಿಲ್ಲ. ಇಡೀ ಭೂಗೋಳದ ಮೇಲೆ ಸಮಾನತೆ, ಸಮಾನ ಅವಕಾಶ, ಸ್ವಾತಂತ್ರ್ಯ ಎಂಬ ಘೋಷಣೆಗಳು ಕೇವಲ ರಾಜಕೀಯ ವೇದಿಕೆಗಳಿಗೆ ಮಾತ್ರ ಸೀಮಿತವಾಗಿವೆ. ಇಲ್ಲಿನ ಸಂಪತ್ತು, ಉನ್ನತ ಅವಕಾಶಗಳು ಇನ್ನೂ ಸಮನಾಗಿ ಹಂಚಿಕೆಯಾಗುತ್ತಿಲ್ಲ. ಅಂದರೆ ವಿಶ್ವಾದಾದ್ಯಂತ ಈ ಅಭಿವೃದ್ಧಿ, ಅನಾಭಿವೃದ್ಧಿ, ಹಿಂದುಳಿದ, ಮುಂದುವರೆದ, ಏಣಿಶ್ರೇಣಿವಸ್ಥೆಗಳಿರುವುದು ಸರ್ವೇಸಾಮಾನ್ಯವಾಗಿದೆ. ಕೆಳ ಸಮುದಾಯಗಳ ಅಭಿವೃದ್ಧಿಗಾಗಿ ರೂಪಿಸಿದ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗುತ್ತಿಲ್ಲ. ಮೇಲ್ವರ್ಗದವರು ಆಯಕಟ್ಟಿನ

ಸ್ಥಾನಗಳಲ್ಲಿ ಕುಳಿತು ಆಡಳಿತ ನಡೆಸುತ್ತಿರುವುದರಿಂದ ಸಹಜವಾಗಿಯೇ ಅಭಿವೃದ್ಧಿ ಯೋಜನೆಗಳು ಅವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ಬರುತ್ತಿವೆ. ನಾನು ಅಧ್ಯಯನ ಮಾಡಿದ ತಾಂಡಗಳಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಅಸಮಾನತೆಯನ್ನು ಬಹುಪಾಲು ಜನರು ಅನುಭವಿಸುತ್ತಿದ್ದಾರೆ. "ಯಾವುದೇ ಜನಗಳು ಆರ್ಥಿಕವಾಗಿ ಸುಧಾರಿತ ಮಟ್ಟದಲ್ಲಿದ್ದಾಗ ಸಹಜವಾಗಿಯೇ ಅವರು ವಾಸಿಸುವ ಮನೆ, ಜೀವನ ಸ್ಥಿತಿ ಮತ್ತು ಅವರ ಸ್ಥಾನಮಾನಗಳು ಸುಧಾರಿತ ಮಟ್ಟದಲ್ಲಿರುತ್ತದೆ."[೧೯] ಹೀಗೆ ಸಮುದಾಯವೊಂದರ ಲೌಕಿಕ ಬದುಕು ಬದಲಾಗಲು ಹಲವಾರು ಅಂಶಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರಭಾವ ಬೀರುತ್ತವೆ.

ಸಾಮೂಹಿಕ ಜೀವಿಯಾಗಿರುವ ಮಾನವನು ಸಾಮುದಾಯಿಕ ಜೀವಿಯೂ ಹೌದು ಸಮುದಾಯಕ ಜೀವನವು ಮಾನವನ ಜೀವನದ ಒಂದು ಅವಿಭಾಜ್ಯ ಅಂಶವಾಗಿದೆ. ಬೊಗಾರ್ಡಸ್ ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯ ವೆನ್ನಬಹುದು ಎಂದು ವ್ಯಾಖ್ಯಾನಿಸಿದ್ದಾರೆ. ಹೊರನೋಟಕ್ಕೆ ಸಮುದಾಯವು ಸ್ಥಿರವಾಗಿ ಕಂಡರೂ ಯಾವುದೇ ಕಾಲದಲ್ಲೂ ಬದಲಾಗದೇ ಉಳಿದಿಲ್ಲ. ಬದಲಾವಣೆಯು ಪ್ರಕೃತಿ ನಿಯಮ, ಮಾನವ ಸಮಾಜವು ಈ ನಿಯಮಕ್ಕೆ ಹೊರತಾಗಿಲ್ಲ. ಮಾನವನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಗಳು ಉಂಟಾಗುತ್ತವೆ. ಈ ರೀತಿಯಲ್ಲಿ ಸಮುದಾಯವೊಂದರ ಸಾಮಾಜಿಕ ಬದಲಾವಣೆಗೆ ಕಾರಣಗಳೇನು? ಮತ್ತು ಬದಲಾವಣೆ ಹೇಗೆ ಉಂಟಾಗುತ್ತದೆ. ಎಂಬ ವಿಷಯವನ್ನು ತಿಳಿಯುವುದು ಮುಖ್ಯ ಉದ್ದೇಶವಾಗಿದೆ.

ಭಾರತದ ವಿವಿಧ ಸಮಾಜಗಳಲ್ಲಾಗಿರುವ ರೂಪಾಂತರಗಳನ್ನು ಅಧ್ಯಯನ ಮಾಡಲು, ದೇಶೀಯ ಮತ್ತು ವಿದೇಶದ ಸಮಾಜವಿಜ್ಞಾನಿಗಳು ಅನೇಕ ಪ್ರಸ್ಥಾನಗಳನ್ನು ಹುಟ್ಟುಹಾಕಿದ್ದಾರೆ. ಯೋಗೇಂದ್ರಸಿಂಗ್, ಎಂ.ಎಸ್. ಶ್ರೀನಿವಾಸ, ಜೆ.ಎಫ್. ಸ್ಟಾಲ್, ಲೂಯಿ ಡೂಮೋ, ಎಚ್.ವಿ. ಗೌಲ್ಡ್ ಇವರಲ್ಲಿ ಪ್ರಮುಖರು. ಮೇಲಿನ ವಿದ್ವಾಂಸರು ಭಾರತದ ಸಮಾಜಗಳ ಚಲನೆಗಳನ್ನು ವಿವಿಧ ಕಾಲಘಟ್ಟದಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ. ಇವರೆಲ್ಲರಲ್ಲಿ ಹೆಚ್ಚು ಚರ್ಚೆಗೆ ಒಳಗಾದ ಸಮಾಜಶಾಸ್ತ್ರಜ್ಞರೆಂದರೆ ಎಂ.ಎನ್. ಶ್ರೀನಿವಾಸ್. ಭಾರತದ ಸಮುದಾಯಗಳ ಸಾಮಾಜಿಕ ಬದಲಾವಣೆಯನ್ನು ಎರಡು ನಿಖರ ಪ್ರಸ್ಥಾನಗಳ ಮೂಲಕ ಎಂ.ಎನ್. ಶ್ರೀನಿವಾಸ್ ಅಧ್ಯಯನ ಮಾಡಿದ್ದಾರೆ. ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ ಮೊದಲನೇ ಪ್ರಸ್ಥಾನ 'ಸಂಸ್ಕೃತೀಕರಣ', ಎರಡನೆಯದು 'ಪಾಶ್ಚಾತ್ಯೀಕರಣ'. ಈ ಎರಡೂ ಪ್ರಸ್ಥಾನಗಳು ಎರಡು ಭಿನ್ನ ರೀತಿಯ ಬದಲಾವಣೆಗಳನ್ನು ಸೂಚಿಸಿದರೂ ಸಹ, ಇವುಗಳ ತಾತ್ವಿಕ ನೆಲೆ ಮತ್ತು ದೃಷ್ಟಿಕೋನ ಒಂದೇ ಆಗಿದೆ.

ಯಾವುದೇ ಜಾತಿಯು ಉನ್ನತ ಸ್ಥಾನಮಾನವನ್ನು ಬಯಸುವುದಾದರೆ, ಉನ್ನತ ಜಾತಿಗಳ ಸಂಪ್ರದಾಯ, ಆಚಾರ-ವಿಚಾರ, ರೀತಿ-ನೀತಿ, ಜೀವನಕ್ರಮಗಳನ್ನು ತಮ್ಮದನ್ನಾಗಿಸಿಕೊಳ್ಳುವುದಕ್ಕಿಂತ ಸುಲಭ ವಿಧಾನವಿರಲಾರದು. ಇದರಿಂದಾಗಿ ಪ್ರತಿಯೊಂದು ಕೆಳಜಾತಿಯೂ ಅದರ ಮುಂದಿನ ಉನ್ನತ ಜಾತಿಗಳ, ಬಹಳ ಮಟ್ಟಿಗೆ ಬ್ರಾಹ್ಮಣ ಜಾತಿಯ ಸಂಪ್ರದಾಯ, ಆಚಾರವಿಚಾರ, ರೀತಿನೀತಿಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಯತ್ನಿಸುತ್ತಾ ಹೋಗುತ್ತದೆ. ಇದು

ಬಹಳ ಕಾಲದಿಂದಲೂ ಮುಂದುವರಿಯುತ್ತಾ ಬರುತ್ತಿರುವುದಾದರೂ ಸ್ಥಳೀಯ ಪ್ರಬಲ ಜಾತಿಯೂ ಸಹ ಇತರ ಜಾತಿಗಳಿಂದ ಅನುಸರಿಸಲ್ಪಡಬಹುದಾದ ಸಾಧ್ಯತೆ ಇಲ್ಲದಿಲ್ಲ. ಅಂದರೆ ಎಂ.ಎನ್. ಶ್ರೀನಿವಾಸ್‌ರ ಪ್ರಕಾರ ಮೇಲ್ಜಾತಿಯವರ ಜೀವನಕ್ರಿಯೆಯನ್ನು ಕೆಳ ಸಮುದಾಯಗಳು ಅನುಕರಿಸಲು ಪ್ರಯತ್ನಿಸುತ್ತವೆ ಹಾಗೂ ಇದರಿಂದ ಹೊರತಾಗಿ ಉಳಿಯುವುದಿಲ್ಲ. ಆದರೆ ಬದಲಾವಣೆ ಎನ್ನುವುದನ್ನು ಕೇವಲ ಅನುಕರಣೆ ಎಂದು ಶ್ರೀನಿವಾಸ್ ಗ್ರಹಿಸುತ್ತಾರೆ. ಬದಲಾವಣೆ ಎನ್ನುವುದು ಸರ್ವಕಾಲೀಕ, ಸರ್ವವ್ಯಾಪಿ ಯಾದದ್ದು ಎಲ್ಲಾ ಆದಿವಾಸಿ, ಬುಡಕಟ್ಟು, ಕೆಳ ಸಮುದಾಯ, ನಗರ, ಗ್ರಾಮೀಣ ಸಮುದಾಯಗಳಲ್ಲಿ ನಿರಂತರವಾಗಿ ಬದಲಾವಣೆಗಳು ಸಂಭವಿಸುತ್ತಿರುತ್ತವೆ. ಆದರೆ ಎಂ.ಎನ್. ಶ್ರೀನಿವಾಸ್‌ರ ಪ್ರಕಾರ ಕೇವಲ ಕೆಳ ಜಾತಿಗಳು ಮೇಲ್ಜಾತಿಯರನ್ನು ಅನುಕರಿಸುವುದಕ್ಕೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಇಲ್ಲಿ ಬದಲಾವಣೆಯನ್ನು ಕೇವಲ ಅನುಕರಣೆ ಎಂದು ಮಾತ್ರ ಗ್ರಹಿಸಲು ಸಾಧ್ಯವಾಗದು. ಕೇವಲ ಮೇಲ್ಜಾತಿಯವರ ಕ್ರಿಯಾವಿಧಿ, ವಿವಾಹ, ಜೀವನಕ್ರಮ ಅನುಕರಿಸಿದ ಮಾತ್ರಕ್ಕೆ ಸಂಸ್ಕೃತಾನುಕರಣವೆಂದು ಹೇಳಲು ಆಗದು. ಏಕೆಂದರೆ ಬ್ರಾಹ್ಮಣರನ್ನು ಬಿಟ್ಟು ನಮ್ಮ ಸಮಾಜದ ಮೇಲೆ ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ಇತರ ಸಂಸ್ಕೃತಿಗಳ ಪ್ರಭಾವ ಕಾಲದಿಂದ ಕಾಲಕ್ಕೆ ಎಲ್ಲಾ ಸಮುದಾಯಗಳ ಮೇಲೂ ಆಗಿದೆ.

ಎಂ.ಎನ್. ಶ್ರೀನಿವಾಸರು ಬದಲಾವಣೆಯನ್ನು ಸಮುದಾಯಗಳ ಸಾಂಸ್ಕೃತಿಕ ಬದುಕಲ್ಲಿ ಮಾತ್ರ ಗುರುತಿಸುತ್ತಾರೆ. ಅವರ ಪ್ರಕಾರ "ಸಂಸ್ಕೃತೀಕರಣವೆಂದರೆ ಕೇವಲ ಸಂಸ್ಕೃತ ಸಾಹಿತ್ಯದಲ್ಲಿರುವ ಬದುಕಿನ ವಿಧಾನಗಳನ್ನು, ವಿಧಿ, ಆಚರಣೆಗಳನ್ನು ಹೊಂದುವುದು ಮಾತ್ರವಲ್ಲ, ಆ ಅಭಿಜಾತ ಸಾಹಿತ್ಯದಲ್ಲಿರುವ ಪವಿತ್ರ ಚಿಂತನೆ ಮತ್ತು ಮೌಲ್ಯಗಳಿಗೆ ನಮ್ಮನ್ನು ತೆರೆದುಕೊಳ್ಳುವುದು"[೧೮] ಎಂದು ವಿವರಿಸುತ್ತಾರೆ. ಅಂದರೆ ಸಂಸ್ಕೃತ ಮತ್ತು ಬ್ರಾಹ್ಮಣ ಎಂಬವುಗಳು ಕೇವಲ ಒಂದು ಭಾಷೆ ಮತ್ತು ಸಮುದಾಯ ಮಾತ್ರವಾಗಿರದೆ, ಅವು ಹಲವು ಮೌಲ್ಯಗಳನ್ನು ಪ್ರತಿನಿಧಿಸುವ ಪರಿಕಲ್ಪನೆಗಳೆಂದೇ ಶ್ರೀನಿವಾಸ್ ಭಾವಿಸುತ್ತಾರೆ. ಅಲ್ಲದೆ "ಕೆಳಜಾತಿಗಳು ಯಾವತ್ತೂ ಉಚ್ಚಜಾತಿಗಳ ಜೀವನ ವಿಧಾನ ಮತ್ತು ಆಚರಣೆ ಗಳನ್ನು ಅನುಕರಿಸಲು ಬಯಸುತ್ತವೆ. ಕೆಳಜಾತಿಗಳು ಬ್ರಾಹ್ಮಣ ಜೀವನ ವಿಧಾನವನ್ನು ಅನುಸರಿಸಕೂಡದೆಂಬ ನಿಷೇಧ ಇದ್ದರೂ ಈ ಸಮುದಾಯಗಳು ಅನುಕರಣೆಯನ್ನು ನಿಲ್ಲಿಸಿಲ್ಲ. ಹೀಗಾಗಿ ಅವರ ಮೇಲಿರುವ ಈ ನಿಷೇಧ ಅಷ್ಟು ಪರಿಣಾಮಕಾರಿಯಾಗಿಲ್ಲ. ಒಂದಂತೂ ಸ್ಪಷ್ಟವಾಗಿದೆ. ಅದೇನೆಂದರೆ ಭಾರತದಲ್ಲಿನ ಕೆಳಜಾತಿಗಳು ಯಾವತ್ತೂ ಬ್ರಾಹ್ಮಣರ ಜೀವನ ವಿಧಾನ, ಆಚರಣೆ ಮತ್ತು ನಂಬಿಕೆಗಳನ್ನು ಅನುಸರಿಸುತ್ತಾ ಬಂದಿದ್ದಾರೆ"[೧೯] ಎಂದು ಶ್ರೀನಿವಾಸ್ ತಮ್ಮ ವಾದ ಮಂಡಿಸುತ್ತಾರೆ. ಶ್ರೀನಿವಾಸರು ಸಮುದಾಯಗಳ ಬದಲಾವಣೆಗಳನ್ನು ಅನುಕರಣೆಗಳೆಂದು ಮಾತ್ರ ಗ್ರಹಿಸುತ್ತಾರೆ. ಆದರೆ ಸಾಮಾಜಿಕ ಸ್ಥಾನಮಾನಗಳು, ಭಾರತದಂತಹ ಸಮಾಜದಲ್ಲಿ ಒಂದು ಸಮುದಾಯ ತೊಡಗಿಕೊಂಡಿರುವ ಪಾರಂಪರಿಕ ಉತ್ಪಾದನಾ ಚಟುವಟಿಕೆಗಳನ್ನೂ ಅವಲಂಬಿಸಿ ರೂಪುಗೊಳ್ಳುತ್ತವೆ ಎಂಬುದನ್ನು ಶ್ರೀನಿವಾಸರು ಮರೆಯುತ್ತಾರೆ. ಸಮುದಾಯಗಳ ಪಾರಂಪರಿಕ ವೃತ್ತಿಗಳಿಗೂ, ಅವುಗಳ ಸಾಮಾಜಿಕ ಸ್ಥಾನಮಾನಗಳನ್ನು ನೇರ ಸಂಬಂಧಗಳಿವೆ. ಭಾರತದಲ್ಲಿ ಸಮುದಾಯಗಳು ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿವೆ ಎನ್ನುವುದರ ಮೇಲೆ ಅವುಗಳ ಸಾಮಾಜಿಕ ಸ್ಥಾನಮಾನಗಳು ನಿರ್ಧರಿಸಲ್ಪಡುತ್ತವೆ.

ಅಂದರೆ ಸಮುದಾಯಗಳನ್ನು ರೂಪಿಸುವ ಅವುಗಳ ಆರ್ಥಿಕ ಚಟುವಟಿಕೆಗಳೇ ಆಯಾ ಸಮುದಾಯಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ನಿರ್ಧರಿಸುತ್ತವೆ. ಇನ್ನು ಪಾರಂಪರಿಕ ಉತ್ಪಾದನಾ ವಿಧಾನವನ್ನೇ ಅನುಸರಿಸುತ್ತಿರುವ ಸಮುದಾಯಗಳು ಲೌಕಿಕದ ನೆಲೆಗಳನ್ನೇ ಕಳೆದುಕೊಂಡು ಛಿದ್ರವಾಗಿ ಹೋಗಿವೆ. ಆ ಸಮುದಾಯಗಳು ಅನುಸರಿಸುತ್ತಿರುವ ಆರ್ಥಿಕ ಚಟುವಟಿಕೆಗಳು, ಆಯಾ ಸಮುದಾಯಗಳ ಸಾಂಸ್ಕೃತಿಕ ಚಟುವಟಿಕೆಗಳನ್ನು ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸಲೂ ಸಾಧ್ಯವಾಗದಷ್ಟು ದುರ್ಬಲಗೊಂಡಿವೆ. ಇದಕ್ಕೆ ನಮ್ಮ ಅಲೆಮಾರಿ ಸಮುದಾಯಗಳನ್ನು ಉದಾಹರಿಸಬಹುದು. ಶ್ರೀನಿವಾಸ್ ಅವರ ಚರ್ಚೆಯಲ್ಲಿ ಸಂಸ್ಕೃತಿಯನ್ನು ರೂಪಿಸುವ ಮತ್ತು ಬದಲಾಯಿಸುವ ಮೂಲಭೂತ ಅಂಶಗಳ ಕುರಿತ ಉಲ್ಲೇಖಗಳೇ ಇಲ್ಲ. ಅಲೇನ್ ಟಾರೇನ್ ಎನ್ನುವ ಫ್ರೆಂಡ್ ಸಮಾಜಶಾಸ್ತ್ರಜ್ಞ ಸಾಮಾಜಿಕ ಬದಲಾವಣೆಯ ಕುರಿತು ಹೀಗೆ ಹೇಳುತ್ತಾನೆ. "ಸಾಮಾಜಿಕ ಬದಲಾವಣೆ ಅಥವಾ ಚಲನೆಗಳನ್ನು ಆರ್ಥಿಕ ಅಂಶಗಳು ನೇರವಾಗಿ ಪ್ರಚೋದಿಸುತ್ತವೆ. ಆರ್ಥಿಕ ಚಟುವಟಿಕೆಗಳಲ್ಲಾದ ಬದಲಾವಣೆಗಳು ಸಾಮಾಜಿಕ ಸ್ಥಿತಿಗತಿಗಳನ್ನು ನಿಯಂತ್ರಿಸುತ್ತಿರುತ್ತವೆ."[೨೦]

ಸಮುದಾಯಗಳ ಲೌಕಿಕ ಬದುಕನ್ನು ಮನುಷ್ಯನ ಲೌಕಿಕ ಚಟುವಟಿಕೆಗಳಲ್ಲಿ ರೂಪಿಸುತ್ತವೆ. ಹೀಗಾಗಿ ಭಾರತದ ಕೆಳವರ್ಗಗಳ ಮತ್ತು ದುಡಿವ ಸಮುದಾಯಗಳ ಬದುಕನ್ನು ಅವುಗಳ ಉತ್ಪಾದನಾ ಚಟುವಟಿಕೆಗಳು ರೂಪಿಸುತ್ತಾ ಬಂದಿವೆ. ಈ ವರ್ಗಗಳ ಸಾಮಾಜಿಕ ಬದುಕಲ್ಲಿ ಉಂಟಾದ ಏರುಪೇರುಗಳೂ ಸಹ ಆರ್ಥಿಕ ಚಟುವಟಿಕೆಗಳಾದ ರೂಪಾಂತರಗಳನ್ನೇ ಅವಲಂಬಿಸಿದೆ.

ಲಂಬಾಣಿ ಸಮುದಾಯವು ಸಾಮುದಾಯಿಕ ಭಾವನೆಯನ್ನು, ಸ್ಥಾನೀಯತೆಯನ್ನು, ಸಾಮಾಜಿಕ ನಿಯಂತ್ರಣವನ್ನು, ಸ್ಥಿರತೆಯನ್ನು ಹೊಂದಿ ಬದಲಾವಣೆಗೆ ಒಳಪಡುತ್ತಲೇ ಇದೆ. ಲಂಬಾಣಿ ಸಮುದಾಯವು ಬದಲಾವಣೆಯ ಸುಳಿಯಲ್ಲಿ ಸಿಕ್ಕಿ ಅಲೆಮಾರಿಯಾಗಿ ಆಹಾರ ಧಾನ್ಯಗಳನ್ನು, ಉಪ್ಪನ್ನು ಸಾಗಿಸುವ ವ್ಯಾಪಾರಿ ಸಮುದಾಯವಾಗಿತ್ತು. ಕಾಲಕ್ರಮೇಣ ಅಲೆಮಾರಿತನವನ್ನು ಬಿಟ್ಟು ಒಂದೆಡೆ ನೆಲೆ ನಿಂತು ವ್ಯಾಪಾರದಿಂದ, ಪರ್ಯಾಯ ವೃತ್ತಿಯನ್ನಾಗಿ ಕೃಷಿಕೂಲಿಗಳಾಗಿ ಜಮೀನ್ದಾರರ ಹತ್ತಿರ ದುಡಿದು, ಕಾಡಿನ ಉತ್ಪನ್ನವನ್ನು ಮಾರಿ ಜೀವನ ಸಾಗಿಸುತ್ತಾ ಬಂದಿದ್ದಾರೆ. ಇಂದು ಈ ಸಮುದಾಯದ ಇಂದಿನ ಸಮಾಜದಲ್ಲಿ ಶಿಕ್ಷಣಕ್ಕೆ ಬಹಳ ಪ್ರಮುಖ ಸ್ಥಾನಮಾನವಿದೆ. ಒಂದು ದೇಶದ ಅಥವಾ ಸಮುದಾಯದ ಅಭಿವೃದ್ಧಿಯ ಮಟ್ಟವನ್ನು ತಿಳಿಯಲು ಶಿಕ್ಷಣವು ಒಂದು ಮುಖ್ಯ ಅಂಶವಾಗಿದೆ. ಸಮುದಾಯವೊಂದರ ಸಾಮಾಜಿಕ ಬದಲಾವಣೆ ಪ್ರೇರಕ ಅಂಶವಾಗಿದೆ. ಹಾಗೆಯೇ ವ್ಯಕ್ತಿಯೊಬ್ಬನ ಉನ್ನತಿ ಅವನು ಪಡೆಯುವ ಶಿಕ್ಷಣದ ಮೇಲೆ ಅವಲಂಬಿಸಿರುತ್ತದೆ. ಶಿಕ್ಷಣ ಹೊಂದಿ ಉತ್ತಮ ಸ್ಥಾನಮಾನ, ಅಧಿಕಾರ, ಗೌರವ, ಅಂತಸ್ತನ್ನು ಕೆಲವರು ತಾಂಡದಲ್ಲಿ ಹೊಂದಿ ಗಣ್ಯರಾಗುತ್ತಿದ್ದಾರೆ. (ಅಲೆಮಾರಿತನವನ್ನು ರೂಢಿಸಿಕೊಂಡದ್ದರಿಂದ ಶಿಕ್ಷಣವನ್ನು ಪಡೆಯಲು ಅಸಾಧ್ಯವಾಗುತ್ತಿತ್ತು) ಈ ಬದಲಾವಣೆಗಳಾಗಲೂ ಸಮುದಾಯಕ್ಕೆ ಹಲವಾರು ದಶಕಗಳೇ ಬೇಕಾಯಿತು.

ಸರಕಾರ ಹಿಂದುಳಿದ ಸಮುದಾಯಕ್ಕೆ ಉಚಿತ ಶಿಕ್ಷಣವನ್ನು ನೀಡುತ್ತಿದ್ದು ಹಾಗೂ ಮಧ್ಯಾಹ್ನ ಊಟೋಪಚಾರವನ್ನು ಮಕ್ಕಳಿಗೆ ನೀಡಿತ್ತಿರುವುದರಿಂದ ತಾಂಡದಲ್ಲಿ ಮಕ್ಕಳು ಶಿಕ್ಷಣದ ಕಡೆಗೆ ಒಲವನ್ನು

ತೋರುತ್ತಿದ್ದಾರೆ. ಹಾಗೆಯೇ ಇಂದು ಎಷ್ಟೇ ಕಷ್ಟಗಳಿದ್ದರು ತಮ್ಮ ಮಕ್ಕಳು ಶಿಕ್ಷಣವನ್ನು ಪಡೆದು ತಮ್ಮಂತೆ ಕೂಲಿಯನ್ನು ಮಾಡದೆ ದೊಡ್ಡ ಅಧಿಕಾರಿಗಳಾಗಲಿ ಎಂಬ ಹೆಬ್ಬಯಕೆಯನ್ನು ಹೊಂದಿದ್ದಾರೆ. ಸರಕಾರ ಶಿಕ್ಷಣದಲ್ಲಿ ಮೀಸಲಾತಿಯನ್ನು, ಶಿಷ್ಯವೇತನವನ್ನು ಸೌಲಭ್ಯಗಳನ್ನು ಒದಗಿಸುತ್ತಿರುವ ಕಾರಣ ಇಂದು ಹೆಚ್ಚು ಹೆಚ್ಚು ಶಿಕ್ಷಣವನ್ನು ಮಕ್ಕಳು ಪಡೆಯುತ್ತಿದ್ದಾರೆ. ನಾನು ಕ್ಷೇತ್ರ ಕಾರ್ಯಮಾಡಿದ ತಾಂಡಾಗಳು ಈ ಬಗೆಯ ಬದಲಾವಣೆಗಳಿಗೆ ತಮ್ಮನ್ನು ಒಗ್ಗಿಸಿಕೊಂಡಿವೆ.

ಕಾಲಕ್ರಮೇಣ ಆರ್ಥಿಕ ಚಟುವಟಿಕೆಯ ಕಾರಣದಿಂದ ಲಂಬಾಣಿಗರು ನೆಲೆನಿಂತ ಸಂದರ್ಭದಲ್ಲಿ ಮಕ್ಕಳಿಗೆ ಶಿಕ್ಷಣವನ್ನು ದೊರಕಿಸಲು ಪ್ರಯತ್ನಿಸಿದ್ದಾರೆ. ಶಿಕ್ಷಣವು ಮಾನವನಿಗೆ ಅಗತ್ಯವಾದುದು. ಅದಿಲ್ಲದಿದ್ದರೆ ಅವನೊಬ್ಬ ಅನಾಗರಿಕನಾಗುತ್ತಾನೆ. ಶಿಕ್ಷಣವು ಉದ್ಯೋಗವನ್ನು ಗಳಿಸಿಕೊಳ್ಳಲು ಪ್ರಮುಖ ಸಾಧನವಾಗಿದೆ. ಇಂದಿನ ಕೈಗಾರಿಕಾ ಸಮಾಜದಲ್ಲಿ ಉದ್ಯೋಗವನ್ನು ಗಳಿಸಿಕೊಳ್ಳಲು ಅಗತ್ಯವಾದ ಕೌಶ್ಯಲ್ಯತೆ, ತರಬೇತಿಯನ್ನು ಶಿಕ್ಷಣವು ನೀಡುತ್ತದೆ. ವೃತ್ತಿ ಆಧಾರಿತ ತಾಂತ್ರಿಕ ಶಿಕ್ಷಣವು ಇಂದು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಉನ್ನತ ಶಿಕ್ಷಣವನ್ನು ಪಡೆಯದವರಿಗೆ ಉನ್ನತ ಹುದ್ದೆಯನ್ನು ಪಡೆಯುವ ಹಾಗೂ ಅತ್ಯಧಿಕ ಸಂಪಾದನೆ ಇರುವ ವೃತ್ತಿಯನ್ನು ಪಡೆಯುವುದು ಮುಖ್ಯವಾಗಿದೆ. ಹಾಗೆಯೇ ತಾಂಡದಲ್ಲಿ ತಾರತಮ್ಯವಿಲ್ಲದೆ ಸಮಾಜದ ಎಲ್ಲಾ ವರ್ಗಗಳು ಶಿಕ್ಷಣ ಪಡೆಯುತ್ತಾ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುತ್ತಿವೆ. ತಾಂಡದಲ್ಲಿ ಲಂಬಾಣಿಗರ ಆರ್ಥಿಕ ಜೀವನವನ್ನು ನಿರ್ಧರಿಸುವಲ್ಲಿ ಶಿಕ್ಷಣವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಆಧುನಿಕತೆಯಿಂದ ಸಮುದಾಯವೊಂದರ ಸಾಮಾಜಿಕ ಬದಲಾವಣೆಗಳು ಕಾಲದಿಂದ ಕಾಲಕ್ಕೆ ಸಂಭವಿಸುತ್ತವೆ. ಆಧುನಿಕತೆ ಎಂಬುದನ್ನು ಒಂದು ಚೌಕಟ್ಟಿನಲ್ಲಿರಿಸಿ ಇದೇ ಆಧುನಿಕತೆ ಎಂದು ಖಚಿತ ವ್ಯಾಖ್ಯೆಯನ್ನು ನೀಡಲು ಆಗದು. ಒಂದು ಸಮುದಾಯಕ್ಕೆ ಆಧುನಿಕ ಎಂದು ಅನಿಸುವುದು ಮತ್ತೊಂದು ಸಮುದಾಯಕ್ಕೆ ಅನಿಸದೆ ಇರಬಹುದು. ಕೈಗಾರಿಕೀಕರಣದಿಂದ ಸುಧಾರಿತ ವಿಧಾನಗಳು ಮತ್ತು ಸೂಕ್ಷ್ಮ ಯಂತ್ರಗಳು ಬಳಕೆಗೆ ಬಂದು ನಾಗರೀಕತೆ ಅಂಕುರಿಸಿದೆ ಹೀಗೆ ನಾಗರೀಕತೆ ಅಂಕುರಿಸಿದ ಮೇಲೆ ಒಂದು ಸಮುದಾಯ ನಗರವಾಗಿ ರೂಪುಗೊಳ್ಳುತ್ತಾ ನಗರೀಕರಣ ಪ್ರಕ್ರಿಯೆಗೆ ಒಳಗಾಗಿರುವುದನ್ನು ಕಾಣುತ್ತೇವೆ. ಸಮುದಾಯದ "ಜನರು ಹೊಸ ಮೌಲ್ಯಗಳನ್ನು ನೂತನ ರೀತಿನೀತಿಗಳನ್ನು ವಿಚಾರಿಸುವಂತಿಕೆಯ ಕಡೆ ಒಲವು ಹೊಂದುವುದನ್ನು ಆಧುನಿಕರಣ"[೨೧] ಎನ್ನುತ್ತೇವೆ. ತಲೆತಲಾಂತರವಾಗಿ ಬಂದ ಸಂಪ್ರದಾಯಗಳು ನಂಬಿಕೆ ಪರಂಪರೆಗಳು ಆಧುನಿಕತೆಯಿಂದ ಬದಲಾವಣೆಯನ್ನು ಹೊಂದುತ್ತಿವೆ.

"ಒಂದು ಸ್ಥಗಿತ ನಿಲುವನ್ನು ವಿರೋಧಿಸಲು ಆಧುನಿಕತೆಯೆಂಬ ಪದವನ್ನು ಬಳಸುತ್ತೇವೆ".[೨೨] ಬದಲಾವಣೆಗೆ ಸಮುದಾಯಗಳು ಸ್ಪಂದಿಸಿ ಸಮಾಜದ ರಚನೆಗೆ ಒಳಗಾಗಿವೆ. ಆದರೆ ಇದರ ವೇಗ ಮಂದಗತಿಯಲ್ಲೇ ಸಾಗಿದೆ. ಲಂಬಾಣಿ ಸಮುದಾಯದ ಸಾಮಾಜಿಕ ಬದಲಾವಣೆಗೆ ಆಧುನಿಕತೆಯು ಬಹುಮುಖ್ಯ ಪಾತ್ರ ವಹಿಸಿದೆ. ಆದರೆ ಆಧುನಿಕತೆಯು ಇಡಿ ಸಮಾಜದ ರಚನೆಯನ್ನು ಹಿಡಿಯಾಗಿ ಬದಲಾಯಿಸಿದೆ ಎಂದರೆ ತಪ್ಪಾಗುತ್ತದೆ. ತಾಂಡದಲ್ಲಿ ಇಂದಿಗೂ ಮೌಲ್ಯಗಳು, ಉಡುಗೆ ತೊಡುಗೆ, ಸಂಪ್ರದಾಯಗಳು, ಆದರ್ಶಗಳು, ಸಾಂಸ್ಕೃತಿಕ ಅನನ್ಯತೆ, ಪ್ರತ್ಯೇಕವಾದ ವಾಸಸ್ಥಾನ ಹಬ್ಬ ಆಚರಣೆ,

ಮುಂತಾದವು ಇದ್ದು, ಅವುಗಳ ಸ್ವರೂಪಗಳಲ್ಲಿ ಕೆಲವೊಂದು ಬದಲಾವಣೆಗಳು ಉಂಟಾಗಿವೆ. ಆದರೆ ಸಂಪೂರ್ಣವಾಗಿ ಬದಲಾಗಿಲ್ಲದೆ, ಇಂದಿಗೂ ಇವುಗಳನ್ನು ಕಾಪಾಡಿಕೊಂಡು ಲಂಬಾಣಿಗರು ಬಂದಿದ್ದಾರೆ. ಬದಲಾವಣೆ ಸರ್ವವ್ಯಾಪಿಯಾದದ್ದು, ಪ್ರತಿಯೊಂದು ಸಮಾಜವು ಪರಿವರ್ತನೆಯ ಸುಳಿಯಲ್ಲಿ ಜೀವಂತವಾಗಿರುತ್ತದೆ. ಆದರೆ ಇದರ ತೀವ್ರತೆ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ.

ನಾನು ಕ್ಷೇತ್ರಕಾರ್ಯ ಮಾಡಿದ ನಾಲ್ಕು ತಾಂಡಗಳಲ್ಲಿ ಆಧುನಿಕತೆಯ ಪ್ರಭಾವದಿಂದ ದಿನನಿತ್ಯದ ಅತ್ಯಾವಶ್ಯಕ ವಸ್ತುಗಳ ಉಪಯೋಗದಲ್ಲಿ, ದಿನಚರಿಗಳಲ್ಲಿ ಜೀವನ ಶೈಲಿಯಲ್ಲಿ ಮಾರ್ಪಾಟುಗಳಾಗಿವೆ, ಮೊದಲೇ ಹೇಳಿದಂತೆ ಆಧುನಿಕತೆಗೆ ಒಳಗಾದ ವ್ಯಕ್ತಿಗಳು ತಮ್ಮ ಉಡುಗೆ ತೊಡುಗೆಗಳು, ಆಚಾರ ವಿಚಾರಗಳಲ್ಲಿ, ಮದುವೆ ಮುಂಜಿ ಮುಂತಾದ ಅಂಶಗಳಲ್ಲಿ ಬದಲಾವಣೆಯನ್ನು ತಂದುಕೊಂಡಿದ್ದಾರೆ.

ಈ ಬದಲಾವಣೆಗಳಿಗೆ ಸಮೂಹ ಮಾಧ್ಯಮ, ಶಿಕ್ಷಣ, ಸಾರಿಗೆ ಸಂಪರ್ಕವು ಮುಂತಾದುವುಗಳು ಕಾರಣವಾಗಿವೆ. ಇಂದು ತಾಂಡಗಳಲ್ಲಿ ಆಧುನಿಕ ವಸ್ತುಗಳನ್ನು ಬಳಕೆ ಮಾಡುತ್ತಿದ್ದಾರೆ. ನಗರಕ್ಕೆ ಹತ್ತಿರವಿರುವ ತಾಂಡವಂತೂ ನಗರದ ಜೀವನ ಶೈಲಿಯನ್ನು ಸಂಪೂರ್ಣವಾಗಿ ಅನುಕರಿಸುತ್ತಿದೆ. ಶಿಥಿಲ ಗುಡಿಸಲುಗಳಲ್ಲಿ ವಾಸಿಸುತ್ತಿದ್ದವರು ಹಂಚಿನ ಮನೆಯಲ್ಲಿ, ಆರ್ಥಿಕ ಸುಸ್ಥಿತಿವಂತರೂ ಆರ್.ಸಿ.ಸಿ. ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಹಣಕ್ಕೆ ಹೆಚ್ಚಿನ ಪ್ರಾಧನ್ಯತೆ ದೊರೆತಿದ್ದು ಹಣವು ಘನತೆಯನ್ನು ನಿರ್ಧರಿಸುವ ಅಳತೆಗೋಲಾಗಿದೆ. ರಸ್ತೆಗಳಾಗಿವೆ, ಮೋಟಾರು ವಾಹನಗಳು ಓಡಾಡುತ್ತಿವೆ, ಶಾಲೆಗಳಾಗಿವೆ, ಬೇಸಾಯದಲ್ಲಿ ಆಧುನಿಕ ಸುಧಾರಿತ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಆಧುನೀಕತೆಯ ರೂಪಗಳಾದ ರೇಡಿಯೋ, ಮೋಟಾರು ವಾಹನಗಳು, ಟ್ರಾಕ್ಟರ್, ಪತ್ರಿಕೆಗಳು, ಟಿ.ವಿ ಮುಂತಾದವುಗಳು ಪ್ರಖಾರವಾದಂತಹ ಬದಲಾವಣೆಗಳನ್ನು ಸಮುದಾಯಗಳಲ್ಲಿ ಉಂಟುಮಾಡುತ್ತಿವೆ. ಹೀಗೆ ಸಮುದಾಯದ ರಚನೆಯನ್ನೇ ಆಧುನಿಕತೆಯು ಬದಲಾಯಿಸಿದೆ.

## ೫. ರಾಜ್ಯದಲ್ಲಿನ ಲಂಬಾಣಿಗರ ಸಾಮಾಜಿಕ ಸ್ಥಿತಿಗತಿಗಳ ಸ್ಥೂಲ ವಿವರಣೆ

ಕರ್ನಾಟಕದಲ್ಲಿ ಉತ್ತರ ಕರ್ನಾಟಕ, ಮಂಡ್ಯ, ಕೊಡಗು ಜಿಲ್ಲೆಗಳಲ್ಲಿ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೆ ಶಿವಮೊಗ್ಗ, ಗುಲ್ಬರ್ಗಾ, ಬೀದರ್, ಧಾರವಾಡ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ನಾಲ್ಕು ಜಿಲ್ಲೆಯಲ್ಲಿ ಇವರ ಜನಸಂಖ್ಯೆಯನ್ನು ನೋಡಿದರೆ, "ಗುಲ್ಬರ್ಗಾ, ೨೬.೮೫೪೪, ಶಿವಮೊಗ್ಗದಲ್ಲಿ ೧೫.೯೮೩೬, ಬಿಜಾಪುರ ೨೪.೪೫೬೩, ಧಾರವಾಡ, ೧೨.೮೮೦೧, ಬಳ್ಳಾರಿ, ೧೩.೯೯೨, ೧೯೯೬.೯೭ರ ಜನಗಣತಿ"[೨೩] ಈ ರೀತಿ ರಾಜ್ಯದ ಒಟ್ಟು ಜನಸಂಖ್ಯೆ ೧೫ ಲಕ್ಷಕ್ಕಿಂತ ಹೆಚ್ಚಿದ್ದು ಈ ಐದಾರು ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ.

ತಮ್ಮದೇ ಆದ ನಿರ್ದಿಷ್ಟ ಪ್ರತ್ಯೇಕ ವಾಸಸ್ಥಾನವಾದ ತಾಂಡಾಗಳಲ್ಲಿ ವಾಸಿಸುತ್ತಾ ತಮ್ಮದೇ ಆದ ಭಾಷೆ, ಉಡುಗೆ ತೊಡುಗೆ, ಆಚಾರ ವಿಚಾರ, ನೀತಿ, ನಿಯಮ, ವಿಧಿ, ನಿಷೇಧ, ಹಬ್ಬ ಹರಿದಿನ, ಕುಲದೈವ, ಬೆಡಗು, ರಕ್ತಸಂಬಂಧ, ಕುಟುಂಬ, ವಿವಾಹ, ಕುಲಕಸುಬು, ನಂಬಿಕೆ, ಸಂಪ್ರದಾಯ, ನ್ಯಾಯ ವ್ಯವಸ್ಥೆಯನ್ನು ಉಳಿಸಿಕೊಂಡಿದ್ದಾರೆ. ಹೆಚ್ಚಾಗಿ ಎಲ್ಲರೂ ಕೃಷಿ ಕೂಲಿಯನ್ನು ಮಾಡುತ್ತಾರೆ. ಜೀತವನ್ನು

ವಾರ್ಷಿಕ ತಿಂಗಳ ಗುತ್ತಿಗೆ ಆಧಾರದ ಮೇರೆಗೆ ಕೂಡಾ ಮಾಡುತ್ತಿದ್ದಾರೆ. ಸಣ್ಣಪುಟ್ಟ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾ ಕೂಡ ಜೀವನ ಸಾಗಿಸುತ್ತಿದ್ದಾರೆ.

ಲಂಬಾಣಿಗರು ಹೆಚ್ಚಾಗಿ ವಾಸ ಮಾಡುತ್ತಿರುವ ಸ್ಥಳಗಳು ಗುಡ್ಡಗಾಡುಗಳ ಪ್ರದೇಶದ ಬಳಿ ಇವೆ. ಇವರ ವಾಸಸ್ಥಳಗಳು ಕಂದಾಯ ಗ್ರಾಮಗಳಾಗಿಲ್ಲ, ಇದರಿಂದಾಗಿ ಇವರಿಗೆ ನಾಗರೀಕ ಸೌಲಭ್ಯಗಳಾದ ರಸ್ತೆ, ಸಾರಿಗೆ, ಶಾಲೆ, ನೀರು, ವಿದ್ಯುಚ್ಛಕ್ತಿಯ ವ್ಯವಸ್ಥೆ ಇವು ಇವರಿಗೆ ಸೂಕ್ತ ರೀತಿಯಲ್ಲಿ ತಲುಪದಂತಾಗಿದೆ. ಸ್ವತಂತ್ರ್ಯ ಬಂದು ೫೦ ವರ್ಷ ಗತಿಸಿಹೋದರು ಇವರಿಗೆ ಸರ್ಕಾರ ಯಾವ ಮಟ್ಟದಲ್ಲಿ ನೋಡುತ್ತದೆ ಎಂಬುದಕ್ಕೆ ಸವಲತ್ತು ಕಾಣದ ಈ ತಾಂಡಗಳೇ ಮುಖ್ಯ ಸಾಕ್ಷಿಗಳಾಗಿವೆ. "ರಾಜ್ಯದಲ್ಲಿ ಶತಮಾನಗಳಿಂದ ಲಂಬಾಣಿಗರು ಒಂದು ಬಗೆಯ ಸಂಚಾರಿ ಜೀವನ ಕ್ರಮವನ್ನು ಕಳೆಯುತ್ತಾ ಬಂದಿದ್ದರೂ ಅವರಲ್ಲಿ ಸಾಮಾಜಿಕ ಆರ್ಥಿಕ ಮತ್ತು ಪಂಚಾಯತ್ ಸಂಘಟನೆಯ ಬಹುದೊಡ್ಡ ಶಕ್ತಿ ಅಡಕವಾಗಿದೆ"[೨೪] ಲಂಬಾಣಿಗರು ಊರು ಹಳ್ಳಿ ನಗರಗಳಿಂದ ದೂರ ತಮ್ಮದೇ ಆದ ನಿರ್ಧಿಷ್ಟ ಪ್ರತ್ಯೇಕ ವಾಸಸ್ಥಾನವಾದ ತಾಂಡ ಮತ್ತು ತಮ್ಮ ಜೀವನಕ್ಕಾಗಿ ಕೂಲಿ, ಕೃಷಿ, ಸಣ್ಣಪುಟ್ಟ ವ್ಯಾಪಾರ ಮಾಡುತ್ತಾ ಇರುವರು. ಗೋರ್‌ಪಂಚಾಯತ್ ಇಂದಿಗೂ ತಾಂಡಗಳಲ್ಲಿ ಅಸ್ತಿತ್ವದಲ್ಲಿದೆ ಹಾಗೂ ಪ್ರಬಲವಾಗಿದೆ. ರಾಜ್ಯದಲ್ಲಿ ವಾಸವಾಗಿರುವ ಲಂಬಾಣಿಗರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದವರಾಗಿದ್ದಾರೆ. ಯಾವುದೇ ಜನಗಳು ವಾಸಿಸುವ ಮನೆ ಜೀವನಸ್ಥಿತಿ ಮತ್ತು ಅವರ ಸ್ಥಾನಮಾನಗಳು ಸುಧಾರಿತ ಮಟ್ಟದಲ್ಲಿರುತ್ತವೆ.

ರಾಜ್ಯದಲ್ಲಿರುವ ಲಂಬಾಣಿಗರು ತೀರಾ ಬಡತನದಲ್ಲಿದ್ದು ಕೆಲವರು ಮಾತ್ರ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ. ಉಳಿದಂತೆ ರಾಜ್ಯದಲ್ಲಿ ಎಲ್ಲಾ ರಂಗದಲ್ಲೂ ಹಿಂದುಳಿದಿದ್ದಾರೆ. ಅವರು ಹೊಂದಿರುವ ಉದ್ಯೋಗಗಳು ಮತ್ತು ಯಾವುದೇ ಬೇರೆ ಜನಾಂಗದವರ ಪ್ರಬಲವಾದ ಸಹಾಯವಿಲ್ಲದಿರುವುದು ಕಾಣಬಹುದಾಗಿದೆ. ಬಡತನಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಿನ್ನೆಲೆಗಳು ಕಾರಣವಾಗಿವೆ. ಹೀಗೆ ಆರ್ಥಿಕ ಬಲವಿಲ್ಲದೆ ಇರುವ ಈ ಸಮುದಾಯದಲ್ಲಿ ರಾಜಕೀಯ ಸ್ಥಾನಮಾನಗಳು ಲಭ್ಯವಾಗುವುದು ತುಂಬಾ ಕಷ್ಟವಾಗಿದೆ. ಮಿಗಿಲಾಗಿ ಭಾರತದಂತಹ ದೇಶದಲ್ಲಿ ರಾಜಕೀಯವಾಗಿ ಪ್ರಬಲವಾಗುವುದು ಅಥವಾ ರಾಜಕೀಯದಲ್ಲಿ ನೇರವಾಗಿ ಭಾಗವಹಿಸುವುದಕ್ಕೆ ಹಣ ಮತ್ತು ಜಾತಿ ಮುಖ್ಯವಾಗಿದ್ದು ಹಣಕಾಸಿನ ವಿಷಯದಲ್ಲಿ ದುರ್ಬಲರು ಹಾಗೆಯೇ ಲಂಬಾಣಿಗರು ಕೆಲವೊಂದು ಕಡೆ ಮಾತ್ರ ರಾಜಕೀಯದಲ್ಲಿ ಭಾಗವಹಿಸುವುದನ್ನು ಗುರುತಿಸಬಹುದು.

"ಒಂದು ಕಾಲಕ್ಕೆ ರಾಜರಾಗಿ ರಾಜರ ಸೈನಿಕರಾಗಿ, ಸೈನ್ಯಕ್ಕೆ ಆಹಾರ ಸಾಮಾಗ್ರಿಗಳನ್ನು ಪೂರೈಸುವ ಸಾಹಸಿಗರಾಗಿ ಕಾರ್ಯ ನಿರ್ವಹಿಸಿದ ಲಂಬಾಣಿಗರಲ್ಲಿ ಕಾಲದ ಮಹಿಮೆಯಿಂದ ಕಾಡು ಸೇರಿಕೊಳ್ಳುವ ಸ್ಥಿತಿ ಒದಗಿ ಬಂದದ್ದು ಒಂದು ವಿಪರ್ಯಾಸವೇ ಸರಿ. ಹೀಗಾಗಿ ಅವರು ರಾಜಕೀಯ ಪ್ರಜ್ಞೆಯಿಂದ ದೂರವಾಗಿ ಉಳಿದಿದ್ದಾರೆ. ೧೯೮೫ರಲ್ಲಿ ನಡೆದ ಕರ್ನಾಟಕ ರಾಜ್ಯ ವಿಧಾನ ಸಭೆಯ ಚುನಾವಣೆಯಲ್ಲಿ ೫ ಜನ ಲಂಬಾಣಿ ಶಾಸಕರು ಆಯ್ಕೆಯಾಗಿದ್ದರು. ೧೯೯೪ರಲ್ಲಿ ನಡೆದ ಚುನಾವಣೆಯಲ್ಲಿ ೪ ಜನ ಶಾಸಕರು ಆಯ್ಕೆಯಾಗಿರುವುದು ಹಾಗೂ ಮಂಡಲ ಪಂಚಾಯತ್ ತಾಲೂಕು ಪಂಚಾಯತ್ ಮತ್ತು

ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಕೆಲವು ಜನರು ಆಯ್ಕೆಯಾಗಿರುವುದು. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಆಗಿರುವುದು ಅವರಲ್ಲಿ ಬೆಳೆಯುತ್ತಿರುವ ರಾಜಕೀಯ ಪ್ರಜ್ಞೆಯನ್ನು ಎತ್ತಿ ತೋರುಸುತ್ತದೆ"[೫೫] ಹೀಗೆ ಲಂಬಾಣಿಗರು ರಾಜಕೀಯವಾಗಿ ಚಲಿಸುತ್ತಿರುವುದು ಸಂತೋಷದಾಯಕ ವಿಚಾರವಾಗಿದೆ. ಈ ರಾಜಕೀಯ ಗಣ್ಯರು ಲಂಬಾಣಿಗರ ಹಿತರಕ್ಷಣೆಗೆ ಯಾವಯಾವ ಕಾರ್ಯಕ್ರಮಗಳನ್ನು ಅಳವಡಿಸಿ ಈ ಸಮುದಾಯದ ಅಭಿವೃದ್ಧಿನ್ನು ಪಡಿಸುವುದು ಮುಖ್ಯವಾಗಿದೆ. ಆದರೆ ೧೫ ಲಕ್ಷಕ್ಕಿಂತಲೂ ಹೆಚ್ಚಿರುವ ಲಂಬಾಣಿಗರು ರಾಜ್ಯದಲ್ಲಿ ಇದ್ದಾರೆ. ಪ್ರದೇಶವಾರು ವೈರುಧ್ಯಗಳಿಂದಾಗಿ ರಾಜಕೀಯದಲ್ಲಿ ಭಾಗವಹಿಸುವರ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ.

ತಾಂಡಗಳ ಬದಲಾವಣೆಯಿಂದ ಹೊರತಾಗಿ ಉಳಿಯದೆ, ಇವರ ಆಚಾರ-ವಿಚಾರ ಉಡುಗೆ-ತೊಡುಗೆ ಜೀವನ ಕ್ರಮದಲ್ಲಿ ಬದಲಾವಣೆಗಳು ಏರ್ಪಡುತ್ತಿವೆ. ಇತರ ಸಮುದಾಯಗಳ ಜೊತೆಗೆ ಮುಖಾಮುಖಿ ಸಂಬಂಧ ಏರ್ಪಡುವುದರಿಂದ ಇದು ಸಹಜವಾದ ಪ್ರತಿಕ್ರಿಯೆ ಕೂಡ ಎನ್ನಬಹುದು.

ರಾಜ್ಯದಲ್ಲಿನ ಲಂಬಾಣಿಗರ ವೇಷಭೂಷಣ ಮತ್ತು ಗೋರಬೋಲಿ ಭಾಷೆಯಲ್ಲಿ ಪ್ರಾದೇಶಿಕತೆಯ ಪ್ರಭಾವದಿಂದ ಬದಲಾವಣೆಗಳನ್ನು ಕಾಣಬಹುದು. ದಕ್ಷಿಣ ಕರ್ನಾಟಕ ಭಾಗದ ಲಂಬಾಣಿ ಸಮುದಾಯದವರ ಮಹಿಳೆಯ ಆಭರಣ ಹಾಕುವ ರೀತಿಯಲ್ಲಿ ಉಡುಗೆ-ತೊಡುಗೆಯು ಪ್ರಾದೇಶಿಕತೆಗೆ ಅನುಗುಣವಾಗಿ ಭಿನ್ನತೆಯನ್ನು ಹೊಂದಿದೆ. ಏನೇ ಭಿನ್ನತೆ ಇದ್ದರೂ ಇವರೆಲ್ಲರು ಲಂಬಾಣಿ ಸಮುದಾಯದವರೆ, ವೃತ್ತಿಯಲ್ಲಿಯು ಕೂಡ ಈ ಭಿನ್ನತೆಯನ್ನು ಕಾಣಬಹುದಾಗಿದೆ. ಕೃಷಿ, ಕೂಲಿ, ಉದ್ಯೋಗಸ್ತರ, ಶಿಕ್ಷಣ ಹೊಂದಿದವರ ಪ್ರಮಾಣ ಉತ್ತರ ಕರ್ನಾಟಕದ ಲಂಬಾಣಿಗರಿಗೆ ಹೋಲಿಸಿದರೆ ಹೆಚ್ಚಿದೆ. ಮಹಿಳೆಯರು ಮಾತ್ರ ಸಂಸಾರ ನಡೆಸಲು ಆಸರೆಯಾಗಿದ್ದಾಳೆ. ಹಾಗೆಯೇ ಇಲ್ಲಿ ಹೆಣ್ಣು ಮಕ್ಕಳು ಕಾಡಿಗೆ ಬೆಟ್ಟಗುಡ್ಡಗಳಿಗೆ ಹೋಗಿ ಕಟ್ಟಿಗೆಯನ್ನು ಮತ್ತು ಕಾಡಿನ ಉಪ ಉತ್ಪನ್ನಗಳನ್ನು ಸಂಗ್ರಹಿಸಿ ಮಾರುತ್ತಾರೆ. ಪ್ರತಿಯೊಂದು ತಾಂಡಗಳಲ್ಲಿ ಹೀಗೆ ಮಾಡುವುದನ್ನು ಕಾಣಬಹುದಾಗಿದೆ.

ಆರ್ಥಿಕವಾಗಿ ಹಿಂದುಳಿದಿರುವದರಿಂದ ಮಕ್ಕಳ ಶಿಕ್ಷಣದ ಬಗೆಗೆ ಯಾವುದೇ ಕಾಳಜಿ ವಹಿಸಲು ಸಾಧ್ಯವಾಗುತ್ತಿಲ್ಲ. ಶಿಕ್ಷಣವನ್ನು ಪಡೆದಿರುವವರ ಸಂಖ್ಯೆ ಇದರಿಂದ ಕಡಿಮೆ ಇದೆ. ಅಲ್ಪಸ್ವಲ್ಪ ಅನುಕೂಲವಿರುವವರು ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಿದ್ದರೆ ಅವರಲ್ಲಿಯ ಕೆಲವರು ಶಿಕ್ಷಣ ಪಡೆದಿರುವುದರಿಂದ ನಿರುದ್ಯೋಗಿಗಳಾಗಿದ್ದಾರೆ. ಮೀಸಲಾತಿಗಾಗಿ ರಾಜ್ಯದಲ್ಲಿ ಪ್ರಬಲವಾದ ಜಾತಿಗಳವರೊಂದಿಗೆ ಸೇರಿಸುವುದರಿಂದ ಇವರು ಅವರೊಂದಿಗೆ ಸೇರಿ ಸ್ಪರ್ಧಿಸದೇ ಸರಕಾರಿ ಕೆಲಸಗಳನ್ನು ಮತ್ತು ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದರೆ ಇತ್ತೀಚಿಗೆ ಶಿಕ್ಷಣ ಪಡೆಯುವವರ ಸಂಖ್ಯೆ ಏರಿಕೆಯಾಗುತ್ತಿರುವುದು ಕಂಡುಬರುತ್ತದೆ.

ಒಟ್ಟು ರಾಜ್ಯದಲ್ಲಿ ಸುಮಾರು "೧೫ ಲಕ್ಷ ಜನಸಂಖ್ಯೆಯಷ್ಟು ಇವರು ಇದ್ದಾರೆ. (೧೪,೯೬,೦೭೮) ಕರ್ನಾಟಕ ಜಿಲ್ಲೆಯ ಒಟ್ಟು ಅಂಕಿ ಅಂಶಗಳು ಅದರಲ್ಲಿ ಅಕ್ಷರಸ್ಥರು ೩೧೪೨೩೦, ಅನಕ್ಷರಸ್ಥರು ೧೧,೪೬,೯೩೯ ಇದ್ದಾರೆ. ಈ ಅಂಕಿ ಅಂಶಗಳ ಆಧಾರದ ಮೇಲೆ ಪದವೀಧರರು ಕೇವಲ ೭,೪೯೫

ಜನ ಉನ್ನತ ಶಿಕ್ಷಣದಲ್ಲಿಯಂತು, ಇನ್ನು ಕಡಿಮೆ ಸಂಖ್ಯೆಯಲ್ಲಿ ವಿದ್ಯಾವಂತರು ಇದ್ದರೆ ರಾಜ್ಯದ ಜನಸಂಖ್ಯೆಯಲ್ಲಿ ೧೫ ಲಕ್ಷಕ್ಕಿಂತ ಹೆಚ್ಚಾಗಿ ಇವರು ಜನಸಂಖ್ಯೆ ಇದ್ದು. ಸಾಕ್ಷರತರು ಕೇವಲ ೩,೧೪,೨೩೦”[೨೬] ಜನ ಇದ್ದಾರೆ.

ಸರ್ಕಾರ ಲಂಬಾಣಿಗರ ಬಗ್ಗೆ ಹೆಚ್ಚು ಒತ್ತನ್ನು ನೀಡದೆ ಇರುವುದರಿಂದ ಹಾಗೂ ತಾಂಡಗಳು ಕಂದಾಯ ಗ್ರಾಮವಾಗಿರದೆ ದ್ವೀಪಗಳಾಗಿವೆ. ಈ ದ್ವೀಪಕ್ಕೆ ಯಾವುದೇ ಸಂಪರ್ಕ ಸಾಧನವಾಗಲಿ ಇಲ್ಲ. ಜೀವಂತಿಕೆಯ ಲಕ್ಷಣವಾಗಲಿ ಇರುವುದನ್ನು ಸರಕಾರ ಮರೆತಂತೆ ಕಾಣುತ್ತದೆ. ಕೇವಲ ಓಟು ಹಾಕುವ ಬ್ಯಾಂಕುಗಳಾಗಿ ತಾಂಡಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲಾಗುತ್ತಿದೆ ಹೊರೆತು, ಹಸಿವಿನಿಂದ ನರಳುವ ಲಂಬಾಣಿಗರಂತೆ, ಇರುವ ಹಲವು ಕೆಳಸಮುದಾಯ, ಬುಡಕಟ್ಟುಗಳನ್ನು ನಿರ್ಲಕ್ಷಿಸಿದ್ದಾರೆ.

## ೬. ಮುಖ್ಯವಾಹಿನಿಗೆ ಸೇರಲ್ಪಟ್ಟವರ ಸಾಮಾಜಿಕ ಸ್ಥಾನಮಾನಗಳು

ಆಧುನಿಕತೆಗೆ ಒಳಗಾಗಿರುವ ಉನ್ನತ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನ, ಸೌಲಭ್ಯವನ್ನು ಹೊಂದಿದವರು ಭೌದ್ಧಿಕ ಸ್ತರಗಳಲ್ಲಿ ಗುರುತಿಸಿಕೊಂಡಿರುವವರು, ಇವರೆಲ್ಲರೂ ಮುಖ್ಯವಾಹಿನಿಗೆ ಸೇರಲ್ಪಟ್ಟಿರುವವರು, ಆಧುನಿಕ ಸೌಲಭ್ಯಗಳನ್ನು, ಶಿಕ್ಷಣ, ಉದ್ಯೋಗ, ಅಂತಸ್ತು, ಗೌರವ, ಅಧಿಕಾರ, ಆರ್ಥಿಕ ಭದ್ರತೆಯನ್ನು ಹೊಂದಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಭೌದ್ಧಿಕವಾಗಿ ಮುಂದುವರೆದಿರುತ್ತಾರೆ.

'ಮುಖ್ಯವಾಹಿನಿ' ಎಂಬ ಪದದ ಸರಳ ಅರ್ಥವನ್ನು ನಾನಿಲ್ಲಿ ಉಪಯೋಗಿಸುತ್ತಿದ್ದೇನೆ. ಕೆಳಜಾತಿ, ವರ್ಗಗಳಿಂದ ಬಂದು ಶಿಕ್ಷಣ ಪಡೆದು, ಸರಕಾರಿ ನೌಕರಿ ಪಡೆದು ಇಲ್ಲವೇ ಯಾವುದೋ ವ್ಯಾಪಾರಿ ಕ್ಷೇತ್ರದಲ್ಲಿ ಆರ್ಥಿಕವಾಗಿ ಮುಂದುವರೆದು, ಮಧ್ಯಮ ವರ್ಗದ ಹಂತಕ್ಕೆ ತಲುಪಿದ ವ್ಯಕ್ತಿಗಳನ್ನು 'ಮುಖ್ಯವಾಹಿನಿ'ಗೆ ಸೇರಿದವರೆಂದು ಸರಳವಾಗಿ ಅರ್ಥೈಸುತ್ತಿದ್ದೇನೆ. ಈ ವ್ಯಕ್ತಿಗಳು ತಮ್ಮ ಸಮುದಾಯವನ್ನು ಯಾವ ಬಗೆಯಲ್ಲಿ ತಲುಪುತ್ತಾರೆ? ತಮ್ಮ ಮಾಜಿ ನೆಲೆಗಳ ಜೊತೆ ಈ ಮಧ್ಯಮ ವರ್ಗ ಯಾವ ರೀತಿಯಲ್ಲಿ ಸ್ಪಂದಿಸುತ್ತದೆ? ಎನ್ನುವುದು ಇಲ್ಲಿನ ಮುಖ್ಯ ಪ್ರಶ್ನೆಗಳಾಗಿವೆ.

ಸಾಮಾನ್ಯವಾಗಿ ತಾಂಡದಲ್ಲಿ ಮುಖ್ಯವಾಹಿನಿಗೆ ಸೇರಿದವರು ಉದ್ಯೋಗವನ್ನು ಶಿಕ್ಷಣವನ್ನು ಪಡೆದವರು ಆರ್ಥಿಕವಾಗಿ ಬಲಶಾಲಿಗಳಾಗಿರುತ್ತಾರೆ. ಆರ್ಥಿಕ ಅಂಶಗಳು ಉತ್ತಮವಾಗಿರುವ ಕಾರಣ ಸಾಮಾಜಿಕವಾಗಿ ಇವರಿಗೆ ಸ್ಥಾನಮಾನಗಳು ಲಭಿಸುತ್ತವೆ. ಹೆಚ್ಚು ಜಮೀನನ್ನು ಹೊಂದಿರುವ ಲಂಬಾಣಿಗರು ಕೂಡ ಮುಖ್ಯವಾಹಿನಿಗೆ ಸೇರಿ ತಮ್ಮ ಆಚಾರ-ವಿಚಾರ, ಜೀವನ ಶೈಲಿಯಲ್ಲಿ ಬದಲಾವಣೆಯನ್ನು ಹೊಂದಿದವರಾಗಿದ್ದಾರೆ. ಹತ್ತಾರು ಎಕರೆ ಜಮೀನು ಹೊಂದಿದ ವಾಣಿಜ್ಯ ವ್ಯಾಪಾರಸ್ಥರು ಮುಖ್ಯವಾಹಿನಿಗೆ ಸೇರಿದ್ದಾರೆ.

ಮುಖ್ಯವಾಹಿನಿಗೆ ಸೇರಿದವರು ಸಮುದಾಯದಲ್ಲಿ ಸ್ಥಾನಮಾನ ಆರ್ಥಿಕ ಭದ್ರತೆ ಹೊಂದಿದವರು. ತಾಂಡದ ಬಡವರ, ಹಳ್ಳಿಗರ ಜೊತೆ ಒಂದು ರೀತಿಯಲ್ಲಿ ಔಪಚಾರಿಕವಾದ ಸಂಬಂಧವನ್ನು ಹೊಂದಿದ್ದಾರೆ.

ತಾಂಡದಲ್ಲಿ ಬಡವರ ಜೊತೆ, ಇತರ ಸಾಮಾನ್ಯ ಲಂಬಾಣಿಗರ ಜೊತೆ, ಕೂತು ಏಳುವ ಸಂಬಂಧ ಹೊಂದಿ ಔಪಚಾರಿಕವಾಗಿ ತಾಂಡಕ್ಕೆ ಬರುವರು. ಇಲ್ಲಿ ತಮಗೂ ಬಡವರಿಗೂ ಮಾಲಿಕ, ಕಾರ್ಮಿಕ ಸಂಬಂಧದಂತೆ ಇರುವಂತೆ ಇದ್ದು. ಇವರು ಇವರ ಜೊತೆ ಹೆಚ್ಚು ಇರಲು ಇಷ್ಟಪಡದೆ ತಮ್ಮಂತೆಯೇ ಉತ್ತಮ ಮಟ್ಟದಲ್ಲಿರುವವರ ಜೊತೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆಯೇ ಹೊರೆತು ಈ ಬಡವರ ಜೊತೆ ಹಾಗೂ ಇತರ ಹಳ್ಳಿಗರ ಜೊತೆ ಅಲ್ಲ. ತಾಂಡದ ಸಾಮಾನ್ಯ ಜನರ ದೃಷ್ಟಿಯಿಂದ ಹಳ್ಳಿಗರ ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯವಾಹಿನಿಗೆ ಸೇರಿದವರು ಅಂತಹ ಮಹತ್ವವಾದ ಪಾತ್ರವನ್ನೇನು ವಹಿಸುವುದಿಲ್ಲ.

ತಮ್ಮ ಆರ್ಥಿಕ ಸ್ಥಿತಿಗತಿಗಳಿಂದಾಗಿ ಮಧ್ಯಮವರ್ಗಕ್ಕೆ ಸೇರಿದ ಈ ಜನ, ಹಳ್ಳಿಗಳನ್ನು ಬಂಡವಾಳ ಹೂಡುವ ಕನ್ಯೆ ನೆಲೆಗಳೆಂದೇ ಭಾವಿಸಿದ್ದಾರೆ. ಹಳ್ಳಿಗಳಲ್ಲಿ ಜಮೀನುಗಳನ್ನು ಕೊಂಡು, ಇಲ್ಲವೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದೇವಾಲಯಗಳನ್ನು ಕಟ್ಟಿಸುವುದೇ ಗ್ರಾಮಗಳ ಅಭಿವೃದ್ಧಿ ಎಂದು ಇವರು ಭಾವಿಸಿದಂತಿದೆ. ನಾನು ಕ್ಷೇತ್ರಕಾರ್ಯ ಮಾಡಿದ ತಾಂಡವೊಂದರಲ್ಲಿ ೨೦ ಲಕ್ಷ ರೂ.ಗಳನ್ನು ಖರ್ಚು ಮಾಡಿ ದೇವಾಲಯವೊಂದನ್ನು ಈ ಸಮುದಾಯದ ಗಣ್ಯರು ಕಟ್ಟಿಸಿದ್ದಾರೆ. ದೇವಾಲಯ ಕಟ್ಟುವುದೇ ಆ ತಾಂಡಾದ ಜನರ ಉದ್ಧಾರಕ್ಕಾಗಿ ಎಂದು ಅವರು ಭಾವಿಸಿದಂತಿದೆ. ಇದರ ಹೊರತಾಗಿ ತಾಂಡಾಂಗಳ ರಚನಾತ್ಮಕ ಅಭಿವೃದ್ಧಿಗೆ ಇವರ ಕೊಡುಗೆ ಅತ್ಯಲ್ಪ.

ಆದರೆ ತಾಂಡದ ನ್ಯಾಯ ಪಂಚಾಯ್ತಿಯ ನಾಯಕ, ಕಾರಭಾರಿ, ಬುದ್ಧಿವಂತರು, ಚಿಕ್ಕಬಾಸೂರಿನಲ್ಲಿ ತಾಂಡದ ಅಭಿವೃದ್ಧಿಗೋಸ್ಕರ ಸಾರಾಯಿಯನ್ನು ಹರಾಜು ಹಾಕಲಾಗುತ್ತದೆ. ಗುತ್ತಿಗೆಯನ್ನು ಪಡೆಯುವವ "ದೇವಸ್ಥಾನ ಮಟ್ಟೋ" ಹೆಸರಿಗೆ ೪೦-೪೫ ಸಾವಿರ ಅಥವಾ ಇದಕ್ಕಿಂತ ಹೆಚ್ಚಿನ ಹಣವನ್ನು ಕಟ್ಟಬೇಕು. ಈ ಹಣವನ್ನು ತಾಂಡದ ಅಭಿವೃದ್ಧಿ ಕಾರ್ಯಕ್ಕೆ ದೇವಸ್ಥಾನ ಹಬ್ಬ ಹರಿದಿನಗಳಿಗೆ ವಿನಿಯೋಗಿಸುವುದರ ಜೊತೆ ಸರಕಾರವು ಪ್ರಾಯೋಜಿಸಿದ ಸ್ವಚ್ಛಗ್ರಾಮ ಅಭಿವೃದ್ಧಿ ಯೋಜನೆಗೆ ೨ ಲಕ್ಷ ಹಣವನ್ನು ನೀಡಲಾಗಿದೆ. ಅಂದರೆ ಕಟ್ಟಿದರೆ (ಬ್ಯಾಂಕಿನಲ್ಲಿ) ಹತ್ತು ಲಕ್ಷ ರೂ ಹಣವನ್ನು ತಾಂಡಕ್ಕೆ ನೀಡಲಾಗುತ್ತದೆ ಎಂದು ಆಗ ಈ ಸಾರಾಯಿ ಗುತ್ತಿಗೆ 'ಕಪ್ಪು' ಹಣವನ್ನು ಸರಕಾರಕ್ಕೆ ಕಟ್ಟಿ ತಾಂಡದಲ್ಲಿ ಬೀದಿದೀಪ, ಕುಡಿಯುವ ನೀರಿಗಾಗಿ ನಲ್ಲಿ, ರಸ್ತೆ ಡಾಂಬರೀಕರಣ ಮಾಡಲಾಗಿದೆ. ತಾಂಡದ ಅಭಿವೃದ್ಧಿಗೆ ತಾಂಡದವರೆ ಪ್ರಯತ್ನಿಸುತ್ತಿದ್ದಾರೆ ಹೊರತು ಮುಖ್ಯವಾಹಿನಿಯವರಲ್ಲ.

ತಾಂಡದಲ್ಲಿ ಮಧ್ಯಪಾನದ ಸಮಸ್ಯೆ ಹೆಚ್ಚಾದಾಗ ಮಧ್ಯಪಾನ ಬಿಡಿಸುವ ಪ್ರಯತ್ನವನ್ನು ಒಬ್ಬ ಲಂಬಾಣಿ ಇಂಜಿನಿಯರ್ ಪ್ರಯತ್ನ ಪಟ್ಟು, ಹಲವಾರು ಜನರನ್ನು ಮಧ್ಯಪಾನದಿಂದ ಮುಕ್ತಗೊಳಿಸುವ ಪ್ರಯತ್ನಪಟ್ಟರು ವಾರದ ಒಂದು ದಿನ ಚರ್ಚೆಗೆ ಕರೆದುಕೊಂಡು ಅಲ್ಲಿ ಮಧ್ಯಪಾನವನ್ನು ಒಂದು ಪ್ರವಚನದ ಮುಖಾಂತರ ಬಿಡಿಸಲು ಪ್ರಯತ್ನಿಸಲಾಯಿತು. ತಾಂಡದ ಹಲವಾರು ಜನ ಮಧ್ಯಪಾನವನ್ನು ಬಿಟ್ಟರು.

ಮುಖ್ಯವಾಹಿನಿಗೆ ಸೇರಿದವರು ತಮ್ಮ ಮೂಲ ಬೇರುಗಳನ್ನು ಗುರುತಿಸುವ ಪ್ರಯತ್ನ ಮಾಡದೆ, ತಾಂಡದಿಂದ ಹೊರಹೋದ ಈ ವ್ಯಕ್ತಿಗಳು ಭಾಷೆಯನ್ನು ಮೊದಲು ಬಿಡಲು ಪ್ರಯತ್ನಿಸಿ ಸ್ಥಾನೀಯವಾಗಿ

ಯಾವ ಭಾಷೆ ಮಾತನಾಡುವರೋ ಅದೇ ಭಾಷೆಯನ್ನೇ ಆಡುತ್ತಾರೆ. ಉಡುಗೆ ತೊಡುಗೆ ಆಭರಣದ ಮುಖಾಂತರ ತಾವು ಲಂಬಾಣಿ ಸಮುದಾಯದವರು ಎಂದು ಗುರುತಿಸುತ್ತಾರೆ ಎಂದು ಹಾಗೂ ಗೋರಬೋಲಿ ಭಾಷೆ ಮಾತನಾಡುವುದರಿಂದ ತಾವೂ ಈ ಸಮುದಾಯದವರೆಂದು ಗೊತ್ತಾಗದ ಹಾಗೇ ನಡೆದುಕೊಳ್ಳುತ್ತಾರೆ. ತಾವು ಲಂಬಾಣಿ ಸಮುದಾಯದವರೆಂದು ಗೊತ್ತಾಗುವುದು ಅಪಮಾನವೆಂದು ತಾವೂ ಆದರ್ಶ ಮಾದರಿಗಳು ಎಂದು ತಾಂಡದ ಸಾಮಾನ್ಯ ಜನರ ಜೊತೆ ಬೇರೆಯದೆ ಪ್ರತ್ಯೇಕತೆಯನ್ನು ಕಾಪಾಡುವುದು ಇಂದು ತಾಂಡದಲ್ಲಿನ ಸಾಮಾನ್ಯ ವಿಚಾರಗಳಾಗಿವೆ. (ಈ ರೀತಿಯಲ್ಲಿ ಇರದೆ ಇರುವವರು ಕೂಡ ಕ್ಷೇತ್ರಕಾರ್ಯದಲ್ಲಿ ಕಂಡು ಬಂದು ತಾವು ಲಂಬಾಣಿಗಳೆಂದು ಹೇಳಿಕೊಳ್ಳುವುದು ಗೌರವದ ವಿಚಾರವೆಂದು ಹೇಳುವವರು ಇದ್ದಾರೆ) ಆದರೆ ಬಹುಪಾಲು ಜನ ಮುಖ್ಯವಾಹಿನಿಗೆ ಸೇರಿದ ಸಂದರ್ಭದಲ್ಲಿ ತಮ್ಮ ಮಾಜಿ ಬೇರುಗಳಿಂದ ಬಿಡುಗಡೆ ಹೊಂದಲು ಪ್ರಯತ್ನಿಸಿ ನಗರಗಳಲ್ಲಿ ನೆಲೆನಿಲ್ಲುತ್ತಾ ಬರುತ್ತಿದ್ದಾರೆ. ಸಮಾಜವು ಕೂಡ ಇವರನ್ನು ಇನ್ನು ಒಪ್ಪಿಕೊಳ್ಳದೆ ಕೆಳ ಜಾತಿಗಳಿಂದ ಬಂದವರೆಂದೇ ಈಗಲೂ ಗುರುತಿಸುತ್ತಾರೆ.

ಉದ್ಯೋಗ ಹೊಂದಿದವರಲ್ಲಿ ದೊಡ್ಡ ಅಧಿಕಾರಿಗಳಾಗಿರುವವರಂತು ತಾವು ಲಂಬಾಣಿಗರೆಂಬ ಚಹರೆಯನ್ನು ಹೊಂದದೆ ಇರಲು ಹೆಚ್ಚು ಇಷ್ಟ ಪಡುವುದರ ಜೊತೆ ತಮ್ಮ ಚಹರೆ ತಿಳಿಯದ ರೀತಿಯಲ್ಲಿಯೇ ಸಮಾಜದಲ್ಲಿ ಇರುವರು. ಸಮಾಜದಲ್ಲಿ ಮುಖ್ಯವಾಹಿನಿಗೆ ಏನು ಸೇರಿದ್ದಾರೋ ಬೇರೆ ಮೇಲ್ಜಾತಿಯ ಜನ ಅವರು ಇವರನ್ನು ಒಪ್ಪಿಕೊಳ್ಳದೆ ಇರುವ ಭಯದಿಂದ ತಾವು ಈ ರೀತಿ ಮಾಡುವುದು ಸಹಜ ಎನ್ನುವ ಭಾವನೆಯನ್ನು ವ್ಯಕ್ತ ಪಡಿಸಿದರು. ತಮ್ಮ ಲಂಬಾಣಿ ಸಮುದಾಯದ ಚಹರೆಗಳನ್ನು ಕಳಚಿಕೊಳ್ಳುವುದೇ ಮುಖ್ಯವಾಹಿನಿಗೆ ಸೇರುವ ಪ್ರಾಥಮಿಕ ಹಂತ ಎಂದು ಇವರು ಭಾವಿಸಿದ್ದಾರೆ.

## ೭. ಮುಖ್ಯವಾಹಿನಿಗೆ ಸೇರದೆ ಇರುವವರ ಸಾಮಾಜಿಕ ಸ್ಥಾನಮಾನಗಳು

ಎಲ್ಲಿಯೇ ಇರಲಿ, ಜಾತಿಗಳು ಅಸಮಾನ ನೆಲೆಗಳನ್ನು ಹೊಂದಿರುತ್ತವೆ. ಹಾಗೆ ನೋಡಿದರೆ ಅಸಮಾನತೆಯೇ ಜಾತಿ ವ್ಯವಸ್ಥೆಯ ಒಂದು ಮೂಲತತ್ವ. ಹಾಗೆಯೇ ಜಾತಿಗಳ ಒಳಗಡೆ ಆಂತರಿಕ ಅಸಮಾನತೆಗಳು ಕೂಡ ಇರುತ್ತವೆ. ತಾಂಡಗಳಲ್ಲಿ ಶ್ರೀಮಂತ ವರ್ಗವೆನ್ನುವುದು ಯಾವುದು ಇಲ್ಲ. ಮಧ್ಯಮ ವರ್ಗದವರೇ ಶ್ರೀಮಂತ ವರ್ಗವನ್ನು ಇಲ್ಲಿ ಪ್ರತಿನಿಧಿಸುತ್ತಾರೆ. ದರ್ಪ, ಅಧಿಕಾರ, ಶೋಷಣೆಯನ್ನು ಇವರೇ ಮಾಡುವರು. ನೀರಾವರಿ ಸೌಲಭ್ಯ ಹೊಂದಿದ ಜಮೀನುದಾರರು, ಉದ್ಯೋಗಸ್ಥರು, ವ್ಯಾಪಾರಿಗಳು, ಐದಾರು ಎಕರೆ ಜಮೀನು ಹೊಂದಿದವರೇ ತಾಂಡದಲ್ಲಿ ಮಧ್ಯಮ ವರ್ಗಕ್ಕೆ ಸೇರುತ್ತಾರೆ. ಇವರು ಆರ್ಥಿಕವಾಗಿ ಸ್ವಲ್ಪ ಮುಂದುವರೆದು ಶಿಕ್ಷಣವನ್ನು, ಆಧುನಿಕ ಸೌಲಭ್ಯವನ್ನು ಟ್ರಾಕ್ಟರ್, ಮನೆ, ಐಷಾರಾಮಿ ವಸ್ತುಗಳನ್ನು ಹೊಂದಿ, ಗೇಣಿದಾರ, ಕೂಲಿ ಕಾರ್ಮಿಕರಿಗೆ ಹೋಲಿಸಿದರೆ ಇವರು ಸಾಮಾಜಿಕವಾಗಿ ಮೇಲಸ್ಥರದಲ್ಲಿದ್ದಾರೆ. ಆದರೆ ಮುಖ್ಯವಾಹಿನಿಗೆ ಸೇರದ ಇವರು ಸಾಮಾಜಿಕ ಸ್ಥಾನಮಾನ ಹೊಂದದೆ. ಬಡತನ, ಅಸಮಾನತೆ, ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರು ದಿನನಿತ್ಯ

ಜೀವನದ ಜೊತೆ ಸಂಘರ್ಷಿಸುತ್ತಾರೆ ಕೂಲಿ ಮಾಡಿದರೆ ಸಂಸಾರ ಸಾಗುವುದು, ಒಂದೆರಡು ಎಕರೆ ಒಣ ಭೂಮಿಯಲ್ಲಿ ಬೆಳೆಬೆಳೆದರೂ ಊಟಕ್ಕೆ ಸಾಕಾಗುವುದಿಲ್ಲ. ಆಧುನಿಕತೆ, ಶಿಕ್ಷಣದಿಂದ ವಂಚಿತರಾಗಿ, ಕಷ್ಟವನ್ನು, ಬಡತನವನ್ನು ಆರ್ಥಿಕ ಹಿನ್ನಡೆಯನ್ನು ಹೊಂದಿ ಕುಟುಂಬದ ಪ್ರತಿಯೊಬ್ಬರು ಅಶಾಂತಿಯಿಂದ ಇದ್ದು ಯಾವಾಗಲು ತಮ್ಮ ಈ ಪರಿಸ್ಥಿತಿಯ ಅಸಾಯಕತೆಯ ಬಗ್ಗೆ ಹಣೆಬರಹವೆಂದು ಕೊರಗುತ್ತಿದ್ದಾರೆ. ಆಧುನಿಕ ಸೌಲಭ್ಯಗಳಾವುವು ಇವರ ಬದುಕಿನಲ್ಲಿ ಇರದೆ ತಮ್ಮದೆ ಆದ ಒಂದು ಲೋಕದಲ್ಲಿ ಇರುವರು. ಇಲ್ಲಿ ಬಡತನ, ಕಷ್ಟ, ನೋವು, ಬವಣೆ, ನಿತ್ಯ ಕೂಲಿ ಮಾಡಿ ಜೀವಿಸುವ ಹಣವಿರದೆ, ಋಣಭಾರದಲ್ಲಿ, ನಿತ್ಯಜೀವನ ಮಾಡಲು ಸಂಘರ್ಷಿಸಬೇಕಾದ ಅನಿವಾರ್ಯತೆ ಇದೆ.

ಆಧುನಿಕ ಸೌಲಭ್ಯವೆನ್ನಬಹುದಾದ ಸರಕಾರದ ಅಭಿವೃದ್ಧಿ ಯೋಜನೆಗಳ ಫಲಸ್ವರೂಪವಾಗಿ ಬರುವ ವಸತಿ, ಜಮೀನಿನ, ಹಣದ ಸಹಾಯವಿರಬಹುದು ಇವಾವು ಇವರಲ್ಲಿ ತಲುಪಿಲ್ಲ. ಆದರೆ ಈ ಹಿನ್ನೆಲೆಯಲ್ಲಿರುವ ಬಡತನ, ಆರ್ಥಿಕ ಸಂಕಷ್ಟದಲ್ಲಿರುವ ಕೂಲಿಮಾಡಿ ತಿನ್ನುವ ಸಮುದಾಯ ಸಾಮಾನ್ಯವಾಗಿ ಸಮಾಜದಲ್ಲಿ ಕೆಳ ಅಂತಸ್ತನ್ನು ಹೊಂದಿ ಅಧಿಕಾರ, ಆಸ್ತಿ, ಉದ್ಯೋಗ, ಶಿಕ್ಷಣವೆನ್ನುವುದು ಇವರಿಗೆ ನಿಲುಕದ ವಸ್ತುಗಳಾಗಿವೆ. ಈ ರೀತಿಯ ಸಮುದಾಯವಿದೆ ಎನ್ನುವ ಅರಿವು ಸರಕಾರಕ್ಕಾಗಲಿ, ರಾಜಕೀಯ ಗಣ್ಯರಿಗಾಗಲಿ, ಬಂಡವಾಳಶಾಹಿಗಳಿಗಾಗಲಿ ಇಲ್ಲ. ಮುಖ್ಯವಾಹಿನಿಗೆ ಸೇರದೆ ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಿನ್ನಡೆಯನ್ನು ಹೊಂದಿದ ಕಾರಣ ಬಡತನ, ಆರ್ಥಿಕ ಅಭದ್ರತೆ, ಮುಖ್ಯವಾಹಿನಿಗೆ ಸೇರಿದ ಜನರ ಮುಂದೆ ಇವರು ಯಾವುದೇ ರೀತಿಯಾದ ಗೌರವವನ್ನು, ಸ್ಥಾನಮಾನವನ್ನು, ಹೊಂದಿಲ್ಲ. ದಿನವೂ ಕೂಲಿ ಮಾಡಿದರೆ ಇವರ ಸಂಸಾರ ನಡೆಯುವುದು. ಇಲ್ಲದಿದ್ದರೆ ಉಪವಾಸವೇ ಗತಿ. ಈ ರೀತಿ ಇರುವ ಎಷ್ಟೋ ಕುಟುಂಬ ತಾಂಡದಲ್ಲಿ ಈಗಲೂ ಇವೆ.

ಆಧುನಿಕರಣದ ಸಂದರ್ಭದಲ್ಲಿ ಜಾಗತೀಕರಣಕ್ಕೆ ಶಿಕ್ಷಣ, ಕೌಶಲ್ಯತೆ, ತರಬೇತಿ ಮುಖ್ಯ. ಯಾರು ಉನ್ನತ ಶಿಕ್ಷಣವನ್ನು ಅದರಲ್ಲೂ ತಾಂತ್ರಿಕ ಶಿಕ್ಷಣವನ್ನು ಹೊಂದಿರುವ ತರಬೇತಿದಾರರು ಇರುವರು. ಅವರಿಗೆ ಸ್ಥಾನಮಾನ, ಆರ್ಥಿಕ ಬಲ ಉಂಟು. ಈ ಪದವಿಯನ್ನು ಪಡೆಯಲು ಲಕ್ಷಾಂತರ ರೂಪಾಯಿ, ಶಿಫಾರಸ್ಸು ಎರಡು ಮುಖ್ಯವಾಗಿ ಬೇಕು ಇದನ್ನು ಈ ಸಾಮಾನ್ಯ ಜನ ಪಡೆಯಲಾರರು.

ಮುಖ್ಯವಾಹಿನಿಗೆ ತಾವು ಕೂಡ ಸೇರಬೇಕು ಎಂಬ ಪ್ರಯತ್ನವನ್ನು ತಾಂಡಗಳಲ್ಲಿ ಸಾಮಾನ್ಯವಾಗಿ ಎಲ್ಲರು ಬಯಸುತ್ತಿದ್ದಾರೆ. ಇವರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಬೇಕು. ಹಾಗೂ ಇವರು ಉನ್ನತ ಹುದ್ದೆಗೆ ಹೋಗಬೇಕು ಎಂಬ ಇಚ್ಚೆಯನ್ನು ಹೊಂದಿದ್ದಾರೆ. ತಮ್ಮ ತಾಂಡವು ಕಂದಾಯ ಗ್ರಾಮವಾಗಿ ಆಧುನಿಕ ಸೌಲಭ್ಯ, ರಸ್ತೆ, ಸಾರಿಗೆ ಸಂಪರ್ಕ ಶಿಕ್ಷಣ ಸಂಸ್ಥೆ, ವಾಣಿಜ್ಯ ಮಳಿಗೆ, ಬ್ಯಾಂಕು, ಅಂಚೆಕಛೇರಿಗಳು ದೊರೆಯಬೇಕು ಎಂಬ ಹೋರಾಟವನ್ನು ಮಾಡುತ್ತಿರುವ ಇವರ ಪ್ರಯತ್ನದ ಫಲವಾಗಿಯೇ ಇಂದು ತಾಂಡಗಳು ಕಂದಾಯ ಗ್ರಾಮಗಳಾಗಿವೆ. ಯಾವ ತಾಂಡವಾಸಿಗಳಲ್ಲಿ ಹೊಸ ತಲೆಮಾರಿನವರು ತಾವು ಇರುವ ಸ್ಥಿತಿಯಿಂದ ಮೇಲೆ ಬರಲು ತಾಂಡದಿಂದ ಹೊರಗೆ ಹೋಗಿ ಹೊಸಹೊಸ ಅವಕಾಶಗಳನ್ನ, ಆಧುನಿಕ ಜೀವನದ ಶೈಲಿಯನ್ನ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರ್ಥಿಕವಾಗಿ ಮುಂದುವರೆಯಬೇಕು ಎಂಬ ಇಚ್ಛೆಯನ್ನು ಹಲವಾರು ತಾಂಡವಾಸಿಗಳು ವ್ಯಕ್ತಪಡಿಸಿದರು.

ಕೂಲಿ ಮಾಡುವವ ತನ್ನ ವೃತಿಯನ್ನೆ ಮುಂದುವರೆಸುವ ಆಸೆಯನ್ನು ಬಿಟ್ಟು ದುಡಿದು ಜಮೀನನ್ನು ಮನೆಯನ್ನು, ಮಕ್ಕಳಿಗೂ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಪಡೆಯುತ್ತಿದ್ದಾರೆ. ತಾವು ಆರ್ಥಿಕವಾಗಿ ಸಬಲರಾಗಿ ಸಾಮಾಜಿಕ ಸ್ಥಾನಮಾನವನ್ನು ಪಡೆಯಬೇಕೆಂಬ ಇಚ್ಛೆಯನ್ನು ಹೆಚ್ಚು ಜನ ವ್ಯಕ್ತಪಡಿಸಿದರು.

**೮. ಸಮುದಾಯದ ಅಭಿವೃದ್ಧಿಯ ತವಕಗಳು ಮತ್ತು ಸರಕಾರಿ ಸೌಲಭ್ಯಗಳು**

ಒಬ್ಬ ವ್ಯಕ್ತಿ ಅಥವಾ ಸಮುದಾಯವು ತನ್ನ ತಾನೇ ಮುಂದುವರೆದು ಅಥವಾ ಮುಂದುವರೆಯದೇ ಇರಲು ತನ್ನದೇ ಆದ ಕಾರಣಗಳನ್ನು ಹೊಂದಿರುತ್ತವೆ. ಆರ್ಥಿಕವಾಗಿ ಒಬ್ಬ ವ್ಯಕ್ತಿ ಅಥವಾ ಕುಟುಂಬ ಮುಂದುವರೆದಿದೆ ಎಂದರೆ ಅದಕ್ಕೆ ಸರ್ಕಾರಿ ಸವಲತ್ತುಗಳು ಒಂದು ಹಂತದಲ್ಲಿ ಮಾತ್ರ ಕಾರಣವಾಗಿವೆ. ವಿವಿಧ ಪಂಚವಾರ್ಷಿಕ ಯೋಜನೆಯ ಮೂಲಕ ಸಾಮಾಜಿಕ ಪರಿವರ್ತನೆಯ ಸಲುವಾಗಿ ಭಾರತ ಸರಕಾರವು ಪ್ರಯತ್ನಿಸುತ್ತಲಿದೆ. ಸಮಾಜದ ದುರ್ಬಲ ವರ್ಗದ ಜನರ ತೊಂದರೆಗೊಳಗಾದವರ ಹಿಂದುಳಿದ ಪ್ರದೇಶಗಳ ಕಲ್ಯಾಣಕ್ಕಾಗಿ ಪರಿಶ್ರಮಿಸುತ್ತಿದೆ. ಸರಕಾರವು ದುರ್ಬಲ ವರ್ಗಗಳನ್ನು ಮೇಲೆತ್ತಲು ಮೀಸಲಾತಿಯನ್ನು ಕಟ್ಟಿಸಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿಯೇ ರೂಪಿಸಿರುವ ಮೀಸಲಾತಿಯು ಈ ಸಮುದಾಯಗಳಲ್ಲಿ ಹಲವು ರೀತಿಯ ಬದಲಾವಣೆಗೆ ಕಾರಣವಾಗಿದೆ. ಆದರೆ ಮೀಸಲಾತಿ ತಲುಪದ ಕಡೆ, ಕೆಲವು ಸಮುದಾಯಗಳು ತಮ್ಮ ಸ್ವಪ್ರಯತ್ನದಿಂದಲೂ ಪ್ರಗತಿಯನ್ನು ಸಾಧಿಸಿವೆ. ಮೀಸಲಾತಿಯಿಂದಾಗಿ ನೌಕರಿ ಪಡೆದ ವ್ಯಕ್ತಿಗಳು ಆರ್ಥಿಕವಾಗಿ ಸಬಲರಾಗಿ, ತಮ್ಮ ಮಕ್ಕಳನ್ನು, ಸುತ್ತಲು ಪರಿಸರವನ್ನು ಬದಲಾವಣೆಯ ಕಡೆಗೆ ಕರೆದುಕೊಂಡು ಹೋಗಿದ್ದಾರೆ. ಮೀಸಲಾತಿ ಕೆಲವು ಕಡೆ ದುರ್ಬಲ ವರ್ಗಗಳ ಏಳ್ಗೆಗೆ ಗಮನಾರ್ಹ ಕೊಡುಗೆ ನೀಡಿದೆ.

ನಾನು ಕ್ಷೇತ್ರಕಾರ್ಯ ಮಾಡಿದ ನಾಲ್ಕು ತಾಂಡಗಳ ಪೈಕಿ ಸೂರಗೊಂಡನಕೊಪ್ಪ ತಾಂಡದಲ್ಲಿ ಒಬ್ಬರೂ ಕೂಡ ಸರ್ಕಾರಿ ಹುದ್ದೆಯಲ್ಲಿ ಇಲ್ಲ. ಉಳಿದ ಮೂರು ತಾಂಡಗಲ್ಲಿ ಮೀಸಲಾತಿಯನ್ನು ಪಡೆದ ಕುಟುಂಬದ ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆಗಳಾಗಿವೆ. ಇವರು ಮೂಲಭೂತ ಅಗತ್ಯಗಳನ್ನು ಪಡೆದಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸುತ್ತಿದ್ದಾರೆ. ಇವುಗಳಿಂದ ಸಾಮಾಜಿಕ ಸ್ಥಾನಮಾನವು ಗೌರವ, ಅಧಿಕಾರ, ಆಸ್ತಿಯನ್ನು ಹೊಂದಿದ್ದಾರೆ. ದುಡಿದ ಹಣದಲ್ಲಿ ಆಸ್ತಿ, ಜಮೀನು, ಮನೆಯನ್ನು ಪಡೆದು ಹಾಗೂ ಉದ್ಯೋಗದಲ್ಲಿರುವವರು ತಮ್ಮ ಕುಟುಂಬಗಳಿಗೆ ಹಣವನ್ನು ಕಳಿಸುವುದರ ಮುಖಾಂತರ ಅವರ ಆರ್ಥಿಕ ಪರಿಸ್ಥಿತಿಯು ಸುಧಾರಿಸುತ್ತಾ ಬಂದಿತು. ಆದರೆ ಇದಕ್ಕೆ ವಿರುದ್ದವಾಗಿಯು ಕಂಡ ನಿತ್ಯವು ಪರಿಸ್ಥಿತಿಯು ಉಂಟು, ಸರ್ಕಾರ ಹಿಂದುಳಿದವರಿಗೆ, ಅಂಗವಿಕಲರಿಗೆ, ವೃದ್ಧರಿಗೆ, ವಿಧವೆಯರಿಗೆ, ಲೋನುಗಳನ್ನು, ಶಿಷ್ಯವೇತನವನ್ನು, ರಿಯಾಯಿತಿಗಳನ್ನು ನೀಡಿದೆ. ಆದರೆ ಈ ರೀತಿ ಶೇಕಡವಾರು ಪ್ರಮಾಣದಲ್ಲಿ ತೆಗೆದುಕೊಂಡರೆ ಜನರು ಈ ಎಲ್ಲಾ ಸರಕಾರದ ಸೌಲಭ್ಯಗಳನ್ನು ಎಲ್ಲರೂ ಪಡೆಯದೆ ಇರುವವರು ಕೂಡ ಇದ್ದಾರೆ. ಶಿಷ್ಯ ವೇತನ ಕೆಲವರಿಗೆ ದೊರೆತರೆ ಕೆಲವರಿಗೆ ದೊರೆಯುತ್ತಿಲ್ಲ, ಸರಕಾರದ ಪ್ಯಾಕೇಜ್‌ಗಳಾಗಲಿ, ಅಭಿವೃದ್ಧಿ ಯೋಜನೆಗಳಾಗಲಿ, ತಾಂಡಗಳನ್ನು ತಲುಪುತ್ತಿಲ್ಲ.

ಸರ್ಕಾರಿ ಸವಲತ್ತುಗಳನ್ನು ಪಡೆದವರು ಆರ್ಥಿಕವಾಗಿ ಮುಂದುವರೆದಿದ್ದಾರೆ. ಆದರೆ ಇವರ ಸಂಖ್ಯೆ ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ಸರಕಾರಿ ಸೌಲಭ್ಯಗಳು, ಸರ್ಕಾರದಿಂದ ಮಂಜೂರಾದ ಹಣ, ಲೋನಗಳು ಯಾವುದೇ ಇರಲಿ ಮಧ್ಯವರ್ತಿಗಳೆ ಇವುಗಳನ್ನೆಲ್ಲಾ ದೋಚಿಕೊಳ್ಳುತ್ತಿರುವುದರಿಂದ ಸರ್ಕಾರ ಇಂತಹ ಕೆಳಸಮುದಾಯಗಳಿಗೆ ನೇರವಾಗಿ ಮಧ್ಯವರ್ತಿಗಳಿಲ್ಲದೆ ನೆರವನ್ನು ದೊರಕಿಸಿಬೇಕು. ಆರ್ಥಿಕವಾಗಿ ಸ್ವಪ್ರಯತ್ನದಿಂದ ಮುಂದುವರೆದಿರುವವರು ಅಂಗಡಿಗಳನ್ನು ಇಟ್ಟುಕೊಂಡು ಕೃಷಿಯನ್ನು, ನೀರಾವರಿ, ತೋಟಗಳನ್ನು ಹೆಚ್ಚು ಭೂಹಿಡುವಳಿದಾರರು ಹೊಂದಿರುವವರು. ಆರ್ಥಿಕವಾಗಿ ಹಣವನ್ನು, ಹೊಂದಿ ಇತರರಿಗಿಂತ ಮುಂದುವರೆಯುತ್ತಿದ್ದಾರೆ. ತಾಂಡದಲ್ಲಿ ಈ ರೀತಿ ಮುಂದುವರೆಯುತ್ತಿರುವ ಏಳು, ಎಂಟು ಕುಟುಂಬಗಳು ವ್ಯಾಪಾರವನ್ನು ಮಾಡಿ, ಕೃಷಿ ಬೆಳೆಗಳನ್ನು ಮಾರಿ ಆರ್ಥಿಕ ಸುಸ್ಥಿತಿಯಲ್ಲಿದ್ದಾರೆ. ಆದರೆ ತಾಂಡದಲ್ಲಿ ಆರ್ಥಿಕವಾಗಿ ಮುಂದುವರೆದ, ವ್ಯಾಪಾರಸ್ಥ, ಉದ್ಯೋಗಸ್ಥ, ದೊಡ್ಡ ಭೂ ಹಿಡುವಳಿದಾರರು ಆರ್ಥಿಕ ಬಲವಂತರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ. ಆರ್ಥಿಕವಾಗಿ ಮುಂದುವರೆದ ಕುಟುಂಬಗಳ ಸಂಖ್ಯೆಯು ಕಡಿಮೆ ಪ್ರಮಾಣದಲ್ಲಿದೆ. ತಾಂಡದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ೫-೬ ಎಕರೆ ನೀರಾವರಿ, ಜಮೀನು ಹೊಂದಿದ, ಕೃಷಿಕರು, ಉದ್ಯೋಗಸ್ಥರು, ಆರ್ಥಿಕವಾಗಿ ಮುಂದುವರೆಯಲು ಸರ್ಕಾರಿ ಸವಲತ್ತುಗಳು ಹಾಗೂ ಸ್ವಪ್ರಯತ್ನ ಎರಡು ಬಹುಮುಖ್ಯವಾದ ಕಾರಣಗಳಾಗಿವೆ.

## ೯. ಅಧ್ಯಯನಕ್ಕೊಳಪಟ್ಟ ತಾಂಡಾಗಳ ಸಾಮಾಜಿಕ ಸ್ಥಿತಿಗತಿಗಳು

### ಕುಟುಂಬ ವ್ಯವಸ್ಥೆ

"ಕುಟುಂಬವು ಸಮಾಜದ ಪ್ರಾಥಮಿಕ ಹಾಗೂ ಮೂಲ ಘಟಕವಾಗಿದೆ. ಅಲ್ಲಿ ಎಲ್ಲಾ ಸದಸ್ಯರು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ"[೨೬] ಕುಟುಂಬವು ಸಮಾಜದ ಕೇಂದ್ರಬಿಂದು, ತಾಂಡದ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ ವ್ಯವಸ್ಥೆಗಳೆರಡು ಅಸ್ತಿತ್ವದಲ್ಲಿದ್ದು, ವಿಭಕ್ತ ಕುಟುಂಬಗಳ ಸಂಖ್ಯೆಯೇ ಅತ್ಯಧಿಕವಾಗಿದೆ. ಮದುವೆಯಾಗುವವರೆಗೆ ಮಕ್ಕಳ ಪೋಷಕರ ಜೊತೆ ಇದ್ದು ಮದುವೆಯಾದ ಒಂದೆರಡು ವರುಷದಲ್ಲಿಯೇ ಬೇರೆ ಮನೆ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಿರುವುದು ಹೆಚ್ಚಾಗಿ ಕಂಡುಬಂದಿತು. ಇಂದೂ ಕುಟುಂಬದ ಸ್ವರೂಪ ಬದಲಾಗುತ್ತಿದೆ, ಆಧುನಿಕತೆಗೆ ಒಳಪಟ್ಟ, ತಿಳುವಳಿಕೆ ಹೊಂದಿರುವ ಜನರು ಆಧುನಿಕ ಅಣುಕುಟುಂಗಳಿಗೆ ಹೆಚ್ಚಿನ ಒಲವನ್ನು ತೋರಿಸಿ ನಿಧಾನಗತಿಯಲ್ಲಿ ಕುಟುಂಬದ ಸ್ವರೂಪವು ಬದಲಾಗುತ್ತಿದೆ. ಶಿಕ್ಷಣ ಆಧುನಿಕತೆಯ ಪರಿಣಾಮ ನೈತಿಕ ಮೌಲ್ಯಗಳು ಬದಲಾಗುತ್ತಿವೆ. ಹಲವು ತಲೆಮಾರಿನ ರಕ್ತ ಸಂಬಂಧಿಗಳು ಒಟ್ಟಿಗೆ ಇಂದು ವಾಸಿಸುತ್ತಿಲ್ಲ. ಹೊಸ ತಲೆಮಾರಿನವರು ಪಡೆದು ವ್ಯಾಪಾರ, ಉದ್ಯೋಗಾವಕಾಶಗಳು ಆಕರ್ಷಣೆಯಿಂದ ನಗರದೆಡೆಗೆ ವಲಸೆ ಹೋಗುತ್ತಿದ್ದಾರೆ. ಬದಲಾಗುತ್ತಿರುವ ತಾಂಡದಲ್ಲಿ, ಕುಟುಂಬದಲ್ಲಿ ತಂದೆ ತಾಯಿ ಮಕ್ಕಳ ಸಂಬಂಧದಲ್ಲೂ ಪರಿವರ್ತನೆ ಕಂಡುಬರುತ್ತಿದೆ. ಮಕ್ಕಳ ಮೇಲಿನ ನಿಯಂತ್ರಣ ಕಡಿಮೆಗೊಳ್ಳುತ್ತಿದೆ. ಹಿರಿಯರ ಬಗ್ಗೆ ಗೌರವ ಮೊದಲಿನಷ್ಟು ಇಲ್ಲದೆ ಕಡಿಮೆಯಾಗುತ್ತಿದೆ. ಪಿತೃಪ್ರಧಾನ ಕುಟುಂಬ ಪದ್ಧತಿ ಜಾರಿಯಲ್ಲಿದೆ.

## ವಿವಾಹ

ಲಂಬಾಣಿ ಸಮುದಾಯದಲ್ಲಿ ವಿವಾಹದ ಬಗೆಗೆ ಪವಿತ್ರವಾದ ಭಾವನೆ ಇದ್ದು ಸಗೋತ್ರ ಮದುವೆ ನಿಷಿದ್ದ. ಭುಕ್ಯಾ ಮತ್ತು ಜಾತ ಗೋತ್ರಗಳ ನಡುವೆ ವಿವಾಹ ಸಂಬಂಧಗಳು ನಡೆಯುತ್ತವೆ. ಜಾತ ಗೋತ್ರದವರಾಗಲಿ ಭುಕ್ಯಾ ಗೋತ್ರದವರಾಗಲಿ ತಮ್ಮ ಒಳಗೋತ್ರಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದಿಲ್ಲ. ಒಂದೇ ಗೋತ್ರಕ್ಕೆ ಸೇರಿದವರು ಪರಸ್ಪರ ಸಹೋದರ ಸಂಬಂಧಿಗಳೆಂದು ಭಾವಿಸುತ್ತಾರೆ. "ಹಿಂದೂ ಸಮಾಜದ ಇತರ ಜಾತಿಗಳಲ್ಲಿ ಇದಕ್ಕೆ ವ್ಯತಿರಿಕ್ತ ಆಚರಣೆಯ ಗಮನಾರ್ಹ ವ್ಯತ್ಯಾಸವೊಂದನ್ನು ಇಲ್ಲಿ ಕಾಣುತ್ತೇವೆ. ಸಾಮಾಜಿಕ ಪ್ರತಿಷ್ಠೆ, ತಾವು ಗಂಡಿನ ಕಡೆಯವರೆಂಬ ಅಹಂಭಾವ, ಸ್ಥಾನಮಾನಗಳ ಪೂರ್ವಾಗ್ರಹ, ವರದಕ್ಷಿಣೆ ಇತ್ಯಾದಿಗಳ ಚೌಕಾಸಿಯ ಕಾರಣಕ್ಕಾಗಿ ಹೆಣ್ಣಿನ ಕಡೆಯವರೇ ಮೊದಲು ಬೇಡಿಕೆ ಕಳುಹಿಸಲಿ ಎಂಬ ಇತರ ಹಿಂದೂ ಸಮಾಜಗಳ ಈಚಿನ ರೂಢಿ ಇವರಲ್ಲಿಲ್ಲ"[೨೮] The offer of Marrige Comes from the boys father. Who has to pay to the girls father a sum varying from Rs.15 to 150 and some bullockes[೨೯] ಹಿಂದೆ ವಧುದಕ್ಷಣೆಗೆ ನೀಡಿದ ಹೊರೆತು ಯಾವ ಮದುವೆಗಳು ನಡೆಯುತ್ತಿರಲಿಲ್ಲ. ತಾಂಡದಲ್ಲಿ "ಇಂದೂ ಕೂಡ ವಧುದಕ್ಷಣೆ" ಮದುವೆಯಲ್ಲಿ 'ಜಾತಗೋತ್ರದ ಹೆಣ್ಣಿಗೆ ೮೧. ರೂಗಳು' 'ಭೂಕ್ಯಾ ಗೋತ್ರದ ಹೆಣ್ಣಿಗೆ ೬೫' ರೂಪಾಯಿಗಳು ನೀಡಲಾಗುತ್ತದೆ. ಆದರೆ ಈಗ ಕೂಲಿ ಕೆಲಸ ಮಾಡುವವರು ಸಹ ಇಂದು ರೂ. ೧೦,೦೦೦ ರೂ. ಹಾಗೂ ಒಡವೆಗಳನ್ನು ವಧುವಿನ ಕಡೆಯವರಿಂದ ಪಡೆಯದೆ ಮದುವೆ ಮಾಡಿಕೊಳ್ಳುವುದಿಲ್ಲ. ಗಂಡನ ಕಡೆಯವರು ವರದಕ್ಷಣೆ ನೀಡದೆ ಇದ್ದರೆ ಚೌಕಾಸಿಯ ಕಾರಣಕ್ಕಾಗಿ ತಾಂಡದಲ್ಲಿ ಹಲವಾರು ಮದುವೆಗಳು ನಿಂತ ಸಾಕ್ಷಿಗಳು ಇವೆ. ಶಿಕ್ಷಣ ಹೊಂದಿದ ಉದ್ಯೋಗಸ್ತರಿಗಂತು ಲಕ್ಷಗಟ್ಟಲೆ ವರದಕ್ಷಣೆ ನೀಡುವುದು ತಾಂಡದಲ್ಲಿ ಮಾಮೂಲಿ ವಿಚಾರವಾಗಿದೆ. "ಕೆಟ್ಟತಥ ಅಪಾಯಕಾರಿ ವರದಕ್ಷಣೆ ಪ್ರಥಾ ಬಂಜಾರರ ಪರಂಪರೆಯಾಗಿರಲ್ಲಿಲ್ಲ. ಈ ಶಿಕ್ಷಿತ ಬಂಜಾರುಗಳು ಭಾರತದ ಶ್ರೇಷ್ಠ ವರ್ಗ ಹಾಗೂ ಜಾತಿಗಳ ನಕಲು ಮಾಡಿದೆ. ಇದರ ನಿಂದನೆಯನ್ನು ಮಾಡಬೇಕು."[೩೦] ಶಿಕ್ಷಣದಿಂದ ಸಮಾಜದಲ್ಲಿ ಸುಧಾರಣೆಗಳು ಆಗುವವು ಎಂಬ ದೂರದರ್ಶಿಯ ಭಾವನೆ ಸಾಮಾನ್ಯವಾಗಿ ಇರುತ್ತದೆ. ಆದರೆ ಇದೇ ಶಿಕ್ಷಣವನ್ನು ಅಸ್ತ್ರವಾಗಿ ಉಪಯೋಗಿಸಿ ಭವಿಷ್ಯದಲ್ಲಿ ವಿನಾಶವಾಗಬಾರದು. ಶಿಕ್ಷಣ ಹೊಂದಿದ ಯುವಕರು ಅದರಲ್ಲಿಯೂ ಉದ್ಯೋಗಸ್ಥ, ಜಮೀನು ಹೊಂದಿದ ಆಸ್ತಿವಂತ, ವ್ಯಾಪಾರಸ್ತರು, (ವ್ಯಾಪಾರ) ಇಂದು ಲಕ್ಷಗಟ್ಟಲೇ ವರದಕ್ಷಣೆ ಪಡೆಯುತ್ತಿರುವುದು ಕಂಡುಬರುತ್ತಿದೆ. "ವರದಕ್ಷಣೆಯ ಈ ಪ್ರಥಾ ಹೆಣ್ಣುಮಕ್ಕಳು ತಾಯಿ-ತಂದೆಗೆ ಎಂಥ ಸ್ಥಿತಿಯನ್ನು ತಂದಿದೆ ಎಂದರೆ ಇದರ ಪರಿಣಾಮ ಸ್ವರೂಪ ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಿಂದ ಬಂಜಾರ ತಂದೆ ತಾಯಿ ಸ್ವಂತ ಹೊಟ್ಟೆಯಲ್ಲು ಹುಟ್ಟಿದ ೧-೩ ವರುಷದ ಹೆಣ್ಣು ಮಕ್ಕಳನ್ನು (ಶಿಶುಕನ್ಯಾ) ಮಾಮೂಲಿ ಹಣ ೫೦೦-೨೦೦೦ಕ್ಕೆ ಮಾರುತ್ತಿದ್ದಾರೆ. ಏಕೆಂದರೆ ಇವರ ಭವಿಷ್ಯದಲ್ಲಿ (ಹೆಣ್ಣು ಮಕ್ಕಳು ವಿವಾಹಕ್ಕೆ ಯೋಗ್ಯವಾದಾಗ) ಭಾರಿ ವರದಕ್ಷಣೆಯ ಭಾರ ಸಹನೆ ಮಾಡಲು ಆಗುವುದಿಲ್ಲ"[೩೧] ನಮ್ಮ ಸಮಾಜದ ವ್ಯವಸ್ಥೆ ಯಾವ

ರೀತಿಯಲ್ಲಿ ಬದಲಾವಣೆಗೆ ಒಳಗಾಗುತ್ತದೆ ಹೆಣ್ಣು ಮಕ್ಕಳಿಗೆ ವರದಕ್ಷಣೆ ಮದುವೆಯ ಸಂದರ್ಭ ವಧುದಕ್ಷಿಣೆಯಾಗಿ ೬೦-೧೦೦ ರೂ. ನೀಡಿ ಲಕ್ಷಗಟ್ಟಲೆ ವರದಕ್ಷಿಣೆಯನ್ನು ಪ್ರತಿಯಾಗಿ ಪಡೆಯುವುದು. ಲಂಬಾಣಿಗರಲ್ಲಿ ಈ ವರದಕ್ಷಣೆ ಪಿಡುಗು ಬಂದದ್ದು ಇಡೀ ಲಂಬಾಣಿ ಸಮುದಾಯಕ್ಕೆ ಅವಮಾನಕರ ವಾದದ್ದು. "ಇವರು ಅಕ್ಕನ ಮಗಳನ್ನು ಮದುವೆ ಆಗುವುದಿಲ್ಲ"[೩೨] ತಾಂಡಗಳಲ್ಲಿ ರಕ್ತ ಸಂಬಂಧದಲ್ಲಿಯೇ ಅದರಲ್ಲೂ ತಮ್ಮನಿಗೆ ಹೆಣ್ಣು ಮಕ್ಕಳನ್ನು ಮಾಡಿಸುವ ಕ್ರಮ ತಾಂಡಗಳಲ್ಲಿ ಕಂಡುಬಂದಿತು. ದೂರಸಂಬಂಧದಲ್ಲಿ ಕೊಡುವುದಕ್ಕಿಂತ ಸ್ವಂತ ತಮ್ಮನಿಗೆ ಮದುವೆ ಮಾಡಿಸುವುದು ಉತ್ತಮ ಎಂದು ಈ ರೀತಿ ಮಾಡಿಸುತ್ತಿದ್ದಾರೆ.

## ಬಾಲ್ಯ ವಿವಾಹ ಪದ್ಧತಿ

ಬಾಲ್ಯ ವಿವಾಹ ಪದ್ಧತಿಯು ಲಂಬಾಣಿ ಸಮುದಾಯದಲ್ಲಿ ಪ್ರಚಲಿತವಿತ್ತು "Child-Marrige are still in vague"[೩೩] ಕಾಲಕ್ರಮೇಣ ಇದು ಮುಂದುವರೆಯುತ್ತಾ ಬಂದಿತು. "ಪ್ರಾಚೀನ ಕಾಲದಿಂದಲೂ ಅವರಲ್ಲಿ ಬಾಲವಿವಾಹ ಪದ್ಧತಿ ಪ್ರಚಲಿತವಿದ್ದು ಇಂದು ಈ ಪದ್ಧತಿ ಕಡಿಮೆಯಾಗುತ್ತಿದೆ"[೩೪] ಲಂಬಾಣಿಗರು ಹಿಂದೆ ಅಲೆಮಾರಿ ಸಮುದಾಯವಾಗಿದ್ದಾಗ ಹೆಣ್ಣು ಮಕ್ಕಳನ್ನು ಸಂರಕ್ಷಣೆಯ ದೃಷ್ಟಿಯಿಂದ ಬೇಗ ಮದುವೆ ಮಾಡಿಸುತ್ತಿದ್ದರು. ಹಾಗೂ ಒಳ್ಳೆಯ ವರ ದೊರಕುವುದನ್ನು ಬಿಟ್ಟರೆ ಮತ್ತು ಅಂತಃ ವರ ದೊರೆಯದು ಎಂಬ ಭಯದಿಂದ ಹೆಣ್ಣು ಮಕ್ಕಳನ್ನು ಬೇಗ ಮದುವೆ ಮಾಡಿಸುತ್ತಿದ್ದರು. ಆದರೆ ಇಂದಿಗೂ ತಾಂಡಗಳಲ್ಲಿ ಹೆಣ್ಣು ಮಕ್ಕಳನ್ನು ಬೇಗ ಅಂದರೆ ೧೨-೧೩ ವರ್ಷದವರೆಗೆ ಮಾಡಿಸುತ್ತಿರುವುದು ಕಾಣಲಾಗಿದೆ. "ಬಂಜಾರು ಹೆಣ್ಣು ಮಕ್ಕಳು ಸಾಮಾನ್ಯವಾಗಿ ೧೨ ವರ್ಷದ ಒಳಗೆ ಮದುವೆ ಯಾಗುತ್ತಿರಲಿಲ್ಲ."[೩೫] ಋತುಮತಿಯಾದ ತಕ್ಷಣ ಮದುವೆ ಮಾಡುತ್ತಿದ್ದರು. ಅದಕ್ಕೂ ಮುಂಚೆ ಮದುವೆ ಮಾಡಿಸಿದ್ದರೆ ಋತುಮತಿಯಾದ ನಂತರ ಗಂಡನ ಮನೆಗೆ ಕಳುಹಿಸುತ್ತಿದ್ದರು. ನೂರಾರು ವರುಷಗಳ ಹಿಂದೆ ಈ ರೀತಿ ಮಾಡುತ್ತಿದ್ದರು. "ಇವರಲ್ಲಿ ಬಾಲ್ಯ ವಿವಾಹಗಳು ಇಲ್ಲವೇ ಇಲ್ಲ ಎನ್ನಬಹುದು"[೩೬] ಆದರೆ ಲಂಬಾಣಿ ಸಮುದಾಯ ಬದಲಾವಣಾ ಪ್ರಕ್ರಿಯೆಗೆ ಒಳಗಾಗಿದ್ದರು, ಶತಮಾನಗಳ ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿರುವ ಕಡಿಮೆ ವಯಸ್ಸಿನಲ್ಲಿ ೧೨-೧೩ ಋತುಮತಿಯಾದ ೧೫ ದಿನ ಅಥವಾ ಒಂದು ತಿಂಗಳು ಕೂಡ ಇಟ್ಟುಕೊಳ್ಳದೆ ಮದುವೆ ಮಾಡಿರುವ ಹಲವಾರು ಘಟನೆಗಳು ಕ್ಷೇತ್ರಕಾರ್ಯದ ಸಮಯದಲ್ಲಿ ನನಗೆ ಕಂಡುಬಂದವು.

ಆಧುನಿಕ ಸಮಾಜ ಎಷ್ಟೊಂದು ಮುಂದುವರೆದು ಬಾಲ್ಯ ವಿವಾಹ ವಿರೋಧಿಸುವ ಶಾಸನಗಳು ಇದ್ದರು ಕನಿಷ್ಠ ವಯೋಮಿತಿ ೧೮, ಹೆಣ್ಣು ಮಕ್ಕಳಿಗೆ ಗಂಡಿಗೆ ೨೧ ವರ್ಷಗಳಿದ್ದರು ೧೨-೧೩ ವರ್ಷಕ್ಕೆ ಇವರು ವಿವಾಹ ಮಾಡುತ್ತಿದ್ದಾರೆ. ಬಡತನ ಒಂದು ಕಡೆ, ಮತ್ತೊಂದು ಕಡೆ ಇಂದಿಗೂ ಒಳ್ಳೆಯ ವರವೆಲ್ಲಿ ಕೈತಪ್ಪಿ ಹೋಗುತ್ತದೆಯೋ, ಬೇಗ ಮದುವೆ ಮಾಡಿಸಿ ತಮ್ಮ ಜವಾಬ್ದಾರಿಯಿಂದ ಮುಕ್ತವಾಗುವ ಅಂಶವಾಗಿದೆ. ಕೆಲವೊಬ್ಬರು ಮಾತ್ರ ಬಾಲ್ಯವಿವಾಹ ಮಾಡಿಸದೆ ೧೮ ವರ್ಷಗಳ ಮೇಲ್ಪಟ್ಟ ಹೆಣ್ಣು ಮಕ್ಕಳಿಗೆ ಮಾಡುತ್ತಿದ್ದಾರೆ. ಉಳಿದವರು ಚಿಕ್ಕವಯಸ್ಸಿನಲ್ಲೇ ಮದುವೆ ಮಾಡುವುದಾಗಿದೆ.

## ಅಂತರಜಾತಿಯ ವಿವಾಹಗಳು

ಕುಟುಂಬ ವ್ಯವಸ್ಥೆಯ ಮೊದಲ ಘಟ್ಟವಾಗಿ ವಿವಾಹವನ್ನು ಪರಿಗಣಿಸಿದಾಗ, ಲಂಬಾಣಿ ಸಮುದಾಯಗಳಲ್ಲಿ ಕೆಲವೊಂದು ಬದಲಾವಣೆಗಳು ಕಂಡುಬರುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಅಂತರ್‌ಜಾತಿಯ ವಿವಾಹವು ಬಹುಮುಖ್ಯವಾದ ಅಂಶವಾಗಿದೆ. ಸಾಮಾನ್ಯವಾಗಿ ಮುಖ್ಯಧಾರೆಗೆ ಒಳಪಟ್ಟ ಲಂಬಾಣಿಗರು ಅಂತರ್‌ಜಾತಿಯ ವಿವಾಹವನ್ನು ಮಾಡಿಕೊಳ್ಳುತ್ತಿದ್ದಾರೆ. ಇದು ಹೆಚ್ಚಾಗಿ ಅಲ್ಲದಿದ್ದರು ತಾಂಡಗಳಲ್ಲಿ ಕ್ಷೇತ್ರಕಾರ್ಯದ ಸಮಯದಲ್ಲಿ ಸುಮಾರು ಹತ್ತು ಜನ ಅಂತರಜಾತಿಯ ವಿವಾಹವಾಗಿರುವುದು ಕಂಡುಬಂದಿತು. ಶಿಕ್ಷಿತ, ಉದ್ಯೋಗಿಗಳು ಅಂತರಜಾತಿಯ ವಿವಾಹವಾಗುತ್ತಿದ್ದಾರೆ. ತಾಂಡದಲ್ಲಿನ ಸಾಮಾನ್ಯ ಜನರು ಯಾರು ಅಂತರ್‌ಜಾತಿಯ ವಿವಾಹವಾಗಿರುವ ಘಟನೆಗಳು ಕಂಡುಬಂದಿಲ್ಲ. ಆದರೆ ತಾಂಡದಲ್ಲಿಯೇ ಲಂಬಾಣಿ ಸಮುದಾಯದವರೆ ಪ್ರೇಮಿಸಿ ಮದುವೆಯಾಗುತ್ತಿರುವ ಬಹುಪಾಲು ಘಟನೆಗಳು ಕಂಡುಬಂದಿದ್ದು. ಇವರಿಗೆ ಅಂತರ್‌ಜಾತಿಯ ವಿವಾಹದಲ್ಲಿ ಒಲವಿದೆ. ಆದರೆ ಸಗೋತ್ರದಲ್ಲಿಯೂ ಒಂದೇ ಸಮುದಾಯದಲ್ಲಿಯೂ ಪ್ರೇಮಿಸಿ ಮದುವೆಯಾಗಿರುವುದಕ್ಕೆ ಹೆಚ್ಚಿನ ಜನರು ಒಲವನ್ನು ಹೊಂದಿರುವುದು ಕಂಡುಬಂದಿತು. ಬದಲಾದ ಸಂದರ್ಭದಲ್ಲಿ ತಾಂಡಗಳು ಇವರು ಒಳಪಟ್ಟು ಅಂತರ ಜಾತಿಯ ವಿವಾಹಗಳು ಆಗುತ್ತಿರುವುದು ಕೇವಲ ಶಿಕ್ಷಿತ, ಉದ್ಯೋಗಿಗಳಲ್ಲಿ, ಕಂಡುಬಂದಿತು.

## ನ್ಯಾಯವ್ಯವಸ್ಥೆ

ಇಂದಿಗೂ ನ್ಯಾಯವ್ಯವಸ್ಥೆಯು ತಾಂಡಾಗಳಲ್ಲಿ ನಾಯಕ, ಕಾರಭಾರಿ ಅನುಭವಸ್ಥ ಬುದ್ದಿವಂತ ಯಜಮಾನರ ಮೂಲಕ ನಡೆಯುತ್ತದೆ. "Vanjaris has its hereditary head man known as Naik. he is bound to help the rest in time of need and to be their representative all guests comming to his encampment or tand;The appointment of Naik is hereditary in one family[೬೨] ತಾಂಡದ ವ್ಯಾಜ್ಯಗಳನ್ನು ಬಗೆಹರಿಸಿ ತಪ್ಪಿತಸ್ಥರಿಗೆ ಶಿಕ್ಷೆ, ದಂಡ ಹಾಕಲಾಗುತ್ತದೆ. ಇದಕ್ಕೆ ತಪ್ಪಿದಲ್ಲಿ ತಾಂಡದಿಂದ ಜಾತಿ ಬಹಿಷ್ಕಾರವನ್ನು ಇಂದಿಗೂ ಸಹ ನೀಡಲಾಗುತ್ತದೆ. ಇಂದಿಗೂ ತಾಂಡದಲ್ಲಿ ನಾಯಕನ ನೇತೃತ್ವದಲ್ಲಿ ನ್ಯಾಯವನ್ನು ನೀಡಲಾಗುತ್ತದೆ. ಆದರೆ ಈ ವ್ಯವಸ್ಥೆ ಮೊದಲಿನಷ್ಟು ಬಿಗಿಯಾಗಿಲ್ಲ. ಆಧುನಿಕ ಕೋರ್ಟು ಕಛೇರಿ ಕಡೆಗೆ ಜನರು ಒಲವು ತೋರಿಸುತ್ತಿದ್ದಾರೆ. ಆದರೆ ಇಂದಿಗೂ ತಾಂಡಾಗಳಲ್ಲಿ ಗೋರ ಪಂಚಾಯತಿಗೆ ಹೆಚ್ಚಿನ ಮನ್ನಣೆ ಇರುವುದು ಕಂಡು ಬಂದಿತು. ಹಾಗೆಯೇ ಆಧುನಿಕ ಗ್ರಾಮ ಪಂಚಾಯಿತಿಯು ಅಸ್ತಿತ್ವಕ್ಕೆ ಬಂದು ಅಧಿಕಾರವು ಹಂಚಲ್ಪಡುತ್ತಿದೆ.

## ಧಾರ್ಮಿಕ ವ್ಯವಸ್ಥೆ

ತಾಂಡಾಗಳಲ್ಲಿ ಗ್ರಾಮದೇವತೆ ಮತ್ತು ಗ್ರಾಮದೇವಸ್ಥಾನ ಮಟ್ಟೋ ಇದೆ. ತಮ್ಮದೇ ಆದ ದೇವಸ್ಥಾನಗಳನ್ನು ಹೊಂದಿ ತಾಂಡಗಳಲ್ಲಿ ಮರಿಯಮ್ಮ ಸೇವಾಭಾಯ, ಈಶರ್‌ಭಾಯ, ಚೌಡೇಶ್ವರಿ, ಪೀರ, ಅಲ್ಲೆಯ್ ದೇವರನ್ನು ಪೂಜಿಸುತ್ತಾರೆ. ಮರಿಯಮ್ಮ ಸೇವಾಭಾಯ, ಈಶರ್‌ಭಾಯ, ಮೀಟು ಭುಕ್ಯಾ ದೇವರ ಮಟ್ಟೋಗಳಿವೆ. ಇವುಗಳನ್ನು ಬಿಟ್ಟು ತಾಂಡಾದಲ್ಲಿ ಬೇರೆ ದೇವರ ಗುಡಿಗಳಿಲ್ಲ. ಬಾಲಾಜಿ ದೇವರನ್ನು ತಮ್ಮ ಮನೆಯ ದೇವರೆಂದು ಪೂಜಿಸಲಾಗುತ್ತದೆ. ತಮ್ಮ ಪವಿತ್ರ ಪೂಜಾ

ಸ್ಥಳವಾಗಿ ತಿರುಪತಿಗೆ ಹೋಗುತ್ತಾರೆ. "The banjaras resemble other Hindus in their religious faith and worship all gods of the Hindu pantheio. In addition, they have family gods. To which they show special reveerence. The god of Thirupathi whom they know by the name of Balaji".[೩೮] ಹೀಗೆ ಶತಮಾನಗಳ ಹಿಂದಿನಿಂದಲೂ ಇತರ ಹಿಂದೂಗಳಂತೆ ಹಿಂದೂ ದೇವರನ್ನು ಪೂಜಿಸಿ, ಹಿಂದೂಗಳಂತೆ ಎಲ್ಲಾ ಹಬ್ಬಗಳನ್ನು ಆಚರಿಸುತ್ತಿದ್ದಾರೆ. ದಸರಾ ಹಬ್ಬ, ತೀಜ, ಹೋಳಿ, ಸಿತ್ಲಾ ಹಬ್ಬಗಳ ಜೊತೆ ಯುಗಾದಿ, ಗೌರಿ ಗಣೇಶ ಹಬ್ಬವನ್ನು ತಾಂಡಾದಲ್ಲಿ ಆಚರಿಸುತ್ತಾರೆ.

ಸೂರಗೊಂಡನಕೊಪ್ಪ ಶ್ರೀ. ಸೇವಾಭಾಯರ ಜನ್ಮ ಸ್ಥಳವಾಗಿದೆ. ಹಾಗೂ ಸೇವಾಭಾಯ ದೇವಸ್ಥಾನದಲ್ಲಿ ಹಾಲಿ ಪ್ರತಿವರ್ಷ ದಕ್ಷಿಣ ಭಾರತಕ್ಕೆ ಪ್ರಸಿದ್ದಿ ಹೊಂದಿರುವ ಐಯಪ್ಪ ಸ್ವಾಮಿ ಮಾಲೆಯಂತೆ ಸೇವಾಲಾಲ್ ಮಾಲೆಯನ್ನು ಬಂಜಾರ ಯುವಕರು ನಿಯಮಾನುಸಾರವಾಗಿ ಮಾಲೆಯನ್ನು ಧರಿಸಿ, ದುಶ್ಚಟದಿಂದ ದೂರವಿದ್ದು ಧರ್ಮದ ರಕ್ಷಣೆ, ಸಹಬಾಳ್ವೆಯಿಂದ ಬದುಕಲು ಪ್ರೇರಣೆ ಪಡೆಯುವುದು ಈ ಮಾಲಾ ಕಾರ್ಯಕ್ರಮಮದ ಉದ್ದೇಶವಾಗಿದೆ. ಪ್ರತಿವರ್ಷ ಬಿಳಿ ಬಟ್ಟೆಯನ್ನು ಹಾಕಿಕೊಂಡು ಮಾಲೆಯನ್ನು ಧರಿಸುತ್ತಾರೆ. ಶಿವರಾತ್ರಿಯ ೧೮ ದಿನ ಮುಂಚೆ ಈ ಮಾಲೆಯನ್ನು ಧರಿಸಿ ಶಿವರಾತ್ರಿಯ ದಿನದಂದು ಮಾಲೆಯನ್ನು ಈ ದೇವಸ್ಥಾನದ ಪೂಜಾರಿಯ ಮೂಲಕ ತೆಗೆಸಲಾಗುತ್ತದೆ. ಶಿವರಾತ್ರಿಯ ದಿನದಿಂದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ, ವಿವಿಧ ಪೂಜಾ ವಿಧಾನವನ್ನು ಯಜ್ಞಗಳನ್ನು ಮಾಡಲಾಗುತ್ತದೆ. ರಾಜ್ಯದ ಎಲ್ಲಾ ಪ್ರದೇಶಗಳಿಂದ ಹಾಗೂ ಇತರ ರಾಜ್ಯಗಳಿಂದ ಭಕ್ತಾದಿಗಳು ಅಪಾರ ಸಂಖ್ಯೆಯಲ್ಲಿ ಈ ಕ್ಷೇತ್ರಕ್ಕೆ ಬರುತ್ತಾರೆ.

**ಶೈಕ್ಷಣಿಕ ಸ್ಥಿತಿಗತಿ**

ಶಿಕ್ಷಣ ಹೊಂದಿದವರಿಗೆ ಇಂದೂ ಹೆಚ್ಚು ಗೌರವಾದರದಿಂದ ಕಾಣಲಾಗುತ್ತದೆ. "ಆಧುನಿಕ ಶಿಕ್ಷಣ ವ್ಯವಸ್ಥೆಯಿಂದ ಕೆಳಜಾತಿಗಳು ಹೊಸ ಬಗೆಯ ಎಚ್ಚರ ಪಡೆದುಕೊಂಡಿವೆ. ತಮ್ಮ ಹಕ್ಕುಗಳನ್ನು ನೆನಪಿಸಿಕೊಂಡಿವೆ. ಹೋರಾಟದ ಹಾದಿಯನ್ನೂ ತುಳಿದಿವೆ. ಶಿಕ್ಷಣ, ತಿರಸ್ಕೃತ ಸಮಾಜಕ್ಕೆ ಬಹು ದೊಡ್ಡ ಶಕ್ತಿಯನ್ನು ತಂದುಕೊಟ್ಟಿದೆ. ಇಲ್ಲಿ ಶೈಕ್ಷಣಿಕ ರೂಪಾಂತರಗಳಿಗೆ ಈ ಎಲ್ಲಾ ಸಮುದಾಯಗಳು ಒಳಗಾಗುತ್ತಿವೆ. ಶಿಕ್ಷಣಕ್ಕೆ ರೂಪಾಂತರಗೊಳ್ಳುವುದರಿಂದ ತನ್ನ ಸಂಸ್ಕೃತಿಯಿಂದ ದೂರಸರಿಯುವ ಸಾಧ್ಯತೆಗಳು ಇರಬಲ್ಲವಾದರೂ ಆದರೂ ಅವರ ಅಭಿವೃದ್ದಿ ಹಾದಿಯಲ್ಲಿ ಅವನ್ನು ಸಕಾರಾತ್ಮಕವಾಗಿಯೇ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಬುಡಕಟ್ಟುಗಳು ಶೈಕ್ಷಣಿಕವಾಗಿ ರೂಪಾಂತರಗೊಳ್ಳುವುದೆಂದರೆ ಅದು ಸ್ವಾತಂತ್ರ್ಯವನ್ನು ಹುಡುಕುವುದೆಂದೇ ಅರ್ಥ"[೩೯] ಆದರೆ ತಾಂಡದಲ್ಲಿ ಹೆಚ್ಚಿನ ಸಾಕ್ಷರತೆ ಇಲ್ಲ. ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದು ನಂತರ ಕಡಿಮೆಯಾಗುತ್ತಾ, ಮಧ್ಯದಲ್ಲಿಯೇ ಮಕ್ಕಳು ಹೆಚ್ಚಾಗಿ ಶಾಲೆ ಬಿಡುತ್ತಾರೆ. ತಂದೆ ತಾಯಿಗಳು ಮಕ್ಕಳಿಗೆ ಶಾಲೆಗೆ ಕಳಿಸಲು ಉತ್ಸುಕರಾಗಿದ್ದಾರೆ. ಅವರಿಗೆ ತಮ್ಮ ಮಕ್ಕಳೆಂದರೆ ಕುಟುಂಬದ ಪ್ರಗತಿಯ ಪ್ರತೀಕದಂತೆ ಕಾಣುತ್ತಾರೆ. ತಾವು ಪಡೆಯದ ವಿದ್ಯೆಯನ್ನು ಅವರು ಪಡೆಯಲಿ. ತಮಗೆ ಸಿಗದ ಸ್ವಾಭಿಮಾನ ಅವರಿಗೆ ಸಿಗಲಿ, ತಮಗಿಂತ ತಮ್ಮ ಮಕ್ಕಳು ದೊಡ್ಡವರಾಗಲಿ

ಎಂದು ಅವರು ಬಯಸುತ್ತಿದ್ದಾರೆ. ತಾಂಡಾಗಳಲ್ಲಿ ೪೦ ವರ್ಷಗಳ ಹಿಂದೆ ಒಂದಿಬ್ಬರು ಪೋಲೀಸ್ ಶಿಕ್ಷಕರಾಗಿದ್ದುದನ್ನು ಬಿಟ್ಟರೆ ಯಾರೂ ನೌಕರಿಯಲ್ಲಿರಲಿಲ್ಲ. ಆದರೆ ಇಂದು ನಾಲ್ಕು ತಾಂಡಾಗಳಲ್ಲಿ ಸುಮಾರು ಐವತ್ತೆಂಟು ಜನ ನೌಕರಿಯಲ್ಲಿದ್ದಾರೆ. ಅವರಲ್ಲಿ ಹತ್ತು ಜನ ಸ್ತ್ರೀಯರು ನೌಕರಿ ಮಾಡುತ್ತಿದ್ದಾರೆ. ಶಿಕ್ಷಣವನ್ನು ಹೊಂದಿದ ಇವರಿಗೆ ಸರಕಾರಿ ಉದ್ಯೋಗ ದೊರೆತಿದೆ. ಇಂದೂ ಶಿಕ್ಷಣ ಪಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಇಂದೂ ಉನ್ನತ ಶಿಕ್ಷಣಕ್ಕೆ ಇಬ್ಬರು ಹುಡುಗರು, ಒಬ್ಬಳು ಹೆಣ್ಣುಮಗಳು ಹೋಗಿದ್ದಾರೆ. ಉಳಿದವರು, ಐದು, ಏಳು ಹತ್ತನೆಯ ತರಗತಿ ಓದಿ ಮಧ್ಯದಲ್ಲಿಯೇ ಶಾಲೆ ಬಿಡುತ್ತಿದ್ದಾರೆ.

## ಅಡಿಟಿಪ್ಪಣಿಗಳು

೧. ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಖಂಡೋಬಾ .ಪಿ.ಕೆ., ಪು.೪೫, ೧೯೯೧
೨. ಸಮಾಜಶಾಸ್ತ್ರ ಪರಿಚಯ, ಭೈರಪ್ಪ .ಕೆ, ಪು.೨೩೬, ೧೯೮೯
೩. ಲಂಬಾಣಿ ಸಂಸ್ಕೃತಿ, ಸಣ್ಣರಾಮ, ಪು.೫೪, ೧೯೯೯
೪. ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ ನಾರಾಯಣ .ಎಂ.ವಿಶ್ವ, ಪು.೨೪, ೧೯೯೬
೫. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಸಂ.೪ ಥರ್‌ಸ್ಟನ್, ಪು.೨೦೭
೬. ದಿ.ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್, ಅಯ್ಯರ್, ಪು.೧೩೬, ೧೯೨೮
೭. ಸಂಶೋಧನಾ ತರಂಗ, ಸಂ.೨, ಚಿದಾನಂದಮೂರ್ತಿ, ಪು.೧೦, ೧೯೭೦
೮. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಈ.ಟಿ. ಫ್ರಾನ್ಸಿಸ್, ಪು.೧೧೨, ೧೯೦೯
೯. ಲಂಬಾಣಿ ಸಂಸ್ಕೃತಿ, ಸಣ್ಣರಾಮ, ಪು.೫, ೧೯೯೯
೧೦. ಅದೇ. ಪು.೭
೧೧. ಅದೇ. ಪು.೪೨
೧೨. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ನಂಜುಂಡಯ್ಯ ಮತ್ತು ಅಯ್ಯರ್, ಪು.೧೨೮, ೧೯೨೮
೧೩. ಪೀಪಲ್ ಆಫ್ ಇಂಡಿಯಾ ಕರ್ನಾಟಕ, ಸಂ.೨೬, ಭಾಗ ೨, ಹಲ್‌ಬರ್, ಪು. ೮೮೦, ೨೦೦೩
೧೪. ದಲಿತರು ಮತ್ತು ಜಾಗತೀಕರಣ, ಗಣೇಶ ಮೊಗಳ್ಳಿ, ಪು,೧೯೫, ೧೯೯೯
೧೫. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್. ಪ್ರಭಾಕರ, ಪು,೧, ೨೦೦೦
೧೬. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್. ಪ್ರಭಾಕರ, ಪು,೧೨, ೨೦೦೦
೧೭. ಕರ್ನಾಟಕ ಬುಡಕಟ್ಟುಗಳು, ಸಂ.೨, ಸಂ.ಕರೀಗೌಡ ಬೀಚನಹಳ್ಳಿ, ಮಂಜುನಾಥ ಬೇವಿನಕಟ್ಟಿ, ಪು.೪೪೪, ೨೦೦೦
೧೮. Collected Essayes, M.N. Srinivas, P: 206, 2002
೧೯. Collected Essayes, M.N. Srinivas, P: 201, 2002
೨೦. Social Movements and Social Change, P: 79, 1985
೨೧. ಭಾರತೀಯ ಗ್ರಾಮ, ನಾಗೇಶ್ .ಎಚ್.ವಿ., ಪು.೧೮, ೧೯೮೬
೨೨. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್. ಪ್ರಭಾಕರ, ಪು.೯, ೨೦೦೦
೨೩. ಕರ್ನಾಟಕ ಬಂಜಾರ ಕೈಪಿಡಿ. ಪು,೭೬, ೧೯೯೭
೨೪. ಲಂಬಾಣಿ ಜನಪದ ಸಾಹಿತ್ಯ, ನಾಯಕ ಡಿ.ಬಿ., ಪು.೧೭೬, ೨೦೦೦
೨೫. ಅದೇ, ಪು,೧೫
೨೬. ಕರ್ನಾಟಕ ಬಂಜಾರ ಕೈಪಿಡಿ. ಪು,೭೬, ೧೯೯೭

೨೭. ಸಮಾಜಶಾಸ್ತ್ರ, ಮೋಹನ್‌ರಾವ್.ಬಿ., ಪು.೨೦೦, ೧೯೮೭

೨೮. ಲಂಬಾಣಿ ಸಂಸ್ಕೃತಿ ಸಣ್ಣರಾಮ, ಪು.೮೧, ೧೯೯೯

೨೯. ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ, ಸಂ.೨, ಎಂಥೋವನ್, ಪು.೩೩೮, ೧೯೯೦

೩೦. ಭಾರತ ಬಂಜಾರ ಪತ್ರಿಕೆ, ಪು.೨, ೨೦೦೩

೩೧. ಅದೇ. ಪು.೨

೩೨. ಸಂಶೋಧನಾ ತರಂಗ, ಸಂ.೨, ಚಿದಾನಂದಮೂರ್ತಿ, ಪು.೫, ೧೯೭೦

೩೩. ಪೀಪಲ್ ಆಫ್ ಇಂಡಿಯಾ ಕರ್ನಾಟಕ, ಸಂ.೨೬, ಭಾಗ ೨, ಕೆ.ಸಿ. ಸಿಂಗ್, ಪು. ೧೩೩, ೧೩೪, ೧೯೯೩

೩೪. ಲಂಬಾಣಿ ಜನಪದ ಸಾಹಿತ್ಯ, ನಾಯಕ ಡಿ.ಬಿ., ಪು.೧೧, ೨೦೦೦

೩೫. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ನಂಜುಂಡಯ್ಯ ಮತ್ತು ಅಯ್ಯರ್, ಪು.೩೫, ೧೯೨೮

೩೬. ಸಂಶೋಧನಾ ತರಂಗ, ಸಂ.೨, ಚಿದಾನಂದಮೂರ್ತಿ, ಪು.೫, ೧೯೭೦

೩೭. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ನಂಜುಂಡಯ್ಯ ಮತ್ತು ಅಯ್ಯರ್, ಪು.೩೫, ೧೯೨೮

೩೮. ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ಅಯ್ಯರ್, ಪು.೧೮೪, ೧೯೨೮

೩೯. ದಲಿತರು ಮತ್ತು ಜಾಗತೀಕರಣ, ಗಣೇಶ್ ಮೊಗಳ್ಳಿ, ಪು.೧೦೮, ೧೯೯೯

# ಅಧ್ಯಾಯ ೩

# ಲಂಬಾಣಿಗರ ಆರ್ಥಿಕ ಸ್ಥಿತಿಗತಿ

೩

## ಲಂಬಾಣಿಗರ ಆರ್ಥಿಕ ಸ್ಥಿತಿಗತಿ

**ಯಾ**ವುದೇ ಒಬ್ಬ ವ್ಯಕ್ತಿ ಅಥವಾ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಆರ್ಥಿಕ ಚಟುವಟಿಕೆಗಳು ಮುಖ್ಯಪಾತ್ರ ವಹಿಸುತ್ತವೆ. ಸಮಾಜದಲ್ಲಿ ಉಳ್ಳವರು, ಉಳ್ಳದೇ ಇರುವವರು, ಮೇಲು-ಕೀಳು, ಬಡವ, ಬಲ್ಲಿದ ಎಂಬ ಶ್ರೇಣಿಕರಣವು ಇರುವುದನ್ನು ಕಾಣುತ್ತೇವೆ. ಲಂಬಾಣಿಗರು ಶತಮಾನಗಳಿಂದ ಅಲೆಮಾರಿಗಳಾಗಿದ್ದರು. ಆಹಾರ ಸಾಮಾಗ್ರಿ, ದವಸಧಾನ್ಯ, ಲವಣ, ಮುಂತಾದ ಅತ್ಯವಶ್ಯಕ ಸರಕುಗಳ ದನಕರುಗಳ ಮೇಲೆ ಹೇರಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಾ ವ್ಯಾಪಾರ ಮಾಡುತ್ತಿದ್ದರು. ಸಾವಿರಾರು ಸಂಖ್ಯೆಯಲ್ಲಿ ದನಕರುಗಳನ್ನ ಹೊಂದಿ, ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದರು.

ಬ್ರಿಟಿಷರು ಭಾರತವನ್ನಾಳುತ್ತಿದ್ದ ಸಂದರ್ಭದಲ್ಲಿ ಅವರು ಇಲ್ಲಿನ ಸಮಾಜದ ರಚನೆಯನ್ನೇ ಬದಲಾಯಿದರು. ಭಾರತದಲ್ಲಿ ತನ್ನ ಆಡಳಿತವನ್ನು ಭದ್ರಪಡಿಸಿಕೊಳ್ಳಲು ವಸಾಹತುಶಾಹಿ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಸಾರಿಗೆ ಸಂಪರ್ಕ ಅಭಿವೃದ್ಧಿ, ಅರಣ್ಯ ಕಾನೂನುಗಳ ಜಾರಿ ಪ್ರಮುಖವಾದವು. ಬ್ರಿಟಿಷರು ರಸ್ತೆ ಸಾರಿಗೆಯನ್ನು ಅಭಿವೃದ್ಧಿ ಪಡಿಸಿದರು. ರೈಲ್ವೆಯನ್ನು ವಿಸ್ತರಿಸಿದರು. ಭಾರತದಾದ್ಯಂತ ಓಡಾಡಿಕೊಂಡು ವ್ಯಾಪಾರಮಾಡುತ್ತಿದ್ದ ಲಂಬಾಣಿ ಹಾಗೂ ಇತರ ಸಮುದಾಯದವರು ಬ್ರಿಟಿಷರ ರಸ್ತೆ ಅಭಿವೃದ್ಧಿಯಿಂದ ಆಘಾತಗೊಂಡು ವೃತ್ತಿಹೀನರಾದರು. ರೈಲು ಹಾಗೂ ಇತರೆ ಸಾರಿಗೆ ವಾಹನಗಳು ಸರಕುಗಳನ್ನು ಸಾಗಿಸುವ ಕೆಲಸವನ್ನು ಮಾಡಲಾರಂಭಿಸಿದ ಮೇಲೆ ವ್ಯಾಪಾರಿ ಲಂಬಾಣಿಗರಿಗೆ ಒಳಪ್ರದೇಶದಲ್ಲಿ ದೊರೆಯುತ್ತಿದ್ದ ಕೆಲಸವು ದೊರೆಯದೆ ಆರ್ಥಿಕವಾಗಿ ತುಂಬಾ ನಷ್ಟವನ್ನು ಅನುಭವಿಸಿ ಕಂಗಾಲಾದರು. ಶ್ರಮಜೀವಿಗಳಾದ ಲಂಬಾಣಿಗರು ಹೀಗೆ ತಮ್ಮ ಮೂಲ ವ್ಯಾಪಾರಿ ವೃತ್ತಿಯೊಂದಿಗೆ ವಂಚಿತರಾಗಿ ಬ್ರಿಟಿಷ್ ಸರಕಾರದ ಕೋಪಕ್ಕೆ ತುತ್ತಾಗಿ ಅಡವಿ ಪಾಲಾಗಿ ಬಿಟ್ಟಿದ್ದರಿಂದ ಇತ್ತ ಭೂಮಿಯಿಂದಲೂ ದೂರವಾಗಿಯೇ ಉಳಿದುಕೊಂಡರು.

"ಸ್ವಾತಂತ್ರ್ಯನಂತರ ಅವರಿಗೆ ರಾಜಕೀಯ ಸ್ವಾತಂತ್ರ್ಯ ದೊರೆತರೂ ಆರ್ಥಿಕ ಸ್ವಾತಂತ್ರ್ಯ ದೂರವಾಗಿಯೇ ಉಳಿದಿದೆ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯ ಫಲ ನೀಡಲಾರದು."[೧] ಈ ಮಾತು ಸತ್ಯಕ್ಕೆ ಸನಿಹವಾದುದು. ರಾಜಕೀಯವಾಗಿ ಭಾರತ ಸ್ವಾತಂತ್ರ್ಯಗೊಂಡ ನಂತರ ಕೆಳಜಾತಿಗಳು ಸ್ವಾತಂತ್ರ್ಯ ಪಡೆದ ಇವರು ಆರ್ಥಿಕವಾಗಿ ಬಡತನದಲ್ಲಿದ್ದು, ಅವರಿಗೆ ಯಾವ ಬಗೆಯ ಸ್ವಾತಂತ್ರ್ಯ ದೊರೆತರೂ ಅದು ನಿರರ್ಥಕವೆಂದೇ ಹೇಳಬೇಕಾಗುತ್ತದೆ. ಅಲೆಮಾರಿತನವನ್ನು ಕಾಲಕ್ರಮೇಣ ಲಂಬಾಣಿಗರು ತಾವು ಅನುಸರಿಸಿದ ಆರ್ಥಿಕ ಚಟುವಟಿಕೆಗಳಿಂದಾಗಿ ಕಾರಣದಿಂದ ತೊರೆಯುತ್ತಾ ಬಂದರು.

ಆಧುನೀಕರಣಗೊಂಡ ಇಂದಿನ ಈ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲಾಗುತ್ತಿದೆ. ಲಂಬಾಣಿಗರು ಈಗ ಆರ್ಥಿಕ ಬದಲಾವಣೆಗಳಿಗೆ ಒಳಗಾಗಿದ್ದಾರೆ. ಕಳೆದ ೨೦-೨೫ ವರ್ಷಗಳ ಹಿಂದೆ ಇವರ ಆರ್ಥಿಕ ಸ್ಥಿತಿ ತುಂಬಾ ಹಿಂದುಳಿದಿತ್ತು. ಅಂದು ಇವರಿಗೆ ಈಗಿನಂತೆ ಹೆಚ್ಚಿನ ಜನರಿಗೆ ಜಮೀನು ಮನೆಗಾಳಾವು ಇರಲಿಲ್ಲ ಹಾಗೂ ಇವರು ಇವುಗಳನ್ನು ಗಳಿಸುವ ಒಲವನ್ನು ಕೂಡ ಇವರು ಹೊಂದಿರಲ್ಲಿಲ್ಲ. ಊರು ಬೆಳೆದಂತೆ ಇದರೊಂದಿಗೆ ಇತರೆ ಸಮುದಾಯದ ಜನರು ಬಂದು ವಾಸಿಸತೊಡಗಿದರು. ಇಂತಹ ಜನರ ಪ್ರಭಾವದಿಂದ ಹಾಗೂ ಸಾರಿಗೆ ಸಂಪರ್ಕ ವ್ಯವಸ್ಥೆಯ ಸುಧಾರಣಾ ಕ್ರಮದಿಂದಲೂ ಇವರಗೆ ಸಮಾಜದ ಮುಖ್ಯವಾಹಿನಿಯ ಸಂಪರ್ಕ ದೊರೆಯಿತು. ಇಂದಿನ ದಿನಗಳಲ್ಲಿ ಹಣ, ಆಸ್ತಿಗಳಿಗೆ ನೀಡುವ ಪ್ರಾಮುಖ್ಯತೆ ಬೇರೆ ಯಾವುದಕ್ಕೂ ನೀಡುವುದಿಲ್ಲ.

ಲಂಬಾಣಿಗರು ತಮ್ಮ ಪಾರಂಪರಿಕ ವ್ಯಾಪಾರವೃತ್ತಿಯನ್ನೆ ತೊರೆಯುತ್ತಾ, ಅವರು ನಂಬಿದ ಕೃಷಿ ಕೂಲಿಯ ಇವರಿಗೆ ಒಂದಡೆ ಇವರು ನೆಲೆ ನಿಲ್ಲುವಂತೆ ಮಾಡಿತು. ಕೃಷಿ ಇಲ್ಲವೆ ಕೃಷಿ ಸಂಬಂಧಿ ಉಪಕಸುಬುಗಳಲ್ಲಿ ನಿರತವಾಗಿದ್ದು, ಒಂದಡೆ ಇಂದು ನೆಲೆಸಿದ್ದಾರೆ. ಜೀವನ ನಿರ್ವಹಣೆಗಾಗಿ ಹಲವು ಕಸಬುಗಳನ್ನು ಕೂಡ ಅವಲಂಬಿಸಿದ್ದಾರೆ. ಬದಲಾದ ಆರ್ಥಿಕ ಪರಿಸ್ಥಿತಿಯೊಂದಿಗೆ ಇವರ ಜೀವನ ಕ್ರಮವೂ ಬದಲಾವಣೆಗೆ ಒಳಪಡುತ್ತಿದೆ. ಹಿಂದೆ ತಾಂಡಗಳಲ್ಲಿ ಸಾಮಾನ್ಯವಾಗಿ ಗುಡಿಸಲು ಮನೆಗಳಿದ್ದವು. ಇವರ ಮನೆ ಹಾಗೂ ವೇಷಭೂಷಣದಿಂದ ಇವರ ಆರ್ಥಿಕ ಸ್ಥಿತಿಗತಿ ಹೇಗಿದೆ ಎಂದು ಊಹಿಸಲಾಗುತ್ತಿತ್ತು. ಆದರೆ ಇಂದು ಇವರು ವ್ಯಾಪಾರಿ, ಪಶುಪಾಲಕ, ಕೂಲಿಗಳಾಗಿ ಕೃಷಿಕರಾಗಿ ಪರಿವರ್ತಿತರಾಗುತ್ತಿದ್ದಾರೆ, ಇವರ ಆರ್ಥಿಕ ಸುಧಾರಣೆಯಲ್ಲಿ ಕೃಷಿ, ಕೃಷಿಯೇತರ ಕೂಲಿ, ವ್ಯಾಪಾರ, ಜೀತ, ಸಣ್ಣಪುಟ್ಟ ದಿನಸಿ ಅಂಗಡಿ, ತರಕಾರಿ, ಹಣ್ಣಿನ ಅಂಗಡಿ, ಸರಕಾರಿ ನೌಕರಿ, ಎಂಬಿತ್ಯಾದಿ ಕಸಬುಗಳ ಪಾತ್ರ ಹಿರಿದಾಗಿದೆ. ಇಂದು ತಾಂಡಗಳಲ್ಲಿ ಕೆಲವು ವ್ಯಕ್ತಿಗಳ ಆರ್ಥಿಕ ಸ್ಥಿತಿಗತಿ ಉತ್ತಮಗೊಂಡಿದೆ. ನೀರಾವರಿ ಸೌಕರ್ಯ ಹೊಂದಿದವರು ಕೆಲವರು ಮಾತ್ರ ಇದ್ದಾರೆ. ಬಹುಪಾಲು ಜನರು ಒಣಭೂಮಿ ಕೃಷಿಕರಾಗಿ ಬೆಳೆ ಬೆಳೆಯಲು ಮಳೆಯನ್ನೇ ಅವಲಂಬಿಸಿದ್ದಾರೆ. ೨೦ ಗುಡಿಸಲು ಮನೆಗಳು ಇಂದು ೪ ತಾಂಡಗಳಲ್ಲಿ ಇವೆ. ಸರಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಅಂಬೇಡ್ಕರ್ ಆಶ್ರಯ ಮನೆ, ಜನತಾಮನೆಗಳನ್ನು ಕಟ್ಟಿಸಿಕೊಟ್ಟಿದೆ. ಉಳ್ಳವರು ಕಾಂಕ್ರಿಟ್, ಆರ್.ಸಿ.ಸಿ. ಮನೆ ಹೊಂದಿದ್ದಾರೆ.

ಕೆಲವರು ಆರ್ಥಿಕ ಬದಲಾವಣೆ ಹೊಂದಿ ಸ್ಥಿತಿವಂತರಾಗಿದ್ದಾರೆ. ಹಾಗೆಯೇ ಹೆಚ್ಚಾಗಿ ಕೂಲಿಕಾರ್ಮಿಕರು, ಕೂಲಿಯನ್ನೇ ಅವಲಂಬಿಸಿ ಜೀವನ ಸಾಗಿಸುವುದನ್ನು ಕಾಣಬಹುದಾಗಿದೆ. ಇವರು ಅನುಸರಿಸುವ ವೃತ್ತಿಗಳಲ್ಲಿ ಕೂಡ ಸಾಕಷ್ಟು ವ್ಯತ್ಯಾಸ ಹಾಗೂ ಬದಲಾವಣೆ ಆಗಿರುವುದು ಕಂಡುಬರುತ್ತದೆ, ಈ ಹಿಂದೆ ಅನುಸರಿಸುತ್ತಿದ್ದ ಪಾರಂಪರಿಕ ವೃತ್ತಿ ಇಲ್ಲವಾಗುತ್ತಾ ಪರ್ಯಾಯ ವೃತ್ತಿಯನ್ನಾಗಿ ಕೂಲಿ, ಕೃಷಿ, ಸಾಮಾನ್ಯ ವ್ಯಾಪಾರ, ಸರಕಾರಿ ನೌಕರಿ ಮುಂತಾದುವುಗಳನ್ನು ಕಂಡುಕೊಂಡಿದ್ದಾರೆ. ಆದರೆ ಇವುಗಳೆಲ್ಲದರ ಹೊರತು ಕೆಲ ಲಂಬಾಣಿ ಮಹಿಳೆಯರು ಅರಣ್ಯದ ಉಪ ಉತ್ಪನ್ನಗಳಾದ ಕಟ್ಟಿಗೆಯನ್ನು ಕಡಿದು, ಋತುಮಾನಕ್ಕೆ ಅನುಗುಣವಾಗಿ ದೊರೆಯುವ ಹಣ್ಣು ಹಂಪಲು, ಜೇನುತುಪ್ಪ, ಸೀಗೆಕಾಯಿ, ಬಿದಿರು, ಮರದ ತೊಗಟೆ ಮುಂತಾದುವುಗಳನ್ನು ಮಾರಿ ಸಂಸಾರ ಸಾಗಿಸುತ್ತಿದ್ದಾರೆ. ಅರಣ್ಯ ಕಾಯಿದೆ

ಪ್ರಕಾರ ಅರಣ್ಯದ ಉತ್ಪನ್ನಗಳನ್ನು ಮುಟ್ಟದಂತೆ ನಿಷೇಧವನ್ನು ಹೇರಿದ್ದರ ಪರಿಣಾಮ ಲಂಬಾಣಿಗರ ಸ್ಥಿತಿಯು ಹೇಳ ತೀರದಾಗಿದೆ.

ಜಾಗತೀಕರಣದ ಪ್ರಭಾವದಿಂದ ಹೊಸ ಬದುಕಿಗೆ ಹೊಂದಿಕೊಳ್ಳ ಬೇಕಾಗಿರುವುದು ಅನಿವಾರ್ಯ ವಾಗಿರುವುದರಿಂದ ನೆಲೆ ಇಲ್ಲದ ತಮ್ಮ ಮೂಲ ಕಸಬುಗಳಿಗೆ ಬದಲಾಗಿ ಆಧುನಿಕವಾದ ಹಲವು ಕಸಬು ಗಳನ್ನು ಅವಲಂಬಿಸುವುದು ಇವರಿಗೆ ಅನಿವಾರ್ಯವಾಗಿದೆ. ಶಿಕ್ಷಣವನ್ನು ಹೊಂದಿರುವ ಕೆಲವರು ಉದ್ಯೋಗ ವನ್ನು, ವ್ಯಾಪಾರವನ್ನು ಕೂಡ ಮಾಡುತ್ತಿದ್ದಾರೆ. ಆದರೆ ಸಾಮಾನ್ಯವಾಗಿ ಇಂದು ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಲಂಬಾಣಿಗರು ಕೃಷಿಯನ್ನೆ ತಮ್ಮ ಮುಖ್ಯ ಕಸುಬನ್ನಾಗಿಸಿಕೊಂಡು ಜೀವಿಸುತ್ತಿದ್ದಾರೆ. ವ್ಯವಸಾಯಗಾರರಲ್ಲಿ ಒಣ ಬೇಸಾಯಗಾರರೆ ಹೆಚ್ಚಾಗಿದ್ದಾರೆ. ನೀರಾವರಿ, ಜಮೀನು, ತೋಟಗಳನ್ನ ಹೊಂದಿರುವವರು ಅತೀ ವಿರಳ ಜಮೀನು ಹೊಂದಿದವರು ಕೃಷಿಯನ್ನೆ ಮಾಡುತ್ತಿದ್ದಾರೆ. ಭೂರಹಿತರು ಗೇಣಿಗೆ ಜಮೀನನ್ನು ಪಡೆದು ಕೃಷಿ ಹಾಗೂ ಕೂಲಿ ನಾಲಿಯನ್ನು ಮಾಡಿಯೇ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಆದರೆ ತಾಂಡಗಳಲ್ಲಿ ಬರಗಾಲವಿದ್ದ ಕಾರಣ ಮಳೆ ಇಲ್ಲದೆ ಬೆಳೆಗಳೆಲ್ಲಾ ನಾಶವಾಗಿವೆ. ಇದರಿಂದ ತಾಂಡವಾಸಿಗಳು ನೂರಾರು ಸಂಖ್ಯೆಯಲ್ಲಿ ದುಡಿಯಲು, ಕೂಲಿಮಾಡಲು ವಲಸೆ ಹೋಗುತ್ತಿದ್ದಾರೆ.

ಒಟ್ಟಾರೆ ಇಂದಿಗೂ ಪಾರಪಂರಿಕ ವೃತ್ತಿಯನ್ನು, ಕೃಷಿ, ಕೂಲಿ, ಕೂಲಿಗಾಗಿ ವಲಸೆ, ಜೀತ, ಪಶುಪಾಲನೆ ಇತರ ವೃತ್ತಿಗಳಲ್ಲಿ ಪಾಲುಗೊಂಡಿರುವುದನ್ನು ಗಮನಿಸಬಹುದು. ಕೆಲವೊಂದು ಕುಟುಂಬದ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆಯಾಗಿರುವುದನ್ನು ಬಿಟ್ಟರೆ ಉಳಿದಂತೆ ಇಂದಿಗೂ ನಾನು ಅಧ್ಯಯನಕ್ಕೆ ಆಯ್ದುಕೊಂಡು ತಾಂಡಗಳಲ್ಲಿ ಆರ್ಥಿಕ ಸ್ಥಿತಿಯು ಕೆಳಸ್ತರದಲ್ಲಿಯೇ ಇದೆ.

ಶತಮಾನಗಳು ಕಳೆದರು ಇಂದಿಗೂ ಕೂಡ ಕೂಲಿಯನ್ನೇ ಮಾಡುತ್ತಾ ಬಡತನದಲ್ಲೇ ಹುಟ್ಟಿ ಬಡತನದಲ್ಲೇ ತಮ್ಮ ಜೀವನವನ್ನು ಕಳೆಯುತ್ತಾ ಇರುವವರು ಇದ್ದಾರೆ. ಶಿಕ್ಷಣವನ್ನು ಪಡೆದ ಕೆಲವರು ಸರಕಾರದ ಮೀಸಲಾತಿಯ ಪ್ರಯೋಜನ ಪಡೆದು, ಸರ್ಕಾರಿ ಮತ್ತು ತಾತ್ಕಲಿಕ ನೌಕರಿಯನ್ನು, ವ್ಯಾಪಾರವನ್ನು ಮಾಡುತ್ತಿದ್ದಾರೆ. ಆದರೆ ಇವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಇದೆ. ನಿತ್ಯ ಬದುಕಿಗಾಗಿ ಹಲವಾರು ಕಸಬುಗಳನ್ನು ಲಂಬಾಣಿಗರು ಅವಲಂಬಿಸಿದ್ದಾರೆ. ಆದರೆ ಇದು ಕಡಿಮೆ ಬಂಡವಾಳವನ್ನು ಬಯಸುವಂತಹ ಕಸಬನ್ನೆ ಹೆಚ್ಚಾಗಿ ಮಾಡುತ್ತಿದ್ದಾರೆ. ನಾನು ಅಧ್ಯಯನಕ್ಕೆ ಆಯ್ದುಕೊಂಡ ನಾಲ್ಕು ತಾಂಡಗಳಲ್ಲೂ ಲಂಬಾಣಿ ಸಮುದಾಯದ ಕೆಲವರು ಸುಸ್ಥಿತಿಯಲ್ಲಿದ್ದಾರೆ. ಉಳಿದವರು ಆರ್ಥಿಕವಾಗಿ ದುಃಸ್ಥಿಯಲ್ಲಿರುವುದು ಕಂಡುಬಂದಿತು. ಕುಟುಂಬದ ಮಂದಿಯೆಲ್ಲಾ ದುಡಿದರು ಸಾಕಾಗದ ಸಮಯದಲ್ಲಿ ದುಡಿದ್ದನ್ನು ಕುಡಿತಕ್ಕೆ ಹೆಚ್ಚಾಗಿ ವ್ಯಯ ಮಾಡುವುದು ಹಾಗೂ ಧಾರ್ಮಿಕ ಆಚರಣೆಗಳಿಗೆ ಹಬ್ಬ ಹರಿದಿನಗಳನ್ನು ತಪ್ಪದೆ ಆಚರಿಸುವುದರಿಂದ ದುಡಿದ ಹಣವು ವ್ಯವಯವಾಗಿ ಉಳಿತಾಯವೆನ್ನುವುದು ಲಂಬಾಣಿಗರಲ್ಲಿ ಆಗದೆ. ಹಾಗೂ ದುಡಿದ ಹಣವನ್ನು ಕೂಡಿಸಬೇಕೆಂಬ ಮನೋಭಾವವು ಕೂಡ ಇವರಲ್ಲಿಲ್ಲ. ಕೆಲವರು ಮಾತ್ರ ದುಡಿದ ಹಣವನ್ನು ದುಂದುವೆಚ್ಚ ಮಾಡದೆ ತಮ್ಮ ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಹಾಗೂ ಇವರ ಆರ್ಥಿಕಸ್ಥಿತಿಯು ಕೂಡ ಉತ್ತಮವಾಗಿದೆ.

## ೧. ಪಾರಂಪರಿಕ ವೃತ್ತಿ ಮತ್ತು ಸಮುದಾಯಗಳು

ಲಂಬಾಣಿ ಸಮುದಾಯ ಅಥವಾ ಇತರ ಯಾವುದೇ ಸಮುದಾಯವಿರಲಿ, ತನ್ನ ಪಾರಂಪರಿಕ ವೃತ್ತಿಯನ್ನವಲಂಬಿಸಿ ಪ್ರಗತಿ ಸಾಧಿಸಲಾರದು. ಲಂಬಾಣಿಗಳು ತಮ್ಮ ಪಾರಂಪರಿಕ ವೃತ್ತಿಯಾದ ವ್ಯಾಪಾರವನ್ನು ದನಕರುಗಳನ್ನು ಅವಲಂಬಿಸಿ ಮಾಡುತ್ತಾ ಇದ್ದರು. ಇವರ ವಿರುದ್ಧ ಆಧುನಿಕ ವಾಹನಗಳು ಸರಿಸಾಟಿಯಿಲ್ಲದ ಪ್ರತಿಸ್ಪರ್ಧಿಗಳಾದವು. ಕೈಗಾರೀಕಿಕರಣ, ಆಧುನಿಕರಣದ ಫಲವಾಗಿ ಹೊಸಹೊಸ ಉದ್ಯಮಗಳು ಸ್ಥಾಪಿತವಾದವು. ತಂತ್ರಜ್ಞಾನ ಮತ್ತು ಯಂತ್ರಗಳು ನಮ್ಮ ದೇಶದ ಗೃಹಕೈಗಾರಿಕೆಗೆ, ಕರಕುಶಲ ಕರ್ಮಿಗಳ ಬಾಳಿಗೆ ಬಿರುಗಾಳಿಯಾದವು. ಲಕ್ಷಾಂತರ ಮಂದಿ ನೆಲೆ ಇಲ್ಲದಂತಾಗಿ ನಿರುದ್ಯೋಗಿಗಳಾದರು. ಬಡಗಿ, ಚಮ್ಮಾರ, ನೇಕಾರ, ಅಕ್ಕಸಾಲಿಗ ಜೊತೆಗೆ ಲಂಬಾಣಿ ಸಮುದಾಯದ ಪಾರಂಪರಿಕ ವ್ಯಾಪಾರ ವೃತ್ತಿಯನ್ನು ಮುಂದುವರೆಸಿಕೊಂಡಿರುವವರು ಆರ್ಥಿಕವಾಗಿ ನಾಶವಾಗತೊಡಗಿದರು. ಯಂತ್ರಗಳು ನಿಮಿಷವೊಂದರಲ್ಲಿ ಬೇಕಾದ ಬಟ್ಟೆಗಳನ್ನು, ಆಭರಣಗಳನ್ನು ತಯಾರಿಸಿ ಸರಕುಗಳನ್ನು ವಾಹನಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೆಲವೇ ಗಂಟೆಗಳಲ್ಲಿ ಸಾಗಿಸುತ್ತವೆ. ಇವುಗಳ ಮುಂದೆ ಗೃಹಕೈಗಾರಿಕೆ ಕುಶಲಕರ್ಮಿಗಳು ಸ್ಪರ್ಧಿಸಲು ಅಸಾಧ್ಯವಾಯಿತು. ಯಂತ್ರಗಳ ಉತ್ಪಾದನೆಗೆ ಹೆಚ್ಚು ಮನ್ನಣೆ ದೊರೆಯಿತು. ಏಕೆಂದರೆ ಸಮಯ, ಶ್ರಮ, ಸರಕುಗಳ ಕಡಿಮೆ ಬೆಲೆಯಿಂದ ಉಳಿತಾಯ ಉಂಟಾಗಿ ಸುಲಭ ವಿಲೆವಾರಿಯಾಗುವುದರ ಪರಿಣಾಮ ಇವುಗಳು ಹೆಚ್ಚು ಪ್ರಖ್ಯಾತವಾಗಿ ಜಾಹಿರಾತುಗಳು ಗ್ರಾಹಕರನ್ನು ಆಕರ್ಷಿಸುತ್ತವೆ. ಆದರೆ ಪಾರಂಪರಿಕ ವೃತ್ತಿದಾರರು ತಮ್ಮ ವೃತ್ತಿಯನ್ನು ಅವಲಂಭಿಸಿ ಪ್ರಗತಿ ಸಾಧಿಸಲು ಆಗದು, ಹೀಗಾಗಿ ಅವರು ಸಾಮಾಜಿಕವಾಗಿ ಆರ್ಥಿಕವಾಗಿ ಹಿನ್ನಡೆಯನ್ನ ಸಾಧಿಸುತ್ತಿದ್ದಾರೆ.

ಲಂಬಾಣಿ ಸಮುದಾಯದಲ್ಲಿ ಇಂದು ಪಾರಂಪರಿಕ ವೃತ್ತಿಯನ್ನು ಭಾಗಶಃ ತೊರೆದು ಕೃಷಿಕಾರ್ಮಿಕರಾಗಿ, ಕೂಲಿ ಆಳುಗಳಾಗಿ, ಕೆಲವೊಬ್ಬರು ಶಿಕ್ಷಣಹೊಂದಿ ಉದ್ಯೋಗದಲ್ಲಿ, ಆಧುನಿಕ ವ್ಯಾಪಾರದಲ್ಲಿ, ತಮ್ಮನ್ನು ತೊಡಗಿಸಿಕೊಂಡು ಆರ್ಥಿಕ ಮುನ್ನಡೆಯನ್ನು ಸಾಧಿಸುತ್ತಿದ್ದಾರೆ. ಉಳಿದವರು ಅಸಮಾನತೆಯನ್ನು ಅವರು ಅನುಸರಿಸಿರುವ ವೃತ್ತಿಯ ಹಿನ್ನೆಲೆಯಿಂದ ಹೊಂದಿದ್ದಾರೆ. ಪರಂಪರಾಗತ ಕೌಶಲ್ಯಗಳು ಅವನತಿಯನ್ನು ಹೊಂದುತ್ತಿವೆ. ಆದರೆ ಎಲ್ಲಾ ಲಂಬಾಣಿಗರು ತಾಂಡದಲ್ಲಿ ಪಾರಂಪರಿಕ ವೃತ್ತಿಯನ್ನು ಬಿಟ್ಟುಕೊಡದೆ ಕೆಲವರು ಇಂದಿಗೂ ಅಲೆಮಾರಿಗಳಾಗಿ ಲವಣಗಳನ್ನ, ಸಾಂಬಾರು ಪದಾರ್ಥಗಳನ್ನ, ಒಂದು ಊರಿನಿಂದ ಮತ್ತೊಂದು ಊರಿಗೆ ಅಲೆಯುತ್ತಾ ಮಾರಾಟ ಮಾಡುತ್ತಿದ್ದಾರೆ. ಆದರೆ ಇವರ ಸಂಖ್ಯೆ ಸಮುದಾಯದಲ್ಲಿ ತುಂಬಾ ಕಡಿಮೆ ಇದೆ. ಹಾಗೂ ಇಂದಿಗೂ ತಾಂಡದಲ್ಲಿ ಲಂಬಾಣಿ ಹೆಂಗಸರು ಕಾಡಿನ ಉತ್ಪನ್ನಗಳನ್ನ ಮಾರಿ ಜೀವಿಸುತ್ತಿದ್ದಾರೆ. ಪಾರಂಪರಿಕ ವೃತ್ತಿಯನ್ನು ಇನ್ನು ಸಂಪೂರ್ಣವಾಗಿ ಬಿಟ್ಟುಕೊಡದೆ ಉಳಿಸಿಕೊಂಡು ಲಂಬಾಣಿ ಬಡಗಿಗಳು, ಢಾಲ್ಯ (ಭಗತ್) ಪೂಜಾರಿಗಳು ಇದ್ದಾರೆ ತಾಂಡದ ಲಂಬಾಣಿ ಬಡಗಿಯು ತಾಂಡದ ಜನರಿಗೆ ಕೃಷಿಪೂರಕ ಉಪಕರಣಗಳನ್ನು ಮಾಡಿಕೊಟ್ಟರೆ ಪೂಜಾರಿಯು ಮಟ್ಠೋ ದೇವಸ್ಥಾನದ ಸೇವಭಾಯ ಮರಿಯಮ್ಮ ದೇವಿಯರ ಪೂಜೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಢಾಲ್ಯ ತಾಂಡದ ಸಭೆ ಸಮಾರಂಭದಲ್ಲಿ ಹಲಗೆಯನ್ನು ಬಾರಿಸುತ್ತಾ ಉಪ ಜೀವಿಸುತ್ತಿದ್ದಾರೆ. ಆದರೆ ಇವರುಗಳು

ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಶಿಕ್ಷಣವನ್ನು ಹೊಂದಿ, ಜಮೀನುಗಳನ್ನು ಹೊಂದುತ್ತಾ, ಪಾರಂಪರಿಕ ವೃತ್ತಿಯನ್ನು ಕಾಲಕ್ರಮೇಣವಾಗಿ ಬಿಡುತ್ತಾ ಬರುತ್ತಿದ್ದಾರೆ.

ಲಂಬಾಣಿಗರು ಇಂದೂ ಹೆಚ್ಚಿನ ಪ್ರಮಾಣದಲ್ಲಿ ಪಾರಂಪರಿಕ ವೃತ್ತಿಯನ್ನು ಬಿಟ್ಟು ಪರ್ಯಾಯವಾಗಿ ಹಲವಾರು ನೂತನ ವೃತ್ತಿಗಳನ್ನ ಅವಲಂಬಿಸುತ್ತಿದ್ದಾರೆ. ಕೃಷಿ ಜಮೀನನ್ನು ಹೊಂದಿದ್ದವನು ವ್ಯವಸಾಯವನ್ನು ಮಾಡುತ್ತಾ, ಭೂರಹಿತ ಕೂಲಿಯನ್ನು, ಜೀತವನ್ನು ಮಾಡಿದರೆ ತಾಂಡದಲ್ಲಿ ಸಣ್ಣಪುಟ್ಟ ದಿನಸಿ, ಸಾರಾಯಿ ಅಂಗಡಿ, ಗೊಬ್ಬರದ ಅಂಗಡಿ, ಹೋಟೆಲು, ಕ್ಯಾಂಟೀನು ಮುಂತಾದ ಅಂಗಡಿಗಳನ್ನು ನಡೆಸುತ್ತಾ ಇದ್ದಾರೆ. ದೊಡ್ಡ ಭೂ ಹಿಡುವಳಿದಾರರೆಂದು ತಾಂಡದಲ್ಲಿ ಯಾರು ಇಲ್ಲ. ಭೂಹಿಡುವಳಿದಾರರಲ್ಲಿ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು ತಮ್ಮ ಜಮೀನಿಗೆ ಬೋರ್‌ವೆಲ್‌ಗಳನ್ನು ಹಾಕಿಸಿ ಅಡಿಕೆ, ತೆಂಗು, ಬಾಳೆ, ತರಕಾರಿ, ಹಣ್ಣುಹಂಪಲುಗಳನ್ನು ಬೆಳೆಯುತ್ತಿದ್ದಾರೆ. ನೀರಾವರಿ ಜಮೀನನ್ನು ಹೊಂದಿರುವವರು ಭತ್ತ, ಕಬ್ಬುಗಳನ್ನು ಬೆಳೆಯುತ್ತಾರೆ. ಶಿಕ್ಷಣ ಹೊಂದಿದ ಪದವಿಧರರು ಸರಕಾರಿ ಉದ್ಯೋಗದಲ್ಲಿ, ತಾತ್ಕಲಿಕ ನೌಕರಿಯಲ್ಲಿ ಇದ್ದಾರೆ. ಹಾಗೆಯೇ ದೊಡ್ಡ ವ್ಯಾಪಾರಗಳನ್ನು ನಡೆಸುತ್ತಿದ್ದಾರೆ. ಉಳಿದವರು ಕೂಲಿಯನ್ನು ಪರ್ಯಾಯ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಈ ರೀತಿಯಲ್ಲಿ ಆರಂಭಿಸಿದ ವೃತ್ತಿಗಳಿಂದ ಇವರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳು ಏಕರೀತಿಯಲ್ಲಿ ರೂಪಾಂತರಗೊಂಡಿರದೆ, ಅವರು ಅನುಸರಿಸುವ ವೃತ್ತಿಗೆ ಅನುಗುಣವಾಗಿ ಸಮಾಜದಲ್ಲಿ ಸ್ಥಾನಮಾನವನ್ನು ಹೊಂದಿದ್ದಾರೆ. ತಾಂಡದಲ್ಲಿ ಆರ್ಥಿಕ ಸ್ವಾವಲಂಬಿಗಳೆಂದರೆ ಉದ್ಯೋಗದಲ್ಲಿರುವವರು, ಮಧ್ಯಮ ವರ್ಗದಲ್ಲಿ ವ್ಯಾಪಾರ ಮಾಡುವ ತಾತ್ಕಲಿಕ ವೃತ್ತಿಯನ್ನು ಮಾಡುವವರು. ಮಧ್ಯಮ ಭೂಹಿಡುವಳಿದಾರರು ಕೆಳಹಂತದಲ್ಲಿ ಭೂ ರಹಿತರು, ಕೂಲಿ, ಜೀತದಾಳುಗಳು ಇದ್ದಾರೆ. ಮೇಲ್ವರ್ಗದವರ ಸಾಮಾಜಿಕ ಸ್ಥಾನವನ್ನು ಅವರು ಅವಲಂಬಿಸಿರುವ ಆರ್ಥಿಕ ಚಟುವಟಿಕೆಯ ಆಧಾರದ ಮೇಲೆ ವಿಭಜಿಸಬಹುದು. ಉದ್ಯೋದದಲ್ಲಿ ಇದ್ದವರು ಮನೆ, ಆಸ್ತಿ, ಅಧಿಕಾರವನ್ನು ಹೊಂದಿದವರು ಮೇಲಿನ ಅಂತಸ್ತನ್ನು ಹೊಂದಿ ಸಾಮಾಜಿಕವಾಗಿ ಆರ್ಥಿಕವಾಗಿ ಸಬಲರಾಗಿದ್ದಾರೆ. ಹಾಗೆಯೇ ಬರೀ ಉದ್ಯೋಗದಲ್ಲಿರುವವರು ಇವರಿಗಿಂತ ಕೆಳಹಂತದ ಸ್ಥಾನಮಾನವನ್ನು ಹೊಂದಿದ್ದಾರೆ. ಹಾಗೂ ನೀರಾವರಿ ಜಮೀನನ್ನು ಹೊಂದಿರುವವರು ಆರ್ಥಿಕವಾಗಿ ಸಬಲರಾಗಿದ್ದಾರೆ. ಮಧ್ಯಮ ವರ್ಗದ ತಾಂಡವಾಸಿಗಳಲ್ಲಿ ಕಡಿಮೆ ಭೂ ಹಿಡುವಳಿದಾರರು ಸ್ವಂತ ಮನೆಗಳನ್ನು ಹೊಂದಿ ವ್ಯಾಪಾರ ಮಾಡುವವರು ಇದ್ದಾರೆ. ಹಾಗೆಯೇ ತಾತ್ಕಲಿಕ ನೌಕರಿಯಾಗಿ ಶಿಕ್ಷಣ ಸಂಸ್ಥೆಗಳಲ್ಲಿ, ಗ್ರಾಮಪಂಚಾಯ್ತಿಯಲ್ಲಿ, ನೀರಗಂಟಿಗಳಾಗಿ ಸೇವೆ ಸಲ್ಲಿಸುವವರಾಗಿದ್ದಾರೆ. ಕೆಳಸ್ಥಾನಮಾನದವರಿಗಿಂತ ಉತ್ತಮವಾದ ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ಹೊಂದಿ ಆರ್ಥಿಕವಾಗಿ ಇವರಿಗಿಂತ ಸಬಲರಾಗುತ್ತಿದ್ದಾರೆ.

ಕೆಳಸ್ಥಾನವನ್ನು ಹೊಂದಿರುವ ಕೂಲಿ, ಜೀತದಾಳುಗಳು, ಭೂರಹಿತ ಕೂಲಿ ಕಾರ್ಮಿಕರು ದಿನನಿತ್ಯ ಕೂಲಿ ಮಾಡುವ ಚಟುವಟಿಕೆಯಲ್ಲಿ ತೊಡಗಿ ಕೂಲಿಯನ್ನು ಮಾಡಲು ದೂರದೂರದ ಊರುಗಳಿಗೆ ಹೋಗುತ್ತಾರೆ. ಇವರು ಸರಕಾರದ ಆಶ್ರಯ ಮನೆಗಳನ್ನು ಹೊಂದಿದ್ದಾರೆ. ಈ ತಾಂಡಾಗಳಲ್ಲಿ ಸ್ವಂತ ಮನೆಯನ್ನು ಹೊಂದದೆ ಇರುವವರು ಇದ್ದಾರೆ. ಇವರು ಮಕ್ಕಳಿಗೆ ಶಿಕ್ಷಣವನ್ನು ದೊರಕಿಸುವಷ್ಟು

ಸ್ಥಿತಿವಂತರಾಗಿರದೆ ಮಕ್ಕಳನ್ನು ಅರ್ಧದಲ್ಲೆ ಶಾಲೆಯನ್ನು ಬಿಡಿಸಿ ತಮ್ಮ ಜತೆ ಕೂಲಿ ಮಾಡಲು ಅಥವಾ ಜೀತದಾಳುಗಳಾಗಿ ಜಮೀನುದಾರರ ಮನೆಯಲ್ಲಿ ಬಿಟ್ಟಿದ್ದಾರೆ. ಸಾಮಾಜಿಕವಾಗಿ ಹಿಂದುಳಿದಿದ್ದು, ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದಾರೆ. ಹಾಗೂ ನೆಲೆ ಇಲ್ಲದವರಾಗಿದ್ದಾರೆ.

### ೨. ಪಾರಂಪರಿಕ ವೃತ್ತಿಗಳ ನಾಶ

"ಸ್ವಾತಂತ್ರ್ಯ ನಂತರದ ಭಾರತದಲ್ಲಿ ಪಾರಂಪರಿಕ ಕುಲಕಸುಬು ಕರಕುಶಲ ತಂತ್ರಜ್ಞಾನ ನಾಶವಾಗಿ ಅವುಗಳನ್ನು ನಂಬಿದ್ದ ಸಮುದಾಯಗಳು ಮೂಲೆಗುಂಪಾದವು. ದೇಶಿ ಉತ್ಪಾದನಾ ವಿಧಾನಕ್ಕೆ ಮಾರುಕಟ್ಟೆ ಇಲ್ಲದಂತೆ ಮಾಡಲಾಯಿತು. ಜೊತೆಗೆ ಸ್ವಾತಂತ್ರ್ಯ ನಂತರದ ಭಾರತದ ಆರ್ಥಿಕ ಯೋಜನೆಗಳು, ದೇಶಿ ತಂತ್ರಜ್ಞಾನದ ವಿಧಾನಗಳನ್ನು ಕಡೆಗಣಿಸಿ ಯುರೋಪಿನ ಕೈಗಾರಿಕಾ ಕ್ರಾಂತಿಯ ಪೊಳ್ಳು ಮಾದರಿ ಅನುಕರಿಸುವ ಮೂಲಕ ಅನೇಕ ಸಮುದಾಯಗಳ ಆರ್ಥಿಕ ವ್ಯವಸ್ಥೆಯನ್ನೆ ದುರ್ಬಲ ಗೊಳಿಸಲಾಯಿತು. ಜಾತಿಯ ಕೈಗಳಲ್ಲಿದ್ದ ಕರಕುಶಲ ಕಸುಬುಗಳನ್ನು ಕ್ಷೀಣಿಸುವಂತೆ ಅಥವಾ ಅದಕ್ಕೆ ಯಾವ ಗೌರವವೂ ಇಲ್ಲದಂತೆ ಮಾಡಲಾಯಿತು. ಆಧುನಿಕ ಜಗತ್ತಿನ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಳ್ಳಲು ಸೂಕ್ತವಾದ ತರಬೇತಿಯ, ಸಿದ್ದತೆಯೇ ಕೆಳಜಾತಿಗಳಿಗೆ ಇರಲಿಲ್ಲ"[೨] ಜಾಗತೀಕರಣ, ಉದಾರೀಕರಣ, ಕೈಗಾರಿಕೀಕರಣ ಆಧುನಿಕತೆಯ ಪ್ರಭಾವದಿಂದ ನಮ್ಮ ಸಮಾಜದಲ್ಲಿದ್ದ ಪಾರಂಪರಿಕ ವೃತ್ತಿಗಳಾದ ಚಮ್ಮಾರಿಕೆ, ಕುಂಬಾರಿಕೆ, ಬಡಿಗ, ಗಾಣಿಗ, ನೇಕಾರಿಕೆಯ ಜೊತೆಗೆ ಲಂಬಾಣಿಗಳ ಪಾರಂಪರಿಕ ವ್ಯಾಪಾರ ವೃತ್ತಿಯು ನಾಶವಾಗುತ್ತ ಬಂದವು. ಈ ವೃತ್ತಿಗಳು ಅನುವಂಶೀಯವಾಗಿ ಬಂದವುಗಳಾಗಿ, ಮನೆ ಮಂದಿಗೆಲ್ಲಾ ಉದ್ಯೋಗದ ಭರವಸೆ ಇದ್ದು ಎಲ್ಲರೂ ದುಡಿಯುತ್ತಾ ಕುಟುಂಬದಲ್ಲಿ ಸಹಕಾರ, ಶಾಂತಿ, ನೆಲೆಸಿತ್ತು. ಆದರೆ ಆಧುನಿಕತೆ ಹಾಗೂ ತಂತ್ರಜ್ಞಾನದಿಂದಾಗಿ ಇವರೆಲ್ಲರೂ ನಿರುದ್ಯೋಗಿಗಳಾಗಿ ನೆಲೆ ನಿಲ್ಲದಂತಾಗಿದ್ದಾರೆ.

ಲಂಬಾಣಿಗಳು ತಮ್ಮ ಪಾರಂಪರಿಕ ವೃತ್ತಿಯಾದ ವ್ಯಾಪಾರ, ಪಶುಪಾಲನೆಯಿಂದ ಬ್ರಿಟಿಷರ ಕಾಲಾವಧಿಯಲ್ಲಿ ವೃತ್ತಿಹೀನರಾಗಿ ಜೀವನದ ಬಗ್ಗೆ ನಿಶ್ಚಿತತೆ ಇಲ್ಲದೆ, ಆರ್ಥಿಕ ಸುರಕ್ಷತೆಯೂ ಇಲ್ಲದೆ, ಅತಂತ್ರ ಸ್ಥಿತಿಯಲ್ಲಿದ್ದರು. ಅಂತಹ ಸಂದರ್ಭದಲ್ಲಿ ಪರ್ಯಾಯ ಆರ್ಥಿಕ ಮೂಲಗಳನ್ನು ಕಂಡುಕೊಳ್ಳುವುದು ಇವರಿಗೆ ಅನಿವಾರ್ಯವಾಯಿತು. ಹಿಂದಿನಂತೆ ಲಂಬಾಣಿಗರು ಸಬಲರಾಗುವ ಬದಲು, ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿಯುತ್ತಾ ಬಂದರು. ನೂರಾರು ಜನ ಲಂಬಾಣಿಗರು ಆರ್ಥಿಕ ಮೂಲವನ್ನು ಕಂಡುಕೊಳ್ಳಲು ಹವಣಿಸುತ್ತಾ ಜೀವನದ ಎಲ್ಲಾ ರಂಗದ ಮೇಲೆ ದುಷ್ಪರಿಣಾಮಗಳನ್ನೇ ಅನುಭವಿಸಿದರು. ಇದ್ದ ಪಾರಂಪರಿಕ ವೃತ್ತಿಯು ನಾಶವಾಗಿ ಕಾಲಕ್ರಮೇಣ ಪರ್ಯಾಯ ವೃತ್ತಿಯನ್ನೇ ಕಂಡುಕೊಂಡರು

ಕೆಲವರು ತಮ್ಮ ಸಾಮಾಜಿಕ ಸ್ಥಾನಮಾನವನ್ನು ಉತ್ತಮಪಡಿಸಿಕೊಳ್ಳುವ ಪ್ರಯತ್ನದಲ್ಲಿ ಹಾಗೂ ಸಂದರ್ಭಕ್ಕೆ ಕಟ್ಟುಬಿದ್ದು ತಮ್ಮ ಮೂಲ ಪಾರಂಪರಿಕ ವೃತ್ತಿಯನ್ನು ಬಿಟ್ಟು ಆಧುನಿಕ ವೃತ್ತಿಗಳನ್ನು ಅವಲಂಬಿಸಿದರು. ಪರಿಣಾಮ ಪಾರಂಪರಿಕ ವೃತ್ತಿಯು ನಾಶವಾಗುತ್ತಾ ಬಂದಿತು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಾರಂಪರಿಕ ವೃತ್ತಿಗೆ ಹೊಸ ಪರಿಭಾಷೆ, ರೂಪ, ಸೊಬಗನ್ನು ನೀಡಿ, ವೈಭವೀಕರಣಗೊಳಿಸಿ, ಆರ್ಥಿಕವಾಗಿ ಬಂಡವಾಳಶಾಹಿಗಳು ಇದರಿಂದ ಲಾಭ ಪಡೆಯುತ್ತಿದ್ದಾರೆ.

ಲಂಬಾಣಿಗರ ಕೌಶಲ್ಯತೆಯನ್ನು, ತಂತ್ರಜ್ಞಾನವನ್ನು ಬಂಡವಾಳಶಾಹಿಗಳು ಬಳಸಿಕೊಂಡು ದೇಶೀಯತೆಯ ಹೆಸರಲ್ಲಿ ತಮ್ಮ ಬಂಡವಾಳವನ್ನು ವೃದ್ಧಿಸಿಕೊಳ್ಳುತ್ತಾರೆ. ಪರಿಣಿತಿ, ಕೌಶಲ್ಯತೆ, ವಿಧಾನ, ತರಬೇತಿ, ಕರಕುಶಲ ತಂತ್ರಜ್ಞಾನ ಮಾತ್ರ ತೋರಿಸಿಕೊಡಲು ಇವರು ಬೇಕು. ತೋರಿಸಿಕೊಟ್ಟನಂತರ ಅದನ್ನು ಬಂಡವಾಳಶಾಹಿಗಳು ಪಾರಂಪರಿಕ ಕಸುಬನ್ನು ಸಮುದಾಯಗಳಿಂದ ಬೇರ್ಪಡಿಸಿ ಲಾಭ ಪಡೆಯುತ್ತಾರೆ. ಹೀಗೆ ಒಂದು ಕಡೆ ಸಂದರ್ಭಕ್ಕೆ ಕಟ್ಟುಬಿದ್ದು ಪಾರಂಪರಿಕ ವೃತ್ತಿಯು ನಾಶವಾದರೆ, ಬಂಡವಾಳಶಾಹಿಗಳ ತೃಷೆಗೆ ಮತ್ತು ಕೈಗಾರಿಕೀಕರಣ ಜಾಗತೀಕರಣದ ಪ್ರಭಾವದಿಂದ ಪಾರಂಪರಿಕ ವೃತ್ತಿಯ ಜಾಗದಲ್ಲಿ ಹೊಸ ರೂಪವನ್ನು ಪಡೆದು ಬೇರೆ ವೃತ್ತಿಯು ಬಡವರಿಗೆ ಕೆಳವರ್ಗದವರಿಗೆ ಸ್ಪರ್ಧೆಯಾಗಿ ಮುಂದೆ ನಿಂತಿದೆ. ಈ ಒಂದು ಸಂಕ್ರಮಣ ಸ್ಥಿತಿಯನ್ನು ಎದುರಿಸುವ ಶಕ್ತಿಯಾಗಲಿ, ಯುಕ್ತಿಯಾಗಲಿ, ಈ ಮುಗ್ಧ ಸಮುದಾಯಕ್ಕೆ ಇಲ್ಲ.

ಕೈಗಾರೀಕಿಕರಣದಿಂದ ಸಮಾಜ ಬದಲಾಗಿದೆ, ಲಕ್ಷಾಂತರ ಮಂದಿಗೆ ಕೆಲಸ ದೊರೆತಿದೆ. ಆದರೆ ಅದರ ಹತ್ತರಷ್ಟು ಮಂದಿ ಪಾರಂಪರಿಕ ಕುಲಕಸುಬುದಾರರು ನಿರುದ್ಯೋಗಿಗಳಾಗಿ ಪ್ರಾಥಮಿಕ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳದಂತಹ ಸಂದಿಗ್ಧತೆಯಲ್ಲಿದ್ದಾರೆ. ಹಲವು ಸಂದರ್ಭದಲ್ಲಿ ಪಾರಂಪರಿಕ ವೃತ್ತಿಯನ್ನು ಆಯಾ ಸಮುದಾಯಗಳೇ ಬಿಟ್ಟುಕೊಡಲಾರಂಬಿಸಿರುವುದು ಭಾರತದ ಚರಿತ್ರೆಯುದ್ದಕ್ಕೂ ನಡೆದು ಬಂದಿದೆ. ಏಕೆಂದರೆ ಒಂದು ಸಮುದಾಯದ ವೃತ್ತಿಗೂ, ಆ ಸಮುದಾಯದ ಸಾಮಾಜಿಕ ಸ್ಥಾನಮಾನಕ್ಕೂ ಕೂಡ ಸಂಬಂಧಗಳಿರುವ ಕಾರಣಹೀನ ವೃತ್ತಿಗಳನ್ನು ಅನಿವಾರ್ಯವಾಗಿ ಒಪ್ಪಿಕೊಂಡು ಬಂದ ಸಮುದಾಯಗಳು ಸಾಮಾಜಿಕ ಅವಮಾನವನ್ನು ಮೀರಿ ನಿಲ್ಲುವ ಚಾರಿತ್ರಿಕ ಒತ್ತಡಕ್ಕೆ ಅನುಗುಣವಾಗಿ ತಮ್ಮ ಪಾರಂಪರಿಕ ವೃತ್ತಿಗಳನ್ನು ಬಿಟ್ಟು ನಿಂತಿವೆ. ಹೀಗಾಗಿ ಪಾರಂಪರಿಕ ವೃತ್ತಿಗಳು ಹಲವು ಕಾರಣಗಳಿಗಾಗಿ ನಾಶವಾಗುತ್ತ ಬಂದವು.



## ೩. ಪಾರಂಪರಿಕ ವೃತ್ತಿಗಳು ಮತ್ತು ಸಾಮಾಜಿಕ ಕೀಳರಿಮೆ

ಭಾರತದ ಇತಿಹಾಸದಲ್ಲಿ ಯಾವುದೇ ಕಾಲಘಟ್ಟದಲ್ಲಿ ಕೆಳ ಸಮುದಾಯಗಳು ಅವು ಅವಲಂಬಿಸಿದ್ದ ವೃತ್ತಿಯಿಂದಾಗಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆಯಲಿಲ್ಲ. ಕೆಳಜಾತಿಗಳು ಬುಡಕಟ್ಟು ಸಮುದಾಯಗಳು ಅವಲಂಬಿಸಿರುವ ವೃತ್ತಿಗಳು ಸಮಾಜಕ್ಕೆ ಅನಿವಾರ್ಯವಾದರೂ ಈ ಸಮುದಾಯಗಳು ಮಾತ್ರ ಜಾತಿ ವ್ಯವಸ್ಥೆಯಲ್ಲಿ ಕೆಳಸ್ಥಾನವನ್ನೆ ಹೊಂದಿದ್ದವು. ಒಂದೆಡೆ ಪಾರಂಪರಿಕ ವೃತ್ತಿಯು ಕೈಗಾರಿಕೀಕರಣ, ತಂತ್ರಜ್ಞಾನಗಳಿಂದ ನಾಶವಾಗುತ್ತಾ ಸಮುದಾಯಗಳಿಗೆ ನಷ್ಟವನ್ನು ಉಂಟು ಮಾಡುತ್ತಿದ್ದವು. ಸಮುದಾಯಗಳು ಪಾರಂಪರಿಕ ವೃತ್ತಿಗಳನ್ನು ಆದಾಯರಹಿತವೆಂದು ಕಾಲಕ್ರಮೇಣ ಬಿಡುತ್ತಾ ಆಧುನಿಕ ವೃತ್ತಿಗಳನ್ನು ಅವಲಂಬಿಸುತ್ತಾ ಬಂದವು. ಹೀಗೆ ಪಾರಂಪರಿಕ ವೃತ್ತಿಗಳು ಸಮುದಾಯದ ಜನರಲ್ಲಿ ಸಾಮಾಜಿಕ ಕೀಳರಿಮೆಯನ್ನು ಉಂಟು ಮಾಡುತ್ತಿದ್ದವು. ಸಮುದಾಯಗಳು ಇವುಗಳನ್ನೆಲ್ಲಾ ಮೀರಿ ಬದಲಾವಣೆಗೆ ತಮ್ಮನ್ನು ತೊಡಗಿಸಿಕೊಳ್ಳಲು ದಶಕಗಳನ್ನು ತೆಗೆದುಕೊಂಡವು. ಜಾತಿ ವ್ಯವಸ್ಥೆ ಇದಕ್ಕೆ ಅವಕಾಶವನ್ನು ನೀಡುತ್ತಿರಲಿಲ್ಲವೆಂಬುದು ಸಾಮಾನ್ಯ ತಿಳುವಳಿಕೆಯಾಗಿದೆ. ಪಾರಂಪರಿಕ ವೃತ್ತಿಗಳಿಂದಾಗಿ ಸಾಮಾಜಿಕ ಅವಮಾನಗಳನ್ನು ಅನುಭವಿಸುವ ಸಮುದಾಯಗಳು ಆ ವೃತ್ತಿಗಳನ್ನೇ ಬಿಡಲಾರಂಭಿಸಿದವು.

[illegible]

ಮೂಲ ವೃತ್ತಿ ಬಿಡುವುದೆ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳುವ ಪ್ರಯತ್ನವಾಗಿದೆ. ಯಾವ ವೃತ್ತಿಯಿಂದ ಸಾಮಾಜಿಕ ಗೌರವ ಮಾನ್ಯತೆ, ಆದಾಯ, ಆರ್ಥಿಕ ಭದ್ರತೆ, ಜೀವನದ ನಿಶ್ಚಿತತೆ ದೊರೆಯುವುದಿಲ್ಲವೋ ಆ ವೃತ್ತಿಯಿಂದ ಸಮುದಾಯದ ಪ್ರಗತಿಯ ಬದಲು ಅಪ್ರಗತಿ ಉಂಟಾಗುತ್ತದೆಯೋ ಆ ಮೂಲ ವೃತ್ತಿ ಬಿಡುವುದೆ ಒಳ್ಳೆಯ ಪ್ರಯತ್ನವಾಗಿದೆ. ಒಂದು ವೇಳೆ ಆ ವೃತ್ತಿಯಿಂದ ಲಾಭವಾದರೆ ಇರಲಿ ಎಂದು ಮುಂದುವರೆಸಬಹುದು. ಆದರೆ ಇದರಿಂದ ಬಡತನ, ಕನಿಷ್ಟ, ಸೌಲ್ಯಭ್ಯ ರಹಿತತೆ, ಆರ್ಥಿಕ ಹಿನ್ನಡೆ, ಸಾಮಾಜಿಕ ಕೀಳರಮೆ ಹೊಂದವ ಬದಲು ಆಧುನಿಕ ಶಿಕ್ಷಣವನ್ನು ಪಡೆದು ತಾಂಡದಲ್ಲಿ ಒಂದು ಪ್ರಯತ್ನವೆಂಬಂತೆ ಹಲವಾರು ಕುಟುಂಬಗಳು ಆಧುನಿಕ ಹೊಸ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳ ತೊಡಗಿದವು. ಶಿಕ್ಷಣ ಹೊಂದಿದವರು ಸರಕಾರದ ಮೀಸಲಾತಿಯನ್ನು ಪಡೆದು ಉದ್ಯೋಗದಲ್ಲಿದ್ದಾರೆ. ಇವರು ತಮ್ಮ ಪಾರಂಪರಿಕ ವೃತ್ತಿಯನ್ನು ಮುಂದುವರೆಸುವುದನ್ನು ಇಷ್ಟಪಡದೆ ವ್ಯಾಪಾರವನ್ನು, ಆಧುನಿಕ ಉದ್ಯೋಗಗಳನ್ನು, ಸ್ತ್ರೀಪುರುಷರಿಬ್ಬರೂ ಮಾಡುತ್ತಿದ್ದಾರೆ. ತಾವೂ ಕೂಡ ಸಮಾಜದಲ್ಲಿ ಶಿಕ್ಷಣ, ಅಧಿಕಾರ, ಆಸ್ತಿ, ಸಂಪತ್ತು, ಉದ್ಯೋಗವನ್ನು ಹೊಂದಿ ಬಂಡವಾಳವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಸಮಾಜದಲ್ಲಿ ಇವುಗಳಿಂದ ಉತ್ತಮ ಸ್ಥಾನಮಾನವನ್ನು ಪಡೆಯಬೇಕೆಂಬ ನಿರೀಕ್ಷೆಯನ್ನು ಕೂಡ ಮಾಡುತ್ತಿರುವರು. ಮೇಲ್ವರ್ಗದವರಂತೆ ತಾವೂ ಕೂಡ ಆಗಬೇಕೆಂಬ ಸ್ಪರ್ಧೆ ಕೂಡ ಸಮುದಾಯಕ್ಕೆ ಪಾರಂಪರಿಕ ವೃತ್ತಿಯನ್ನು ಬಿಡಲು ಪ್ರೇರಕವಾಗಿದೆ. ಏಕೆಂದರೆ ಮುಖ್ಯವಾಹಿನಿಯನ್ನು ಸಮಾಜದಲ್ಲಿ ಎಲ್ಲರೂ ಅನುಕರಣೆ ಮಾಡುತ್ತಾರೆ. ಒಬ್ಬ ಒಳ್ಳೆಯ ಸಮುದಾಯದ ವ್ಯಕ್ತಿ ಮೇಲ್ವರ್ಗದಲ್ಲಿರುವ ವ್ಯಕ್ತಿಯಂತೆ ಬಂಡವಾಳವನ್ನು, ಐಷಾರಾಮ ವಸ್ತುಗಳನ್ನ, ಅಂತಸ್ತನ್ನ, ಉದ್ಯೋಗ, ಅಧಿಕಾರ ಆರ್ಥಿಕ ಬಲವನ್ನು ಪಡೆಯಬೇಕೆಂದು ಪ್ರಯತ್ನಿಸುತ್ತಾನೆ. ಹೀಗೆ ಮೂಲ ವೃತ್ತಿಯನ್ನು ಬಿಟ್ಟು ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ ಎಂಬ ಮುಖ್ಯ ಪ್ರಶ್ನೆಗೆ ಬೆರಳಣಿಕೆಯಷ್ಟು ಜನ ಮಾತ್ರ ಈ ರೀತಿ ಪಾರಂಪರಿಕ ವೃತ್ತಿಯನ್ನು ಬಿಟ್ಟು ಸ್ಥಾನಮಾನಗಳನ್ನ ಉತ್ತಮ ಪಡಿಸಿಕೊಳ್ಳಲು ಭಿನ್ನ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯತೆಯನ್ನ ಸೃಷ್ಟಿಸಿಕೊಂಡು ಪ್ರಯತ್ನಿಸುತ್ತಿದ್ದಾರೆ.

## ೪. ಆರ್ಥಿಕ ಚಟುವಟಿಕೆಗಳ ರೂಪಾಂತರಗಳು

ಸಮುದಾಯ ತನ್ನ ಪಾರಂಪರಿಕ ಆರ್ಥಿಕ ಚಟುವಟಿಕೆಗಳಿಂದ ಲಾಭ ಪಡಿಯದೆ ನಷ್ಟ ಅನುಭವಿಸುವ ಸಂದರ್ಭ ಕೈಗಾರಿಕೀಕರಣದಿಂದ ಪ್ರಾರಂಭವಾಯಿತು. ಇಲ್ಲಿನ ಸಮುದಾಯಗಳು ಪಾರಂಪರಿಕ ವೃತ್ತಿಯನ್ನು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಿಸಲ್ಪಟ್ಟು ಶತಮಾನಗಳ ಹಿಂದಿನಿಂದಲೂ ಜೀವನಕ್ಕೆ ಮುಖ್ಯ ಆಧಾರ ವೃತ್ತಿಯನ್ನಾಗಿ ವ್ಯಾಪಾರ, ಕುಂಬಾರಿಕೆ, ಬಡಿಗ, ನೇಕಾರಿಕೆ, ದರ್ಜಿ ಮುಂತಾದುವುಗಳನ್ನು ಆಯಾ ಸಮುದಾಯಗಳು ಮಾಡುತ್ತಿದ್ದು ಆರ್ಥಿಕ ಸ್ವಾಲಂಬನೆಯನ್ನು ಹೊಂದಿದ್ದವು. ಕಾಲಕ್ರಮೇಣ ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ಸಮಾಜವು ದಿನದಿಂದ ದಿನಕ್ಕೆ ಬದಲಾವಣೆಯನ್ನು ಹೊಂದುತ್ತಾ ಬಂದಿತು. ಆಧುನಿಕ ಯುಗವನ್ನು ವಿಜ್ಞಾನಯುಗ ಎಂದು ಕರೆಯುತ್ತೇವೆ. ಜಗತ್ತನ್ನು ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳು ಅಗಾಧವಾಗಿ ಬೆಳೆಸಿವೆ.

೧೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾದ ಔದ್ಯೋಗಿಕ ಕ್ರಾಂತಿಯು ಇಂದು ಇಡೀ ಜಗತ್ತನ್ನೇ ಆವರಿಸಿದೆ. ಹಬೆಶಕ್ತಿ, ತೈಲಶಕ್ತಿ, ವಿದ್ಯುತ್, ಅಣುಶಕ್ತಿ ಮುಂತಾದವುಗಳಿಂದ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಗೆ ಎಡೆಮಾಡಿಕೊಟ್ಟಿದೆ. ಯಾಂತ್ರೀಕರಣದಿಂದಾಗಿ ದೊಡ್ಡ ಗಿರಣಿಗಳು, ಬೃಹತ್ ಕಾರ್ಖಾನೆಗಳು ಜೀವನದ ವಿವಿಧ ಕ್ಷೇತ್ರಗಳಿಗೆ ಅಗತ್ಯವಾದ ಪದಾರ್ಥಗಳನ್ನು ಪೂರೈಸಲಿರುವ ಉದ್ಯಮಗಳು ನಿರ್ಮಾಣವಾಗುತ್ತಿವೆ. ಬಂಡವಾಳವಾದ ಶ್ರಮ ವಿಭಜನೆ, ಕಾರ್ಯ ನೈಪುಣ್ಯತೆ ಅಧಿಕ ಪ್ರಮಾಣದಲ್ಲಿ ಉಂಟಾಗಿವೆ. ಆಧುನಿಕ ಉತ್ಪಾದನಾ ಕ್ರಮದಲ್ಲಿ ಸಾವಿರಾರು ಜನರು ದುಡಿಮೆಯಿಂದ ಮಾಡುವ ಕೆಲಸವನ್ನು ಕೆಲವೆ ಘಂಟೆಗಳಲ್ಲಿ ಯಂತ್ರಗಳ ಸಹಾಯದಿಂದ ಮಾಡಿ ಮುಗಿಸಲಾಗುತ್ತದೆ. ಕಾರ್ಖಾನೆ ಹಾಗೂ ಗಿರಣಿಗಳಿಂದಾಗಿ ಮತ್ತು ವ್ಯಾಪಾರ ಪೈಪೋಟಿಯಿಂದಾಗಿ ಗ್ರಾಮ ಕೈಗಾರಿಕೆಗಳು, ಮೂಲೆ ಗುಂಪಾಗಿವೆ. ಬಡಗಿ, ನೇಯ್ಗೆ, ಕುಂಬಾರರ, ಎಣ್ಣೆ ಕಾಳುಗಳಿಂದ ಎಣ್ಣೆ ತೆಗೆಯುತ್ತಿದ್ದ, ಗಣಿಗಾರರಿಗೆ, ಕಬ್ಬಿಣದ ಕೆಸಲಮಾಡುತ್ತಿದ್ದ ಕಮ್ಮಾರರಿಗೆ ಕೈ ತುಂಬಾ ಕೆಲಸವಿದ್ದರೂ ಹೊಟ್ಟೆ ತುಂಬಾ ಅನ್ನ ದೊರಕದಾಯಿತು. ಯಂತ್ರ ಕೌಶಲ್ಯದ ಮುಂದೆ ಮಾನವನ ಕುಶಲತೆ ಶರಣಾಯಿತು.”[೫]

ಪಾರಂಪರಿಕ ವೃತ್ತಿ ಬದುಕಿಗೆ ಆಸರೆಯಾಗದೇ ಹೋದಾಗ ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟು, ಕೊಟ್ಟು, ಪರ್ಯಾಯ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯ ವಾಯಿತು. ಆದರೆ ಇಡೀ ಸಮುದಾಯ ಈ ಪ್ರಕ್ರಿಯೆಗೆ ಒಳಗಾಗಿಲ್ಲ ತಾಂಡದಲ್ಲಿ ಇಂದಿಗೂ ಹೆಚ್ಚಿನ ಕುಟುಂಬಗಳು ಕೂಲಿ, ಕೃಷಿ, ಸಣ್ಣಪುಟ್ಟ ವ್ಯಾಪಾರ, ಲವಣಗಳ ವ್ಯಾಪಾರವನ್ನು ಕೆಲ ಕುಟುಂಬಗಳು ಮಾಡುತ್ತಿವೆ.

## ೫. ಅಧ್ಯಯನಕ್ಕೊಳಪಟ್ಟ ತಾಂಡಾಗಳ ಆರ್ಥಿಕ ಚಟುವಟಿಕೆಗಳು

### ವ್ಯಾಪಾರ

ಲಂಬಾಣಿ ಸಮುದಾಯವದರು ಹಿಂದೆ ಆಹಾರ ಸಾಮಾಗ್ರಿ, ಖಾದ್ಯ, ಲವಣ ಪದಾರ್ಥ ಮುಂತಾದ ಸರಕುಗಳನ್ನು ಮಾರಾಟ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಆದರೆ ಇಂದು ಈ ರೀತಿಯ ವ್ಯಾಪಾರದಲ್ಲಿ ನಿರತವಾಗಿಲ್ಲ. ಆದರೆ ಕೆಲವೊಂದು ಕಡೆ ಇಂದಿಗೂ ಕೆಲ ಕುಟುಂಬಗಳು ಮಾತ್ರ ಸಾಂಬಾರು ಪದಾರ್ಥಗಳನ್ನು ಚಕ್ಕೆ, ಲವಂಗ, ಯಾಲಕ್ಕಿ, ಜೀರಿಗೆ, ಮುಂತಾದವುಗಳನ್ನು ಅಲೆಮಾರಿಗಳಾಗಿ ಊರಿಂದೂರಿಗೆ ಹೋಗಿ ಮಾರುತ್ತಿದ್ದಾರೆ. ಇವರುಗಳು ಲಂಬಾಣಿ ಸಮುದಾಯದ ಸದಸ್ಯರೇ ಆಗಿದ್ದಾರೆ.

ಆಧುನಿಕತೆಗೆ ಒಳಪಟ್ಟ ತಾಂಡದಲ್ಲಿಯೇ ಸಣ್ಣಪುಟ್ಟ ದಿನಸಿ ಅಂಗಡಿ, ಸಾರಾಯಿ, ತರಕಾರಿ, ಗೊಬ್ಬರದ ಅಂಗಡಿ ಮುಂತಾದ ವಾಣಿಜ್ಯ ವ್ಯಾಪಾರವನ್ನು ಮಾಡುತ್ತಿದ್ದಾರೆ. ಹತ್ತಿರದ ಪಟ್ಟಣಕ್ಕೆ, ಊರುಗಳಿಗೆ ಹೋಗಿ ಕೆಲವರು ದವಸಧಾನ್ಯಗಳನ್ನು, ಪಶುಪಾಲಕರು ತಾವು ಸಾಕಿದ ಕುರಿ, ಮೇಕೆಗಳನ್ನು ಸಂತೆಯಲ್ಲಿ ಮಾರುತ್ತಿದ್ದಾರೆ. ಈ ವ್ಯಾಪಾರದಿಂದ ಲಾಭವೆನ್ನುವುದು ನೀರಿಕ್ಷಿಸಲು ಆಗುವುದಿಲ್ಲ. ಏಕೆಂದರೆ ಇವರ ಜೊತೆಯಲ್ಲಿರುವ ಮೇಲ್ಜಾತಿಯ, ಮೇಲ್ವರ್ಗದವರ ದೊಡ್ಡದೊಡ್ಡ ಅಂಗಡಿಗಳ ವ್ಯಾಪಾರ ಹೆಚ್ಚು ಜಿರುಸಾಗಿ ನಡೆಯುತ್ತಿರುವಾಗ ಇವರಿಗೆ ಹೆಚ್ಚು ಲಾಭ ಇರುವುದಿಲ್ಲ. ಬಂಡವಾಳದ ಕೊರತೆಯಿಂದಾಗಿ ತಾಂಡದಲ್ಲೆ ಚಿಕ್ಕಚಿಕ್ಕ ಅಂಗಡಿಗಳನ್ನು ಮಾತ್ರ ಇವರು ಹೊಂದಿದ್ದಾರೆ.

ಚಿಕ್ಕಬಾಸೂರು ತಾಂಡದಲ್ಲಿ ೫-೬ ಅಂಗಡಿಗಳು ಕ್ಯಾಂಟಿನ್, ದಿನಸಿ ಅಂಗಡಿ ಒಂದು ಸಾರಾಯಿ ಅಂಗಡಿ ಇದ್ದರೆ, ಮಲೆಕುಂಬಳೂರಿನಲ್ಲಿ ಒಂದು ಎಸ್.ಟಿ.ಡಿ. ಗೊಬ್ಬರದ ಅಂಗಡಿ, ಸಾರಾಯಿ ಅಂಗಡಿ, ಕ್ಯಾಂಟಿನ್ ಇದೆ. ಸೂರಗೊಂಡನಕೊಪ್ಪದಲ್ಲಿ ೨ ದಿನಸಿ ಅಂಗಡಿ, ಇದೆ. ಗುಡ್ಡಳ್ಳಿ ತಾಂಡದಲ್ಲಿ ಒಂದು ಅಂಗಡಿಗಳಿಲ್ಲದೆ ಸಾಮಾನು ಬೇಕಾದರೆ ಮೂರು ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಗುಡ್ಡಳ್ಳಿಗೆ ಹೋಗಬೇಕು.

ಈ ತಾಂಡಗಳಲ್ಲಿರುವ ಅಂಗಡಿಗಳೆಲ್ಲದರ ಬಂಡವಾಳದ ಮೊತ್ತ ಒಟ್ಟು ಗೂಡಿಸಿದರೆ ೧೦-೧೫ ಸಾವಿರ ಕೂಡ ಆಗುವುದಿಲ್ಲ. ಅಷ್ಟು ಚಿಕ್ಕ ಮೊತ್ತದ ಬಂಡವಾಳವನ್ನು ಹೂಡಿ ವ್ಯಾಪಾರ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ವ್ಯಾಪಾರ ಮಾಡುತ್ತಿರುವ ಕೆಲ ಕುಟುಂಬಗಳ ಆರ್ಥಿಕ ಸ್ಥಿತಿಯಂತೂ ಕೂಲಿ ಮಾಡುತ್ತಿರುವ ಕುಟುಂಬಗಳಿಗಿಂತ ಕೆಳಸ್ಥಿತಿಯಲ್ಲಿದೆ. ಈ ಅಂಗಡಿಗಳಿಂದ ಲಾಭವನ್ನು ನಿರೀಕ್ಷಿಸಲು ಆಗದು. ಏಕೆಂದರೆ ಬರಗಾಲದ ಪರಿಣಾಮ ಜನರ ಹತ್ತಿರ ಹಣವಿಲ್ಲದ ಕಾರಣ ಒಂದೆರಡು ತಿಂಗಳು ವ್ಯಾಪಾರ ನಡೆಸಿ ವ್ಯಾಪಾರ ನಡೆಯದೆ ಅಂಗಡಿಗಳಿಗೆ ಬಾಗಿಲು ಹಾಕುತ್ತಾರೆ.

ತಾಂಡದಲ್ಲಿ ಹೆಂಡವನ್ನು ಕೂಡ ಇಳಿಸಲಾಗುತ್ತಿದೆ. ತಾಂಡದಿಂದ ದೂರ ಜಮೀನು ಅಥವಾ ಅರಣ್ಯದಲ್ಲಿ ಕಳ್ಳಬಟ್ಟಿ ಸಾರಾಯಿಯನ್ನು ಇಳಿಸುತ್ತಾರೆ. ಕದ್ದು ಸಾರಾಯಿಯನ್ನು ವ್ಯಾಪಾರ ಮಾಡುತ್ತಾರೆ. ಹವ್ಯಾಸಕ್ಕಾಗಿ ಮೀನುಗಳನ್ನು ಹಿಡಿದು ಮಾರಿ ವ್ಯಾಪಾರ ಮಾಡುತ್ತಾರೆ. ಬಡಗಿ ಕೆಲಸ ಮಾಡುವವರು ತಾವು ತಯಾರಿಸಿದ ಕೃಷಿಪೂರಕ ಉಪಕರಣಗಳನ್ನು ಮಾರುವುದರ ಜೊತೆ ಪಶುಪಾಲಕರು ಹಾಲು, ಬೆಣ್ಣೆ, ತುಪ್ಪದ ವ್ಯಾಪಾರ ಮಾಡುತ್ತಿದ್ದಾರೆ. ತೋಟಗಳನ್ನು ಹೊಂದಿದವರು ಅಡಿಕೆ, ತೆಂಗು, ತರಕಾರಿ, ಧಾನ್ಯ, ಹಣ್ಣುಹಂಪಲುಗಳನ್ನು ವ್ಯಾಪಾರ ಮಾಡುತ್ತಿದ್ದಾರೆ.

**ಕೋಷ್ಟಕ ೧**

**ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಪುರುಷರು ಮತ್ತು ಮಹಿಳೆಯರ ವಿವರ**

| ಕ್ರ.ಸ. | ತಾಂಡದ ಹೆಸರು | ಗಂಡು | ಹೆಣ್ಣು | ಒಟ್ಟು |
|---|---|---|---|---|
| ೧. | ಚಿಕ್ಕಬಾಸೂರುತಾಂಡ | ೪೦ | ೧೬ | ೫೬ |
| ೨. | ಮಲೆಕುಂಬಳೂರು | ೧೦ | ೦೪ | ೧೪ |
| ೩. | ಗುಡ್ಡಳ್ಳಿತಾಂಡ | ೦೩ | ೦೮ | ೧೧ |
| ೪. | ಸೂರಗೊಂಡನಕೊಪ್ಪ | ೦೬ | ೦೬ | ೧೨ |
| | ಒಟ್ಟು | ೫೯ | ೩೪ | ೯೩ |

## ಅ. ಮಹಿಳೆಯರು ಅವಲಂಬಿಸಿರುವ ವ್ಯಾಪಾರಗಳು

ತಾಂಡದ ಮಹಿಳೆಯರು ಶ್ರಮಜೀವಿಗಳು ಜೀವನಪೂರ್ತಿ ದುಡಿಯುವುದರಲ್ಲೇ ಕಳೆಯುತ್ತಾರೆ. ಎಂದಿಗೂ ಕೂತು ಉಂಡುವುದು ಅವರಿಂದ ಸಾಧ್ಯವಿಲ್ಲ. ಬೆಟ್ಟಗುಡ್ಡಗಳಿಂದ ಮುಂಜಾನೆ ಹತ್ತಾರು ಮೈಲಿ ಬರಿಗಾಲಿನಲ್ಲಿ, ಹೋದರೆ ಸಂಜೆಯ ಹೊತ್ತಿಗೆ ದೊಡ್ಡ ಕಟ್ಟಿಗೆಯ ಹೊರೆ ಮತ್ತು ಬಾರೆ, ನಲ್ಲಿ, ಕವಳೆ ಹಣ್ಣು ಮುಂತಾದ ಕಾಡುಹಣ್ಣುಗಳನ್ನು ಸಂಗ್ರಹಿಸಿ ಸ್ಥಳೀಯವಾಗಿ ಮಾರುತ್ತಾರೆ. ಒಂದು ಹೊರೆ ಕಟ್ಟಿಗೆಗೆ ೨೦-೨೫ ರೂ. ದೊರೆತರೆ ಹೆಚ್ಚಾಯಿತು. ಹಣ್ಣುಗಳು ಋತುಮಾನವಿರುವ ಸಮಯದಲ್ಲಿ ಮಾತ್ರ ದೊರೆಯುತ್ತವೆ. ಉಳಿದ ಸಮಯ ಇವರು ಕೂಲಿಯಲ್ಲಿ ತೊಡಗಿರುತ್ತಾರೆ. ಒಂದು ದಿನ ಹೋಗದಿದ್ದರೆ ಆ ದಿನ ಅವರಿಗೆ ಉಪವಾಸವೇ ಗತಿ. ಒಂದೇ ಸಮಾಜದಲ್ಲಿಯೂ ಎಷ್ಟೊಂದು ಅಸಮಾನತೆಗಳು ಶ್ರೀಮಂತ, ಬಡವ, ಎನ್ನುವ ಶ್ರೇಣಿಗಳಿವೆ ತಾಂಡಗಳಲ್ಲಿ ಮಹಿಳೆಯರು ಸಣ್ಣಪುಟ್ಟ ದಿನಸಿ, ಅಂಗಡಿ, ತರಕಾರಿ, ಧಾನ್ಯಗಳನ್ನ, ಬೆಣ್ಣೆ, ತುಪ್ಪ, ಮುಂತಾದುವುಗಳನ್ನು ಪಟ್ಟಣದಲ್ಲಿ ಸಂತೆಯಲ್ಲಿ ಹೋಗಿ ಮಾರುವರು. ಕಾಡಿನಲ್ಲಿರುವ ಮುತ್ತುಗದ ಎಲೆಗಳನ್ನು ತಂದು ಅವುಗಳನ್ನು ಒಣಗಿಸಿ, ಊಟದ ಎಲೆಗಳನ್ನು ಸಹ ತಯಾರಿಸಿ ಅವುಗಳನ್ನೇ ಮಾರಾಟ ಮಾಡುವ ಮೂಲಕ ಜೀವಿಸುತ್ತಿದ್ದಾರೆ. ಬೆಳೆಗ್ಗೆಯಿಂದ ಸಂಜೆಯವರೆಗೆ ಕಷ್ಟಪಟ್ಟು ದುಡಿದಿದ್ದರ ಫಲವಾಗಿ ದೊರೆಯುವುದು ಕೇವಲ ೨೫ ರೂ.

ಸಂಸಾರ ಒಂದು ದಿನ ನಡೆಸಬೇಕು. ಪುನಃ ಮರುದಿನ ಯಥಾಪ್ರಕಾರ, ಕಾಡಿಗೆ, ಕಟ್ಟಿಗೆ ತರಲು ಹೋಗಬೇಕು. ಈ ಮಹಿಳೆಯರು ಶಿಕ್ಷಣಹೊಂದಿಲ್ಲದ ನಿತ್ಯವೂ 'ನಾಗರೀಕ'ರೆನ್ನುವವರಿಂದ ಮೋಸ ಹೋಗುತ್ತಾರೆ. ವಯಸ್ಸಿನ ನಿರ್ಬಂಧವಿಲ್ಲದಂತೆ ವಯಸ್ಸಾದ ಹಿರಿಯರಿಂದ, ಕಿರಿಯರವರೆಗೂ ದುಡಿಯುವುದು ಇವರ ಜೀವನವಾಗಿದೆ.

## ಆ. ಪುರುಷರು ಅವಲಂಬಿಸಿರುವ ವ್ಯಾಪಾರೀ ಚಟುವಟಿಕೆಗಳು

ಪುರುಷರು ಇಂದು ತಾಂಡದಲ್ಲಿ ನಾನಾ ಬಗೆಯ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ದಿನಸಿ ಅಂಗಡಿ, ಕ್ಯಾಂಟಿನ, ಹೋಟಲ್ ನಡೆಸುವ, ಹಾಲನ್ನ ಡೈರಿಗೆ ಮಾರುವ ಹಣ್ಣು ತರಕಾರಿ, ಧಾನ್ಯ, ಕುರಿ, ಮೇಕೆ ಮುಂತಾದವುಗಳನ್ನು ಮಾರುತ್ತಾರೆ. ಗೊಬ್ಬರದ ಅಂಗಡಿ, ನ್ಯಾಯಬೆಲೆ ಅಂಗಡಿ. ಹೀಗೆ ನಾನಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನ ತೊಡಗಿಸಿಕೊಂಡಿದ್ದಾರೆ. ವ್ಯಾಪಾರವು ಅನಿಶ್ಚಿತತೆಯಿಂದ ಕೂಡಿದೆ. ಪರ್ಯಾಯವೃತ್ತಿಯು ಇವರಿಗೆ ಆದಾಯವನ್ನು ಒದಗಿಸುತ್ತಿಲ್ಲ. ಆದರೂ ಪರ್ಯಾಯ ವೃತ್ತಿಗಳ ತಿಳುವಳಿಕೆ ಇಲ್ಲದಿರುವುದು, ವೃತ್ತಿಯನ್ನು ಮುಂದುವರೆಸುವಲ್ಲಿ ಮುಖ್ಯವಾದ ತೊಡಕಾಗಿದೆ. ವ್ಯಾಪಾರವನ್ನು ಹಿಂದಿನಿಂದಲೂ ಕೆಲಕುಟುಂಬಗಳು ಮಾತ್ರ ನಡೆಸುತ್ತಿವೆ. ಮಸಾಲೆ ಸಾಮಾನು, ಚಕ್ಕೆ, ಲವಂಗ, ಏಲಕ್ಕಿ, ಜೀರಿಗೆ, ಮುಂತಾದುವುಗಳನ್ನ ಊರಿಂದೂರಿಗೆ ಅಲೆಯುತ್ತ ಮಾರುವ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದಾರೆ. ಆದರೆ ಇವರು ನಿರ್ಧಿಷ್ಠ ಪ್ರದೇಶದ ನೆಲೆಯನ್ನು, ಕುಟುಂಬವನ್ನು ಹೊಂದಿ ವರ್ಷದ ಕೆಲ ತಿಂಗಳವರೆಗೆ ಈ ರೀತಿ ದುಡಿಯುತ್ತಾರೆ. ಕೆಲದಿನ ಮಾತ್ರ ತಮ್ಮ ಕುಟುಂಬವನ್ನು ಸಂದಿಸುತ್ತಾರೆ. ದುಡಿಯುವುದು ಅನಿವಾರ್ಯವಾಗಿ ಜೀವನಮಟ್ಟಕ್ಕೆ ಬೇಕಾದ ಆದಾಯವಿಲ್ಲದೆ ತಾಂಡದ ಸುಮಾರು ೫ % ರಷ್ಟು ಜನಸಂಖ್ಯೆ

ವ್ಯಾಪಾರವನ್ನೇ ತಮ್ಮ ಆರ್ಥಿಕ ಮೂಲವನ್ನಾಗಿ ಕಂಡುಕೊಂಡಿದ್ದಾರೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಕುಟುಂಬಗಳು ನಗರಗಳಲ್ಲಿ ವ್ಯಾಪಾರವನ್ನು ಮಾಡುತ್ತಾ ಮುಖ್ಯವಾಹಿನಿಗೆ ಸೇರಲ್ಪಡುತ್ತಾ ಲಾಭ ಹೊಂದಿ ಬಂಡವಾಳಗಾರರಾಗಿ ಮಾರ್ಪಡುತ್ತಿದ್ದಾರೆ. ಇವರು ನಗರ ಪರಿಸರಕ್ಕೆ ಬೇಕಾದ ಅತ್ಯವಶ್ಯ ವ್ಯಾಪಾರಿ ಸರಕುಗಳ ವಿಲೇವಾರಿ ಮಾಡುತ್ತಿದ್ದಾರೆ. ಆದರೆ ಇವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ.

### ಪಾರಂಪರಿಕ ವೃತ್ತಿ

ಅಧ್ಯಯನಕ್ಕೆ ಒಳಪಡುವ ನಾಲ್ಕು ತಾಂಡಗಳಲ್ಲಿ ಲಂಬಾಣಿಗರು ಇಂದಿಗೂ ಕೆಲ ಕುಟುಂಬದವರು ಮಾತ್ರ ಪಾರಂಪರಿಕ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಗಮನಿಸಲಾಯಿತು. ಈ ಸಮುದಾಯದಲ್ಲಿ ಶತಮಾನಗಳಿಂದಲೂ "ದೇವರ ಪೂಜೆಯನ್ನು ಲಂಬಾಣಿ ಸಮುದಾಯದ ಪೌರೋಹಿತ್ಯ ಮಾಡುವ ಕುಟುಂಬದ ಪೂಜಾರಿಯೇ ಮಾಡುತ್ತಿದ್ದನು. ಇಂದಿಗೂ ತಾಂಡದ ಮಟ್ಬೋ (ದೇವಸ್ಥಾನ)ದ ಸೇವಾಭಾಯಾ, ಮರಿಯಮ್ಮ, ಮೀಟು ಭುಕ್ಯಾ, ದೇವರ ಪೂಜೆಯನ್ನು ಇವರೇ ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಹಾಗೆಯೇ ಬಡಗಿಯು ಕೂಡ ಕೃಷಿಗೆ ಪೂರಕವಾದ ಸಲಕರಣೆಗಳನ್ನು ಮಾಡುತ್ತಾ ಸೇವೆಯನ್ನು ಸಲ್ಲಿಸುತ್ತಿದ್ದು, ಪ್ರತೀ ತಾಂಡದಲ್ಲಿಯೂ ಮೂರು ನಾಲ್ಕು ಕುಟುಂಬಗಳು ಇಂದಿಗೂ ಈ ವೃತ್ತಿಯನ್ನೇ ಮುಂದುವರೆಸಿಕೊಂಡು ಬರುತ್ತಿವೆ. ಇತ್ತೀಚಿಗೆ ಜಮೀನುಗಳನ್ನು ಹೊಂದಿರುವವರು ಕೃಷಿಯನ್ನು ಕೂಡ ಮಾಡುತ್ತಿದ್ದಾರೆ. ಇದೇ ರೀತಿ ಢಾಲ್ಯ ಬಂಜಾರುಗಳು ಇಂದಿಗೂ ಪಾರಂಪರಿಕವಾಗಿ ಢಾಲ್ಯ ವೃತ್ತಿಯನ್ನೇ ಮುಂದುವರೆಸಿಕೊಂಡು ಬರುತ್ತಿದ್ದಾರೆ. "ಲಂಬಾಣಿ ಜನಾಂಗದ ಬಳಗದಲ್ಲಿ ಬರುವ ಸಣ್ಣಪುಟ್ಟ ಬುಡಕಟ್ಟುಗಳಲ್ಲಿ ಢಾಲ್ಯವೂ ಒಂದಾಗಿದೆ. ತಾಂಡಗಳಲ್ಲಿ ವಾಸಿಸುವ ಇವರು ಹಾಕಿದಷ್ಟನ್ನು ಉಣ್ಣುವ, ಕೊಟ್ಟಿದ್ದನ್ನು ಉಟ್ಟು, ಅವರ ಭಾಷೆಯನ್ನೇ ಮಾತನಾಡುವ ಆದರೂ ಅವರಂತಾಗದ ಢಾಲ್ಯರುಗಳ ಬದುಕು ಅತಂತ್ರವಾಗಿದೆ"[೪] ಢಾಲ್ಯರುಗಳು ಲಂಬಾಣಿ ಸಂಸ್ಕೃತಿಯಿಂದ ಭಿನ್ನರಾಗಿ ತಮ್ಮದೇ ಆಚಾರ ವಿಚಾರಗಳನ್ನು ಹೊಂದಿದ್ದಾರೆ. ತಾಂಡದ ಪ್ರತಿಯೊಬ್ಬ ವ್ಯಕ್ತಿಗೂ ಸೇವಕನಾಗಿರುವ ಢಾಲ್ಯ ಪ್ರತಿದಿನ ಪ್ರತಿ ಮನೆಗೂ ಹೋಗಿ ಭಿಕ್ಷೆ ಬೇಡಿ ಉಪಜೀವಿಸುತ್ತಾನೆ. ಹಬ್ಬ ಜಾತ್ರೆಗಳಲ್ಲಿ, ಸಮಾರಂಭಗಳಲ್ಲಿ ಹಲಗೆ ಬಾರಿಸುವುದು, ಸಾರ್ವಜನಿಕರಿಗೆ ಸುದ್ದಿ ಸಮಾಚಾರಗಳನ್ನು ತಿಳಿಸಲು ತಮಟೆ ಹೊಡೆಯುವುದು ಇವನ ಕೆಲಸಗಳಲ್ಲಿ ಮುಖ್ಯವಾಗಿದೆ. ಮದುವೆ, ಮುಂಜಿ, ಶವಸಂಸ್ಕಾರ ಇತ್ಯಾದಿ ಸಂದರ್ಭಗಳಲ್ಲಿ ಹಗಲಿರುಳು ಲಂಬಾಣಿಗರ ಸೇವೆಯನ್ನು ಮಾಡುವುದು ಇವನ ಆದ್ಯ ಕರ್ತವ್ಯವಾಗಿದೆ. ಲಂಬಾಣಿಗರು ಢಾಲ್ಯರ ಜೊತೆ ವಿವಾಹ ಸಂಬಂಧಗಳನ್ನು ಹೊಂದುವುದಿಲ್ಲ. ಲಂಬಾಣಿ ಸಮುದಾಯದವರ ಜೊತೆ ಬೆರೆಯುವಂತಿಲ್ಲ. ಇವರ ಮನೆ ಒಳಗೆ ಪ್ರವೇಶಿಸದಂತೆ ನಿರ್ಬಂಧಗಳಿದ್ದು, ಕೀಳಾಗಿ ಅಸ್ಪೃಶ್ಯರಂತೆ ಇವರನ್ನು ಕಾಣಲಾಗುತ್ತದೆ. ಉದರ ಪೋಷಣೆಗೆ ಲಂಬಾಣಿಗರನ್ನೆ ಢಾಲ್ಯರು ಅವಲಂಬಿಸಿದ್ದರ ಪರಿಣಾಮವೇನೋ ಇವರನ್ನು ಕೀಳಾಗಿ ಕಂಡು ಇವರನ್ನು ಸ್ಪರ್ಶಿಸುವುದು, ಮದುವೆಮಾಡಿಕೊಳ್ಳುವುದು ಅಪರಾಧವೆಂಬಂತೆ ದೊಡ್ಡ ಮೊತ್ತದ ದಂಡವನ್ನು ಅವರು ತೆರಬೇಕಾಗುತ್ತದೆ.

ಇಂದಿಗೂ ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಢಾಲ್ಯರನ್ನು ಮುಟ್ಟಿಸಿಕೊಳ್ಳದೆ ಹಾಗೂ ಇವರುಗಳು ಲಂಬಾಣಿಗರ ಮನೆಯೊಳಗಡೆ ಪ್ರವೇಶಿಸುವಂತಿಲ್ಲ. ಇವರ ಸಾಮಾಜಿಕ, ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಶಿಕ್ಷಣವಿಲ್ಲದೆ ಆರ್ಥಿಕವಾಗಿ ಲಂಬಾಣಿಗರನ್ನು ಅವಲಂಬಿಸಿ ಉಪಜೀವಿಸುತ್ತಾ ಕೀಳು ಭಾವನೆಯಿಂದ ನೋಡಲಾಗುತ್ತದೆ. ತಂದೆಯಿಂದ ಮಗನು ಈ ಢಾಲ್ಯ ವೃತ್ತಿಯನ್ನು ಮುಂದುವರೆಸುತ್ತಾ ಬರುತ್ತಿದ್ದಾನೆ. ಒಂದು ವೇಳೆ ತಂದೆ ಇರದ ಸಮಯದಲ್ಲಿ ಮಗನೆ ತಾಂಡದಲ್ಲಿ ಸುದ್ದಿ ಸಮಾಚಾರವನ್ನು ಹಲಗೆ ಬಾರಿಸುವುದರ ಮುಖಾಂತರ ಹೇಳುತ್ತಾನೆ.

ಸರ್ಕಾರಿ ಉದ್ಯೋಗದಲ್ಲಿ ಯಾರೊಬ್ಬರೂ ಕೂಡ ಇಲ್ಲ. ಢಾಲ್ಯ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವು ದೂರದ ಮಾತಾಗಿದೆ. ಚಿಕ್ಕಬಾಸೂರು ತಾಂಡದಲ್ಲಿ ಮಾತ್ರ ಢಾಲ್ಯ ಕುಟುಂಬದ ಆರ್ಥಿಕ ಸ್ಥಿತಿ ಪಶುಪಾಲನೆ ಮಾಡುತ್ತಿರುವುದರಿಂದ ಉತ್ತಮವಾಗಿದೆ. (ಕುರಿಸಾಕುವ) ಇವರ ಹೆಣ್ಣುಮಕ್ಕಳು ೧೦ನೇ ತರಗತಿಯವರೆಗೆ ಓದಿದ್ದರೆ, ಗಂಡುಮಕ್ಕಳು ಓದದೆ ತಂದೆಯ ಜೊತೆ ಢಾಲ್ಯ ವೃತ್ತಿಯನ್ನು ನಡೆಸಲು ಸಹಾಯ ಮಾಡುತ್ತಿದ್ದಾರೆ. ಉಳಿದಂತೆ ಸಾಮಾಜಿಕವಾಗಿ ಈಗಲೂ ಅಸ್ಪೃಶ್ಯರಂತೆಯೇ ಇದ್ದು ಜೀವನ ನಿರ್ವಹಣೆಗಾಗಿ ಲಂಬಾಣಿಗರನ್ನ ಅವಲಂಬಿಸಿದ್ದಾರೆ. ಢಾಲ್ಯರನ್ನು ಲಂಬಾಣಿಗರು ಪೋಷಿಸಿಕೊಂಡು ಬಂದಿದ್ದಾರೆ. ಈಚಿನ ದಿನಗಳಲ್ಲಿ ಮೇಲು-ಕೀಳು ಎಂಬ ಭಾವನೆ ಹೆಚ್ಚಾಗಿ ಉಳಿಯದಿದ್ದರೂ ಪ್ರಾದೇಶಿಕ ವಾಗಿ ಕೆಲ ತಾಂಡಗಳಲ್ಲಿ ಉತ್ತಮ ಸ್ಥಾನಮಾನವನ್ನು ಪಡೆದಿದ್ದರೆ, ಮತ್ತೆ ಕೆಲ ತಾಂಡಗಳಲ್ಲಿ ಇಂದಿಗೂ ಅಸ್ಪೃಶ್ಯರಂತೆಯೇ ಇದ್ದಾರೆ. ಹಾಗೂ ಪಾರಂಪರಿಕ ಢಾಲ್ಯ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇಂದಿಗೂ ಲಂಬಾಣಿಗರಿಂದ ಬೇಡಿ ತಿನ್ನುವರು ಸ್ಥಿತಿಯಲ್ಲಿಯೇ ಇದ್ದಾರೆ. ಪೂಜಾರಿ, ಬಡಗಿ, ಢಾಲ್ಯಗಳ ಹಿರಿಯರು ತಮ್ಮ ಪಾರಂಪರಿಕ ಕಸುಬನ್ನು ತಮ್ಮ ಮಕ್ಕಳಿಗೆ ಕಲಿಸುವುದನ್ನು ಈ ನಾಲ್ಕು ತಾಂಡಗಳಲ್ಲಿ ಕ್ಷೇತ್ರಕಾರ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಕಂಡಿದ್ದೇನೆ. ಆದರೆ ಇಂದೂ ಬದಲಾವಣೆಗೆ ಒಳಗಾಗಿ ಕೃಷಿ, ಕೂಲಿ, ಪಶುಪಾಲನೆ ಮುಂತಾದ ಹಲವು ವೃತ್ತಿಯನ್ನು ಇವರು ಅವಲಂಬಿಸಿದ್ದಾರೆ.

**ಕೋಷ್ಟಕ ೨**

**ಪಾರಂಪರಿಕ ವೃತ್ತಿಯಲ್ಲಿ ತೊಡಗಿಸಿಕೊಂಡವರ ಸಂಖ್ಯೆ**

| ಕ್ರ.ಸ. ನೆಲೆ | | ಪಂಗಡ | |
|---|---|---|---|
| | ಢಾಲ್ಯ | ಪೂಜಾರಿ | ಬಡಗಿ |
| ೧. ಚಿಕ್ಕಬಾಸೂರು ತಾಂಡ | ೩ | ೩ | ೩ |
| ೨. ಮಲೆಕುಂಬಳೂರು ತಾಂಡ | ೨ | ೨ | ೧ |
| ೩. ಗುಡ್ಡಳ್ಳಿ ತಾಂಡ | ೧ | ೧ | ೧ |
| ೪. ಸೂರಗೊಂಡನಕೊಪ್ಪ ತಾಂಡ | ೧ | ೧ | ೧ |
| ಒಟ್ಟು | ೭ | ೭ | ೬ |

[illegible]

ನಾಲ್ಕು ತಾಂಡಗಳಲ್ಲಿ ಥಾಲ್ಯ ವೃತ್ತಿಯನ್ನು ಮಾಡುವ ೭ ಕುಟುಂಬಗಳಿವೆ. ವಂಶ ಪಾರಂಪರ್ಯವಾಗಿ ಇವರು ಈ ವೃತ್ತಿಯಲ್ಲಿ ತೊಡಗಿದ್ದಾರೆ. ಉಪ ಕಸಬನ್ನಾಗಿ ಪಶುಪಾಲನೆ, ಕೂಲಿಯನ್ನು ಸಹ ಮಾಡುತ್ತಾರೆ. ಥಾಲ್ಯ ಪಂಗಡದ ಮಹಿಳೆಯರು ಕೂಡ ಇವರಿಗೆ ಸಹಾಯವನ್ನು ಮಾಡುತ್ತಾರೆ. ಅಂದರೆ ತಾಂಡದಲ್ಲಿಯ ಮನೆಗಳಿಗೆಲ್ಲಾ ಹೋಗಿ ಊಟವನ್ನು ತೆಗೆದುಕೊಂಡು ಬರುತ್ತಾರೆ. ಹಾಗೂ ಕೂಲಿ ನಾಲಿಯನ್ನು, ಕುರಿಸಾಗಣಿಕೆಯನ್ನು ಸಹ ಮಾಡುತ್ತಾರೆ. ಹಾಗೆಯೇ ಬಡಗಿ ವೃತ್ತಿಯನ್ನು ಮಾಡುತ್ತಿರುವ ಆರು ಕುಟುಂಬದ ಏಳು ಜನರು, ಕೃಷಿಪೂರಕ ಉಪಕರಣವನ್ನು ಮಾಡಿಕೊಡುವುದರ ಜೊತೆ ಭೂಮಿಯನ್ನು ಹೊಂದಿದ್ದಾರೆ. ಕೃಷಿಯನ್ನೆ, ಕೂಲಿಯನ್ನು ಕುಟುಂಬದವರೆಲ್ಲ ಸೇರಿ ಮಾಡುತ್ತಿದ್ದಾರೆ. ಆರ್ಥಿಕವಾಗಿ ಇವರು ಮಲೆಕುಂಬಳೂರಿನಲ್ಲಿ ಉತ್ತಮವಾಗಿದ್ದಾರೆ. ಪೌರೋಹಿತ್ಯವನ್ನು ಮಾಡುತ್ತಿರುವ ೭ ಜನ ಪೂಜಾರಿಗಳು ಕೂಡ ಬಗರ್‌ಹುಕಂ, ಜಮೀನನ್ನು ಹೊಂದಿ, ಕೃಷಿಯಲ್ಲಿ ತೊಡಗಿದ್ದಾರೆ. ಆದರೆ ಇವರುಗಳ ಆರ್ಥಿಕ ಸ್ಥಿತಿಯು ಹಿಂದುಳಿದಿದ್ದು. ಇವರಿಗೆ ಮನೆ, ಹೊಲ, ಆರ್ಥಿಕ ಭದ್ರತೆಗಳಿಲ್ಲದೆ ತೊಳಲಾಡುತ್ತಿದ್ದು. ಮೂಲವೃತ್ತಿಯನ್ನು ಬಿಡದೆ ಹೊಸ ವೃತ್ತಿಯನ್ನ ಮಾಡಲಾಗದ ದ್ವಂದ್ವ ಸ್ಥಿತಿಯಲ್ಲಿದ್ದಾರೆ.

**ಕರಕುಶಲ ಕಲೆ**

ಲಂಬಾಣಿ ಹೆಣ್ಣು ಮಕ್ಕಳು ಶತಶತಮಾನಗಳಿಂದ ಇಂದಿನವರೆಗೂ ತಮ್ಮ ವೇಷಭೂಷಣಗಳನ್ನು ತಾವೇ ಕೈಯಿಂದ ಕಸೂತಿಯನ್ನು ಮಾಡುತ್ತಾರೆ. ಲಂಬಾಣಿ ಸ್ತ್ರೀಯರು ಪೇಟಿಯ(ಲಹಂಗ)ವನ್ನು ಕಾಂಚಳ (ಕುಪ್ಪಸ) ಛಾಂಟಿಯ (ಓಡಣಿ)ಗಳನ್ನು ಧರಿಸುತ್ತಾರೆ. ಇವುಗಳ ಮೇಲೆ ಮಧ್ಯೆಮಧ್ಯೆ ಗಾಜಿನ ಬಿಲ್ಲೆಗಳನ್ನು ಸೇರಿಸಿ ಅವುಗಳ ಮೇಲೆ ವಿವಿಧ ಬಣ್ಣಗಳ ದಾರಗಳಿಂದ ಕಸೂತಿಯನ್ನು ಬಿಡಿಸಿ ವಸ್ತ್ರಗಳನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ನೋಡಲು ತುಂಬಾ ಸುಂದರವಾಗಿರುವ ಅತ್ಯಮೂಲ್ಯ ಕಲಾಕೃತಿಗಳಂತೆ ಕಾಣುತ್ತವೆ. ನೋಡುಗರನ್ನ ಮಂತ್ರ ಮುಗ್ಧರನ್ನಾಗಿಸುವ ಈ ಸಾಂಪ್ರದಾಯಿಕ ಉಡುಪು ಅದಕ್ಕೆ ತಕ್ಕ ಆಭರಣಗಳನ್ನು ಹಾಕಿಕೊಳ್ಳುವ ಲಂಬಾಣಿ ಮಹಿಳೆಯರನ್ನ ಕಾಣಬಹುದು.

ಇತ್ತೀಚಿಗೆ ಪ್ರಾದೇಶಿಕವಾಗಿ ಕೆಲವು ಕಡೆ ಈ ಸಾಂಪ್ರದಾಯಿಕ ಉಡುಪನ್ನು ಹಾಕಿಕೊಳ್ಳುತ್ತಿಲ್ಲ. ಆಧುನಿಕತೆಗೆ ಒಳಪಟ್ಟ ಹೊಸಹೊಸ ಉಡುಪನ್ನು, ಸೀರೆಯನ್ನು ಧರಿಸುತ್ತಾರೆ. ಹಾಗೂ ತರಬೇತಿಯು ಈ ಸಾಂಪ್ರದಾಯಿಕ ಉಡುಪನ್ನು ತಯಾರಿಸಲು ಇಲ್ಲದಿರುವುದು. ಹಣ, ಸಮಯ ಹೆಚ್ಚು ಬೇಕಾಗುತ್ತದೆ. ಅದಕ್ಕೆ ಸೀರೆಯನ್ನು ಹೆಚ್ಚಾಗಿ ಧರಿಸುತ್ತಿರುವುದನ್ನು ನಾವು ಕಾಣುತ್ತೇವೆ. ನಾನು ಕ್ಷೇತ್ರಕಾರ್ಯ ಮಾಡಿದ ಸ್ಥಳದಲ್ಲಿ ಕರಕುಶಲ ಕೇಂದ್ರಗಳು ಇಲ್ಲ. ಆದರೆ ಉಳಿದೆಡೆಗಳಲ್ಲಿ ಅಂತರಾಷ್ಟ್ರೀಯ ಬೇಡಿಕೆ ಹೆಚ್ಚಾಗುತ್ತಿರುವ ಕಾರಣ, ಈ ಸಾಂಪ್ರದಾಯಿಕ ಉಡುಪನ್ನು ಫ್ಯಾಷನ್ನಿಗಾಗಿ, ಸಿನಿಮಾ ಮುಂತಾದ ಮಾಧ್ಯಮಗಳಲ್ಲಿಯೂ ಧರಿಸುತ್ತಿರುವುದು ಹೆಚ್ಚುತ್ತಿದೆ. ವ್ಯಾಪಾರಿಗಳು ಈ ಬೇಡಿಕೆಯನ್ನು ಅರಿತು. ಹಲವಾರು ಕಡೆ ಲಂಬಾಣಿ ಕರಕುಶಲ ಕೇಂದ್ರಗಳನ್ನು ತೆರೆದು ಬಂಡವಾಳವನ್ನು ಮಾತ್ರ ಹಾಕಿ ಲಂಬಾಣಿ ಮಹಿಳೆಯರಿಂದ ಈ ಸಾಂಪ್ರದಾಯಕ ಉಡುಪನ್ನು ಇತರ ಕರಕುಶಲ ಕಸೂತಿಯನ್ನು ತಯಾರಿಸಿ ಲಕ್ಷಾಂತರ ರೂಪಾಯಿ ಲಾಭವನ್ನು ಬಂಡವಾಳಶಾಹಿಗಳು ಪಡೆದರೆ ಲಂಬಾಣಿಗರು ಕಡಿಮೆ ಕೂಲಿಯನ್ನು ಒಂದು ಉಡುಪಿಗೆ

[illegible]

[illegible]

ಐದು ಹತ್ತು ರೂ.ಗಳನ್ನು ನೀಡುತ್ತಾರೆ. ಕೌಶಲ್ಯ ಮಾತ್ರ ಲಂಬಾಣಿಗರದು ಆದರಿಂದ ಬಂದ ಲಾಭ ಮಾತ್ರ ವ್ಯಾಪಾರಿಗಳದ್ದು. ವ್ಯಾಪಾರಿಗಳು ವಿದೇಶಿಗಳಿಗೆ ಈ ಕಸೂತಿಗಳನ್ನು ರಫ್ತುಮಾಡಿ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಬಡಗಿಯು ಕೃಷಿಗೆ ಪೂರಕವಾದ ಉಪಕರಣಗಳಾದ ಎತ್ತಿನ ಬಂಡಿ, ನೇಗಿಲು, ಚಕ್ರ ಮುಂತಾದುವುಗಳ ಜೊತೆ ದಿನನಿತ್ಯದ ಬಳಕೆಯ ವಸ್ತುಗಳಾದ ಕಿಟಕಿ, ಬಾಗಿಲು, ಕುರ್ಚಿ, ಮೇಜು ಮುಂತಾದುವುಗಳನ್ನು ಮಾಡುತ್ತಿದ್ದಾರೆ. ಆಧುನಿಕತೆಗೆ ಒಳಗಾಗಿ ಬಡಗಿಯು ಯಾವುದೇ ಹೊಸ ಬಗೆಯ ಉಪಕರಣವನ್ನು ಮಾಡುತ್ತಿರುವುದು ಕಂಡುಬರಲಿಲ್ಲ. ಬದಲಿಗೆ ಬಡಗಿ ವೃತ್ತಿಯನ್ನು ಬಿಟ್ಟು ಕೃಷಿ, ಕೂಲಿ, ವ್ಯಾಪಾರವನ್ನು ಮಾಡುತ್ತಿದ್ದಾರೆ.

**ಕೃಷಿ ಕೂಲಿ**

ಆರ್ಥಿಕ ಚಟುವಟಿಕೆಗಳು ವ್ಯಕ್ತಿಯ ಅಥವಾ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತವೆ. ಕೂಲಿ ಎಂದರೆ ಬೇರೆಯವರ ಜಮೀನಿನಲ್ಲಿ ಗೊತ್ತುಪಡಿಸಿದ ಕೆಲಸಕ್ಕಾಗಿ ಸಂಬಳದ ರೂಪದಲ್ಲಿ ಹಣ ಇಲ್ಲವೆ ಧಾನ್ಯಗಳನ್ನು ಕೂಲಿ (ಮೊತ್ತ) ಪಡೆಯುವುದು. ತಾಂಡಗಳಲ್ಲಿ ಲಿಂಗ ತಾರತಮ್ಯವಿಲ್ಲದೆ ಸ್ತ್ರೀ ಪುರುಷರಿಬ್ಬರು ಬೇರೆಯವರ ಜಮೀನುಗಳಲ್ಲಿ ದುಡಿಯಲು ಹೋಗುತ್ತಾರೆ. ಈ ಸಮುದಾಯಕ್ಕೆ ಕೂಲಿ ಮಹತ್ವವಾದ ಆರ್ಥಿಕ ಚಟುವಟಿಕೆಯಾಗಿದೆ. ಶ್ರಮಕ್ಕೆ ಪ್ರತಿಫಲವಾಗಿ ಇವರು ಪಡೆಯುವ ಕೂಲಿಯು ಅವರ ಆರ್ಥಿಕ ಸ್ಥಿತಿಗತಿಯ ಜೊತೆಗೆ ಸಾಮಾಜಿಕ ಜೀವನ ವಿಧಾನವನ್ನು ಸಹ ತೋರಿಸುತ್ತದೆ. ತಾಂಡಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ಕೂಲಿಯನ್ನು ಮಾಡುತ್ತಿದ್ದಾರೆ. ಕೂಲಿಯನ್ನು ಮೇಲ್ಜಾತಿಯವರು ಹಾಗೂ ತಮ್ಮ ಸುತ್ತಮುತ್ತಲಿನ ಕೃಷಿಕರ ಜಮೀನುಗಳಲ್ಲಿ, ತೋಟಗಳಲ್ಲಿ ಮಾಡುತ್ತಾರೆ. ಯಾವ ಯಾವ ಊರುಗಳಲ್ಲಿ ಯಾವ ಯಾವ ತಿಂಗಳುಗಳಲ್ಲಿ ಸುಗ್ಗಿಯಿದೆಯೋ ಆ ಕಾಲದಲ್ಲಿ ಕೂಲಿ ಮಾಡುತ್ತಾರೆ ಕೂಲಿಯನ್ನು ಸಾಮಾನ್ಯವಾಗಿ ಮಳೆಗಾಲ ಕಳೆದು ಚಳಿಗಾಲ ಪ್ರಾರಂಭ ವಾಗುತ್ತಿದ್ದಂತೆಯೇ ಹಾಗೂ ನಾಟಿ ಮಾಡುವಾಗ ಮಾಡುತ್ತಾರೆ. ಇರುವ ತಾಂಡದಲ್ಲಿಯೇ ಕೂಲಿ ಸಿಕ್ಕರೆ ಮಾಡುತ್ತಾರೆ ಇಲ್ಲದಿದ್ದರೆ ದೂರದೂರದ ಊರುಗಳಿಗೆ ಹೋಗುತ್ತಾರೆ. ಸಾಮಾನ್ಯವಾಗಿ ದಿನದ ಕೊನೆಯಲ್ಲಿ ಅಥವಾ ವಾರದ ಕೊನೆಯಲ್ಲಿ ಶ್ರಮವನ್ನು ವ್ಯಯಿಸಿದ ಶ್ರಮಿಕನಿಗೆ ಹಣವನ್ನು ದುಡಿಮೆಗೆ ಅನುಗುಣವಾಗಿ ನೀಡಲಾಗುತ್ತದೆ.

ತಾಂಡಗಳ ಬಹಳಷ್ಟು ಜನ ಉತ್ಪಾದನಾ ಮಾರ್ಗವಾಗಿ, ಕುಟುಂಬದ ನಿರ್ವಹಣೆಗೆ ಕಂಡುಕೊಂಡ ಪರ್ಯಾಯ ಮಾರ್ಗಗಳಲ್ಲಿ ಕೃಷಿಕೂಲಿಯು ಮುಖ್ಯವಾಗಿದೆ. ಋತುಮಾನಗಳಿಗೆ ಅನುಸಾರವಾಗಿ ದುಡಿಯುತ್ತಾರೆ. ಕೂಲಿಯನ್ನು ಬೆಳಗ್ಗೆಯಿಂದ ಸಂಜೆಯವರೆಗೆ ನಿಗದಿಪಡಿಸಲಾಗಿದೆ. ದಿನದ ಕೂಲಿ ಮಾಡುವವರಿಗೆ ಊಟದ ವ್ಯವಸ್ಥೆ ಮಾಡಿರುವರು. ವಾರದ ಕೂಲಿಯನ್ನು ವಾರದ ಏಳು ದಿನಗಳಲ್ಲಿ ಆರುದಿನ ಮಾಡುತ್ತಿದ್ದಾರೆ. ಒಂದು ದಿನ ಸಂತೆಯನ್ನು ಮಾಡಲು ಕೂಲಿಗೆ ಹೋಗುವುದಿಲ್ಲ. ತಮಗೆ ಬೇಕಾದ ಜೀವನಕ್ಕೆ ಅತ್ಯಾವಶ್ಯಕ ಸಾಮಾಗ್ರಿಗಳನ್ನು ಕೊಳ್ಳಲು ಸಂತೆಗೆ ಹೋಗುವರು ಹಾಗೂ ಈ ಸಂತೆಯಲ್ಲಿ ತಾಂಡದ ಕೆಲವರು ಆಹಾರ ಧಾನ್ಯಗಳನ್ನ, ಕುರಿ, ಮೇಕೆ, ದನಕರುಗಳನ್ನ ಕೂಡ ವ್ಯಾಪಾರ ಮಾಡಲು ಹೋಗುತ್ತಾರೆ.

ಕೂಲಿಯಲ್ಲಿ ತಾರತಮ್ಯ ಇರುವುದನ್ನು ಸಾಮಾನ್ಯವಾಗಿ ಎಲ್ಲಾ ಗ್ರಾಮೀಣ ಪ್ರದೇಶದಲ್ಲಿ ನಾವೂ ಕಾಣಬಹುದು. ಪುರುಷ ಮತ್ತು ಮಹಿಳೆಯರ ನಡುವಿನ ಕೂಲಿಯ ತಾರತಮ್ಯದ ಜೊತೆಗೆ ಕೂಲಿ ನೀಡುವ ಹಣದಲ್ಲಿಯೂ ತಾರತಮ್ಯವಿದೆ. ಕೂಲಿಯ ಪ್ರಮಾಣವು ದಿನದ ಕೂಲಿಯಲ್ಲಿ ಪುರುಷರಿಗೆ ಅವರು ಮಾಡುವ ಕೆಲಸದ ಆಧಾರದ ಮೇಲೆ ನಿಗದಿಪಡಿಸಲಾಗಿದೆ. ಸಾಮಾನ್ಯವಾಗಿ ಪುರುಷರಿಗೆ ಹೆಚ್ಚಿನ ಕೂಲಿಯನ್ನು ನಲವತ್ತು ನಲವತ್ತೈದು ರೂ.ಗಳನ್ನು ನೀಡಿದರೆ ಮಹಿಳೆಯರಿಗೆ ಇಪ್ಪತ್ತು, ಮೂವತ್ತು ರೂ.ಗಳನ್ನು ನೀಡುವರು. ಇಬ್ಬರು ಸಮಾನ ಕೂಲಿಯನ್ನೇ ಮಾಡಿದರು ಹಣ ನೀಡುವುದರಲ್ಲಿ ತಾರತಮ್ಯವಿದೆ. ವಾರದ ಕೂಲಿಯನ್ನು ಗಂಡಸರಿಗೆ ೩೦೦-೩೫೦ ರೂ. ಇದ್ದರೆ ಮಹಿಳೆಯರಿಗೆ ೨೦೦-೨೫೦ ರೂ.ಗಳಷ್ಟು ವ್ಯತ್ಯಾಸವಿದೆ.

ಕೃಷಿ ಕೂಲಿಯು ವರ್ಷದ ಋತುಮಾನಗಳಿಗೆ ಅನುಸಾರವಾಗಿ ಕೊಡಲ್ಪಡುತ್ತದೆ. ಭೂಮಾಲಿಕರು ಮಳೆಗಾಲದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಕೃಷಿ ಕೂಲಿಯು ಅರೆ ಉದ್ಯೋಗವಾಗಿದೆ. ಪ್ರಮುಖವಾಗಿ ನಾಟಿ ಸಮಯದಿಂದ ಹಿಡಿದು ಕುಯಿಲು ಬರುವವರೆಗೂ ಮಾಡುವ ಸಮಯದಲ್ಲಿ ದುಡಿಯುತ್ತಾರೆ. ಕೃಷಿಕೂಲಿಗಾಗಿ ಲಂಬಾಣಿಗರು ಹತ್ತು-ಇಪ್ಪತ್ತು ಮೈಲಿಗಳಷ್ಟು ದೂರದ ಹಳ್ಳಿಗಳಿಗೆ ಹೋಗುತ್ತಾರೆ. ಅನಿವಾರ್ಯವಾಗಿ ಕೂಲಿ ಸಿಗದೆ ಇದ್ದಾಗ ಈ ರೀತಿ ದೂರದೂರದ ಪ್ರದೇಶಗಳಿಗೆ ಹೋಗುತ್ತಾರೆ. ಕೃಷಿಕೂಲಿಯು ವರ್ಷಪೂರ್ತಿ ಸಿಗದೆ ಇದ್ದ ಸಮಯದಲ್ಲಿ ಬೇರೆ ಕೂಲಿಗಳನ್ನು ಮಾಡುತ್ತಾರೆ. ಗಾರೆ ಕೆಲಸ, ಕಲ್ಲುಹೊಡೆಯುವುದು, ಮಣ್ಣುಹೊರುವ, ರಸ್ತೆ ರಿಪೇರಿ ಮಾಡುವ, ನಗರಗಳಲ್ಲಿ ಅಂಗಡಿ, ಹೋಟಲುಗಳಲ್ಲಿ ಕೆಲಸ ಮಾಡಲು ಹೋಗುತ್ತಾರೆ.

ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಸಾಮಾನ್ಯವಾಗಿ ಕೃಷಿಕೂಲಿಗಳು ಹೆಚ್ಚಾಗಿದ್ದಾರೆ ಅದರಲ್ಲಿ ಗುಡ್ಡಳ್ಳಿ ತಾಂಡದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬಗಳು ಕೃಷಿಕೂಲಿಯನ್ನು ಅವಲಂಬಿಸಿವೆ.

**ಕೋಷ್ಟಕ ೩**

**ಕೂಲಿಯಲ್ಲಿ ತೊಡಗಿಸಿಕೊಂಡಿರುವ ಪುರುಷರ ಮತ್ತು ಮಹಿಳೆಯರ ವಿವರ**

| ಕ್ರ.ಸ. | ತಾಂಡದ ಹೆಸರು | ಗಂಡು | ಹೆಣ್ಣು | ಒಟ್ಟು |
|---|---|---|---|---|
| ೧. | ಚಿಕ್ಕಬಾಸೂರುತಾಂಡ | ೧೧೧ | ೧೪೧ | ೨೫೨ |
| ೨. | ಮಲೆಕುಂಬಳೂರು | ೮೬ | ೮೮ | ೧೭೪ |
| ೩. | ಗುಡ್ಡಳ್ಳಿತಾಂಡ | ೯೬ | ೮೮ | ೧೮೪ |
| ೪. | ಸೂರಗೊಂಡನಕೊಪ್ಪ | ೯೧ | ೮೧ | ೧೭೨ |
| | ಒಟ್ಟು | ೩೮೫ | ೩೯೮ | ೭೮೩ |

ಕೂಲಿ ಮಾಡುತ್ತಿರುವವರ ಸಂಖ್ಯೆ ೭೮೩ ಇದ್ದು ಒಟ್ಟು ತಾಂಡಗಳಲ್ಲಿ ಇವರುಗಳು ಕೂಲಿಯನ್ನೆ ನಂಬಿಕೊಂಡು ಜೀವನ ಮಾಡುತ್ತಿದ್ದಾರೆ ಈ ಅಂಕಿ ಅಂಶಗಳ ಹಿನ್ನಲೆ ನೋಡಿದರೆ ತಾಂಡಗಳಲ್ಲಿ ಪುರುಷ ಮಾತ್ರವಲ್ಲದೆ ಮಹಿಳೆ ಹಾಗೂ ಮಕ್ಕಳು ಕೂಡ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

**ಕೂಲಿಗಾಗಿ (ತಾತ್ಕಲಿಕ) ವಲಸೆ**

"ಕೂಲಿಯು ಶ್ರಮ ಶಕ್ತಿಯ ಬೆಲೆಯ ಅಥವಾ ಮೌಲ್ಯದ ಪರಿವರ್ತಿತ ರೂಪ. ಕಾರ್ಮಿಕನು ತನ್ನ ಶ್ರಮ ಶಕ್ತಿಗೆ ವಿನಿಮಯವಾಗಿ ಏನನ್ನು ಪಡೆಯುತ್ತಾನೋ ಅದೇ ಕೂಲಿ"[೫] ಇರುವ ಸ್ವಂತದ ತಾಂಡದಲ್ಲಿ ದುಡಿಮೆ ಇಲ್ಲದ ಪರಿಸ್ಥಿತಿಯಲ್ಲಿ ಲಂಬಾಣಿಗರು ಬೇರೆ ಊರಿಗೆ ವಲಸೆ ಹೋಗುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಉತ್ಪಾದನೆ ಮುಖ್ಯವಾಗಿರುವುದರಿಂದ ಅವಲಂಬಿಸಿರುವ ಕ್ಷೇತ್ರಗಳು ವಿಭಿನ್ನವಾಗಿವೆ. ಅಲೆಮಾರಿಗಳಾದ ಲಂಬಾಣಿಗರು ನೆಲೆನಿಂತ ನಂತರದ ದಿನಗಳಲ್ಲಿ ರೂಪಿಸಿಕೊಂಡ ವಿಭಿನ್ನವಾದ ಉತ್ಪಾದನ ಮಾರ್ಗದಲ್ಲಿ ಕೂಲಿಯೂ ಸಹ ಗಣನೀಯ ಪ್ರಭಾವ ಬೀರಿದೆ. ಆರಂಭದ ದಿನಗಳಲ್ಲಿ ಭೂಮಿಯನ್ನು ನಂಬಿ ದುಡಿದ ಲಂಬಾಣಿಗರು ಇಂದು ಬಹುಸಂಖ್ಯಾತ ಜನರು ಸುತ್ತಲ ಹಳ್ಳಿ-ಗ್ರಾಮಗಳ, ವ್ಯವಸಾಯಗಾರರ ಮನೆಗಳಲ್ಲಿ ಕೂಲಿ ಕೆಲಸಗಾರರಾಗಿ ದುಡಿಯುತ್ತಿರುವುದನ್ನು ಕಾಣಬಹುದು. ಬರಗಾಲದ ಪರಿಸ್ಥಿತಿಯಿಂದಾಗಿ ಊರಿನಲ್ಲಿ ಮಾಡಲು ಯಾವ ಕೂಲಿ ಕೆಲಸಗಳು ಸಿಗದಿದ್ದಾಗ ಇಲ್ಲಿನ ಅನೇಕ ಜನ ಕೂಲಿ ಕೆಲಸಗಾರರು ಕೂಲಿಗಾಗಿ ಬೇರೆ ಕಡೆ ಕೆಲ ದಿನಗಳ ಕಾಲ ತಾತ್ಕಲಿಕವಾಗಿ ವಲಸೆ ಹೋಗುತ್ತಾರೆ. ಲಂಬಾಣಿಗರು ಸ್ವಂತಃ ಇಲ್ಲವೆ ಸರಕಾರದಿಂದ ದೇಣಿಯಾಗಿ ಪಡೆದ ಬೇರೆಯವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಮಳೆಯಾಗದೆ ಬೆಳೆಗಳು ಚೆನ್ನಾಗಿ ಬರದೆ ರೈತರು ಕಂಗಾಲಾಗಿ ಕೂಲಿಯನ್ನು ಮಾಡಲು ಪಕ್ಕದ ಅಥವಾ ದೂರದ ಊರುಗಳಾದ ಚಿಕ್ಕಮಂಗಳೂರು, ಹೊನ್ನಾಳಿ, ಶಿವಮೊಗ್ಗ, ಭದ್ರಾವತಿ, ಮುಂತಾದ ಕಡೆ ಕೂಲಿಯನ್ನು ಮಾಡಲು ವಲಸೆ ಹೋಗುತ್ತಿದ್ದಾರೆ. ಇವರು ಕೂಲಿಗಾಗಿ ವಲಸೆ ಹೋಗುವುದು ಕಾಫಿ ತೋಟಗಳಿಗೆ ಮಲೆನಾಡಿನ ಕಾಫಿ ತೋಟಗಳಲ್ಲಿ ಲಂಬಾಣಿಗರೇ ಹೆಚ್ಚಾಗಿ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಲಂಬಾಣಿಗರಂತೂ ವರ್ಷದಲ್ಲಿ ಹಲವು ತಿಂಗಳುಗಳ ಕಾಲ ಕಾಫಿ ತೋಟಗಳಿಗೆ ಕೂಲಿಗಾಗಿ ವಲಸೆ ಹೋಗುವುದು ಒಂದು ಆಚರಣೆಯಂತೆ ಹಲವು ವರ್ಷಗಳ ಕಾಲ ನಡೆದು ಕೊಂಡುಬಂದಿದೆ.

ಕೂಲಿಕಾರ್ಮಿಕರು ತಮ್ಮ ಶಕ್ತಿ, ಸಾಮಾರ್ಥ್ಯ, ಕೌಶಲ್ಯಗಳನ್ನು ಒಡೆಯನ ಅಥವಾ ಮಾಲೀಕನ ವಶಕ್ಕೆ ಒಪ್ಪಿಸಿ ಅದಕ್ಕೆ ಪ್ರತಿಫಲವಾಗಿ ಸಂಭಾವನೆ ಪಡೆಯುವುದೇ ಕೂಲಿ ಎನ್ನಬಹುದಾಗಿದೆ. ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಬಹಳಷ್ಟು ಮಂದಿ ಉತ್ಪಾದನಾ ಸಾಧನವಾಗಿ ಕುಟುಂಬದ ನಿರ್ವಹಣೆಗೆ ಕಂಡುಕೊಂಡ ಪರ್ಯಾಯ ಮಾರ್ಗಗಳಲ್ಲಿ ಕೂಲಿಯು ಮುಖ್ಯವಾಗಿದೆ. ಕೂಲಿಯಲ್ಲಿ ತೊಡಗಿಸಿಕೊಂಡಿರುವವರ ಕುಟುಂಬವು ಸುತ್ತಲ ಸಮುದಾಯಗಳ ಜೊತೆಗೆ ಬೆರೆಯುವಂತೆ ಸ್ನೇಹ ಸೌಹಾರ್ದತೆ ಬೆಳೆಯುವಂತೆ ಮಾಡಿದೆ. ಇದರಿಂದ ಇಂದು ಲಂಬಾಣಿಗರ ರೀತಿ-ನೀತಿ ಜೀವನ ಶೈಲಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತಿವೆ.

## ಕೂಲಿಗಾಗಿ ವಲಸೆ ಹೋಗಿರುವ ಕೂಲಿಯ ವಿಧಗಳು

ಕುಟುಂಬದ ನಿರ್ವಹಣೆಗಾಗಿ ಲಂಬಾಣಿಗರು ಇಂದು ವಲಸೆ ಹೋಗುವ ಪ್ರಕ್ರಿಯೆಯನ್ನು ನೋಡಿದಾಗ ಪಾರಂಪರಿಕವಾಗಿ ಬಂದಿದ್ದ ಉದ್ಯೋಗಗಳಿಗೂ ಸಂಬಂಧವೇ ಇಲ್ಲದ ಪರಿಸ್ಥಿತಿಯಲ್ಲಿಯೂ ಆಸರೆಯಾಗಿ ಪಡೆದ ವೃತ್ತಿಗಳು ಇಂದು ಹೆಚ್ಚು ತಾಂಡವಾಸಿಗಳನ್ನು ಬದುಕಿಸುತ್ತಿವೆ. ಬದಲಾಗುತ್ತಿರುವ ಸಮಾಜದಲ್ಲಿ ಲಂಬಾಣಿಗರು ಅನೇಕ ವಿಧವಾದ ವೃತ್ತಿಗಳಲ್ಲಿ ತೊಡಗಿಸಿಕೊಂಡು ಜೀವಿಸುತ್ತಿದ್ದಾರೆ. ಲಂಬಾಣಿಗರು ಸಮಾಜದೊಂದಿಗೆ ವ್ಯವಸಾಯದ ಜೊತೆ ವಿಧವಿಧವಾದ ವೃತ್ತಿಯನ್ನು ಅವಲಂಬಿಸಿ ಆದಾಯ ತರುವ ಅನೇಕ ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ತಾಂಡಗಳ ಸಾಕಷ್ಟು ಜನ ಕೂಲಿಗಾಗಿ ವಲಸೆ ಹೋಗಿದ್ದಾರೆ.

### ೧. ಗಾರೆ ಕೆಲಸ

ಲಂಬಾಣಿಗರಲ್ಲಿ ಕೆಲವರು ಮನೆ ಕಟ್ಟುವಲ್ಲಿ ಹೆಚ್ಚು ನಿಪುಣರಾಗಿದ್ದು ತಾಂಡದಲ್ಲಿ ಅಥವಾ ಅಕ್ಕಪಕ್ಕದ ಹಳ್ಳಿ ನಗರಗಳಿಗೂ ಹೋಗಿ ಮನೆಕಟ್ಟುವ, ಗಾರೆ ಕೆಲಸ ಮಾಡುವ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಒಟ್ಟು ನಾಲ್ಕು ತಾಂಡಾದಿಂದ ಗಾರೆ ಕೆಲಸ ಮಾಡುವವರು ೨೯ ಜನ ಇದ್ದು ಗಾರೆ ಕೆಲಸವನ್ನು ಇವರುಗಳು ಮಾಡಲು ೧೦-೨೦ ಕಿ.ಮಿಗಳವರೆಗೆ ದೂರ ಹೋಗುತ್ತಾರೆ.

### ೨. ಕಲ್ಲು ಹೊಡೆಯುವ ಮತ್ತು ಮಣ್ಣು ಹೊರುವ ಕೆಲಸ

ಲಂಬಾಣಿರು ಕಾಲುವೆ ಮಾಡುವಾಗ ಕಲ್ಲುಹೊಡೆಯಲು, ಮಣ್ಣು ಹೊರಲು, ಗಂಡಸರು, ಹೆಂಗಸರಿಬ್ಬರು ದುಡಿಯುತಿದ್ದಾರೆ. ಆದರೆ ಇವರ ಪ್ರಮಾಣ ಕಡಿಮೆ. ನಾಲ್ಕು ತಾಂಡಗಳಲ್ಲಿ ಒಟ್ಟು ೩೦ ಜನರು ಈ ರೀತಿಯಲ್ಲಿ ಕೂಲಿ ಮಾಡಲು ದಿನಾ ವಲಸೆ ಹೋಗುತ್ತಿದ್ದಾರೆ. ಗಾರೆ ಕೆಲಸವನ್ನು ತಾಂಡದಲ್ಲಿ ಮಾಡಿದರೆ ಕಡಿಮೆ ಕೂಲಿ ಅಂದರೆ ದಿನಕ್ಕೆ ೪೦ ರೂ. ನೀಡುತ್ತಾರೆ. ನಗರ ಪ್ರದೇಶಕ್ಕೆ ಬಂದರೆ ಪುರುಷರಿಗೆ ದಿನಕ್ಕೆ ೭೦ ರಿಂದ ೧೦೦ ರೂ.ಗಳನ್ನು ನೀಡುತ್ತಾರೆ. ಈ ರೀತಿ ಕೂಲಿಗಾಗಿ ಹೊರ ಹೋಗುವವರಲ್ಲಿ ಗಂಡುಮಕ್ಕಳ ಸಂಖ್ಯೆಯು ಹೆಚ್ಚು.

ತಾಂಡದಲ್ಲಿ ಕೃಷಿ ಮಾಡುವುದರ ಜೊತೆಗೆ ಕೂಲಿಯನ್ನು ಸಹ ಮಾಡುತ್ತಿರುವುದು ಕಂಡುಬಂದಿತು. ಹಾಗೆಯೇ ಹೆಣ್ಣುಮಕ್ಕಳು ಅಡಿಕೆ ಸುಲಿಯಲು ಪಕ್ಕದ ಊರುಗಳಿಗೆ ಹೋಗುತ್ತಾರೆ. ದಿನವೊಂದಕ್ಕೆ ಅಡಿಕೆ ಸುಲಿಯಲು ೫೦ ರೂ. ನೀಡಲಾಗುತ್ತದೆ. ವರ್ಷದಲ್ಲಿ ಎಲ್ಲಾ ದಿನ ಈ ರೀತಿ ಕೂಲಿಗಾಗಿ ವಲಸೆ ಹೋಗದೆ ಪುರುಷರು ಕೂಲಿಗಾಗಿ ಬೇಡಿಕೆ ಇದ್ದ ದಿನದಲ್ಲಿ ಹೋಗುತ್ತಾರೆ. ಕೂಲಿ ದೊರೆತರೆ ಹೋಗುವವರು ದೊರೆಯದಿದ್ದರೆ ತಾಂಡದಲ್ಲಿಯೇ ಉಳಿಯುವರು.

ಗುಡ್ನಳ್ಳಿ ತಾಂಡದಲ್ಲಿ ಕೂಲಿಯನ್ನು ಮಾಡಲು ನಗರಗಳ ಹೋಟಲಿನಲ್ಲಿ ಮಕ್ಕಳು, ವಯಸ್ಸಿಗೆ ಬಂದ, ಬಾರದ ಹೆಣ್ಣುಮಕ್ಕಳು ದುಡಿಯುತ್ತಿದ್ದಾರೆ. ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ, ಹೊನ್ನಾಳಿ, ಮುಂತಾದ ನಗರಗಳಲ್ಲಿ ಪ್ರತೀ ವರ್ಷವು ಹೀಗೆ ಬಾಲ ಕಾರ್ಮಿಕರು ಹೋಟಲಿನಲ್ಲಿ ದುಡಿಯುವ

ವರ್ಷದ ಲೆಕ್ಕದಲ್ಲಿ ತಾತ್ಕಲಿಕ ವಲಸೆ ಹೋಗುತ್ತಿದ್ದಾರೆ. ದುಡಿಮೆಗೆ ಪ್ರತಿಫಲವಾಗಿ ಪಡೆಯುವ ಕೂಲಿ ಹಣವು ಕಡಿಮೆಯಾಗಿದ್ದು, ಮಾಲಿಕರು ನೀಡುತ್ತಿರುವ ಹಣವು ಕುಟುಂಬಕ್ಕೆ ಸಾಲದೆ ಮನೆಮಂದಿಯಲ್ಲಾ ದುಡಿದರು ಉಳಿತಾಯವಾಗದೆ ಸಾಲವು ಹೆಚ್ಚಾಗುತ್ತಿದೆ. ಆರ್ಥಿಕ ಹಿನ್ನೆಡೆಯಲ್ಲಿ ನೂರಾರು ಕುಟುಂಬಗಳು ತಾಂಡಗಳಲ್ಲಿ ಸುಖಶಾಂತಿ ಹೊಂದದೆ ಜೀವಿಸುತ್ತಿವೆ. ಈ ಕಾರಣಗಳಿಂದ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿದ್ದು, ಶಿಕ್ಷಣದಿಂದಲೂ ಕೂಡ ಈ ಮಕ್ಕಳು ವಂಚಿತರಾಗಿ ಶಿಕ್ಷಣ ಪಡೆಯುವುದರ ಬದಲು ಕೂಲಿ ಮಾಡಲು ಹೋಗುತ್ತಿದ್ದಾರೆ. ಸಾಮಾಜಿಕವಾಗಿ ಇವರ ಸ್ಥಾನ ಕೆಳಸ್ತರದಲ್ಲಿದ್ದು ಬಂಡವಾಳಶಾಹಿ ಮೇಲ್ಜಾತಿ ಮೇಲ್ವರ್ಗದವರ ಶೋಷಣೆಗೆ ಗುರಿಯಾಗುತ್ತಿದ್ದಾರೆ. ಈ ರೀತಿ ಕೂಲಿಗಾಗಿ ವಲಸೆ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಲೇ ಇದೆ. ಬರಗಾಲದ ಪರಿಣಾಮ ಇದು ಸಹಜವಾದ ಪ್ರತಿಕ್ರಿಯೆ ಎಂದೆನಿಸುತ್ತದೆ.

### ಮನೆ ಕಟ್ಟುವ ಕೆಲಸ

ವ್ಯಾಪಾರಿ ಅಲೆಮಾರಿ ಸಮುದಾಯವಾಗಿದ್ದ ಲಂಬಾಣಿಗರು ಬದಲಾವಣಾ ಸುಳಿಯಲ್ಲಿ ಸಿಕ್ಕಿ ನಿತ್ಯವು ಒಂದೊಂದು ರೀತಿಯಲ್ಲಿ ರೂಪುಗೊಂಡಿದ್ದಾರೆ. ಅಲೆಮಾರಿಗಳಾಗಿ ತಾತ್ಕಲಿಕ ವಸತಿಯನ್ನು ಹೊಂದಿದ್ದವರು ಇಂದು ಶಾಶ್ವತ ನೆಲೆಗಳನ್ನು ಹೊಂದಿ ಮನೆಗಳನ್ನು ನಿರ್ಮಿಸುವ ಕಲೆಯನ್ನುಹೊಂದಿರುವ ಹಲವು ಬೇಲ್ದಾರರು ತಾಂಡಗಳಲ್ಲಿದ್ದಾರೆ. ಕೇವಲ ಮಳೆ, ಗಾಳಿ ಚಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಒಂದು ಗುಡಿಸಲನ್ನು ನಿರ್ಮಿಸಿಕೊಳ್ಳುತ್ತಿದ್ದ ಕೈಗಳು ಇಂದು ಸಿಮೆಂಟು, ಇಟ್ಟಿಗೆ ಇತ್ಯಾದಿಗಳಿಂದ ಮನೆ ನಿರ್ಮಿಸುವ ಸಾಮರ್ಥ್ಯವನ್ನು ಪಡೆದಿದ್ದಾರೆ. ತಾಂಡದಲ್ಲಿ ಮನೆಗಳನ್ನು ಕಟ್ಟಬೇಕಾದರೆ ಇತರ ಸಮುದಾಯ ದವರು ಸಾಮಾನ್ಯವಾಗಿ ಯಾರನ್ನು ಕರೆಯಿಸದೆ ಮನೆಕಟ್ಟಲು ನಿಸ್ಸೀಮರಾಗಿರುವ ವ್ಯಕ್ತಿಗಳಿಂದ ಕಟ್ಟಿಸುತ್ತಾರೆ. ಈ ವೃತ್ತಿಯನ್ನು ಅವಲಂಬಿಸಿ ಒಟ್ಟು ೧೫ ಕುಟುಂಬಗಳು ಜೀವನ ಸಾಗಿಸುತ್ತಿವೆ. ಇದರ ಜೊತೆಗೆ ಇವರ ಸಹಾಯಕ್ಕಾಗಿ ಕೆಲವು ಜನ ಕೂಲಿಗಾಗಿ ಅವಲಂಬಿಸಿದ್ದಾರೆ. ಅಪ್ರಾಪ್ತ ವಯಸ್ಸಿನ ಮಕ್ಕಳು ಕೂಡ ಮನೆ ಕಟ್ಟುವ ಕೆಲಸಕ್ಕೆ ಸಹಾಯಕರಾಗಿ ದುಡಿಯುತ್ತಿದ್ದಾರೆ. ಮನೆಕಟ್ಟಲು ಇತರ ಊರುಗಳಿಗೆ ಹೋಗುವುದುಂಟು. ದಿನಕ್ಕೆ ೫೦ ರೂ. ೭೦ ರೂ. ಗಳವರೆಗೆ ಕೂಲಿ ಪಡೆಯುತ್ತಾರೆ. ಹೆಂಗಸರು ಯಾರು ಮನೆಕಟ್ಟುವಾಗ ಸಹಾಯಕರಾಗಿ ಕೆಲಸ ಮಾಡುವುದು ಕಂಡುಬರಲಿಲ್ಲ.

### ಜೀತ

ಭಾರತೀಯ ಸಮಾಜದಲ್ಲಿ ಅನಾದಿಕಾಲದಿಂದಲೂ ಅನೇಕ ಅನಿಷ್ಟ ಪದ್ಧತಿಗಳು ಬೆಳೆದು ಬಂದಿವೆ.ಜಾತಿ ಪದ್ಧತಿ, ಅಸ್ಪೃಶ್ಯತೆ, ಗುಲಾಮಗಿರಿ, ಸ್ತ್ರೀ ಹತ್ಯೆ, ಬಾಲ್ಯವಿವಾಹ, ಜೀತಪದ್ಧತಿ, ಇವೇ ಅಂತಹ ಕೆಲವು ಪದ್ಧತಿಗಳು. ಜೀತ ಪದ್ಧತಿಯ ಉಗಮದ ಬಗ್ಗೆ ಮತ್ತು ಅದರ ಅರ್ಥದ ಬಗ್ಗೆ ನಿರ್ದಿಷ್ಟ ವಿವರಣೆಗಳಿಲ್ಲ. ಬಹಳ ಹಿಂದಿನಿಂದಲೂ ಈ ಪದ್ಧತಿಯು ರೂಢಿಯಲ್ಲಿತ್ತು. "ಜೀತವೆಂದರೆ ನಿರ್ದಿಷ್ಟ ನಿಯಮಗಳಿಗೆ ಬದ್ಧನಾಗಿ ಒಬ್ಬ ವ್ಯಕ್ತಿಯು ಒಬ್ಬ ಮಾಲಿಕನಿಗೆ ಹಗಲು ರಾತ್ರಿ ಎನ್ನದೆ ಸೇವೆ

ಸಲ್ಲಿಸುವುದು. ಹಳ್ಳಿಯ ಬಡವರು ತನ್ನ ಯಜಮಾನನಿಂದ ಸಾಲ ಪಡೆದ ಹಣಕ್ಕೆ ಅಥವಾ ಅದರ ಬಡ್ಡಿಗಾಗಿ ಯಜಮಾನನ ಹಂಗಿನಲ್ಲಿ ಗುಲಾಮರಂತೆ ದುಡಿಯುವುದಕ್ಕೆ ಜೀತ ಪದ್ಧತಿ ಎಂದು ಹೆಸರು”[೬] ಹೀಗೆ ದುಡಿಯುತ್ತಿರುವ ಇವರಿಗೆ ಕೊಡುವ ಕೂಲಿ ಅಥವಾ ವಾರ್ಷಿಕ ಭತ್ಯೆ ತುಂಬಾ ಕಡಿಮೆ. ಮಾಲೀಕರು ಜೀತದಾಳುಗಳ ಕುಟುಂಬಕ್ಕೆ ಬೇಕಾದ ಆಹಾರ, ಮನೆ, ಬಟ್ಟೆಗಳನ್ನು ತಾತ್ಕಾಲಿಕವಾಗಿ ಒದಗಿಸುತ್ತಿದೆ. ಮತ್ತೆ ಕೆಲವು ಕಡೆ ಇವುಗಳಾವುದನ್ನು ಒದಗಿಸಿದೆ ಬರೀ ಹಣವನ್ನು ವರ್ಷಕ್ಕೆ ಎರಡು ಮೂರುಸಾವಿರದಿಂದ ಹಿಡಿದು ನಾಲ್ಕು ಐದು ಸಾವಿರದ ಒಳಗಡೆ ನೀಡುತ್ತಿದ್ದಾರೆ. ಜೀತಪದ್ಧತಿಯು ಗ್ರಾಮೀಣ ಪ್ರದೇಶದ ಒಂದು ಸಾಮಾಜಿಕ ಆರ್ಥಿಕ ಸಮಸ್ಯೆಯಾಗಿದೆ. ಇದರಿಂದ ಕೆಳವರ್ಗದ ಮತ್ತು ತೀರ ನಿರ್ಗತಿಕರ ದೈಹಿಕ ಶೋಷಣೆ ಆಗುತ್ತಿದೆ. ದುಡಿಮೆಗೆ ತಕ್ಕ ಕೂಲಿ ಸಿಗುತ್ತಿಲ್ಲ. ಜೀತ ಪದ್ಧತಿಯು ಸರಕಾರದ ಕಣ್ಣಿನಲ್ಲಿ ಮುಕ್ತವಾಗಿದೆ ಎಂದು ಇದ್ದರೆ ಲಂಬಾಣಿ ಹಾಗೂ ಇತರ ಕೆಳ ಸಮುದಾಯದಲ್ಲಿ ಇಂದಿಗೂ ಜೀವಂತವಾಗಿದೆ. ವರುಷ ತಿಂಗಳ ಲೆಕ್ಕದಲ್ಲಿ ಇವರು ಭೂಮಾಲಿಕರ ಮನೆಗಳಲ್ಲಿ ದುಡಿಯುತ್ತಾರೆ. ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ಸಹ ಇಂದಿನ ದಿನವವರೆಗೂ ದುಡಿಯುತ್ತಿದ್ದಾರೆ. ತಮ್ಮ ಜೀವಮಾನದ ಪೂರ್ತಿ ಮೇಲ್ಜಾತಿಯವರ ಗದ್ದೆಗಳಲ್ಲಿ ಕಡಿಮೆ ಕೂಲಿ ಹಣಕ್ಕಾಗಿ ದುಡಿಯುತ್ತಿದ್ದಾರೆ. ತಾಂಡದಲ್ಲಿ ಮೇಲ್ಜಾತಿಯವರಾದ ಲಿಂಗಾಯಿತರ ಮನೆಯಲ್ಲಿ, ಕುರುಬರ, ವಿಶ್ವಕರ್ಮ ಜಾತಿಯ ಭೂಮಾಲಿಕರ ಮನೆಗಳಲ್ಲಿ ಇವರು ಜೀತಕ್ಕಿದ್ದಾರೆ. ಇವರದು ನೂರಾರು ಎಕರೆ ಜಮೀನುಗಳಿದ್ದು ಇವರ ಕೈಕೆಳಗಡೆ ತಾಂಡದ ಜನರು ಇವರ ತೋಟ, ಹೊಲ, ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಹಾಗೆಯೇ ತಾಂಡದಲ್ಲಿರುವ ಆರ್ಥಿಕ ಸುಸ್ಥಿತಿವಂತ ಲಂಬಾಣಿಗರ ಮನೆಯಲ್ಲಿಯೇ ಬಡ ಲಂಬಾಣಿಗರು ಜೀತ ಮಾಡುತ್ತಿರುವ ಅಂಶವು ಕಂಡುಬಂದಿತು. ವಾರ್ಷಿಕ ಗುತ್ತಿಗೆಯ ಆಧಾರದ ಮೇಲೆಯೇ ಹೆಚ್ಚಾಗಿ ತಾಂಡದ ಜೀತ ಕಾರ್ಮಿಕರು ಕೆಲಸ ಮಾಡುತ್ತಿದ್ದು ಕೂಲಿ ಹಣವನ್ನು ಮುಂಗಡವಾಗಿಯೇ ಪಡೆದಿರುತ್ತಾರೆ.

ಜೀತ ಮಾಡುವವರ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲದೆ ಈ ಕುಟುಂಬದಲ್ಲಿ ಬಡತನವು ಹೆಚ್ಚಾಗಿದ್ದು, ಭೂರಹಿತರಾಗಿದ್ದಾರೆ. ಇವರಿಗೆ ಮನೆ, ಭೂಮಿ, ಆಸ್ತಿ, ಸಂಪತ್ತುಗಳಿಲ್ಲದೆ ಆರ್ಥಿಕವಾಗಿ ಹಿಂದುಳಿದಿದ್ದು ಶಿಕ್ಷಣವನ್ನು ಸಹ ಪಡೆಯಲು ಆಗುತ್ತಿಲ್ಲ. ದುಡಿದ ಹಣ ಸಂಸಾರ ಸಾಗಿಸಲು ಆಗದೆ ಇರುವ ಪರಿಸ್ಥಿತಿಯಲ್ಲಿ ಇನ್ನು ಶಿಕ್ಷಣ ಕೊಡಿಸುವುದು ತುಂಬಾ ದೂರದ ಮಾತಾಗಿದೆ. ತಾಂಡದಲ್ಲಿಯೇ ಈ ಜೀತ ಮಾಡುವ ಕುಟುಂಬದ ಆರ್ಥಿಕ ಸ್ಥಾನಮಾನ ಕೆಳಹಂತದಲ್ಲಿರುವುದರಿಂದ ಸಾಮಾಜಿಕವಾಗಿ ಯಾವುದೇ ಸ್ಥಾನಮಾನಗಳನ್ನಾಗಲಿ ಅಧಿಕಾರ, ಶಿಕ್ಷಣವನ್ನಾಗಲಿ ಪಡೆಯದೆ ಹಿಂದುಳಿದಿದ್ದಾರೆ.

ಬಡತನದಲ್ಲಿರುವ ಹಾಗೂ ದುಡಿಯಲು ತುಂಡು ಜಮೀನು ಕೂಡ ಇಲ್ಲದೆ ಬದುಕನ್ನ ಸಾಗಿಸಲು ಬೇರೆ ದಾರಿ ಕಾಣದೆ ಜೀತದಲ್ಲಿದ್ದಾರೆ. ಮಕ್ಕಳನ್ನು ಬಾಲ್ಯದಲ್ಲಿಯೇ ಭೂ ಮಾಲಿಕರ ಮನೆಯಲ್ಲಿ ಜೀತಕ್ಕೆ ಇಡುತ್ತಾರೆ. ದೊಡ್ಡವರು ಕೂಡ ಸಾಮಾನ್ಯವಾಗಿ ಮದುವೆಯ ಮುಂಚೆ ಜೀತಕ್ಕಿರುತ್ತಾರೆ ಹಾಗೂ ಮದುವೆಯಾದ ಪುರುಷರು, ವೃದ್ಧರು ಕೂಡ ಜೀತವನ್ನು ಮಾಡುತ್ತಿದ್ದಾರೆ. ಈ ಕುಟುಂಬಗಳು

ಜೀವಮಾನ ಪೂರ್ತಿ ಹೀಗೆ ದುಡಿದಿದ್ದರು. ಮಾಲೀಕರು ಇವರಿಗೆ ಇರಲು ಮನೆಯನ್ನು, ಜಮೀನನ್ನು, ಮೂಲಭೂತ ಸೌಕರ್ಯವನ್ನು ಸಹ ಒದಗಿಸಿಲ್ಲ. ಎಲ್ಲೋ ಒಂದೆರಡು ಕುಟುಂಬದವರು ಇವುಗಳನ್ನ ಒದಗಿಸಿದ್ದಾರೆ. ಭಾರತ ಸರ್ಕಾರದ ೨೩ನೆಯ ಪರಿಚ್ಛೇದನ ಅನುಸಾರ ಜೀತ ವಿಮುಕ್ತಿಯಾಗಿದ್ದರೂ ಜೀತ ಇನ್ನೂ ಅಸ್ತಿತ್ವದಲ್ಲಿದೆ. ಕಾನೂನು ಕ್ರಮ ಕೈಗೊಂಡು ಜೀತಪದ್ಧತಿಯನ್ನು ನಿಷೇಧಿಸಿ "ಕರ್ನಾಟಕ ಜೀತ ವಿಮೋಚನಾ ಶಾಸನ ೧೯೭೬ರಲ್ಲಿ"[೭] ಒಂದು ಸಾವಿರಾರು ಜೀತದಾಳುಗಳನ್ನು ಗುರ್ತಿಸಿ ಅವರನ್ನು ಜೀತದಿಂದ ವಿಮುಕ್ತಿಗೊಳಿಸಲಾಗಿದೆ. ಆದರು ಇಂದು ಕೂಡ ಈ ಪದ್ಧತಿ ಜಾರಿಯಲ್ಲಿದೆ.

ನಾನು ಕ್ಷೇತ್ರಕಾರ್ಯ ಮಾಡಿದ ಪ್ರತಿಯೊಂದು ತಾಂಡದಲ್ಲೂ ಜೀತದಾಳುಗಳಿದ್ದಾರೆ. ಚಿಕ್ಕಬಾಸೂರು ತಾಂಡದಲ್ಲಿ ಹದಿನೈದು ಜನ, ಮಲೆಕುಂಬಳೂರಿನಲ್ಲಿ ಹತ್ತು ಜನ, ಗುಡ್ಡಳ್ಳಿಯಲ್ಲಿ ಹನ್ನೊಂದು ಜನ, ಸೂರಗೊಂಡನಕೊಪ್ಪದಲ್ಲಿ ಏಳು ಜನ ಜೀತವನ್ನು ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಒಪ್ಪಿಕೊಂಡಿದ್ದಾರೆ. ಪ್ರತಿಯಾಗಿ ಆಹಾರ ಸಾಮಾಗ್ರಿಯನ್ನು ಬಟ್ಟೆಬರಿಗಳನ್ನು ಒಂದೆರಡು ಜನ ಜೀತದಾಳುಗಳು ಪಡೆದರೆ, ಉಳಿದಂತೆ ವರ್ಷಕ್ಕೆ ಎರಡುವರೆ ಸಾವಿರದಿಂದ ನಾಲ್ಕು, ಐದು ಸಾವಿರದವರೆಗೂ ಹಣವನ್ನು ಮಾಲೀಕರಿಂದ ಮೊದಲೆ ಪಡೆಯುತ್ತಾರೆ. ಹಾಗೂ ವರ್ಷಪೂರ್ತಿ ಈ ಹಣಕ್ಕಾಗಿ ದುಡಿಯುತ್ತಾರೆ. ವರ್ಷ ಮುಗಿಯುವುದರ ಒಳಗೆ ಹಣ ತೀರಿಸದಿದ್ದರೆ ಪುನಃ ಕೆಲಸವನ್ನು ಮಾಡಬೇಕು. ಬಡ್ಡಿಗಾಗಿ ಹೀಗೆ ಬಡ ಜೀತದಾಳುಗಳು ದುಡಿಯುತ್ತಲೇ ಇರುವರು. ಇಲ್ಲಿ ಚಿಕ್ಕ ಮಕ್ಕಳು ಕೂಡ ಜೀತವನ್ನು ಮಾಡುತ್ತಿದ್ದಾರೆ. ಇವರು ಮಾಲೀಕರ ಜಾನುವಾರುಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುವರು. ಹೆಣ್ಣುಮಕ್ಕಳು ಜೀತವನ್ನು ಮಾಡುವುದು ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಬರಲಿಲ್ಲ. ಆದರೆ ಪ್ರಾಯಕ್ಕೆ ಬರುವ ಮುನ್ನ ಮಾಲೀಕರ ಮನೆಯಲ್ಲಿ ಕೆಲಸ ಮಾಡುತ್ತಾರೆ. ಈ ರೀತಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಶಿಕ್ಷಣವನ್ನು ಪಡೆಯದೆ ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು ತಾಂಡಗಳಲ್ಲಿ ಸಾಮಾನ್ಯವಾಗಿದೆ. ಬಡತನವಿರುವ ಕಾರಣ ಈ ರೀತಿ ಮಕ್ಕಳು ದುಡಿಯುತ್ತಿದ್ದಾರೆ. ಸರಕಾರ ಜೀತಪದ್ಧತಿಯ ನಿವಾರಣೆಗೆ ಕಾನೂನು ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸಿದರೆ ಸಾಲದು. ಮಕ್ಕಳಿಗೆ ಶಿಕ್ಷಣ ಕೊಡಿಸಿ ಸ್ವಾವಲಂಬಿಗಳಾಗುವಂತೆ ಉತ್ತೇಜನ ನೀಡಬೇಕು. ಇಂತಹ ಕುಟುಂಬಗಳಿಗೆ ಜಮೀನು, ಮನೆಯನ್ನು ಒದಗಿಸಬೇಕು. ಪುರ್ನವಸತಿ ಮತ್ತು ಸಾರ್ವಜನಿಕರ ಸಹಕಾರದಿಂದ ಜೀತಪದ್ಧತಿಯನ್ನು ನಿವಾರಿಸಲು ಯತ್ನಿಸಬೇಕು. ಲಂಬಾಣಿ ಸಮುದಾಯದಲ್ಲಿ ಇನ್ನೂ ಜೀತ ಪದ್ಧತಿ ಅಸ್ತಿತ್ವದಲ್ಲಿರುವದು ಶೋಚನೀಯ. ಸರಕಾರ ಬರೀ ಶಾಸನಗಳನ್ನು ಜಾರಿಗೆ ತಂದು ಜೀತ ಪದ್ಧತಿಗಳು ಎಷ್ಟೋ ಕಡಿಮೆಯಾಗಿದೆ ಆದರೆ ಇನ್ನು ಈ ಪದ್ಧತಿ ಸಂಪೂರ್ಣ ನಾಶವಾಗದೆ ಉಳಿದಿದೆ. ಇಂತಹ ಪ್ರಕರಣಗಳ ವಿರುದ್ಧ ಕ್ರಮ ಕೈಗೊಂಡು ಇವರಿಗೆ ಪುರ್ನವಸತಿಗಳನ್ನು ಕಲ್ಪಿಸಬೇಕು.

ಕೋಷ್ಟಕ ೪

ಜೀತದಲ್ಲಿ ತೊಡಗಿಕೊಂಡವರ ವಿವರ

| ಕ್ರ.ಸ. | ತಾಂಡದ ಹೆಸರು | ಗಂಡು | ಹೆಣ್ಣು | ಒಟ್ಟು |
|---|---|---|---|---|
| ೧. | ಚಿಕ್ಕಬಾಸೂರುತಾಂಡ | ೧೫ | ೦ | ೧೫ |
| ೨. | ಮಲೆಕುಂಬಳೂರು | ೧೦ | ೦ | ೧೦ |
| ೩. | ಗುಡ್ಡಳ್ಳಿತಾಂಡ | ೧೧ | ೦ | ೧೧ |
| ೪. | ಸೂರಗೊಂಡನಕೊಪ್ಪ | ೦೭ | ೦ | ೦೭ |
| | ಒಟ್ಟು | ೪೩ | ೦ | ೪೩ |

ಕೃಷಿ

ಲಂಬಾಣಿಗರಿಗೆ ತಮ್ಮ ಪೂರ್ವಜರಿಂದ ಬಂದ ಜಮೀನು ಯಾರಿಗೂ ಹೆಚ್ಚಾಗಿಲ್ಲ. ಸರಕಾರದಿಂದ ಪಡೆದ ಖಾತೆ ಇಲ್ಲದ ಬಂಜರು ಜಮೀನುನಲ್ಲಿ, ಬೇರೆಯವರ ಜಮೀನುನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಸಾಮಾನ್ಯ ವ್ಯವಸಾಯ ಹೊಲಗದ್ದೆಗಳಲ್ಲಿ ಮಾಡುತ್ತಾರೆ. ತಾಂಡದಲ್ಲಿ ಕಡಿಮೆ ಭೂಹಿಡುವಳಿದಾರರು, ಬಗರ್‌ಹುಕುಂ ಜಮೀನು ಹೊಂದಿದವರು, ಭೂರಹಿತರು ಇದ್ದು. ಭೂರಹಿತರು ಕೂಲಿಯನ್ನು ಮಾಡಿ ಜೀವನ ನಡೆಸುತ್ತಿದ್ದಾರೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಮಳೆಯಾಗದೆ ಬರಗಾಲ ಉಂಟಾಗಿ ಬೆಳೆಹಾನಿಯಾದ ಕಾರಣ ಸಣ್ಣ ಭೂಹಿಡುವಳಿದಾರರು ಕೂಡ ಕೂಲಿಯನ್ನು ಮಾಡುತ್ತಿದ್ದಾರೆ. ಗೇಣಿಯನ್ನಾಗಿ ಬೇರೆಯವರ ಜಮೀನಿನಲ್ಲಿ ಕೃಷಿಯನ್ನು ಮಾಡಿದರು ಬೆಳೆ ಚೆನ್ನಾಗಿ ಆಗದೆ ಜನ ದೂರದೂರದ ಪ್ರದೇಶಗಳವರೆಗೆ ಕೂಲಿಯನ್ನು ಮಾಡಲು ಹೋಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.

ಲಂಬಾಣಿಗಳಿಗೆ ಕೃಷಿಯು ಪ್ರಮುಖವಾದ ಮತ್ತು ಮಹತ್ವದ ಆರ್ಥಿಕ ಕಸುಬಾಗಿದೆ. ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಭತ್ತ, ರಾಗಿ, ಜೋಳ, ಕಬ್ಬು, ಮೆಕ್ಕೆಜೋಳ, ಅಡಿಕೆ, ತೆಂಗು ಪ್ರಮುಖ ಬೆಳೆಗಳಾಗಿವೆ. ತರಿ ಭೂಮಿಯಲ್ಲಿ ತೊಗರೆ, ಹತ್ತಿ, ಕಡಲೆಕಾಯಿ, ಸೂರ್ಯಕಾಂತಿ, ಹೆಸರು, ಮೆಣಸಿನಕಾಯಿ ಬೆಳೆಗಳು ಪೂರಕ ಬೆಳೆಗಳಾಗಿವೆ. ಭತ್ತ, ಕಬ್ಬು ಬೆಳೆಗಳನ್ನು ವರ್ಷದಲ್ಲಿ ಎರಡು ಬಾರಿ ಬೆಳೆಯುತ್ತಾರೆ. ತರಕಾರಿ, ಸೊಪ್ಪು, ನಿಂಬೆ, ಮಾವು, ಹಲಸು ಮುಂತಾದುವುಗಳನ್ನು ಸಹ ಬೆಳೆಯುತ್ತಾರೆ. ಗುಡ್ಡಳ್ಳಿ ತಾಂಡ ಒಣಭೂಮಿ ಪ್ರದೇಶವಾಗಿರುವುದರಿಂದ ಇಲ್ಲಿ ಮೆಕ್ಕೆಜೋಳ, ರಾಗಿ, ಜೋಳ, ಹೆಚ್ಚಾಗಿ ಬೆಳೆಯುತ್ತಾರೆ. ವ್ಯವಸಾಯವು ತಾಂಡವಾಸಿಗಳ ಜೀವನಾಧಾರದ ಮುಖ್ಯ ಮೂಲವಾಗಿರುವುದು. ಮಳೆಯಾಗದೆ ಬೆಳೆಯಲ್ಲಾ ಹಾನಿಯಾಗಿ ಆರ್ಥಿಕ ಸಂಕಷ್ಟ ಹೆಚ್ಚು ಅನುಭವಿಸುತ್ತಿದ್ದಾರೆ. ಬದಲಿ ವೃತ್ತಿಯನ್ನು ಮಾಡಲು ಬಂಡವಾಳವಿಲ್ಲ. ಬಂಡವಾಳ ಬೇಕೆಂದರೆ ಆರ್ಥಿಕವಾಗಿ ಸಹಾಯವನ್ನು ಯಾರು ಮಾಡದೆ. ಆರ್ಥಿಕ ವ್ಯವಸ್ಥೆಯಲ್ಲಿ ಅಸ್ಥಿರತೆ ಉಂಟಾಗುತ್ತಿದೆ. ಬೆಳೆಹಾನಿಯಾಗಿ ರೈತರ ಹತ್ತಿರ ಬಂಡವಾಳವಿಲ್ಲ. ಪರಿಣಾಮ ವ್ಯಾಪಾರ ಮಾಡುತ್ತಿರುವ ಲಂಬಾಣಿಗರ ಮೇಲೆ ಮತ್ತು ಉಳಿದ ಊರಿನ ವ್ಯಾಪಾರಸ್ಥರಿಗೂ, ಕೂಲಿ

[illegible]

ಮಾಡಿ ಜೀವಿಸುವವರೆಗೆ ಕೆಲಸವಿಲ್ಲ. ವರ್ಷವರ್ಷ ಮಾಡುತ್ತಿದ್ದ ತಾಂಡದ ಹಬ್ಬವನ್ನು ತಾಂಡದಲ್ಲಿ ಮಾಡುತ್ತಿಲ್ಲ. ಆರ್ಥಿಕ ಸ್ಥಿತಿಯು ಉತ್ತಮವಿಲ್ಲ ಪರಿಣಾಮ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬದುಕಿನ ಮೇಲೆ ಜೀವನ ಕ್ರಮದಲ್ಲಿ ಏರುಪೇರುಗಳು ಉಂಟಾಗುತ್ತಿವೆ. ಶಿಕ್ಷಣವನ್ನು ಮುಂದುವರೆಸಲು ಆಗದೆ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಿದ್ದಾರೆ. ಹಾಗೆಯೇ ಕೃಷಿಯಲ್ಲಿ ಸುಧಾರಿತ ಕ್ರಮಗಳನ್ನು ಇತ್ತೀಚಿಗೆ ಅನುಸರಿಸಿದ್ದು ತಾಂಡದಲ್ಲಿ ಇಂದಿಗೂ ಕೃಷಿಯಲ್ಲಿ ನೇಗಿಲು, ಎತ್ತಿನ ಬಂಡಿ ಹೆಚ್ಚಾಗಿ ಬಳಸುತ್ತಿದ್ದು ಕಾಲಕಳೆದಂತೆ ಇವುಗಳ ಜೊತೆಗೆ ಟ್ರಾಕ್ಟರ್, ಪಂಪ್‌ಸೆಟ್ ಇತ್ಯಾದಿ ತಾಂತ್ರಿಕ ಉಪಕರಣಗಳ ಬಳಕೆ ಮಾಡುತ್ತಿದ್ದಾರೆ. ಶೇ ೬೫%ರಷ್ಟು ಕೃಷಿಕರು ಕೇವಲ ಮಳೆಯಾಧಾರಿತ ಕೃಷಿ ಕ್ರಮವನ್ನು ಅನುಸರಿಸಿರುವುದರಿಂದ ವ್ಯವಸಾಯದಿಂದ ಯಾವ ಲಾಭವು ಇಲ್ಲವೆಂದು ಹಾಗೂ ಮಳೆಯಿಲ್ಲದೆ ಬೆಳೆಗಳೆಲ್ಲ ಹಾನಿಯಾಗಿ ಪರ್ಯಾಯ ವೃತ್ತಿಯನ್ನಾಗಿ ಕೂಲಿ, ಜೀತ, ವ್ಯಾಪಾರವನ್ನು ಮಾಡುತ್ತಿದ್ದಾರೆ. ಕೃಷಿಯನ್ನೆ ತಮ್ಮ ಕಸುಬನ್ನಾಗಿ ಮಾಡುತ್ತಿರುವವರು ಕೃಷಿಯೆ ಇವರ ಜೀವನಕ್ಕೆ ಆಧಾರವಾಗಿದೆ. ಹೊಸ ತಲೆಮಾರಿನ ಜನ ಕೃಷಿಯಿಂದ ಯಾವ ಲಾಭವು ಇಲ್ಲಾ ಎನ್ನುವ ಭಾವನೆ ತಳೆಯುತ್ತಿದ್ದಾರೆ.

**ಕೋಷ್ಟಕ ೫**

**ನಾಲ್ಕು ತಾಂಡಾಗಳಲ್ಲಿನ ಭೂಹಿಡುವಳಿ**

| ತಾಂಡಗಳ ಹೆಸರು | ಒಟ್ಟು ಕುಟುಂಬಗಳು | ಒಣಭೂಮಿ | ನೀರಾವರಿ | ಬಗರ್‌ಹುಕಂ | ಭೂರಹಿತರು |
|---|---|---|---|---|---|
| ಚಿಕ್ಕಬಾಸೂರು | ೨೬೨ | ೨೧೭ / ಕು.*೧೪೨ | ೪೦ / ಕು.೩೦ | ೧೨೨ / ಕು.೪೧ | ೪೯ |
| ಗುಡ್ಡಳ್ಳಿತಾಂಡ | ೬೫ | ೩೧ / ಕು.೨೦ | ೦ / ಕು. ೦ | ೩೭ / ಕು. ೨೪ | ೨೩ |
| ಮಲೆಕುಂಬಳೂರು | ೭೫ | ೭೯ / ಕು.೨೬ | ೨೮/ ಕು.೧೭ | ೩೩ / ಕು. ೧೫ | ೧೭ |
| ಸೂ.ಕೊಪ್ಪ ತಾಂಡ* | ೬೨ | ೪೦ / ಕು.೨೪ | ೦ / ಕು. ೦ | ೪೨ / ಕು. ೨೧ | ೨೦ |
| **ಒಟ್ಟು** | **೪೬೪** | **೩೬೭** | **೬೮** | **೨೩೪** | **೧೦೯** |

* ಕು. ಕುಟುಂಬಗಳು

* ಸೂರಗೊಂಡನಕೊಪ್ಪ ತಾಂಡ

## ಪಶುಪಾಲನೆ

"ಪಶುಪಾಲನೆ ವ್ಯವಸಾಯಕ್ಕಿಂತ ಮುಂಚೆ ಮತ್ತು ನಂತರವೂ ಸಹ ಸಂಪತ್ತು, ಆಸ್ತಿ, ಎಂಬ ಪರಿಗಣನೆ ಪಡೆದಿದೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿರುವ ದನ, ಕೋಳಿ, ಕುರಿ, ಮೊದಲಾದ ಪ್ರಾಣಿಗಳ ಸಾಕಣೆಯನ್ನು ದೈನಂದಿನ ಜೀವನಕ್ಕೆ ಅಗತ್ಯವಾದ ಪ್ರಾಣಿಗಳನ್ನು ಸಾಕುವ ಬೆಳೆಸುವ, ಅವುಗಳ ಆರೋಗ್ಯ ಪಾಲನೆ ರೋಗೋಪಚಾರ ಹಾಗೂ ತಳಿ ಅಭಿವೃದ್ಧಿ ಮಾಡುವ ತಮ್ಮದೇ ಆದ ವಿಧಾನಗಳನ್ನು ತಲಾತಲಾಂತರದಿಂದ ರೂಢಿಸಿಕೊಂಡು"[೮] ಬರುತ್ತಿದ್ದಾರೆ. ಲಂಬಾಣಿಗರಲ್ಲಿ ಪಶುಪಾಲನೆ

ವೃತ್ತಿಯು ಹಿಂದಿನಿಂದಲೂ ಇರುವುದನ್ನು ಕಾಣುತ್ತೇವೆ. ಇವರು ಪಶುಪಾಲಕರಾಗಿ ತಮ್ಮ ದನಕರುಗಳ ಮೇಲೆ ಆಹಾರ, ಖಾದ್ಯ ಸಾಮಾಗ್ರಿಗಳನ್ನ ಸಾಗಿಸುತ್ತಿದ್ದರು. ಪಶುಪಾಲನೆ ವೃತ್ತಿಯನ್ನಾಗಿ ಹೊಂದಿರುವ ಲಂಬಾಣಿಗರು ತಾಂಡದಲ್ಲಿ ದನ, ಕರು, ಎತ್ತು, ಕುರಿ, ಮೇಕೆ, ಎಮ್ಮೆ ಇತ್ಯಾದಿ ಸಾಕುಪ್ರಾಣಿಗಳನ್ನ ಸಾಕುತ್ತಿದ್ದಾರೆ. ಹಲವು ಕುಟುಂಬಗಳು ಇವುಗಳಿಂದ ಬರುವ ಹೈನು ಹಾಗೂ ಅವುಗಳ ಉತ್ಪನ್ನದಿಂದ ಜೀವನ ಸಾಗಿಸುತ್ತಿದ್ದಾರೆ. ಹೆಚ್ಚಿನ ಮನೆಯಲ್ಲಿ ಕನಿಷ್ಠ ಪಕ್ಷ ೩.೪. ಆಕಳು ೨.೩. ಎಮ್ಮೆ ಒಂದೆರಡು ಜೊತೆ ಎತ್ತುಗಳನ್ನು ಸಾಕಿದ್ದಾರೆ. ಹಾಗೆಯೇ ಕುರಿ ಸಾಕಾಣಿಕೆ ಮಾಡುತ್ತಿರುತಿ ಕನಿಷ್ಠ ೩೦-೪೦ ಕುರಿ ಮೇಕೆಗಳನ್ನು ಸಾಕಿದ್ದು ಸಂತೆ, ಹಬ್ಬ, ಹರಿದಿನಗಳಲ್ಲಿ ಮಾರಿ ಜೀವನ ಸಾಗಿಸುತ್ತಿದ್ದಾರೆ. ಇಂದಿಗೂ ತಾಂಡದಲ್ಲಿನ ಕುಟುಂಬಗಳು ಇದನ್ನೆ ಅವಲಂಬಿಸಿವೆ. ಪಶುಪಾಲನೆಯೇ ಇವರ ಜೀವನಾಧಾರವಾಗಿದೆ. ಹಾಗೆಯೇ ಇದಕ್ಕೆ ಪೂರಕವಾಗಿ ಕೂಲಿಯನ್ನು ಸಹ ಮಾಡಿ ಜೀವನ ಸಾಗಿಸುತ್ತಿದ್ದಾರೆ. ತಾಂಡಗಳ ಜನರು ಡೈರಿ ಉದ್ಯಮಗಳು, ಕೋಳಿ ಫಾರಂಗಳು ಅಗತ್ಯತೆಯನ್ನು ಪೂರೈಸುವ ಉಪಕಸಬುದಾರರಂತೆ ಕೆಲಸ ಮಾಡುತ್ತಿದ್ದಾರೆ. ಇಲ್ಲಿದ್ದ ಸ್ವಾವಲಂಬನೆ ನಾಶವಾಗಿ ಎಲ್ಲವೂ ಪರಾವಲಂಬಿಯಾಗುತ್ತಿದೆ "ದನಕರುಗಳ ವ್ಯಾಪಾರಕ್ಕೆ ದಾವಣಗೆರೆ "ದನದ ಸಂತೆ" ಬಹಳ ಪ್ರಸಿದ್ದವಾಗಿದೆ. ಆಂದ್ರ, ಮಹಾರಾಷ್ಟ್ರದ ಕಡೆಯಿಂದೆಲ್ಲ ಪಶುಗಳು ಇಲ್ಲಿಗೆ ಬರುತ್ತಿವೆ ಮತ್ತು ಹೋಗುತ್ತದೆ"[ⁿ] ವ್ಯವಸಾಯಗಾರರಿಗೆ ದನಕರುಗಳು ತಮ್ಮ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ತಾಂಡದಲ್ಲಿ ತಮ್ಮಂತೆಯೂ ಅವು ಎಂದೂ ಪರಿಗಣಿಸಿ ಉದಾಸೀನ ಭಾವನೆಯಿಂದ ನೋಡದೆ ಪ್ರೀತಿಯಿಂದ ಸಾಕುತ್ತಾರೆ. ವ್ಯವಸಾಯವನ್ನೆ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿರುವುದರಿಂದ ದನಕರುಗಳನ್ನು ಸಾಕುವುದು ಅನಿವಾರ್ಯ.

### ಸರಕಾರಿ ಉದ್ಯೋಗ

ನಾನು ಕ್ಷೇತ್ರಕಾರ್ಯ ಮಾಡಿದ ನಾಲ್ಕು ತಾಂಡಗಳಲ್ಲಿ ಲಂಬಾಣಿಗರು ಕೃಷಿಯನ್ನೆ ತಮ್ಮ ಮುಖ್ಯ ಕಸಬನ್ನಾಗಿ ಮಾಡಿಕೊಂಡಿದ್ದಾರೆ. ಎಷ್ಟೇ ಬಡತನ, ಕಷ್ಟವಿದ್ದರು ತಮ್ಮ ಮಕ್ಕಳಿಗೆ ತಮ್ಮ ದುಡಿಮೆಯಲ್ಲಿನ ಉಳಿತಾಯದ ಭಾಗದಲ್ಲಿ ಓದಿಸಿದ್ದಾರೆ. ಅದರ ಫಲವಾಗಿ, ಸರಕಾರದ ಮೀಸಲಾತಿಯನ್ನು ಬಳಸಿಕೊಂಡು ಕೆಲವರು ಇಂದೂ ನೌಕರಿಯಲ್ಲಿ ನಿರತರಾಗಿದ್ದಾರೆ. ಪರಿಶಿಷ್ಟ ಜಾತಿಯಿಂದ ಮೀಸಲಾತಿಯನ್ನು ಪಡೆದಿರುವ ಲಂಬಾಣಿ ಸಮುದಾಯದಲ್ಲಿ ಅದನ್ನು ಬಳಸಿಕೊಂಡವರು ಬಹಳ ಕಡಿಮೆಯೇ, ಇದಕ್ಕೆ ಮುಖ್ಯ ಕಾರಣ ಶಿಕ್ಷಣದ ಕೊರತೆ. ಆದರೂ ಸರಕಾರದ ಕೆಲಸದಲ್ಲಿ ತೊಡಗಿಸಿಕೊಂಡ ತಾಂಡಗಳ ಜನರು ಬೆರಳೆಣಿಕೆಯಷ್ಟು. ಸರಕಾರದ ಉದ್ಯೋಗದಲ್ಲಿರುವವರು ಆಧುನಿಕತೆಗೆ ಒಳಗಾಗಿ ಇವರ ಕುಟುಂಬ ಮೂಲರೂಪದಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ಇವರು ತಮ್ಮ ಸಮುದಾಯದ ಚಹರೆಯನ್ನು ಕಳಚುತ್ತಾ ಬರುತ್ತಿದ್ದಾರೆ. ಪುರುಷರು, ಡಾಕ್ಟರ್, ಇಂಜಿನಿಯರ್, ಜಿಲ್ಲಾಧಿಕಾರಿ, ಶಿಕ್ಷಕರಾಗಿ, ಪೋಸ್ಟ ಆಫೀಸರ್, ಕೆ.ಇ.ಬಿ, ಇಂಜಿನಿಯರ್, ಪೋಲೀಸ್, ಮ್ಯಾನೇಜರ್, ಕ್ಲರ್ಕ್, ಗುಮಾಸ್ತರಾಗಿ ಹೀಗೆ ಹೊಸಹೊಸ ಉದ್ಯೋಗದಲ್ಲಿ ಇದ್ದಾರೆ. ಮಹಿಳೆಯರಲ್ಲಿ, ಒಬ್ಬ ಪೋಲೀಸ್, ಒಂಭತ್ತು ಜನ ಶಿಕ್ಷಕಿಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೊಸಹೊಸ ವೃತ್ತಿಗಳು ಇವರ ಸಾಮಾಜಿಕ, ಆರ್ಥಿಕ, ಸ್ಥಾನಮಾನಗಳನ್ನು

ಬದಲಿಸುತ್ತಿವೆ. ಬದಲಾದ ಪರಿಸ್ಥಿತಿಯಲ್ಲಿ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸಲು ಸರ್ಕಾರದ ಕೆಲಸವು ಮಹತ್ವವಾದ ಪಾತ್ರವಹಿಸಿರುವುದು ಕಾಣಲಾಗಿದೆ. ಸರಕಾರದ ವ್ಯವಸ್ಥೆಯಲ್ಲಿನ ವೃತ್ತಿಯು ಇವರುಗಳ ಕುಟುಂಬದ ವ್ಯವಸ್ಥೆಯನ್ನು ಬದಲಾಯಿಸಿದೆ. ಹಾಗೆಯೇ ಇವರುಗಳ ಮಕ್ಕಳು ಉತ್ತಮ ಶಿಕ್ಷಣವಂತರಾಗುತ್ತಿದ್ದಾರೆ. ಆಸ್ತಿ, ಮನೆ, ಜಮೀನುಗಳನ್ನು ಹೊಂದಿ ತಾಂಡದಲ್ಲೇ ಗಣ್ಯವ್ಯಕ್ತಿಗಳು ಮೇಲ್‌ಸ್ತರದೆಡೆಗೆ ಚಲಿಸುತ್ತಿದ್ದಾರೆ. ಸರಕಾರಿ ನೌಕರಿಯಲ್ಲಿರುವ ವ್ಯಕ್ತಿಯ ಆರ್ಥಿಕ ಒಲವು ಉತ್ತಮವಾಗಿರುವುದರಿಂದ ಇವರ ಜೀವನ ಶೈಲಿಯಲ್ಲಿ ಅಗಾಧ ಮಾರ್ಪಾಡುಗಳುಂಟಾಗುವುದನ್ನು ಕಾಣಲಾಗಿದೆ.

ಅಧ್ಯಯನಕ್ಕೆ ಒಳಪಡುವ ನಾಲ್ಕು ತಾಂಡಗಳಲ್ಲಿ ಲಂಬಾಣಿ ಸಮುದಾಯದ ಜನರು ಯಾರ ಕುಟುಂಬಲ್ಲಿನ ಸದಸ್ಯರು ಸರ್ಕಾರಿ ನೌಕರಿಯಲ್ಲಿದ್ದಾರೋ ಆ ಕುಟುಂಬದ ಆರ್ಥಿಕ ಸ್ಥಿತಿಗತಿಯು ಉತ್ತಮವಾಗಿದೆ. ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ಗೌರವ, ಸಂಪತ್ತು, ಅಧಿಕಾರವನ್ನು ಹೊಂದಿ ಅವರ ಕುಟುಂಬಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಉನ್ನತ ಸ್ಥಾನಮಾನವನ್ನು ಉಳಿದವರಿಗಿಂತ ಹೆಚ್ಚಾಗಿ ಪಡೆದುಕೊಂಡಿದ್ದಾರೆ.

## ಹೊಸ ಉದ್ಯೋಗಾವಕಾಶಗಳು

ಕೈಗಾರೀಕಿಕರಣದಡಿ ಪ್ರಪಂಚದಾದ್ಯಂತ ೧೭ ಮತ್ತು ೧೮ನೇ ಶತಮಾನಗಳಲ್ಲಿ ಯುರೋಪಿನಲ್ಲುಂಟಾಗಿ ಬದಲಾವಣೆ ಪ್ರಕ್ರಿಯೆಯೂ ಹೆಚ್ಚಾಗುತ್ತಾ ಬಂದಿತು. ಹೊಸ ಹೊಸ ಉದ್ಯೋಗಗಳ ಸ್ಥಾಪನೆ ಒಂದು ಕಡೆ ಉಂಟಾದರೆ, ಮತ್ತೊಂದಡೆ ಪಾರಂಪರಿಕ ವೃತ್ತಿಗಳು ನಾಶವಾಗುತ್ತಾ ಬಂದವು. ಶ್ರಮ ವಿಭಜನೆಯು ಸೂಕ್ಷ್ಮಗೊಂಡು ಹೊಸ ಆರ್ಥಿಕ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಕೈಗಾರಿಕೀಕರಣದಿಂದ ಗ್ರಾಮೀಣ ಜನರ ನಗರಾಭಿಮುಖಿ ವಲಸೆಯು ಹೆಚ್ಚಾಯಿತು. ಆಧುನಿಕ ಶಿಕ್ಷಣವು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿ ಉನ್ನತ ಶಿಕ್ಷಣ, ಕೌಶಲ್ಯತೆ, ತರಬೇತಿ ಹೊಂದಿದವರಿಗೆ ಉದ್ಯೋಗ ಪಡೆಯುವ ಅವಕಾಶಗಳು ಹೆಚ್ಚಿದವು. ಶಿಕ್ಷಣ ಹೊಂದಿ ಕೌಶಲ್ಯತೆಗೆ ತಕ್ಕ ಉದ್ಯೋಗಗಳು ಲಭಿಸುತ್ತಾ ಬಂದವು. ಇಂದು ತಾಂಡಗಳಲ್ಲಿ ಆಧುನಿಕತೆಯಿಂದ ಕೈಗಾರಿಕೀಕರಣದಿಂದ ನಗರಾಭಿಮುಖಿ ವಲಸೆ ಹೆಚ್ಚಾಗುತ್ತಿದ್ದು, ಹೊಸ ಹೊಸ ಉದ್ಯೋಗ ಹೊಂದಲು ಪ್ರಯತ್ನಿಸಿದರು.

ಆಧುನಿಕತೆಯ ಪ್ರಭಾವದಿಂದ ಅಲೆಮಾರಿ ಸಮುದಾಯವಾಗಿದ್ದ ಲಂಬಾಣಿಗರು ತಮ್ಮ ಪಾರಂಪರಿಕ ವ್ಯಾಪಾರಿ ವೃತ್ತಿಯಿಂದ ವಂಚಿತರಾದರು. ಸಾರಿಗೆ ಸಂಪರ್ಕ ಜಾಲಗಳ ಅಭಿವೃದ್ಧಿಯು ಲಂಬಾಣಿಗಳಂತೆ ಉಳಿದ ಹಲವಾರು ಬುಡಕಟ್ಟುಗಳು ನಿರುದ್ಯೋಗದ ದವಡೆಗೆ ಸಿಲುಕಿದವು. ವೃತ್ತಿಹೀನವಾಗಿ ಪರ್ಯಾಯ ವೃತ್ತಿಯನ್ನು ವ್ಯಾಪಾರ ನಿಮಿತ್ತ ತೆರಳಿದ್ದ ಪ್ರದೇಶದಲ್ಲಿ ಕಂಡುಕೊಂಡು ನೆಲೆ ನಿಲ್ಲುತ್ತಾ ಬಂದವು. ಹೀಗೆ ನೆಲೆ ನಿಂತಾಗ ಲಂಬಾಣಿಗರು ಕಂಡುಕೊಂಡ ಉದ್ಯೋಗ ಕೂಲಿಯನ್ನು ತದನಂತರ ಕಾಲಕ್ರಮೇಣ ಜಮೀನು ಹೊಂದಿದ ಕೆಲ ಕುಟುಂಬಗಳು ಮಾತ್ರ ವ್ಯವಸಾಯವನ್ನು ಅವಲಂಬಿಸಿದರು.

ಶಿಕ್ಷಣ ಹೊಂದಿದವರು ಆಧುನಿಕತೆಗೆ ಒಳಗಾಗಿ ಬದಲವಣೆ ಪ್ರಕ್ರಿಯೆಗೆ ಒಳಗಾಗಿ ಹೊಸಹೊಸ ಆಧುನಿಕ ವೃತ್ತಿಗಳಾದ ಅಂಗಡಿಗಳನ್ನ, ಹೊಟೆಲ್, ಸೈಕಲ್‌ಷಾಪ್, ಹಿಟ್ಟಿನ ಗಿರಿಣಿ ಹೊಂದಿ ಟೈಲರ್

[illegible]

ಗಳಾಗಿ, ಉನ್ನತ ಶಿಕ್ಷಣ ಹೊಂದಿದವರು ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ, ಅಧಿಕಾರಿಗಳಾಗಿ, ಇಂಜಿನಿಯರ್‌ಗಳಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಾಗಿ, ವೈದ್ಯರಾಗಿ, ಜಿಲ್ಲಾಧಿಕಾರಿಯಾಗಿ, ಪೋಲಿಸ್‌ಗಳಾಗಿ ಹೀಗೆ ನೂರಾರು ಹೊಸ ಉದ್ಯೋಗಾವಕಾಶಗಳು ದೊರೆತದ್ದು ಆಧುನಿಕ ಶಿಕ್ಷಣದಿಂದ.

ಆಧುನಿಕತೆಯಿಂದ ಕೈಗಾರಿಕೆಗಳಿಂದ ಇವುಗಳ ಸದುಪಯೋಗ ಪಡೆದವರು ಸಮಾಜದಲ್ಲಿ ಬದಲಾವಣೆಗೆ ಒಳಗಾಗಿ ಮೇಲ್‌ಸ್ತರದಲ್ಲಿದ್ದು, ಆಧುನಿಕ ಸೌಲಭ್ಯಗಳನ್ನೇ ಹೊಂದಿ ನಗರಗಳಲ್ಲಿ ವಾಸಿಸುತ್ತಿದ್ದಾರೆ. ಇಂದು ತಾಂಡದಲ್ಲಿಯೇ ಡ್ರೈವರ್, ನೀರಗಂಟಿ, ಅಂಗನವಾಡಿ ಕಾರ್ಯಕರ್ತರಾಗಿ, ಗ್ರಾಮ ಪಂಚಾಯ್ತಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಹೀಗೆ ಹೊಸ ಉದ್ಯೋಗಾವಕಾಶಗಳನ್ನೇ ಹೊಂದಿರುವವರ ಸಂಖ್ಯೆ ತೀರಾ ಕಡಿಮೆ ಇದೆ. ಉಳಿದಂತೆ ತಾಂಡದ ಸಾಮಾನ್ಯ ಜನರು ದಿನನಿತ್ಯದಂತೆ ಕೂಲಿ ಮಾಡಲು, ಹತ್ತಾರು ಮೈಲಿ ಬರಿಗಾಲಿನಲ್ಲಿ ಬಿಸಿಲನ್ನು ಲೆಕ್ಕಿಸದೆ ಕಾಡಿಗೆ, ಬೆಟ್ಟಗುಡ್ಡಗಳಿಗೆ ಕಟ್ಟಿಗೆಯನ್ನು ನಲ್ಲಿ, ಜೇನು, ಬಿದಿರು ಮುಂತಾದ ಕಾಡಿನ ಉಪ ಉತ್ಪನ್ನಗಳನ್ನು ಮುಂಜಾನೆಯಿಂದ ಸಂಜೆಯವರೆಗೆ ಸಂಗ್ರಹಿಸಿ ತಂದು ಸ್ಥಳೀಯರಿಗೆ ಮಾರುತ್ತಾರೆ. ಹೀಗೆ ಮಾರಿದರೆ ಇಪ್ಪತ್ತು ಇಪ್ಪತ್ತೈದು ರೂಗಳು ದೊರೆತರೆ ಹೆಚ್ಚಾಯಿತು.

ಸರಕಾರಿ ಉದ್ಯೋಗವನ್ನು ಪಡೆಯಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ಆಧುನಿಕ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಹೊಸ ಶಿಕ್ಷಣ. ಈ ಶಿಕ್ಷಣವನ್ನು ಪಡೆಯಲುಬೇಕಾಗಿರುವುದು ಲಕ್ಷಾಂತರ ರೂಪಾಯಿ ಹಣ. ಈ ಹಣವನ್ನು ಹೊಂಚುವುದು ತಾಂಡದ ನಿವಾಸಿಗಳಿಗೆ ಆಸಾಧ್ಯದ ಮಾತಾಗಿದೆ. ಆದರೆ ಆಧುನಿಕ ಯುಗದಲ್ಲಿ ಸಾಮಾನ್ಯ ಜನರು ಪಡೆಯುತ್ತಿರುವ ಸಾಮಾನ್ಯ ಶಿಕ್ಷಣವು ಇಂದು ನಿರುದ್ಯೋಗವನ್ನು ಮಾತ್ರ ನೀಡುತ್ತಿದೆ. ಆದರೆ ಹೊಸ ಹೊಸ ಉದ್ಯೋಗಾವಕಾಶಗಳು ಸಮುದಾಯದ ಸಾಮಾಜಿಕ ಬದಲಾವಣೆಯನ್ನು ಮಾಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಸರಕಾರ ಇಂತಹ ಸಮುದಾಯಗಳಿಗೆ ಬಗರ್‌ಹುಕಂ ಜಮೀನನ್ನು ನೀಡಿತು. ಈ ಜಮೀನಿನ ಸಹಾಯದಿಂದಲೇ ಸಮುದಾಯಗಳು ಕೃಷಿಯನ್ನು ಮಾಡಲು ಪ್ರಾರಂಭಿಸಿದವು. ಲಂಬಾಣಿಗಳು ಮೂಲತಃ ವ್ಯಾಪಾರಿ ಸಮುದಾಯವಾದ್ದರಿಂದ ಕೃಷಿಯನ್ನು ನೆರೆಹೊರೆಯ ಜಾತಿಗಳನ್ನು ನೋಡಿ ಕಲಿತರು. ವ್ಯವಸಾಯ ಮಾಡಲು ಪ್ರಾರಂಭಿಸಿತು. ಕೃಷಿಗೆ ಆಧಾರವಾಗಿರುವ ಭೂಮಿಯ ಒಡೆತನ ಕೇವಲ ಕೆಲವರಿಗೆ ಸೇರಿದ್ದು, ಉಳಿದವರೆಲ್ಲಾ ಗೇಣಿದಾರರಾಗಿಯೋ, ಕೂಲಿಗಳಾಗಿಯೋ ದುಡಿಯುತ್ತಿದ್ದರು. ಸರಕಾರ ಇಂತಹ ಸಂದರ್ಭದಲ್ಲಿ ಹಸ್ತಕ್ಷೇಪ ಮಾಡಿ ಹಿಂದುಳಿದವರಿಗೆ ಜಮೀನನ್ನು ಒದಗಿಸಿತು.

ಹಾಗೆಯೇ ಸರಕಾರವು ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗಾಗಿ ಮೀಸಲಾತಿಯನ್ನ ಶಿಕ್ಷಣ, ಉದ್ಯೋಗದಲ್ಲಿ ನೀಡಿರುವ ಪರಿಣಾಮವಾಗಿ ಈ ಕೆಳಸಮುದಾಯಗಳು ಇಂದು ಶಿಕ್ಷಣವನ್ನು, ಉದ್ಯೋಗವನ್ನು ಪಡೆಯುವ ಅವಕಾಶವನ್ನು ಹೊಂದಿವೆ. ಗ್ರಾಮ ಪಂಚಾಯಿತಿಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಿರುವದರಿಂದ ಇಂದೂ ತಾಂಡದಲ್ಲಿ ಮೀಸಲಾತಿಯನ್ನೇ ಉಪಯೋಗಿಸಿ ಸ್ತ್ರೀ-ಪುರುಷರಿಬ್ಬರೂ ಕೂಡ ಗ್ರಾಮ, ತಾಲೂಕು ಮಟ್ಟದ ರಾಜಕಾರಣದಲ್ಲಿ ಭಾಗವಹಿಸುತ್ತಿರುವುದು ಕಂಡುಬಂದಿತು. ತಮ್ಮ

ಸ್ಥಾನಮಾನಗಳನ್ನು ಬದಲಾಯಿಸುವ ಅವಕಾಶ ಕೂಡಾ ಒದಗುವಂತೆ ಸರಕಾರದ ಮೀಸಲಾತಿ ಅನುವು ಮಾಡಿಕೊಟ್ಟಿದೆ.

ಬುಡಕಟ್ಟು ಅಲೆಮಾರಿ ಕೆಳಸಮುದಾಯಗಳು ಒಂದಲ್ಲ ಒಂದು ಬಗೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ರೂಪಾಂತರಗಳಿಗೆ ಒಳಗಾಗಿವೆ. ಬುಡಕಟ್ಟುಗಳು ಜಾತಿಗಳಾಗಿ ರೂಪಾಂತರಗೊಳ್ಳುತ್ತಿವೆ. ಹೀಗೆ ರೂಪಾಂತರಗೊಳ್ಳುವುದಕ್ಕೆ ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅನೇಕ ಕಾರಣಗಳಿವೆ. ಸಾಮಾಜಿಕವಾಗಿ ಲಂಬಾಣಿ ಸಮುದಾಯವು ಅನೇಕ ರೂಪಾಂತರಗಳಿಗೆ ಒಳಗಾಗಿದೆ.

**ಅಡಿಟಿಪ್ಪಣಿಗಳು**

೧. ಲಂಬಾಣಿ ಜಾನಪದ ಸಂಸ್ಕೃತಿ, ಡಾ.ಡಿ.ಬಿ.ನಾಯಕ, ಪು.೧೪, ೨೦೦೦

೨. ದಲಿತರು ಮತ್ತು ಜಾಗತೀಕರಣ, ಗಣೇಶ ಮೊಗಳ್ಳಿ, ಪು.೧೯೫, ೧೯೯೯

೩. ಸಮಾಜಶಾಸ್ತ್ರ, ಭಾ.೨, ಭೈರಪ್ಪ ಕೆ., ಪು.೧೩೫, ೧೩೬, ೧೯೮೭

೪. ಲಂಬಾಣಿ ಸಂಸ್ಕೃತಿ, ಸಣ್ಣರಾಮ, ಪು. ೬೪, ೧೯೯೯

೫. ಸಾಮಾಜಿಕ-ರಾಜಕೀಯ ಜ್ಞಾನದ ಮೂಲಪಾಠಗಳು, ಅನು. ಗೋಪಾಲಕೃಷ್ಣರಾವ್, ಪು. ೪೯, ೧೯೮೯

೬. "ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ", ನಾರಾಯಣ ಎಂ.ವಿಶ್ವ, ಪು.೧೦೮, ೧೯೯೩

೭. "ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ", ನಾರಾಯಣ ಎಂ.ವಿಶ್ವ, ಪು. ೧೧೧, ೧೯೯೩

೮. ಗ್ರಾಮೀಣ ಪಶುಪಾಲನೆ, ದೇವೇಂದ್ರಕುಮಾರ ಹಕಾರಿ, ಕೆ.ಎಸ್.ಸಂಧ್ಯಾರೆಡ್ಡಿ, ಪು.೧, ೨೦೦೩

೯. ಗ್ರಾಮೀಣ ಪಶುಪಾಲನೆ, ದೇವೇಂದ್ರಕುಮಾರ ಹಕಾರಿ, ಕೆ.ಎಸ್.ಸಂಧ್ಯಾರೆಡ್ಡಿ, ಪು.೮, ೨೦೦೩

# ಅಧ್ಯಾಯ ೪

# ಅಧ್ಯಯನದ ಫಲಿತಗಳು

೪

# ಅಧ್ಯಯನದ ಫಲಿತಗಳು

**ಕ**ನ್ನಡ ನಾಡಿನಲ್ಲಿ ಪರಿಶಿಷ್ಟ ಜಾತಿಯ ಇತರ ಸಮುದಾಯಗಳಲ್ಲಿ ಲಂಬಾಣಿಗರು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿದ್ದಾರೆ. "೧೯೯೧ನೆಯ ವರ್ಷದ ಜನಗಣತಿಯ ಪ್ರಕಾರ ಕನ್ನಡ ನಾಡಿನಲ್ಲಿ ವಾಸಿಸುವ ಒಟ್ಟು ಜನರ ಸಂಖ್ಯೆ ೪೪.೮೦೬.೪೬೮, ಅದರಲ್ಲಿ ಗಂಡಸರು ೨೨.೮೪೬.೬೧೩, ಹೆಂಗಸರು ೨೧.೯೫೯.೮೫೫."[೧] ಲಂಬಾಣಿಗರು ನೆಲೆಸಿರುವ ಜಿಲ್ಲೆಗಳಲ್ಲಿ ಶಿವಮೊಗ್ಗ, ಗುಲ್ಬರ್ಗ, ಧಾರವಾಡ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಬಿಜಾಪುರ, ಬೀದರ್ ಮುಖ್ಯವಾದವುಗಳಾಗಿವೆ.

ಲಂಬಾಣಿಗಳು ಮೂಲತಃ ರಾಜಸ್ಥಾನದ ಮಾರ್ವಾರದವರು ಎಂಬುದಾಗಿ ಹಲವಾರು ವಿದ್ವಾಂಸರ ವಾದವಾಗಿದೆ. ಇವರ ಭಾಷೆ ಗೋರ್‌ಬೋಲಿಯದಾಗಿದ್ದು, ಇವರು ಹೆಚ್ಚಾಗಿ ಗುಜರಾತಿ, ಹಿಂದಿ, ರಾಜಸ್ಥಾನಿ ಭಾಷೆಯ ಹಲವಾರು ಪದಗಳನ್ನು ತಮ್ಮ ಭಾಷೆಯಲ್ಲಿ ಹೊಂದಿರುವ ಹಿನ್ನೆಲೆ ನೋಡಿದರೆ ಇವರು ವಲಸೆ ಬಂದವರೆಂದು ಸ್ಪಷ್ಟವಾಗುತ್ತದೆ. ಇವರುಗಳನ್ನು ಸಂವಿಧಾನ ಅನುಸಾರವಾಗಿ ಬಣಜಾರ ಅಥವಾ ಲಂಬಾಣಿಗಳೆಂದು ಗುರಿತಿಸಲಾಗುತ್ತದೆ. ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಇವರು ರಾಜರು, ಸೈನ್ಯದ ಮುಖಂಡರು, ಪಶುಪಾಲಕ, ವ್ಯಾಪಾರಿ ವರ್ತಕ ಸಮುದಾಯವಾಗಿ ಹೋಗಿರುವುದನ್ನು ಕಾಣಬಹುದು. ಇವುಗಳನ್ನ ಸಾಹಿತ್ಯ ಕೃತಿಗಳು ಹಾಗೂ ಜನಪದರಲ್ಲಿ ಪ್ರಚಲಿತವಿರುವ ಐತಿಹ್ಯ, ಹಾಡು, ಕಥೆಗಳು ಈ ಸಮುದಾಯಕ್ಕೆ ಚಾರಿತ್ರಿಕ ಹಿನ್ನೆಲೆ ಒದಗಿಸುತ್ತವೆ. ಈ ಮೊದಲೆ ಹೇಳಿದಂತೆ ಪ್ರತಿಯೊಂದು ಸಮಾಜ, ಸಮುದಾಯ ಪರಿವರ್ತನಾಶೀಲವಾದದ್ದು. ಆದರೆ ಪರಿವರ್ತನೆಯ ಗತಿಯಲ್ಲಿವ್ಯತ್ಯಾಸವೆಂಬುದು ಇರುತ್ತದೆ. ಆದಿವಾಸಿ, ಕೆಳಸಮುದಾಯಗಳಲ್ಲಿ ಈ ಗತಿಯ ಪ್ರಮಾಣ ಅಲ್ಪವಿರುತ್ತದೆ. ಕೆಲವು ಸಮುದಾಯಗಳಲ್ಲಿ ಯಾವ ಪರಿವರ್ತನೆ, ಬದಲಾವಣೆಯು ಆಗುತ್ತಿಲ್ಲ ಎಂಬ ಭಾವನೆ ಒಂದು ಕಾಲಕ್ಕಿತ್ತು ಆದರೆ ಇಂದು ಅದರಲ್ಲಿಯೂ ಲಂಬಾಣಿಗರ ಬದುಕನ್ನು ಗಮನಿಸಿದರೆ ಈ ಸಮುದಾಯವು ಪರಿವರ್ತನೆಯಾಗುತ್ತಿದೆ. ಎಂಬ ಅಭಿಪ್ರಾಯ ಎಲ್ಲರ ಗಮನಕ್ಕೆ ಬರುತ್ತದೆ. ಕೈಗಾರಿಕೆ, ನಗರೀಕರಣ, ಶಿಕ್ಷಣ ಹಾಗೂ ಆಧುನಿಕ ಸಮಾಜದ ಪ್ರಭಾವ ಪ್ರೇರಣೆಗಳು ಇತರ ಸಮುದಾಯಗಳ ಮೇಲಾದಂತೆ ಈ ಸಮುದಾಯದ ಮೇಲಾಗಿರುವ ಅಧ್ಯಯನದಿಂದ ತಿಳಿದುಬಂದಿದೆ.

♦ ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಆರ್ಥಿಕವಾಗಿ ಲಂಬಾಣಿಗರು ಹಿಂದುಳಿದಿದ್ದು ಅತ್ಯಂತ ಬಡತನದಿಂದ ನರಳುತ್ತಿರುವವರ ಸಂಖ್ಯೆ ಬಹಳವಾಗಿದೆ. ಇದರಿಂದಾಗಿ ಇವರು ಕೂಲಿ, ಜೀತ, ಹಮಾಲಿ ಕೆಲಸ ಹೀಗೆ ಬದುಕಿಗಾಗಿ ಇತರೆ ಕೆಲಸಗಳಲ್ಲಿ ತೊಡಗಿ ವಲಸೆ ಹೋಗಬೇಕಾದ ಅನಿವಾರ್ಯ

ಪರಿಸ್ಥಿತಿ ಇದೆ. ನಾಲ್ಕು ತಾಂಡಗಳಲ್ಲಿ ನೆಲೆಸಿರುವ ಲಂಬಾಣಿಗರು ಜನಸಂಖ್ಯೆಯಲ್ಲಿ ಶೇಕಡ ೬೦ ರಷ್ಟು ಜನರು ನಂಬಿಕೊಂಡಿರುವುದು ಕೂಲಿಯನ್ನೇ. ಇದರೊಂದಿಗೆ ಇವರು ಜೀತಕ್ಕೂ ಒಳಗಾಗಿರುವುದು ವ್ಯಾಪಕವಾಗಿ ಕಂಡುಬರುತ್ತದೆ. ಈ ಪದ್ಧತಿಯನ್ನು ನಿಷೇಧಿಸಿದ್ದರೂ ಸಹ ಕರ್ನಾಟಕದ ಕೆಲವು ಭಾಗಗಳಲ್ಲಿ ಇನ್ನು ಜಾರಿಯಲ್ಲಿರುವುದು ಕಂಡುಬರುತ್ತಿದೆ. ಗುಡ್ಡಳ್ಳಿ ತಾಂಡದಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳು ನಗರದ ಅಂಗಡಿ, ಹೋಟೆಲ್‌ಗಳಲ್ಲಿ ಕೆಲಸ ಮಾಡುವುದು ಕಂಡುಬಂದಿತು.

♦ ಮುಖ್ಯವಾಗಿ ವರದಕ್ಷಿಣೆ ಪದ್ಧತಿ ವ್ಯಾಪಕವಾಗಿ ತಾಂಡಗಳ ವ್ಯಾಪಿಸಿದ್ದು ಸಾಮಾನ್ಯ ಕಸುಬುದಾರನಿಗೂ ೧೦.೦೦೦ ರೂ. ವರದಕ್ಷಿಣೆ ಕೊಡಬೇಕಾಗುತ್ತದೆ. ಮದುವೆಯಾದ ನಂತರ ವರದಕ್ಷಿಣೆ ಕೊಡಲಿಲ್ಲ ಎಂಬ ಕಾರಣಕ್ಕೆ ವಿವಾಹ ಮುರಿದು ಬಿದ್ದಿರುವ ಹಲವಾರು ನಿದರ್ಶನಗಳು ನಮ್ಮ ಮುಂದಿದೆ.

♦ ಹೆಣ್ಣುಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ಅಂದರೆ, ೧೨-೧೩ ವರ್ಷಕ್ಕೆ ಮದುವೆ ಮಾಡಿಸುತ್ತಿರುವ, ಮಾಡಿರುವ ಹಲವಾರು ಘಟನೆಗಳು ನಡೆಯುತ್ತಿವೆ.

♦ ತಾಂಡದ ಹಿರಿಯರು ಹೇಳಿದಂತೆ ಇತ್ತೀಚಿಗೆ ಸಂಪ್ರದಾಯ, ಆಚರಣೆಗಳು ಹಿಂದಿನಷ್ಟು ಕ್ರಮಬದ್ಧವಾಗೇನು ನಡೆಯುವುದಿಲ್ಲ. ಬಡವರು ವಿವಾಹವನ್ನು ತಾಂಡದಲ್ಲಿಯೇ ಮಾಡಿದರೆ, ಶ್ರೀಮಂತರು ಪುರೋಹಿತರನ್ನು ಕರೆಸಿ ಛತ್ರಗಳಲ್ಲಿ ವಿವಾಹ ನಡೆಸುತ್ತಾರೆ.

♦ ಗೋರ್ ನ್ಯಾಯಪಂಚಾಯ್ತಿಗಳಿದ್ದರೂ ತಾಂಡದಲ್ಲಿ ಅಷ್ಟಾಗಿ ಪಾಲಿಸುತ್ತಿಲ್ಲ. ಆದರೆ ಗೋರ್ ನ್ಯಾಯ ಪಂಚಾಯ್ತಿ ಮಾತ್ರ ಇಂದಿಗೂ ಅಸ್ತಿತ್ವದಲ್ಲಿದೆ.

♦ ಲಂಬಾಣಿ ಮಹಿಳೆಯರ ಸಾಂಪ್ರದಾಯಿಕ ಉಡುಪಾದ ಫೇಟಿಯಾಗಳನ್ನು ಹಾಕಿಕೊಳ್ಳುವವರ ಸಂಖ್ಯೆ ತೀರ ಕಡಿಮೆಯಾಗುತ್ತಿದೆ. ಇಂದಿನ ಅನೇಕ ಮಹಿಳೆಯರಿಗೆ ಫೇಟಿಯಾಗಳ ನೇಯ್ಗೆಯ, ಕಸೂತಿಯ ಕುಶಲತೆ ಬರುವುದಿಲ್ಲ. ಆದ್ದರಿಂದ ಔಪಚಾರಿಕವಾಗಿ ಹಬ್ಬಹರಿದಿನಗಳಲ್ಲಿ ಮಾತ್ರ ಸಾಂಪ್ರದಾಯಿಕ ಉಡುಪುಗಳನ್ನು ಧರಿಸುತ್ತಾರೆ. ಆದರೂ ಸಹ ಆಧುನಿಕ ಉಡುಪುಗಳಾದ ಸೀರೆ, ಕುಪ್ಪಸ ಧರಿಸುವುದು ಹೆಚ್ಚಾಗಿ ಕಂಡುಬಂದಿತು.

♦ ಮಾತೃ ದೇವತೆಯಾದ ಮರಿಯಮ್ಮ, ಮಿಕಮಾರಿ, ಮೂಕಾಂಬಿಕೆಯ ಆರಾಧನೆಯ ಜೊತೆಗೆ ಪುರುಷ ದೇವತೆಗಳಾದ ಸೇವಾಭಾಯಾ, ಮಿಟುಭುಕ್ಯಾ, ತಿರುಪತಿ, ಮಂಜುನಾಥ ದೇವರನ್ನು ಆರಾಧಿಸುವುದು ಕಂಡುಬರುತ್ತದೆ.

♦ ಈ ಜನಕ್ಕೆ ಆಧ್ಯಾತ್ಮಿಕ ಕಾಳಜಿ ಬಹಳ. ಆಚರಣೆಗಳಲ್ಲಿನ ಪಾವಿತ್ರತೆಯನ್ನು ಇಂದೂ ಸಹ ಕಾಪಾಡಿಕೊಂಡು ಬಂದಿದ್ದಾರೆ. ದೇವರು ಒಂದೇ ನಮ್ಮ ಎಲ್ಲಾ ಕಷ್ಟಗಳನ್ನು ದೂರಮಾಡುವ ಶಕ್ತಿ ಎಂದು ನಂಬಿದ್ದಾರೆ. ಇವರು ದೇವರನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದೇ ಪರಿಗಣಿಸುತ್ತಾರೆ. ಇವರು ಎಲ್ಲಾ ಧರ್ಮವನ್ನು ಗೌರವಿಸುತ್ತಾರೆ. ಶ್ರೀ ಸೇವಾಭಾಯ, ಮರಿಯಮ್ಮ, ಇವರ ಕುಲದೇವರು.

ಈ ದೇವರುಗಳ ದೇವಸ್ಥಾನ ಪ್ರತಿ ತಾಂಡದಲ್ಲಿಯೂ ಇರುವುದು ಕಂಡುಬಂದಿತು. ಹಾಗೆಯೇ ಬೇರೆ ದೇವರನ್ನು ಪೂಜಿಸಿದರು ಅವರ ದೇವಸ್ಥಾನ ತಾಂಡಗಳಲ್ಲಿ ಒಂದು ಕೂಡ ಇಲ್ಲ.

♦ ಕಲೆ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿಯಿದೆ. ಕಲೆ ಮತ್ತು ಸಂಸ್ಕೃತಿಯನ್ನು ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ನಾಗರೀಕತೆ ಮೈಗೂಡಿಸಿಕೊಂಡು ನವೀನ ಪ್ರಪಂಚಕ್ಕೆ ಒಗ್ಗಿ ಕೊಂಡಿದ್ದಾರೆ. ಇಲ್ಲಿನ ಲಂಬಾಣಿಗರು ಅಲ್ಪಮಟ್ಟಿನ ಜೀವನ ಶೈಲಿಯ ಬದಲಾವಣೆಗಳು ಕಾಣಿಸುತ್ತಿವೆ. ತಮ್ಮ ಭಾಷೆ, ವೇಷಭೂಷಣ, ಧರ್ಮ, ಸಂಸ್ಕೃತಿಯ ಮೇಲೆ ಅನ್ಯಸಂಸ್ಕತಿ ಪ್ರಭಾವವಾಗಿರುವುದರಿಂದ, ಮೇಲ್ನೋಟಕ್ಕೆ ಲಂಬಾಣಿಗರೆಂದು ಗುರುತಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಇತರೇ ತಾಂಡಗಳ ಲಂಬಾಣಿಗರಿಗೆ ಹೋಲಿಸಿದಾಗ ಈ ನಾಲ್ಕು ತಾಂಡಗಳಲ್ಲಿನ ಹಬ್ಬಹರಿದಿನ, ಧರ್ಮಾಚರಣೆಗಳಲ್ಲಿ ಸ್ವಲ್ಪ ಬದಲಾವಣೆ ಯಾಗಿರುವುದು ಅಲ್ಲಲ್ಲಿ ಕಾಣಿಸುತ್ತದೆ. ಇವರ ಜೀವನ ಶೈಲಿ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆಗಳು ಕಾಣುತ್ತವೆ.

♦ ನಾಗರೀಕ ಪ್ರಪಂಚದಿಂದ ದೂರವಿದ್ದು ತಮ್ಮದೇ ಆದ ಜೀವನ ಕ್ರಮ ಅನುಸರಿಸಿಕೊಂಡು ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಈ ಸಮುದಾಯವು ಹಂತಹಂತವಾಗಿ ಬದಲಾಗುತ್ತಿದೆ. ಆವರ ಜೀವನದಲ್ಲಿ ಆಧುನಿಕತೆಯ ಗಾಳಿಬೀಸಿ ನೂರಾರು ವರ್ಷಗಳಿಂದ ಬೇರು ಬಿಟ್ಟು ಕೊಂಡಿದ್ದ ಇವರ ಸಾಂಸ್ಕೃತಿಕ ವಿಚಾರಗಳು ಸಡಿಲಗೊಳ್ಳುತ್ತಿವೆ. ಆಚಾರ, ವಿಚಾರ, ಸಂಸ್ಕಾರ, ನಡೆನುಡಿ ಗಳಲ್ಲಿ ಅನೇಕ ಬದಲಾವಣೆಗಳಾಗಿವೆ.

♦ ಲಂಬಾಣಿ ಸಮುದಾಯಗಳು ವಾಸಿಸುವ ಪರಿಸರದಲ್ಲಿಯೂ ಬದಲಾವಣೆಗಳಾಗುತ್ತಿವೆ. ಮತ್ತು ಸುತ್ತಲಿನ ಪ್ರಭಾವಗಳಿಂದಾಗಿ ತಮ್ಮ ಸಂಪ್ರದಾಯ ಸಂಸ್ಕೃತಿಯನ್ನು ಪರೀಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

♦ ತಾಂಡಗಳಲ್ಲಿ ಆರ್ಥಿಕ ಪರಿಸ್ಥಿತಿಯ ಬಗ್ಗೆ ದಶಕಗಳಿಂದ ಯೋಜನಾಧರಿತ ಅಭಿವೃದ್ಧಿ ಪ್ರಕ್ರಿಯೆಗಳನ್ನು ಕೈಗೊಂಡಿದ್ದಾಗ್ಯೂ ಮಧ್ಯವರ್ತಿಗಳ ಮಧ್ಯಪ್ರವೇಶದಿಂದ ಅವು ಜನರನ್ನು ತಲುಪಲು ವಿಫಲವಾಗುತ್ತಿವೆ.

♦ ಅಧ್ಯಯನಕ್ಕೆ ಒಳಪಟ್ಟ ನಾಲ್ಕು ತಾಂಡಗಳಲ್ಲಿ ಬಹುತೇಕ ಜನರು ತಮಗೆ ಬರುವ ಕೂಲಿಯಿಂದ ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು. ಇದಕ್ಕೆ ಪ್ರಮುಖ ಕಾರಣ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿ ಕಾನೂನಿನ ಪ್ರಕಾರ ಸಿಗದೆ ಇರುವುದು.

♦ ಮಹಿಳಾ ಮತ್ತು ಪುರುಷ ಕಾರ್ಮಿಕರು ದಿನಕ್ಕೆ ೮-೧೨ ಘಂಟೆಗಳಿಗೂ ಮೀರಿ ದುಡಿಯುತ್ತಿದ್ದಾರೆ ಹಾಗೆ ದುಡಿಯುವ ಕಾರ್ಮಿಕರಿಗೆ ಕೂಲಿಯಲ್ಲಿ ತಾರತಮ್ಯವಿರುವುದು ಕಂಡುಬಂದಿತು. ಪುರುಷರಿಗೆ ೪೦ ರೂ. ಸ್ತ್ರೀಯರಿಗೆ ೨೫-೩೦ ರೂ. ನೀಡುತ್ತಿರುವುದು ತಿಳಿದುಬಂತು.

♦ ಚಿಕ್ಕಬಾಸೂರು ತಾಂಡವಾಸಿಗಳಲ್ಲಿ ಕೆಲವರು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದಾರೆ. ಹಾಗೂ ಉಳಿದ ತಾಂಡಗಳಲ್ಲಿ ಕೆಲವರು ಸರಕಾರಿ ಉದ್ಯೋಗಸ್ತ ರಾಗಿದ್ದು ಆರ್ಥಿಕವಾಗಿ ಉತ್ತಮವಾಗಿದ್ದಾರೆ.

♦ ಕೇವಲ ಕೂಲಿ ಮಾಡಿ ಹೊಟ್ಟೆ ಹೊರೆಯಬಲ್ಲವು ಎಂಬ ಮನೋಭಾವನೆ ಹೊಂದಿರುವ ಇವರು ತಾವು ದುಡಿದ ದುಡಿಮೆಯಲ್ಲಿ ಸ್ವಲ್ಪಭಾಗವನ್ನು ಭವಿಷ್ಯತ್ತಿಗಾಗಿ ಉಳಿಸಿಕೊಳ್ಳಬೇಕೆಂಬ ಚಿಂತೆ ಇವರಲ್ಲಿಲ್ಲ.

♦ ಕೃಷಿ ಕಾರ್ಮಿಕರಲ್ಲಿ ಲಿಂಗಭೇದವಿಲ್ಲದೆ ವಲಸೆ ಹೋಗುವ ಪ್ರವೃತ್ತಿ ಕಂಡು ಬರುವುದು ಸಾಮಾನ್ಯ ವಿಷಯವಾಗಿದೆ. ಒಟ್ಟು ೪೦ ಕುಟುಂಬಗಳು (ನಾಲ್ಕು ತಾಂಡಗಳಿಂದ) ವಲಸೆ ಹೋಗಿರುವುದು ಕಂಡುಬಂದಿತು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ದುಡಿಯುವ ಅವಕಾಶಗಳ ಅಭಾವದಿಂದ ತಾತ್ಕಲಿಕ ವಲಸೆಯನ್ನು ಹಾಗೆಯೇ ಖಾಯಂ ಆಗಿ ಉದ್ಯೋಗ ದೊರೆಯುವ ಪ್ರದೇಶಗಳಿಗೆ ವಲಸೆ ಹೋಗುವುದುಂಟು. ಅವರಲ್ಲಿ ಇನ್ನುಳಿದವರು ತಾತ್ಕಲಿಕವಾಗಿ, ಪಕ್ಕದ ನಗರ, ಊರುಗಳಿಗೆ ವಲಸೆ ಹೋಗುವುದುಂಟು. ಉಳಿದವರು ವಲಸೆ ಹೋಗದೆ ತಾಂಡಗಳಲ್ಲೇ ಕೃಷಿ, ವ್ಯಾಪಾರ, ಕೂಲಿಮಾಡಿಕೊಂಡು ಇದ್ದಾರೆ.

♦ ತಮ್ಮ ಪ್ರದೇಶಗಳಲ್ಲಿ ದುಡಿಯುವ ಅವಕಾಶಗಳು ಕಡಿಮೆ ಇರುವುದರಿಂದ ಮಹಿಳಾ ಮತ್ತು ಪುರುಷ ಕೃಷಿ ಕಾರ್ಮಿಕರು ವಲಸೆ ಹೋಗುವ ಪ್ರವೃತ್ತಿ ಉಂಟಾಗುವುದೆಂದು ಅಧ್ಯಯನದಿಂದ ತಿಳಿದುಬಂದಿದೆ. ಸ್ಥಳೀಯವಾಗಿ ದುಡಿಯುವ ಅವಕಾಶಗಳ ಆಭಾವದಿಂದ ವಲಸೆ ಅನಿವಾರ್ಯವೆಂದು ಕಂಡುಕೊಳ್ಳಲಾಗಿದೆ. ಅಂದರೆ ತಾಂಡಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಉದ್ಯೋಗ ಸೃಷ್ಟಿಸುವ ರಾಜ್ಯ ಹಾಗೂ ಕೇಂದ್ರ ಸರಕಾರದ ಕಾರ್ಯಕ್ರಮಗಳಾಗಲಿ, ಉದ್ಯೋಗ ಅವಕಾಶವನ್ನು ನೀಗಿಸುವಲ್ಲಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

♦ ಇವರು ವಾಸವಾಗಿರುವ ತಾಂಡಗಳಲ್ಲಿ ಶಾಲೆಗಳು ಪ್ರಾಥಮಿಕ ಹಂತದವರೆಗೆ ಇದ್ದು ಮುಂದಿನ ಶಿಕ್ಷಣಕ್ಕೆ ಬೇರೆ ಊರಿಗೆ ಹೋಗಬೇಕು. ಹೋಗಲು ರಸ್ತೆಗಳಾಗಲಿ, ವಾಹನಗಳಾಗಲಿ ಮತ್ತು ನಾಗರೀಕ ಸವಲತ್ತುಗಳು ಕೂಡ ಇಲ್ಲ.

♦ ಶೈಕ್ಷಣಿಕವಾಗಿ ಹಿಂದುಳಿದಿರುವ ಹಾಗೂ ತಾಂಡಗಳಲ್ಲಿ ಹೆಚ್ಚಿನ ಜನರಿಗೆ ಪಿತ್ರಾರ್ಜಿತ ಆಸ್ತಿಗಳಿಲ್ಲ, ವ್ಯವಹಾರ ಮಾಡಲು ಬೇಕಾದ ಬಂಡವಾಳವಿಲ್ಲ, ಅದಕ್ಕೆ ತಕ್ಕ ಜ್ಞಾನವಿಲ್ಲ.

♦ ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಹೊನ್ನಾಳಿ ತಾಲೂಕು. ಕ್ಷೇತ್ರ ಕಾರ್ಯ ಮಾಡಿದ ತಾಂಡಗಳಿಗೆ ಹತ್ತಿರವಿದ್ದು, ವಿದ್ಯಾಭ್ಯಾಸಕ್ಕಾಗಿ ಅನೇಕ ಅನುಕೂಲಗಳಿದ್ದರೂ ಉನ್ನತ ಪಧವೀಧರರಾಗಿರುವುದು ತುಂಬಾ ಕಡಿಮೆ. ಅದರಲ್ಲಿ ಸ್ತ್ರೀಯರು ಪದವಿಶಿಕ್ಷಣ, ಉನ್ನತ ಶಿಕ್ಷಣ, ವೈಜ್ಞಾನಿಕ, ತಾಂತ್ರಿಕ, ಮುಂತಾದ ಶಿಕ್ಷಣ ಹೊಂದಿದವರು ಇಲ್ಲವೆ ಇಲ್ಲವೆನ್ನಬಹುದು.

♦ ಆರ್ಥಿಕ ಸ್ವಾಲಂಬನೆ, ಹಣಕಾಸು ವ್ಯವಹಾರಜ್ಞಾನ ಇವರಿಗೆ ಕಡಿಮೆ ಜೊತೆಗೆ ಆರ್ಥಿಕ ಮುಗ್ಗಟ್ಟಿನಿಂದ ಉನ್ನತ ವಿದ್ಯಾಭ್ಯಾಸ ಕೊಡಿಸುವುದು ಕಷ್ಟವಾಗಿದೆ. ಅವರಿಗೆ ಸೂಕ್ತ ಮಾರ್ಗದರ್ಶನವಿಲ್ಲದೆ ಅರ್ಧದಲ್ಲೆ ಶಾಲೆ ಬಿಡುತ್ತಾರೆ.

♦ ಸ್ವಾತಂತ್ರ್ಯ ನಂತರದಲ್ಲಿ ಸರ್ವರಿಗೂ ರಾಜಕೀಯ ಪ್ರಾತಿನಿಧ್ಯ ನೀಡಲಾಗಿದ್ದರಿಂದ ಲಂಬಾಣಿ ಸಮುದಾಯವು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ೧೯೫೧-೫೭ರವರೆಗೆ ಹನ್ಯಾನಾಯ್ಕ ಎಂಬುವರು ಎಂ.ಎಲ್.ಎ. ಆಗಿ ಕಾರ್ಯ ನಿರ್ವಹಿಸುವುದನ್ನು ಬಿಟ್ಟರೆ ಈ ತಾಂಡಾಗಳಲ್ಲಿ ಉಳಿದವರಾರು ಉನ್ನತ ಅಧಿಕಾರ ಹೊಂದಿಲ್ಲ.

♦ ಇತ್ತೀಚಿಗೆ ಗ್ರಾಮಪಂಚಾಯ್ತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರಂತಹ ಸ್ಥಾನಗಳಿಗೂ ಮೀಸಲಾತಿ ನಿಯಮವನ್ನು ಅಳವಡಿಸಿದ್ದರಿಂದ ತಾಂಡಗಳಲ್ಲಿನ ಪುರುಷ ಮತ್ತು ಮಹಿಳೆಯರು ಕೂಡ ಅಂತಹ ಸ್ಥಾನಗಳನ್ನು ಪಡೆದರು. ಆದಗರೆ ಬಹುಪಾಲು ಲಂಬಾಣಿಗರು ರಾಜಕೀಯವಾಗಿ ಬಹಳ ಹಿಂದೆ ಬಿದ್ದಿದ್ದಾರೆ.

♦ ರಾಜಕೀಯ ಪ್ರವೇಶಿಸಲು ಆರ್ಥಿಕವಾಗಿ ಪ್ರಬಲವಾಗಿರಬೇಕು. ಲಂಬಾಣಿಗರ ಆರ್ಥಿಕ ಸ್ಥಿತಿಗತಿ ಉತ್ತಮವಾಗೇನು ಇಲ್ಲ. ಆರ್ಥಿಕವಾಗಿ ಪ್ರಬಲವಾಗಿದ್ದ ಕೆಲವೊಬ್ಬರು ಮಾತ್ರ ರಾಜಕೀಯವಾಗಿ ಮುಂದೆ ಬರುತ್ತಿದ್ದಾರೆ.

♦ ಅಧ್ಯಯನಕ್ಕೆ ಒಳಪಟ್ಟ ತಾಂಡಗಳಲ್ಲಿ ಆರೋಗ್ಯ ಕೇಂದ್ರಗಳಿಲ್ಲದೆ ೨-೩ಕಿ.ಮೀ. ದೂರದ ಪ್ರದೇಶಗಳಿಗೆ ಚಿಕಿತ್ಸೆ ಪಡೆಯಲು ಹೋಗುತ್ತಾರೆ. ಹಾಗಾಗಿ ತಾಂಡಗಳಲ್ಲಿ ಆರೋಗ್ಯ ಸಂಬಂಧಿ ಹಲವಾರು ತೊಂದರೆಗಳು ಸಂಭವಿಸುತ್ತಲೇ ಇವೆ. ಸರ್ಕಾರಿ ಆಸ್ಪತ್ರೆಗಳು ತಾಂಡಗಳಿಂದ ಬಹಳ ದೂರವಿದ್ದುದರಿಂದ ಖಾಸಗಿ ಆಸ್ಪತ್ರೆಗಳಿಗೆ ತೋರಿಸಲು ಹಣದ ಮುಗ್ಗಟ್ಟು ಹೊಂದಿ ಕಷ್ಟವನ್ನು ಅನುಭವಿಸುತ್ತಿದ್ದಾರೆ.

♦ ಲಂಬಾಣಿಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾದರೆ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳ ಬಗ್ಗೆ ಔದಾಸೀನ್ಯವನ್ನು ತಳಿಯದೆ ಸರಕಾರ ಇವರ ಬಗ್ಗೆ ಬರೀ ಗಮನ ಹರಿಸಿದರೆ ಸಾಲದು ಕಡ್ಡಾಯವಾದ ಕಾರ್ಯಸೂಚಿಯನ್ನು ಅನುಸರಿಸುವಂತೆ ಮಾಡಬೇಕು.

♦ ಕೆಲವು ಲಂಬಾಣಿ ತಾಂಡಗಳು ಗುಡ್ಡಗಾಡುಗಳ ಮಗ್ಗಲಿನ ಪ್ರದೇಶದಲ್ಲಿವೆ. ಇವು ಅಭಿವೃದ್ಧಿಯಾಗಿಲ್ಲ. ಇವರು ತಮ್ಮ ಜೀವನೋಪಾಯಕ್ಕೆ ಕೂಲಿ, ಜೀತ ಹಾಗೂ ಸೌದೆಯನ್ನು ಮಾರಾಟ ಮಾಡುತ್ತಾರೆ.

♦ ಬಡತನದಿಂದ ನರಳುತ್ತಿರುವ ಲಂಬಾಣಿಗರ ಸಬಲೀಕರಣಕ್ಕೆ ಸರ್ಕಾರವು ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅವುಗಳಲ್ಲಿ ಭೂಹಂಚಿಕೆ, ನೀರಾವರಿ ಸೌಲಭ್ಯ, ವಸತಿ ವ್ಯವಸ್ಥೆ ಮತ್ತು ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ ಮತ್ತು ಸಾಲ ಸೌಲಭ್ಯ ಮುಖ್ಯವಾದವು. ಈ ಪ್ರಯೋಜನೆ ಪಡೆದವರು ಈ ಸಮುದಾಯದಲ್ಲಿ ಇದ್ದಾರೆ. ಕೃಷಿಗೆ ಅನುಕೂಲವಾಗ ಲೆಂದು ಭೂರಹಿತ ಜನರಿಗೆ ಹಂಚಿಕೆ ಮಾಡಿರುವ ಸರ್ಕಾರದ ಜಮೀನುಗಳು ತಾಂಡಗಳ ಹತ್ತಿರ ಕೆಲವಿದ್ದರೆ ಇನ್ನು ಕೆಲವು ೨-೩ ಕಿ.ಮೀ. ದೂರದಲ್ಲಿವೆ.

♦ ಭೂ ಹಂಚಿಕೆಯ ಪರಿಣಾಮವಾಗಿ ಇಂದು ಈ ಜನಾಂಗದ ಅನೇಕರು ಸಣ್ಣಪುಟ್ಟ ಜಮೀನುಗಳ ಒಡೆಯರಾದರೂ ಅದನ್ನು ಬಳಸುವಲ್ಲಿ ಬಹಳಷ್ಟು ಜನ ವಿಫಲರಾಗಿರುವುದು ಕಂಡುಬಂದಿತು. ನೀರಾವರಿ ಭೂಮಿಯಂತು ತುಂಬಾ ಕಡಿಮೆಯೇ. ಗುಡ್ನಳ್ಳಿತಾಂಡ, ಸೂರಗೊಂಡನಕೊಪ್ಪ ತಾಂಡದಲ್ಲಿ ಒಬ್ಬರೂ ಕೂಡ ನೀರಾವರಿ ಭೂಮಿಯನ್ನು ಹೊಂದಿಲ್ಲದೆ ಇರುವುದು ತಿಳಿಯಿತು. ಬಡತನದ ಕಾರಣ ಗಳಾಗಿ ಕೆಲವರು ಭೂಮಿಯನ್ನು ಮಾರಾಟ ಮಾಡಿರುವುದು ಕಂಡುಬಂದಿತು.

♦ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಸಮುದಾಯವು ಹೊಂದಿರುವ ಸಾಮಾಜಿಕ ಸ್ಥಾನಮಾನಗಳು ಅತ್ಯಂತ ಕೆಳಗಿನವು. ಇವರಿಗಿಂತಲೂ ಕನಿಷ್ಠ ಸಾಮಾಜಿಕ ಸ್ಥಾನಮಾನವನ್ನು, ಕೊರಚ, ಆದಿ ಕರ್ನಾಟಕ, ಹಡಪದ ಸಮುದಾಯ ಹೊಂದಿ ಜೀವನ ಮಾಡುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿತು. ಹಾಗೆಯೇ ಅಸ್ಪೃಶ್ಯತೆಯಂತಹ ಅಮಾನವೀಯ ಪದ್ಧತಿಯು ಲಂಬಾಣಿ ಹಾಗೂ ಇತರ ಕೆಳಸಮುದಾಯಗಳಲ್ಲಿ ಇರುವುದು ಕಂಡುಬಂದಿತು. ಈ ಕೆಳಸಮುದಾಯಗಳು ಇಂದಿಗೂ ಮೇಲ್ಜಾತಿಯವರ ಮನೆಯ ಒಳಗಡೆ, ಕೆಲವೊಂದು ಹೋಟೆಲ್‌ಗಳಲ್ಲಿ ನಿಷೇಧ ಇಂದಿಗೂ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.

♦ ವಸತಿ ಯೋಜನೆಯಡಿಯಲ್ಲಿ ನಿವೇಶನ ಮತ್ತು ಮನೆಗಳ ನಿರ್ಮಾಣದ ಸಹಾಯ ಸಾಲ ಸೌಲಭ್ಯಗಳಿಂದಾಗಿ ಅನೇಕರು ತಾಂಡಗಳಲ್ಲಿ ಈ ಸೌಲಭ್ಯ ಪಡೆದಿದ್ದಾರೆ. ಈ ಹಿಂದೆ ಕೇವಲ ಗುಡಿಸಲು ಗಳಿಂದಲೇ ತುಂಬಿಕೊಂಡಿರುತ್ತಿದ್ದ ಲಂಬಾಣಿಗರ ತಾಂಡಗಳು ಇಂದು ಸುಧಾರಿತ ಹಂಚಿನ ಮನೆಗಳಿಂದ ಕೂಡಿವೆ. ಆದರೆ ಗುಡಿಸಲುಗಳಿಂದ ರಾಜ್ಯದಲ್ಲಿನ ಲಂಬಾಣಿಗರು ಮುಕ್ತರಾಗಿಲ್ಲವೆನ್ನುವುದು ವಿಪರ್ಯಾಸದ ಸಂಗತಿ.

♦ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕೆಳಸಮುದಾಯಗಳಿಗೆ ನೀಡುತ್ತಿರುವ ಉದ್ಯೋಗದ ಮೀಸಲಾತಿ ಸೌಲಭ್ಯವನ್ನು ತಾಂಡಗಳಲ್ಲಿ ಅನೇಕ ಲಂಬಾಣಿಗರು ಪಡೆದಿದ್ದಾರೆ. ಅಂತವರಲ್ಲಿ ಮೂರು ತಾಂಡಗಳಲ್ಲಿ ೫೬ಜನ ಸರಕಾರಿ ನೌಕರರು ಕಂಡುಬಂದರು (ಸೂರಗೊಂಡನಕೊಪ್ಪದಲ್ಲಿ ಒಬ್ಬರೂ ಸಹ ಸರಕಾರಿ ನೌಕರಿಯಲ್ಲಿಲ್ಲ.) ಇಂಜಿನಿಯರ್, ಡಾಕ್ಟರ್, ಕಾರ್ಮಿಕ, ಶಿಕ್ಷಕ, ಪೋಲೀಸ್, ಜಿಲ್ಲಾಧಿಕಾರಿ ಮುಂತಾದ ಹತ್ತು ಹಲವು ಹುದ್ದೆಯಲ್ಲಿದ್ದಾರೆ. ಪ್ರೈಮರಿ ಹಾಗೂ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವುದು ಹಾಗೂ ಉಳಿದ ಇಲಾಖೆಗಳಲ್ಲಿ ನೇಮಕವಾಗಿದ್ದರೂ ಕಡಿಮೆ ಪ್ರಮಾಣದಲ್ಲಿದ್ದಾರೆ. ಹಾಗೆಯೇ ಉನ್ನತ ಹುದ್ದೆಗಳಿಗೆ ನೇಮಕವಾಗಿರುವವರು ಬೆರಳೆಣಿಕೆಷ್ಟು ಜನ ಮಾತ್ರ.

♦ ಶತಮಾನಗಳಿಂದಲೂ ಶಿಕ್ಷಣದಿಂದ ವಂಚಿತರಾದ ಲಂಬಾಣಿಗರು ಇತ್ತೀಚಿಗೆ ಶೈಕ್ಷಣಿಕ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವರ ಸಂಖ್ಯೆ ಶೈಕ್ಷಣಿಕ ಸ್ವಾತಂತ್ರೋತ್ತರ ಕಾಲದಲ್ಲಿ ಹೆಚ್ಚಾಗಿತ್ತು. ನಂತರದ ದಿನಗಳಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕರು ಆಸಕ್ತಿ ತೋರುತ್ತಿದ್ದು, ನಿರುದ್ಯೋಗ, ಬಡತನ ಮುಂತಾದ ಅಂಶಗಳು ಇವರ ಉತ್ಸಾಹವನ್ನು ಕುಗ್ಗಿಸುತ್ತಿದೆ.

♦ ಶಿಕ್ಷಣ ಪ್ರಸಾರದಲ್ಲಿ ಹಾಸ್ಟೆಲ್‌ಗಳ ಪಾತ್ರವು ಮುಖ್ಯವಾದದ್ದು. ಸ್ವಾತಂತ್ರ್ಯ ನಂತರ ಸ್ಥಾಪನೆಗೊಂಡ ಕೆಳಸಮುದಾಯದ ಹಾಸ್ಟೆಲ್‌ಗಳು ಲಂಬಾಣಿಗರ ಶೈಕ್ಷಣಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ

ವಹಿಸಿವೆ. ಸಾರ್ವಜನಿಕ ಹಾಸ್ಟೆಲ್‌ಗಳಲ್ಲಿ ಕೆಳಸಮುದಾಯವಾದ ಲಂಬಾಣಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಹೊನ್ನಾಳಿ, ಶಿವಮೊಗ್ಗ, ದಾವಣಗೆರೆ ಮುಂತಾದ ಕಡೆಗಳಲ್ಲಿ 'ಸಮಾಜ ಕಲ್ಯಾಣ ಇಲಾಖೆ' ವತಿಯಿಂದ ವಿವಿಧ ಶೈಕ್ಷಣಿಕ ಹಂತಕ್ಕೆ ಸಂಬಂಧಿಸಿದ ಹಾಸ್ಟೆಲ್‌ಗಳಿದ್ದು ಈ ಸಮುದಾಯವು ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಲು ಸಹಕಾರಿಯಾಗಿದೆ.

♦ ಹೀಗಿದ್ದರೂ ಕೆಲವು ಪ್ರದೇಶಗಳಲ್ಲಿ ಈ ಸಮುದಾಯದ ಶೈಕ್ಷಣಿಕ ಮಟ್ಟ ಈ ಸಮುದಾಯ ಗಳಲ್ಲಿ ಅಷ್ಟಾಗಿ ಸುಧಾರಣೆಯಾಗಿಲ್ಲ. ಪ್ರೈಮರಿ ಶಿಕ್ಷಣವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುವ, ಅನಂತರ ಪ್ರೌಢ ಶಿಕ್ಷಣವನ್ನು ಮುಂದುವರೆಸುವ ಅವಕಾಶಗಳು ಕಡಿಮೆ ಎನ್ನಬಹುದು ಅದರಲ್ಲೂ ಕಾಲೇಜು ಮತ್ತು ಉನ್ನತ ಶಿಕ್ಷಣ ಕಲಿಯುವ ಹೆಣ್ಣುಮಕ್ಕಳ ಪ್ರಮಾಣ ಅತ್ಯಂತ ಕಡಿಮೆ ಎಂದೇ ಹೇಳಬಹುದು.

♦ ಶಿಕ್ಷಣ ಹೊಂದಿದ ಪದವೀಧರರು ವ್ಯವಸಾಯವನ್ನು ಅಷ್ಟಾಗಿ ಅವಲಂಬಿಸಿಲ್ಲದಿರುವುದು ಕಂಡುಬಂದಿತು.

## ೧. ತಾಂಡಗಳ ಅಭಿವೃದ್ಧಿ ಮತ್ತು ಅನಭಿವೃದ್ಧಿಗೆ ಕಾರಣಗಳು

ಭಾರತದಲ್ಲಿ ಎಲ್ಲಾ ತರಹದ ಜಾತಿಗಳು, ಕೆಳಜಾತಿಗಳು, ಮೇಲ್ವರ್ಗ, ಕೆಳವರ್ಗ, ಅಲೆಮಾರಿ ಬುಡಕಟ್ಟು, ಆದಿವಾಸಿಗಳು ವಾಸಿಸುತ್ತಿದ್ದಾರೆ. ಅವುಗಳಲ್ಲಿ ಲಂಬಾಣಿಗರು ಇಡೀ ಭಾರತದಾದ್ಯಂತ ಪಸರಿಸಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದನ್ನು ಕಾಣುತ್ತೇವೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ನಾಲ್ಕು ತಾಂಡಗಳು ಲಂಬಾಣಿ ಸಮುದಾಯಗಳದ್ದೇ. ಇವುಗಳನ್ನು ಪ್ರಾದೇಶಿಕ, ಭೌಗೋಳಿಕ, ವೈವಿಧ್ಯತೆಯ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಹೇಗೆ ಸಮಾಜದಲ್ಲಿ ಎಲ್ಲರೂ ಏಕ ರೀತಿಯಲ್ಲಿರದೆ ಅಭಿವೃದ್ಧಿ, ಅನಾಭಿವೃದ್ಧಿಯನ್ನು ಹೊಂದಿರು ವರೋ ಹಾಗೆ ಕೆಲವೊಂದು ಸಮುದಾಯಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರದಲ್ಲಿ ಮುಂದುವರೆದು ಮತ್ತೆ ಕೆಲವು ಸಮುದಾಯಗಳು ಇವುಗಳೆಲ್ಲದರಿಂದ ಹಿಂದುಳಿದಿರುತ್ತವೆ. ಈ ಅಸಮಾನತೆಗೆ ಕಾರಣವಾದ ಕೆಲವು ಅಂಶಗಳು ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಯಾಕಾಗಿ ತಾಂಡಗಳು ಮುಂದುವರೆಯುತ್ತಿವೆ ಅಥವಾ ಹಿಂದುಳಿಯುತ್ತಿವೆ. ಹೀಗೆ ಮುಂದುವರೆಯುತ್ತಿದೆ ಎನ್ನುವುದಾದರೆ ತಾಂಡದಲ್ಲಿ ವಾಸಿಸುತ್ತಿರುವ ಲಂಬಾಣಿಗರೆಲ್ಲರೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದಿದ್ದಾರೋ ಅಥವಾ ಕೆಲವೊಂದು ಕುಟುಂಬಗಳಿಗೆ ಮಾತ್ರ ಇದು ಸೀಮಿತವಾಗಿದೆಯೇ ಎಂಬ ಮುಖ್ಯವಾದ ಅಂಶಗಳನ್ನ ನೋಡಲಾಗಿದೆ. ಹಾಗೆಯೇ ಈ ತಾಂಡಗಳ ಅಭಿವೃದ್ಧಿಗಾಗಿ ರೂಪಿಸಿರುವ ಸರಕಾರದ ಯೋಜನೆಗಳು ಲಂಬಾಣಿಗರಿಗೆ ದೊರೆಯುತ್ತಿವೆಯಾ ಅಥವಾ ಇಲ್ಲವೋ ಎಂಬುದನ್ನು ತಿಳಿಯುವುದಾಗಿದೆ. ಸರ್ಕಾರಿ ಯೋಜನೆಗಳನ್ನು ಪಡೆದ ಕಲವೇ ಲಂಬಾಣಿಗರು ಅಭಿವೃದ್ಧಿ ಹೊಂದಿದ್ದಾರೆ. ಇದಕ್ಕೆ ಕಾರಣಗಳೇನು? ಎಂಬ ಮುಖ್ಯವಾದ ಅಂಶಗಳನ್ನು ಇಲ್ಲಿ ಕಂಡುಕೊಳ್ಳಲುಯತ್ನಿಸಲಾಗಿದೆ.

ಚಿಕ್ಕಬಾಸೂರು ತಾಂಡ ಹೊನ್ನಾಳಿ ನಗರಕ್ಕೆ ೪ ಕಿ.ಮಿ. ಸಮೀಪವಿರುವ ತಾಂಡವಾಗಿದೆ. ಇದು ನಾನು ಕ್ಷೇತ್ರಕಾರ್ಯ ಮಾಡಿದ ನಾಲ್ಕು ತಾಂಡಗಳಲ್ಲೇ ಅಭಿವೃದ್ಧಿಯನ್ನು ಹೊಂದುತ್ತಾ ಇರುವ ಕಂದಾಯ ಗ್ರಾಮವಾಗಿದೆ. ಇಡೀ ತಾಲೂಕಿನಲ್ಲಿಯೇ ಮುಂದುವರೆಯುತ್ತಾ ಇದ್ದು. ಈ ತಾಂಡ ಅಭಿವೃದ್ಧಿ ಹೊಂದುತ್ತಿರುವುದಕ್ಕೆ ಸಾರಿಗೆ ಸಂಪರ್ಕದ ಸೌಕರ್ಯ, ಶಿಕ್ಷಣ, ಕೈಗಾರಿಕೀಕರಣ, ನಗರೀಕರಣ, ಮುಂತಾದುವುಗಳು ಕಾರಣವೆಂದೆನಿಸುತ್ತದೆ. ಆದರೆ ತಾಂಡದ ಹಿನ್ನಲೆಯನ್ನು ನೋಡಿದಾಗ ನೂರಾರು ವರ್ಷಗಳ ಹಳೆಯದಾದ ಈ ತಾಂಡದ ಅಲೆಮಾರಿ ಪಶುಪಾಲಕರಾದ ಲಂಬಾಣಿಗರ ಗುಂಪೊಂದು ಈ ಸ್ಥಳದಲ್ಲಿ ನೆಲೆಯೂರಿತ್ತು. ಕಾಲಕ್ರಮೇಣ ೧೯೪೧ರಲ್ಲಿ ದಿ. ಹನ್ಯಾನಾಯ್ಕ ಎಂಬುವರು ಎಂ.ಎಲ್.ಎ. ಆಗಿ ಕಾರ್ಯ ನಿರ್ವಹಿಸಿದ್ದರು. ತಾಂಡದ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾರು ಎಕರೆ ಜಮೀನು ಹೊಂದಿ ಗಣ್ಯ ವ್ಯಕ್ತಿ ಆಗಿದ್ದರು. ಹಾಗೂ ಸ್ವತಂತ್ರ್ಯ ಹೋರಾಟಗಾರರು ಕೂಡ ಆಗಿದ್ದರು. ಇವರು ತಾಂಡದ ಅಭಿವೃದ್ಧಿಗಾಗಿ ಒಂದು ಕೆರೆಯನ್ನು, ಗುಡಿಯನ್ನು, ಹಾಗೂ ಇತರ ಕೆಲ ಮೂಲಭೂತ ಸವಲತ್ತುಗಳನ್ನು ಒದಗಿಸಿದರು. ಇದಕ್ಕಾಗಿ ಭೂಮಿಯನ್ನು ದಾನದತ್ತಿಯಾಗಿ, ನಿವೇಶನಗಳನ್ನು, ಜಮೀನನ್ನು ಹಲವಾರು ಲಂಬಾಣಿಗರಿಗೆ ನೀಡಿದರು. ತಾಂಡದ ಅಭಿವೃದ್ಧಿಗೆ ಹೆಚ್ಚು ಶ್ರಮ ವಹಿಸಿದರು. ಇವರ ಮಗ ಪೀಕು ನಾಯ್ಕ ಶಿಕ್ಷಕರಾಗಿದ್ದರು. ಒಟ್ಟು ತಾಂಡದಲ್ಲಿ ೫೦ರ ದಶಕದಲ್ಲಿ ೩ ಜನ ಸರ್ಕಾರಿ ಹುದ್ದೆಯಲ್ಲಿ ಪೊಲೀಸ್, ಶಿಕ್ಷಕ, ಫಾರೆಸ್ಟ್ ಗಾರ್ಡ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಕುಟುಂಬಗಳು ಆರ್ಥಿಕವಾಗಿ ಅಂದು ಸುಸ್ಥಿಯಲ್ಲಿವೆ.

೧೯೭೦ರ ದಶಕದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ತಾಂಡದ ಸುಮಾರು ೧೦-೧೨ ಮಂದಿ ಶಿಕ್ಷಿತರು ವಿವಿಧ ಹುದ್ದೆಯನ್ನು ಪಡೆದರು. ಮತ್ತೆ ಕೆಲವೊಬ್ಬರು ಶಿಕ್ಷಕರಾಗಿ, ಗುಮಾಸ್ತರಾಗಿ, ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕುಟುಂಬಗಳು ಕೂಡ ಮನೆ, ಜಮೀನುಹೊಂದಿ ಆರ್ಥಿಕವಾಗಿ ಸುಸ್ಥಿತಿಯಲ್ಲಿವೆ. ಹೆಚ್ಚು ಜಮೀನು ಹೊಂದಿರುವ ೧೦ ಕುಟುಂಬಗಳು, ಉದ್ಯೋಗದಲ್ಲಿರುವ ೧೫ ಕುಟುಂಬಗಳು ಈ ಸಮಯದಲ್ಲಿ ತಾಂಡದಲ್ಲಿಯೇ ಪ್ರಗತಿ ಹೊಂದಿದ ಕುಟುಂಬಗಳಾಗಿವೆ. ಇವರಲ್ಲಿ ಬಹುಪಾಲು ಎಲ್ಲರೂ ನಗರದಲ್ಲೇ ವಾಸಿಸುತ್ತಿದ್ದಾರೆ. ತಾಂಡದಲ್ಲಿರುವ ತಮ್ಮ ಕುಟುಂಬಗಳಿಗೆ ಹಣವನ್ನು ನೀಡಿ, ತಮ್ಮ ಉಳಿತಾಯದಲ್ಲಿ ಮನೆ, ಜಮೀನು, ಆಸ್ತಿ, ಐಷಾರಾಮ ವಸ್ತುಗಳನ್ನು ಹೊಂದಿ ಇವರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಉಳಿದ ಲಂಬಾಣಿಗರು ಕಡಿಮೇ ಭೂಹಿಡುವಳಿ ದಾರರಾಗಿ, ಕೂಲಿಯನ್ನು ಮಾಡುತ್ತಾ ಇದ್ದಾರೆ. ಹೀಗೆ ತಾಂಡದ ಕೆಲವೊಬ್ಬರು ಮಾತ್ರ ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯನ್ನು ಹೊಂದಿದ್ದಾರೆ.

ತಾಂಡದ ಮೂಲಕ ಬಸ್ಸು ಇತರ ವಾಹನಗಳು ಶಿವಮೊಗ್ಗ, ಭದ್ರಾವತಿ, ಹೊನ್ನಾಳಿ ಮುಂತಾದ ನಗರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಹಾಗಾಗಿ ಈ ತಾಂಡ ಇತರೆ ಸಮುದಾಯದ ಊರುಗಳ ಜೊತೆ ಸಂಪರ್ಕ ಹೊಂದುವಂತಾಯಿತು. ತಾಂಡದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಶಾಲೆಗಳಿದ್ದು ಅಕ್ಷರಸ್ಥರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪದವೀಧರ, ತರಬೇತಿ ಹೊಂದಿದ, ಅರ್ಹ ಅಭ್ಯರ್ಥಿಗಳು ೧೯೯೫ ಆಸುಪಾಸಿನಲ್ಲಿ ೧೫ ಜನ ಪುರುಷರು, ೧೦ ಜನ ಮಹಿಳೆಯರು ಸರ್ಕಾರಿ ಹುದ್ದೆಯನ್ನು ಪಡೆದರು. ಹೀಗೆ ಜಮೀನು ಮತ್ತು ಉದ್ಯೋಗ ಹೊಂದಿದ ಸುಮಾರು ೫೦-೬೦ ಕುಟುಂಬಗಳು ಮಾತ್ರ ಅಭಿವೃದ್ಧಿ

ಹೊಂದಿವೆ. ಉಳಿದ ಕುಟುಂಬಗಳು ಕೂಲಿಯನ್ನ, ಸಣ್ಣಪುಟ್ಟ ವ್ಯಾಪಾರವನ್ನ ನೆಚ್ಚಿನ ಜೀವನ ಸಾಗಿಸ ಬೇಕಾಗಿದೆ. ಚಿಕ್ಕಬಾಸೂರು ತಾಂಡಾವನ್ನು ೨ ವರ್ಷಗಳಿಂದೀಚೆಗೆ ಕಂದಾಯ ಗ್ರಾಮವನ್ನಾಗಿ ಸರಕಾರ ಪರಿಗಣಿಸಿದೆ. ಪರಿಣಾಮ ತಾಂಡದ ರಸ್ತೆ ಡಾಂಬರೀಕರಣ ಆಗಿದೆ. ಮೂಲಭೂತ ಸೌಕರ್ಯಗಳಾದ ವಿದ್ಯುತ್ ಸಂಪರ್ಕ, ಬೀದಿದೀಪ, ಕುಡಿಯುವ ನೀರು, ವಸತಿ ಹೀನರಿಗೆ ವಸತಿ, ಮತ್ತು ಆರ್ಥಿಕ ಸಹಾಯ ಮಾಡಲಾಗುತ್ತದೆ. ಆದರೆ ಎಂದಿನಂತೆ ಕೆಲವೊಬ್ಬರು ಮಾತ್ರ ಈ ಸೌಲಭ್ಯವನ್ನು ಪಡೆದು ಉಳಿದವರು ಇದರಿಂದ ವಂಚಿತರಾಗಿದ್ದಾರೆ.

ಚಿಕ್ಕಬಾಸೂರು ತಾಂಡವು ಭದ್ರಾವತಿ, ಹೊನ್ನಾಳಿ, ಶಿವಮೊಗ್ಗ ನಗರಗಳ ಜೊತೆ ಹೆಚ್ಚು ಸಂಪರ್ಕ ಹೊಂದಿದೆ. ಸಾರಿಗೆ ಸೌಲಭ್ಯ ಹೆಚ್ಚು ಉತ್ತಮವಾಗಿರುವುದುರಿಂದ ತಮ್ಮ ಹೆಚ್ಚುವರಿ ಉತ್ಪನ್ನವನ್ನು ಮಾರಾಟ ಮಾಡಲು ನಗರವನ್ನು ಅವಲಂಬಿಸಿದ್ದಾರೆ. ನಗರದ ಜೊತೆ ದಿನನಿತ್ಯ ಮುಖಾಮುಖಿಯಾಗುವ ಕಾರಣ ಇವರ ಜೀವನ ಶೈಲಿಯಲ್ಲಿ ಹಲವಾರು ಬದಲಾವಣೆಗಳು ಗೋಚರವಾಗುತ್ತಿವೆ. ಇವರ ಉಡುಗೆ-ತೊಡುಗೆ ದಿನನಿತ್ಯದ ಬಳಕೆಯ ವಸ್ತುಗಳಲ್ಲಿ, ಸಂಪರ್ಕ ಮಾಧ್ಯಮಗಳಾದ ಟಿ.ವಿ. ರೇಡಿಯೋ, ದೂರವಾಣಿ, ಪಡೆಯುವಲ್ಲಿ ಹಾಗೂ ನಗರ ಮೌಲ್ಯಗಳಿಗೆ ಒಳಗಾಗಿ ಆಧುನಿಕರಾಗುತ್ತಿದ್ದಾರೆ. ಹೆಚ್ಚುಹೆಚ್ಚು ಶಿಕ್ಷಣವನ್ನು ಪಡೆಯುತ್ತಿರುವ ಇವರು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಕೂಡ ಹೋಗುತ್ತಿದ್ದಾರೆ.

ತಾಂಡದ ಮುಂದುವರೆಯುವಿಕೆಗೆ ಸಾರಿಗೆ ಸಂಪರ್ಕ, ಶಿಕ್ಷಣ ನಗರೀಕರಣ, ಕೈಗಾರೀಕರಣ ಇತರ ಸಮುದಾಯಗಳ ಜೊತೆಗಿನ ಸಂಬಂಧಗಳ ಪ್ರಭಾವ, ತೆರೆಗೆ ಗ್ರಾಮ, ರಾಜಕೀಯ ಪ್ರಾಧಾನ್ಯತೆ, ಇವುಗಳೆಲ್ಲವು ಮುಖ್ಯವಾದ ಅಭಿವೃದ್ಧಿ ಮಾಪನಗಳಾಗಿವೆ ಎಂಬುದನ್ನು ಒಪ್ಪಬಹುದಾಗಿದೆ. ಆದರೆ ತಾಂಡದ ಒಟ್ಟು ಕುಟುಂಬಗಳಲ್ಲಿ ೫೦-೬೦ ಕುಟುಂಬಗಳ ಆರ್ಥಿಕ ಸ್ಥಿತಿಯು ಉತ್ತಮವಾಗಿರುವುದನ್ನು ಗಮನಿಸಿದರೆ, ತಾಂಡವು ಅಭಿವೃದ್ಧಿಯನ್ನು ಹೊಂದಿದೆ ಎಂದು ಮೇಲು ನೋಟಕ್ಕೆ ಎಲ್ಲರಿಗೂ ಅನಿಸುತ್ತದೆ. ಆದರೆ ಆಂತರ್ಯದಲ್ಲಿ ಈ ತಾಂಡದಲ್ಲಿ ಶಿಕ್ಷಿತ, ನಿರುದ್ಯೋಗಿ, ಬಡತನ, ಕಡಿಮೆಕೂಲಿ, ಭೂರಹಿತವಾಗಿರುವ ಕುಟುಂಬಗಳು ಹೆಚ್ಚಾಗಿವೆ. ಕೇವಲ ತಾಂಡದ ಅಭಿವೃದ್ಧಿಯನ್ನು ಅಲ್ಲಿನ ರಸ್ತೆಸೌಕರ್ಯ, ಶಿಕ್ಷಿತರ ಸಂಖ್ಯೆ ಹಾಗೂ ಮೂಲ ಸೌಲಭ್ಯಗಳಿಂದ ಅಳೆಯುವುದಾದರು, ತಾಂಡದ ಒಳಗೆ ಲಂಬಾಣಿಗರ ಸ್ಥಿತಿಯು ಕೆಲವೊಬ್ಬರನ್ನು ಬಿಟ್ಟು ಉಳಿದವರೆಲ್ಲ ಹಿಂದುಳಿದಿದ್ದಾರೆ. ಅಸಮಾನತೆಯನ್ನು ಹೊಂದಿ ತಾಂಡದಲ್ಲಿಯೆ ಶ್ರೀಮಂತ, ಬಡವ ಎಂಬ ವರ್ಗ ಉದ್ಭವಿಸಿರುವುದು ಕಂಡುಬರುತ್ತಿದೆ.

ಹೀಗೆ ಸ್ಥೂಲವಾಗಿ ಶಿಕ್ಷಣ, ಸಾರಿಗೆ ಸಂಪರ್ಕ, ಸರ್ಕಾರಿ ಉದ್ಯೋಗ, ಆಸ್ತಿವಂತರು, ಕೈಗಾರೀಕಿಕರಣ, ಮುಂತಾದ ಪ್ರಕ್ರಿಯೆಗಳಿಂದ ಚಿಕ್ಕಬಾಸೂರು ತಾಂಡ ಅಭಿವೃದ್ಧಿಯಾಗುತ್ತಾ ಇರುವ ತಾಂಡವಾಗಿದೆ. ಆದರೆ ಮುಖ್ಯವಾದ ವಿಚಾರವೆಂದರೆ ಬರಗಾಲದ ಕಾರಣ ೩-೪ ವರ್ಷಗಳಿಂದ ಈ ಅಭಿವೃದ್ಧಿ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಸಹ ಕಂಡುಬಂದಿತು.

**ಮಲೆಕುಂಬಳೂರು ತಾಂಡ**

ಇದು ನೀರಾವರಿ ಪ್ರದೇಶದಲ್ಲಿರುವ ತಾಂಡವಾಗಿದೆ. ಇಲ್ಲಿ ಲಿಂಗಾಯತ, ಬ್ರಾಹ್ಮಣ, ಕುರುಬ, ಆದಿ ಕರ್ನಾಟಕ ಹಾಗೂ ಆದಿದ್ರಾವಿಡ ಮುಂತಾದ ಸಮುದಾಯಗಳು ವಾಸಿಸುತ್ತಿವೆ. ಹಾಗೂ ಈ ಊರು

ಗ್ರಾಮಪಂಚಾಯ್ತಿ ಇರುವ ದೊಡ್ಡ ಗ್ರಾಮವಾಗಿದೆ. ತಾಂಡದಲ್ಲಿ ಇತ್ತೀಚಿನ ೩೦ ವರ್ಷಗಳ ಹಿಂದೆ ಕೇವಲ ಇಬ್ಬರು ಶಿಕ್ಷಿತರು ಮಾತ್ರ ಸರ್ಕಾರಿ ನೌಕರಿಯಲ್ಲಿದ್ದರು. ಆದರೆ ತಾಂಡದಲ್ಲಿ ಯಾರೊಬ್ಬರು ಕೂಡ ಜಮೀನನ್ನು ಹೊಂದದೆ, ಗುಡಿಸಲಿನಲ್ಲಿದ್ದು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. ಕಾಲಕ್ರಮೇಣ ಇಂದು ಸರ್ಕಾರದ ಜಮೀನು, ಬಗರ್‌ಹುಕಂ ಜಮೀನುಹೊಂದಿ ವ್ಯವಸಾಯ ಮಾಡುತ್ತಿದ್ದಾರೆ. ಶಿಕ್ಷಣವು ತಾಂಡದ ಒಂಭತ್ತು ಕುಟುಂಬಗಳ ಸ್ವರೂಪವನ್ನು ಬದಲಾಯಿಸಿದೆ. ಉನ್ನತ ಶಿಕ್ಷಣ ಹೊಂದಿದ ಇಬ್ಬರು ಇಂಜಿನಿಯರ್‌ಗಳಾಗಿ, ಪೋಸ್ಟ್‌ಮಾಸ್ಟರ್, ಪೋಲೀಸ್, ಶಿಕ್ಷಕ, ಡಾಕ್ಟರ್, ನಾಲ್ಕು ಜನ ಮಹಿಳಾ ಶಿಕ್ಷಕಿಯರಿದ್ದಾರೆ. ಈ ಕುಟುಂಬಗಳು ತಾಂಡದಲ್ಲಿಯೇ ಆರ್ಥಿಕ ಅಭಿವೃದ್ಧಿ ಹೊಂದಿರುವ ಕುಟುಂಬಗಳಾಗಿವೆ. ಇವರು ಇಂದು ಮನೆ, ನೀರಾವರಿ, ಒಣಜಮೀನನ್ನು ಪಡೆದವರಾಗಿದ್ದಾರೆ. ಶಿಕ್ಷಣ ಇವರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಗ್ರಾಮದಲ್ಲಿ ಉತ್ತಮವಾದ ಸಾರಿಗೆ ಸಂಪರ್ಕ ವ್ಯವಸ್ಥೆಗಳಿವೆ. ದೊಡ್ಡ ದಿನಸಿ ಅಂಗಡಿ ಒಂದು ಇದೆ. ೩೦-೪೦ ಸಣ್ಣಪುಟ್ಟ ಅಂಗಡಿ, ದಿನಸಿ ಅಂಗಡಿ, ಹೋಟೆಲ್, ಕ್ಯಾಂಟೀನ್, ಬಟ್ಟೆ ಅಂಗಡಿ, ಎಸ್.ಟಿ.ಡಿ. ಸಿನಿಮಾ ಟಾಕೀಸ್, ಆರೋಗ್ಯಕೇಂದ್ರ, ಅಂಚೆಕಛೇರಿ, ನೀರಾವರಿ ಕಾಲುವೆ, ಸರ್ಕಾರಿ ಪ್ರಾಥಮಿಕ ಶಾಲೆ, ಖಾಸಗಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಾಮಪಂಚಾಯ್ತಿ ಮುಂತಾದ ಹಲವಾರು ಮೂಲ ಸೌಕರ್ಯವನ್ನು ಹೊಂದಿದೆ. ಇಲ್ಲಿನ ಬಹುತೇಕ ಖಾಸಗೀ ಸಂಸ್ಥೆಗಳ ಒಡೆತನ ಮೇಲ್ಜಾತಿಗಳ ಕೈಯಲ್ಲಿದೆ.

ತಾಂಡದಲ್ಲಿನ ಈ ಸೌಲಭ್ಯವನ್ನು ನೋಡಿದರೆ ಪಟ್ಟಣ ನೋಡಿದಂತೆ ಭಾಸವಾಗುತ್ತದೆ. ಆದರೆ ತಾಂಡದಲ್ಲಿನ ಲಂಬಾಣಿಗರ ಆರ್ಥಿಕ ಸ್ಥಿತಿ ಹೀನಾಯವಾಗಿವೆ. ಕೂಲಿಯನ್ನು ಅವಲಂಬಿಸಿರುವ ಭೂರಹಿತ ಕುಟುಂಬಗಳಿವೆ. ಕೆಲವೇ ಜನ ಅಲ್ಪಸ್ವಲ್ಪ ಜಮೀನನ್ನು ಹೊಂದಿದ್ದಾರೆ. ೫ ಎಕರೆ ನೀರಾವರಿ ಜಮೀನನ್ನು ಒಂದೇ ಒಂದು ಕುಟುಂಬ ಮಾತ್ರ ಹೊಂದಿದೆ. ಇಂದಿಗೂ ಈ ಗ್ರಾಮದಲ್ಲಿ ಮೇಲ್ಜಾತಿಯವರಾದ ಲಿಂಗಾಯತ, ಕುರುಬ ಜನಸಮುದಾಯದ ಪ್ರಾಬಲ್ಯ ಹೆಚ್ಚಾಗಿದೆ. ಲಿಂಗಾಯಿತರು ಕನಿಷ್ಠವೆಂದರು ೫೦ ರಿಂದ ೧೦೦ ಎಕರೆ ಭೂ ಹಿಡುವಳಿಯನ್ನು ಅಡಿಕೆ, ತೆಂಗು, ಕಬ್ಬು ಮತ್ತು ಭತ್ತದ ನೀರಾವರಿ ಜಮೀನು ಹೊಂದಿದ್ದಾರೆ. ಇಡಿ ಗ್ರಾಮದ ಅಧಿಕಾರವೆಲ್ಲ ಮೇಲ್ಜಾತಿಯವರ ಕೈಯಲ್ಲಿದೆ. ತಾಂಡದವರು ಮಾತ್ರ ಕಡಿಮೆ ಭೂಹಿಡುವಳಿ ಹೊಂದಿದವರಾಗಿದ್ದಾರೆ.

ಗ್ರಾಮದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಿದ್ದರೂ ಲಂಬಾಣಿಗರ ಮಕ್ಕಳು ಬಡತನ, ಆರ್ಥಿಕ ತೊಂದರೆಯಿಂದ ಶಾಲೆಯನ್ನು ಬಿಡುತ್ತಿದ್ದಾರೆ. ಹೆಣ್ಣುಮಕ್ಕಳು ಯಾರು ಪದವೀಧರರಾಗಿಲ್ಲ. ಸಕಲ ಮೂಲ ಸೌಕರ್ಯಗಳನ್ನು ಹೊಂದಿದ್ದರೂ, ತಾಂಡವು ಇತರ ಸಮುದಾಯಗಳಿಗಿಂತ ಎಲ್ಲಾ ರಂಗದಲ್ಲೂ ಹಿಂದುಳಿದಿದ್ದಾರೆ. ತಾಂಡದಲ್ಲಿ ಮಳೆಗಾಲದಲ್ಲಿ ಮಾತ್ರ ಜಮೀನಿಗೆ ನೀರು ಸಿಗುತ್ತಿದೆ. ಉಳಿದಂತೆ ಹಣವಂತರು ಬೋರ್‌ವೆಲ್ ಹಾಕಿಸಿ ಕೃಷಿಯನ್ನು ಮಾಡುತ್ತಿದ್ದಾರೆ. ಆದರೆ ಲಂಬಾಣಿಗರಿಗೆ ನೀರಾವರಿ ಸೌಲಭ್ಯಗಳು ದಕ್ಕಿಲ್ಲ. ತೀರ ಬಡವರು ಮಧ್ಯಮವರ್ಗಕ್ಕೆ ಸೇರಿದವರೂ ಈ ಅವಧಿಯಲ್ಲಿ ಮತ್ತಷ್ಟು ಬಡವರಾಗುತ್ತಿದ್ದಾರೆ. ಮಧ್ಯಮ ವರ್ಗಕ್ಕೇ ಸೇರಿದ ಎಲ್ಲೋ ನಾಲ್ಕಾರು ಕುಟುಂಬಗಳು ಆರ್ಥಿಕವಾಗಿ ಸುಸ್ಥಿತಿಯಲ್ಲಿವೆ. ಉಳಿದವರು ಹೀನಾಯ ಸ್ಥಿತಿಯಲ್ಲೇ ಉಳಿದಿದ್ದಾರೆ.

ತಾಂಡದಲ್ಲಿ ಬಡವರ ಮತ್ತು ಸ್ಥಿತಿವಂತರ ನಡುವಿನ ಅಂತರ ಹೆಚ್ಚಿದೆ. ಶಿಕ್ಷಣ ಹೊಂದಿದ ಕೆಲವರು ಉದ್ಯೋಗ ಮಾಡುತ್ತಿದ್ದಾರೆ. ಇದಕ್ಕೆ ಇವರ ಸದ್ಯದ ಆರ್ಥಿಕ ಸ್ಥಿತಿಗಳೇ ಮುಖ್ಯ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಹೊಸ ಅವಕಾಶಗಳನ್ನು ಪಡೆಯಲು ಮೇಲ್ಜಾತಿಯ ಮೇಲ್ವರ್ಗದ ಶ್ರೀಮಂತರು ಅನುವು ಮಾಡಿಕೊಡುತ್ತಿಲ್ಲ.

ಈ ಗ್ರಾಮದ ಲಿಂಗಾಯಿತರು ಸುಮಾರು ೮೦೦ ಎಕರೆ ನೀರಾವರಿ ಜಮೀನನ್ನು ಹೊಂದಿದ್ದಾರೆ. ಈ ತಾಂಡದ ಲಂಬಾಣಿಗರು ಮಾತ್ರ ಕೇವಲ ೬೫ ಎಕರೆ ಜಮೀನನ್ನು ಮಾತ್ರ ಹೊಂದಿದ್ದಾರೆ. ಅದರಲ್ಲಿ ಬಗರ್‌ಹುಕುಂ ಗುತ್ತಿಗೆ ಆಧಾರಿತ ಜಮೀನು ಕೂಡ ಸೇರಿದೆ. ಆದರೆ ನಿಶ್ಚಿತ ಆದಾಯ ಮೂಲಗಳು ಇಲ್ಲಿನ ಲಂಬಾಣಿಗರಿಗೆ ದಕ್ಕಿಲ್ಲ. ಕೃಷಿ ಭೂಮಿ ಬಹುತೇಕ ಮೇಲ್ಜಾತಿಯ ಭೂಮಾಲಿಕರ ಕೈಯಲ್ಲಿದೆ. ಬಡತನದ ಕಾರಣಕ್ಕಾಗಿ ಲಂಬಾಣಿಗರು ಯಾವ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡುವುದು ಸಾಧ್ಯವಾಗಿಲ್ಲ. ಈ ಸಾಮುದಾಯದ ಕೆಲವೇ ಕೆಲವರು ಸಂದರ್ಭಗಳನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಸುಸ್ಥಿಯಲ್ಲಿದ್ದಾರೆ. ಬೆರಳಣಿಕೆಯ ಈ ಜನದ ಪ್ರಗತಿಯನ್ನೇ ಇಡೀ ಸಮುದಾಯದ ಪ್ರಗತಿ ಎಂದು ಹೇಳಲು ಬರುವುದಿಲ್ಲ.

ಇವರುಗಳೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಅಧಿಕಾರಹೊಂದಿ ಇವರ ಪ್ರಾಬಲ್ಯದ ಮುಂದೆ ಹೇಳ ಹೆಸರಿಲ್ಲದಂತಾಗಿದೆ. ಈ ಲಂಬಾಣಿ ಸಮುದಾಯ ಇತ್ತೀಚಿಗೆ ಮಾತ್ರ ಸ್ವಲ್ಪ ಮುಂದುವರೆಯುತ್ತಿದ್ದಾರೆ. ಜಮೀನುಗಳನ್ನು ನೀರಾವರಿ ಭೂಮಿಯನ್ನು ಕಷ್ಟಪಟ್ಟು ದುಡಿದು ಹಣದಿಂದ ಖರೀದಿಸುತ್ತಿರುವುದು ಕಂಡುಬಂದಿತು. ಹಾಗೆಯೇ ಶಿಕ್ಷಿತ ಸಂಖ್ಯೆಯು ಏರುತ್ತಿದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಅಲ್ಲ.

## ಗುಡ್ಡಳ್ಳಿ ತಾಂಡ

ಗುಡ್ಡಳ್ಳಿ ತಾಂಡವು ನಾನು ಕ್ಷೇತ್ರಕಾರ್ಯ ಮಾಡಿದ ತಾಂಡದಲ್ಲೇ ಅತೀ ಹಿಂದುಳಿದ ತಾಂಡ. ಇದು ಬಡತನ, ಅನಕ್ಷರತೆ, ಒಣಭೂಮಿ, ನಿರುದ್ಯೋಗ, ಬಾಲಕಾರ್ಮಿಕ, ಜೀತದಾಳುಗಳನ್ನು ಹೊಂದಿರುವ ಕಂದಾಯರಹಿತ ತಾಂಡವಾಗಿದೆ. ಈ ತಾಂಡ ಅಭಿವೃದ್ಧಿ ಹೊಂದದೆ ಇರುವುದಕ್ಕೆ ಮುಖ್ಯ ಕಾರಣ ಕಂದಾಯರಹಿತ ಗ್ರಾಮವಾಗಿರುವುದು. ಸಾರಿಗೆ ಸಂಪರ್ಕವಿಲ್ಲದೆ ಸರಕಾರದ ಯೋಜನೆಗಳು, ಪ್ಯಾಕೇಜ್‌ಗಳು ತಾಂಡದವರೆಗೂ ತಲುಪದೆ ಇರುವುದನ್ನು ಅಲ್ಲಿನ ಸ್ಥಿತಿಯನ್ನು ನೋಡಿಯೇ ಊಹಿಸಬಹುದು.

ತಾಂಡದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್, ಕುಡಿಯುವ ನೀರು ಸಮರ್ಪಕವಾಗಿ ದೊರೆಯುತ್ತಿಲ್ಲ. ತಮ್ಮ ದಿನನಿತ್ಯದ ಬದುಕಿಗೆ ಕೂಲಿಯನ್ನ, ಕೃಷಿಯನ್ನ ಅವಲಂಬಿಸಿದ್ದಾರೆ. ಆದರೆ ಮಳೆಯಾಧಾರಿಸಿದ ಕೃಷಿಯನ್ನು ಇವರು ಅವಲಂಬಿಸಿದ್ದಾರೆ. ಅಷ್ಟೇ ಅಲ್ಲದೆ ತಾಂಡದಲ್ಲಿ ಅನಕ್ಷರಸ್ಥ ಬಡವರು ಹೆಚ್ಚಾಗಿದ್ದಾರೆ.

ಇತ್ತೀಚಿನವರೆಗೂ ಬರೀ ಗುಡಿಸಲುಗಳೇ ಇದ್ದವು. ಶತಮಾನಗಳು ಕಳೆದ ನಂತರ ಇವರಿಗೆ ಜನತಾ ಮನೆಗಳನ್ನು ಕಲ್ಪಿಸಲಾಗಿದೆ. ಆದರೆ ಜಮೀನು ಮಾತ್ರ ಇಲ್ಲ. ಆರ್ಥಿಕ ಮೂಲಗಳು ಇಲ್ಲದೆ. ಉಳಿದ

ಯಾವ ಸೌಲಭ್ಯಗಳನ್ನು ಪಡೆಯದಂತಾಗಿದ್ದಾರೆ. ತಾಂಡದಲ್ಲಿ ಒಂದು ಅಂಗಡಿಯು ಕೂಡ ಇಲ್ಲ. ಹೊರಗಿನ ಸಂಪರ್ಕವೇ ಇಲ್ಲದ ದ್ವೀಪದಂತೆ ಗುಡ್ಡಳ್ಳಿ ತಾಂಡ ಇದೆ.

ಶಿಕ್ಷಣ ಪಡೆಯಲು ಹಣವಿಲ್ಲದೆ ಚಿಕ್ಕ ಮಕ್ಕಳು ದುಡಿಯಲು ಅಕ್ಕಪಕ್ಕದ ಊರುಗಳಿಗೆ ಹೋಗುತ್ತಾರೆ. ಬಾಲಕಾರ್ಮಿಕರು ಹೆಚ್ಚಾಗಿದ್ದು, ಹೆಣ್ಣುಮಕ್ಕಳು ಕೂಡ ದುಡಿಯುತ್ತಿದ್ದಾರೆ. ಬಡತನದ ಬೇಗೆಯನ್ನು ತಾಳಲಾರದೆ ಶಿಕ್ಷಣ ಪಡೆಯುವುದನ್ನು ಬಿಟ್ಟು ದುಡಿಯಲು ಕೂಲಿನಾಲಿ ಮಾಡಲು ೧೦-೧೫ ವರ್ಷದ ಮಕ್ಕಳು ಹೋಗುತ್ತಾರೆ. ಈ ತಾಂಡಾದಲ್ಲಿ ಸುಮಾರು ೩೦-೪೦ ಜನ ಬಾಲ ಕಾರ್ಮಿಕರಿದ್ದಾರೆ. ಇವರು ಪಡೆಯುವ ಕೂಲಿ ತುಂಬಾ ಕಡಿಮೆ.

ಈ ತಾಂಡದಲ್ಲಿ ಹೆಚ್ಚಿನ ಜನರಿಗೆ ಜಮೀನಿಲ್ಲ. ಕೆಲವರು ಸ್ವಂತ ಭೂಮಿಯಿದ್ದು ಕೃಷಿಕರಾಗಿದ್ದರೂ ಸಹ, ಆ ಜಮೀನು ಒಣ ಭೂಮಿಯಾಗಿದ್ದು ಬರಗಾಲಪೀಡಿತ ಹಿಂದುಳಿದ ಪ್ರದೇಶವಾಗಿದೆ. ಬಂಜರು ಭೂಮಿ ಇರುವ ಕಾರಣ ಬಹುಪಾಲು ಜನರು ಜಮೀನು ಹೊಂದಿರುವ, ಹೊಂದದೆ ಇರುವ ಕುಟುಂಬಗಳು ಕೂಡ ಕೂಲಿಯನ್ನೇ ಮಾಡಿ ಜೀವಿಸಬೇಕಿದೆ.

ತಾಂಡಕ್ಕೆ ನಗರಗಳು ಹತ್ತಿರವಿಲ್ಲದೆ ಇತರ ಯಾವುದೇ ಸಾರಿಗೆ ಸಂಪರ್ಕವಿಲ್ಲದೆ ದಿನೇದಿನೇ ಅಶಿಕ್ಷಿತರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಆರೋಗ್ಯಕೇಂದ್ರ, ಅಂಚೆಕಛೇರಿ, ಬ್ಯಾಂಕು, ಅಂಗಡಿ, ಮುಂತಾದ ಯಾವುದೇ ಒಂದು ಸೌಲಭ್ಯ ಕೂಡ ಇಲ್ಲದೆ ಇದು ಸಂಪರ್ಕರಹಿತ ತಾಂಡಾವಾಗಿದೆ. ಪ್ರಾಥಮಿಕ ಶಾಲೆ ಶಿಕ್ಷಣವು ತಾಂಡದಲ್ಲೇ ಇರುವುದರಿಂದ ೧ ರಿಂದ ೪ ತರಗತಿಯವರೆಗೆ ಓದುತ್ತಾರೆ. ಮುಂದಿನ ವಿದ್ಯಾಭ್ಯಾಸಕ್ಕೆ ಬೇರೆ ಊರಿಗೆ ೩-೪ ಕಿ.ಮೀ. ಕಾರಣ ಬಸ್ಸಿನ ಸೌಕರ್ಯವಿಲ್ಲದೆ ನಡೆದೇ ಹೋಗಬೇಕಿದೆ. ಹಾಗೂ ಆರ್ಥಿಕ ತೊಂದರೆಯ ಕಾರಣ ಮಕ್ಕಳನ್ನ ಶಾಲೆಯಿಂದ ಅರ್ಧದಲ್ಲೇ ಬಿಡಿಸಲಾಗುತ್ತಿದೆ. ತಾಂಡದಲ್ಲಿ ಒಬ್ಬರೂ ಉನ್ನತ ಶಿಕ್ಷಣ ಪಡೆದವರಿಲ್ಲ. ಹೆಣ್ಣುಮಕ್ಕಳು ೭-ಲನೆ ತರಗತಿಯವರೆಗೆ ಓದಿದರೆ ಹೆಚ್ಚಾಯಿತು. ಮುಂದಿನ ಶಿಕ್ಷಣ ಪಡೆಯುವುದು ಕನಸಿನ ಮಾತು. ಈ ಎಲ್ಲಾ ಅಸೌಲಭ್ಯಗಳಿಂದ ವಂಚಿತವಾಗಿದ್ದರೂ ಇದರ ಅಭಿವೃದ್ಧಿಗಾಗಿ ಹೋರಾಡುವ ಸಂಘಟನೆಗಳಿಲ್ಲ. ಹಾಗೂ ಈ ಗುಡ್ಡಳ್ಳಿ ತಾಂಡದ ಗುರುತು, ಹೆಸರು ಸರಕಾರಿ ದಾಖಲೆಗಳಲ್ಲಾಗಲಿ, ತಾಲೂಕು ಪಂಚಾಯ್ತಿಯಲ್ಲಿನ ಗ್ರಾಮಮಾಹಿತಿಯಲ್ಲಿ ಇಲ್ಲದೆ ಇರುವುದು ಕಂಡುಬಂದಿತು.

ಮುಖ್ಯವಾಗಿ ಇಂತಹ ತಾಂಡಗಳ ಅಭಿವೃದ್ಧಿಗೆ ಸರಕಾರದ ಆಸಕ್ತಿ ವಹಿಸುತ್ತಿಲ್ಲ. ಸರಕಾರ ಆಸಕ್ತಿ ವಹಿಸಿದರೂ ಯಾವುದೇ ಕಾರ್ಯಕ್ರಮಗಳು ಇಂತಹ ತಾಂಡಾಗಳನ್ನು ತಲುಪುವುದಿಲ್ಲ. ರಸ್ತೆಯಿಲ್ಲ, ಬೀದಿದೀಪಗಳಲ್ಲ ವಿದ್ಯುತ್ ಸೌಲಭ್ಯ ಹೊಂದಿರುವ ಕೆಲ ಕುಟುಂಬಗಳ ಮನೆಗಳಲ್ಲಿ ವಿದ್ಯುತ್ ಅರ್ಧತಾಸು ಇದ್ದರೆ ಹೆಚ್ಚಾಯಿತು. ಯಾವುದೇ ಹಳ್ಳಿ, ನಗರಗಳ ಸಂಪರ್ಕವಿಲ್ಲದೆ ಈ ತಾಂಡ ಪ್ರತ್ಯೇಕವಾಗಿ ಬೆಟ್ಟದ ಮಧ್ಯೆ ದ್ವೀಪದಂತಿದೆ.

ಈ ತಾಂಡದ ಅನಾಭಿವೃದ್ಧಿಗೆ ಒಟ್ಟಾರೆ ಕೆಲವು ಮುಖ್ಯ ಕಾರಣಗಳಿವೆ. ಅವುಗಳಲ್ಲಿ ತೆರಿಗೆರಹಿತ ಗ್ರಾಮ, ಒಣಬಂಜರು ಭೂಮಿ ಇರುವ, ನೀರಿನ ಸೌಲಭ್ಯ ಇಲ್ಲದೆ ಇರುವ, ಶಿಕ್ಷಣ ಸಂಸ್ಥೆಗಳ ಕೊರತೆ,

ಬದಲಿ ಆರ್ಥಿಕ ಮೂಲವನ್ನು ಕಂಡುಕೊಳ್ಳಲು ಅವಕಾಶ ಇಲ್ಲದೆ ಇರುವುದು. ಸರಕಾರದ ನಿರ್ಲಕ್ಷ್ಯತೆ, ಅನಕ್ಷರತೆ, ಸಾರಿಗೆ ಸೌಲಭ್ಯವೇ ಇಲ್ಲದೆ ಇರುವುದು, ಹೀಗೆ ಹಲವಾರು ಅಂಶಗಳು ಮುಖ್ಯ ಕಾರಣಗಳಿವೆ. ತಾಂಡದಲ್ಲಿನ ಒಂದಿಬ್ಬರ ಆದಾಯ ವಾರ್ಷಿಕವಾಗಿ ಒಂದು ಲಕ್ಷಕ್ಕಿಂತ ಹೆಚ್ಚಿದೆ. ಉಳಿದವರ ಆದಾಯ ಹೆಚ್ಚಾಗಿ ೬-೭ ಸಾವಿರ, ೩-೪ ಸಾವಿರಕ್ಕಿಂತ ಹೆಚ್ಚಿಲ್ಲ. ಇದರ ಮೇಲೆ ಇವರ ಜೀವನ ಮಟ್ಟವನ್ನು ಅಳೆಯಬಹುದಾಗಿದೆ. ಆದಾಯ ಮೂಲವಂತು ಕೇವಲ ಕೂಲಿಯಿಂದ ಪಡೆಯಲಾಗುತ್ತದೆ. ಜಮೀನು ಹೊಂದಿದ್ದರು ಇವುಗಳು ಬರಗಾಲದ ಕಾರಣ ಏನು ಪ್ರಯೋಜನಗಳನ್ನು ಇವುಗಳು ಪಡೆಯಲು ಆಗುತ್ತಿಲ್ಲ.

**ಸೂರಗೊಂಡನಕೊಪ್ಪ ತಾಂಡ**

ಸೂರಗೊಂಡನಕೊಪ್ಪ ಗ್ರಾಮದ ಬಳಿ ಈ ತಾಂಡವಿದೆ. ತಾಂಡವನ್ನು ಈ ಗ್ರಾಮದಿಂದ ಸ್ವಲ್ಪ ದೂರ ಕಟ್ಟಿಕೊಂಡು ಲಂಬಾಣಿಗರು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಇದು ಸಹ ಹಿಂದುಳಿದ ತಾಂಡವಾಗಿದೆ. ಇಲ್ಲಿನ ಲಂಬಾಣಿಗರು ಹೊಂದಿರುವ ಜಮೀನು ನೀರಾವರಿ ಸೌಲಭ್ಯವಿಲ್ಲದ ಒಣ ಭೂಮಿಯಾಗಿದೆ. ಉಳಿದ ಕುಟುಂಬಗಳು ಬಗರ್‌ಹುಕಂ ಜಮೀನನ್ನು ಹೊಂದಿದ್ದರೆ ಉಳಿದ ಭೂರಹಿತ ಕುಟುಂಬಗಳೇ ಹೆಚ್ಚಾಗಿವೆ. ಇವರು ಕೂಲಿಯನ್ನೆ ಆಶ್ರಯಿಸಿ ಜೀವಿಸುತ್ತಿದ್ದಾರೆ. ತಾಂಡವು ತೆರಿಗೆ ರಹಿತ ಗ್ರಾಮವಾದ ಕಾರಣ ಇಲ್ಲೂ ಮೂಲ ಸೌಲಭ್ಯಗಳಾಗುವುವು ಇಲ್ಲದೆ ದಿನಕ್ಕೆ ಒಂದು ಬಸ್ಸು ಈ ಗ್ರಾಮಕ್ಕೆ ಬರುತ್ತದೆ.

ಲಂಬಾಣಿಗರ ೨೦ ಮನೆಯಲ್ಲಿ ವಿದ್ಯುತ್ ಸಂಪರ್ಕವಿಲ್ಲ. ೨೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯೂತ್ ದೀಪಹೊಂದಿ ಹಣಕಟ್ಟದ ಕಾರಣ ವಿದ್ಯುತ್ ಸಂಪರ್ಕವನ್ನು ಕಿತ್ತುಹಾಕಲಾಗಿದೆ. ತಾಂಡದ ಒಂದು ಕಿ.ಮೀ. ದೂರ ಬಂದು ಕೆರೆ ಇದೆ. ಲಂಬಾಣಿಗರು ಒಂದು ತುಂಡು ನೀರಾವರಿ ಜಮೀನನ್ನು ಹೊಂದಿಲ್ಲ. ನೀರಾವರಿ ಜಮೀನೆಲ್ಲ ಮೇಲ್ಜಾತಿಯವರ ಸ್ವಾದೀನದಲ್ಲಿದೆ. ಅನಕ್ಷರತೆ ನೀರಾವರಿ ಜಮೀನೆಲ್ಲ ಕೂಡ ಹೆಚ್ಚಾಗಿದ್ದು, ಒಬ್ಬರೇ ಒಬ್ಬರು ಸ್ನಾತಕೋತ್ತರ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಈ ತಾಂಡದ ಯಾರೂ ಸರ್ಕಾರಿ ನೌಕರಿಯಲ್ಲಿಲ್ಲ. ೫-೬ ಕುಟುಂಬಗಳು ಮಾತ್ರ ಆರ್ಥಿಕವಾಗಿ ಸುಸ್ಥಿತಿಯಲ್ಲಿವೆ. ಇವರ ಆದಾಯದ ಮೂಲ ಕೃಷಿ. ಒಂದೆರಡು ಕುಟುಂಬಗಳು ದಿನಸಿ ಅಂಗಡಿ ಇಟ್ಟುಕೊಂಡಿವೆ. ಈ ಕುಟುಂಬಗಳು ಮಾತ್ರ ಆರ್ಥಿಕವಾಗಿ ಸುಸ್ಥಿತಿಯಲ್ಲಿವೆ. ಉಳಿದವರು ಕೂಲಿ ಮಾಡಿಯೇ ಜೀವನ ಸಾಗಿಸುತ್ತಿದ್ದಾರೆ.

ತಾಂಡದಲ್ಲಿ ರಸ್ತೆ ಅಭಿವೃದ್ಧಿಯಾಗಲಿ, ಸಾರಿಗೆ ಸಂಪರ್ಕಗಳಾವುದು ಇಲ್ಲ. ದೈನಂದಿನ ವ್ಯವಹಾರಕ್ಕೆ ದೂರದ ಶಿವಮೊಗ್ಗ ಇಲ್ಲವೆ ನ್ಯಾಮತಿಯನ್ನು ಅವಲಂಬಿಸಬೇಕು. ಬೆಳೆದ ಉತ್ಪನ್ನವನ್ನು ಸಾಗಿಸಲು ವಾಹನಗಳ ಸೌಲಭ್ಯ ಇಲ್ಲ. ಮಾರುಕಟ್ಟೆಗಾಗಿ ೩೦ ಕಿ.ಮೀ ದೂರದ ಶಿವಮೊಗ್ಗ ನಗರವನ್ನು ಅವಲಂಬಿಸಿದ್ದಾರೆ. ಮೇಲ್ಜಾತಿಯ ಪ್ರಾಬಲ್ಯ ಇಲ್ಲಿಯೂ ಹೆಚ್ಚಾಗಿದೆ. ಲಿಂಗಾಯಿತರೆ ಹೆಚ್ಚಿನ ಭೂಮಿಯನ್ನು ಹೊಂದಿದ್ದು ಲಂಬಾಣಿಗರು ಇವರ ಮುಂದೆ ಆರ್ಥಿಕವಾಗಿ ಬಲಹೀನರಾಗಿದ್ದಾರೆ.

ತಾಂಡದಲ್ಲಿ ಬಹುಪಾಲು ಜನರು ಕೃಷಿ ಕೂಲಿಯನ್ನ ಮತ್ತು ಕೃಷಿಯನ್ನ ತಮ್ಮ ಮುಖ್ಯ ಕಸುಬನ್ನಾಗಿ ಹೊಂದಿದ್ದಾರೆ. ಬಡತನವಿರುವ ಕಾರಣ ಇವರ ಮಕ್ಕಳು ಯಾರು ಹೆಚ್ಚಿನ ವಿದ್ಯಾರ್ಹತೆಯನ್ನು ಬಡತನವಿರುವ ಕಾರಣ, ಪಡೆಯಲು ಆಗುತ್ತಿಲ್ಲ. ಆದರಲ್ಲೂ ಹೆಣ್ಣುಮಕ್ಕಳು ಒಬ್ಬರೂ ಕಾಲೇಜು ಶಿಕ್ಷಣ ಪಡೆದಿಲ್ಲ. ಪ್ರಾಥಮಿಕ ಶಾಲೆ ಮಾತ್ರ ಈ ಗ್ರಾಮದಲ್ಲಿದೆ. ಮುಂದಿನ ಶಿಕ್ಷಣವನ್ನು ಪಡೆಯಲು ೫-೬ ಕಿ.ಮೀ. ದೂರದ ಊರಿಗೆ ಹೋಗಬೇಕು. ಹೋಗಲು ಬಸ್ಸಿನ, ಸೌಕರ್ಯ ಇಲ್ಲದೆ ವಿದ್ಯಾರ್ಥಿಗಳು ತೊಂದರೆ ಅನುಭವಿಸುವುದು ಸಾಮಾನ್ಯವಾಗಿದೆ, ಕಾಲೇಜು ಶಿಕ್ಷಣಕ್ಕೆ ಶಿವಮೊಗ್ಗಕ್ಕೆ ಹೋಗಬೇಕಾಗಿದೆ.

ಈ ತಾಂಡದ ಅನಭಿವೃದ್ಧಿಗೆ ಭೂರಹಿತತೆ, ಒಣಭೂಮಿ, ಅಸಮರ್ಪಕ ಭೂ ಹಂಚಿಕೆ ಮೂಲ ಸೌಲಭ್ಯಗಳ ಕೊರತೆ, ನಿರುದ್ಯೋಗ, ಆರ್ಥಿಕ ಸಹಾಯವಿಲ್ಲದಂತಾಗಿ ದಿನೇದಿನೇ ಬಡವರು ಬಡವರಾಗುತ್ತಾ ಹೋಗುತ್ತಿದ್ದಾರೆ ಹೊರತು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿಲ್ಲ.

ಮುಖ್ಯವಾಗಿ ತಾಂಡಕ್ಕೆ ಬೇಕಾಗಿರುವ, ಆಸ್ಪತ್ರೆ, ಅಂಚೆಕಛೇರಿ, ಬ್ಯಾಂಕು ಶಾಲೆಗಳಾವುದು ಇಲ್ಲ. ೮-೧೦ ಕಿ.ಮೀ ದೂರದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರವಿದೆ. ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಹೋಗಬೇಕು. ಶಿಕ್ಷಣ ಅದರಲ್ಲಿಯೂ ಉನ್ನತ ತಾಂತ್ರಿಕ, ವೈಜ್ಞಾನಿಕ, ಶಿಕ್ಷಣ ಹೊಂದಿದವರು ಒಬ್ಬರು ಕೂಡ ಇಲ್ಲ. ಮೀಸಲಾತಿ ಇದರಿಂದಾಗಿ ಸದುಪಯೋಗಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕೂಲಿಯು ಕಡಿಮೆ ಇದೆ. ಬರುವ ಆದಾಯವು ಅತ್ಯಲ್ಪ ತಾಂಡದ ಬಹುಪಾಲು ಜನರ ಆದಾಯ ೩-೧೩ ಸಾವಿರದವರೆಗೆ ಇರುವುದು ೨೦-೩೦ ಸಾವಿರ ಆದಾಯ ೧೫ ಮಂದಿಯದಿದ್ದರೆ ೫೦ ಸಾವಿರ ಆದಾಯ ಒಬ್ಬರದೆ ಇದೆ. ಲಕ್ಷದವರೆಗೆ ಆದಾಯ ಯಾರು ಹೊಂದಿಲ್ಲದೆ ಇರುವುದು ಕಂಡುಬಂದಿತು.

## ೨. ಸಮುದಾಯ ಬಯಸುವ ಬದಲಾವಣೆ ಮತ್ತು ಸವಲತ್ತುಗಳು

ಲಂಬಾಣಿಗರ ಸಾಮಾಜಿಕ, ಆರ್ಥಿಕಸ್ಥಿತಿಯನ್ನು ಸುಧಾರಿಸಲು ಸರ್ಕಾರ ಹಾಗೂ ಅದರಲ್ಲೂ ಪ್ರತ್ಯೇಕವಾಗಿ ಪಂಚಾಯತ ರಾಜ್ಯ ಸಂಸ್ಥೆಗಳು ರೂಪಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಹಾಗೂ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ತರಬಹುದಾದ ಬದಲಾವಣೆಗಳ ಜೊತೆ ಶಿಕ್ಷಣವನ್ನು ನೀಡುವುದು, ಕಂದಾಯ ಗ್ರಾಮವಲ್ಲದ ತಾಂಡಗಳನ್ನು ಕಂದಾಯ ಗ್ರಾಮ ಮಾಡಿ ಅವುಗಳಿಗೆ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳಲ್ಲಿ ತಾಂಡದ ಅಭಿವೃದ್ಧಿಗಾಗಿ ಹೆಚ್ಚು ಒತ್ತನ್ನು ನೀಡುವುದು ಹಾಗೂ ಸಾರಿಗೆ ಸಂಸ್ಥೆಗಳ ಆರೋಗ್ಯ, ಹಣಕಾಸು, ಶಿಕ್ಷಣ, ಅನಕ್ಷರತೆ, ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಸಮುದಾಯ ಬಯಸುವ ಬದಲಾವಣೆ ಮತ್ತು ಸವಲತ್ತುಗಳ ಕುರಿತ ಇಲ್ಲಿ ವಿವರಿಸಲಾಗಿದೆ. ನೀಡಿರುವ ಎಲ್ಲಾ ಸಲಹೆಗಳು, ಬದಲಾವಣೆಗಳು ಲಂಬಾಣಿಗರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳಿಗೆ ಸಂಬಂಧಪಟ್ಟಿರುತ್ತವೆ.

* ರಾತ್ರಿ ಶಾಲೆಗಳು ತಾಂಡಗಳಲ್ಲಿ ಅದರಲ್ಲೂ ಗುಡ್ನಳ್ಳಿ, ಸೂರಗೊಂಡನಕೊಪ್ಪ ತಾಂಡಗಳಲ್ಲಿ ಬಹಳ ಹಿಂದುಳಿದಿರುವುದರಿಂದ ತಾಂಡಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ತುರ್ತು ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

* ತಾಂಡಗಳು ಸ್ಥಾಪನೆಯಾಗಿ ನೂರಾರು ವರ್ಷಗಳು ಉರುಳಿದರು ಕಂದಾಯ ಗ್ರಾಮಗಳಾಗಿಲ್ಲ. ಗುಡ್ನಳ್ಳಿ ತಾಂಡ, ಸೂರಗೊಂಡನಕೊಪ್ಪ ತಾಂಡಗಳು ಮೂಲ ಸೌಲಭ್ಯಗಳಿಂದ ವಂಚಿತವಾಗಿವೆ. ದೀಪದ ವ್ಯವಸ್ಥೆ ಸಹ ಇಲ್ಲವಾಗಿ ಎಷ್ಟೋ ಮನೆಗಳಿಗೆ ವಿದ್ಯುತ್ ಸಂಪರ್ಕವು ಸಹ ಇಲ್ಲ. ಇದ್ದರು ಅದು ಸಿಂಗಲ್‌ಫ್ಯೂಜ್ ಆಗಿದ್ದು ಪೂರ್ಣ ಪ್ರಮಾಣದ ವಿದ್ಯುತ್ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಇವರಿಗೆ ಸಮರ್ಪಕವಾದ ಮೂಲ ಸೌಕರ್ಯಗಳನ್ನು ಒದಗಿಸಬೇಕಿದೆ.

* ಬಡತನ ರೇಖೆಗಿಂತ ಕೆಳಗಿರುವ ಕೃಷಿಕಾರ್ಮಿಕ ಕುಟುಂಬಗಳು ಹಣಕೊಟ್ಟು ಚಿಕಿತ್ಸೆ ಪಡೆಯುವ ಶಕ್ತಿಯನ್ನು ಹೊಂದಿರುವುದಿಲ್ಲ. ಅದರಲ್ಲಿಯೂ ತಾಂಡದಲ್ಲಿ ಕಷ್ಟಜೀವಿ ಮಹಿಳೆಯರ ಅನಾರೋಗ್ಯ, ಕಾಯಿಲೆ ಹಾಗೂ ಪೌಷ್ಠಿಕ ಆಹಾರದ ಕೊರತೆಯಿಂದ, ತಾಂಡದಲ್ಲಿ ಆರೋಗ್ಯ ಕೇಂದ್ರ ಇಲ್ಲದಿರುವುದರಿಂದ ತಾಯಂದಿರ ಮರಣ ಪ್ರಮಾಣದ ಮೇಲು ಹಾಗೆಯೇ ಶಿಶು ಮಕ್ಕಳ ಮರಣದ ಪ್ರಮಾಣದ ಮೇಲು ಪರಿಣಾಮ ಬೀರುತ್ತದೆ. ಅದರಿಂದ ತುರ್ತು ಪರಿಸ್ಥಿತಿಯ ಮುನ್ನಚ್ಚರಿಕೆಯಾಗಿ ತಾಂಡದಲ್ಲಿಯೇ ಅಥವಾ ಹತ್ತಿರದಲ್ಲಿಯೇ ಆಸ್ಪತ್ರೆಗಳನ್ನು ಸ್ಥಾಪಿಸಿ ವಾಹನಗಳ ಸೌಕರ್ಯ ಒದಗಿಸಬೇಕು.

* ತಾಂಡದಲ್ಲಿ ಸಾಕ್ಷರತೆಗೆ ಹೆಚ್ಚಿನ ಆದ್ಯತೆ ನೀಡುವ ಅವಶ್ಯಕತೆ ಇದೆ. ಅದರಲ್ಲಿಯೂ ತಾಂಡದಲ್ಲಿನ ಮಹಿಳಾ ಅಭಿವೃದ್ಧಿ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವಲ್ಲಿ ಮಹಿಳಾ ಸಾಕ್ಷರತೆಗೂ ಹೆಚ್ಚಿನ ಆದ್ಯತೆ ನೀಡಬೇಕಿದೆ.

* ಮಕ್ಕಳ ಶಿಕ್ಷಣದ ಬಗ್ಗೆ ಅದ್ಯತೆಯನ್ನು ನೀಡುವ ಅವಶ್ಯಕತೆಯು ಇದ್ದು ಅಧ್ಯಯನದ ಫಲಿತಗಳನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಮಕ್ಕಳ ಶಿಕ್ಷಣದ ಅಭಿವೃದ್ಧಿಯಿಂದಲೇ ತಾಂಡದ ಸ್ವರೂಪವನ್ನು ಬದಲಾಯಿಸಬಹುದು. ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಮತ್ತು ಅನಿವಾರ್ಯತೆಗಳ ಬಗ್ಗೆ ನಂಬಿಕೆ ಮೂಡಿಸುವ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

* ಕೃಷಿಕಾರ್ಮಿಕರು ಅದರಲ್ಲಿಯೂ ಮಹಿಳಾ ಕೃಷಿಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸು ವುದು ಒಂದು ಬಹುಮುಖ್ಯವಾದ ಸಂಗತಿಯಾಗಿದೆ.

* ತಾಂಡಗಳಲ್ಲಿ ಕೃಷಿಯೇ ಇವರ ಜೀವನಧಾರ ವೃತ್ತಿಯಾಗಿದ್ದು ಇವರಿಗೆ ಆರ್ಥಿಕ ಸಹಾಯವನ್ನು ನೀಡಲು ವ್ಯವಸಾಯಗಾರರಿಗೆ ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ಮತ್ತು ಕಡಿಮೆ ಬಡ್ಡಿ ದರದಲ್ಲಿ ಹಣಕಾಸಿನ ನೆರವು ದೊರೆಯುವಂತೆ ಮಾಡಬೇಕು.

* ಭೂರಹಿತ ಕೂಲಿ ಕಾರ್ಮಿಕರನ್ನು ಗುರ್ತಿಸಿ ಅವರಿಗೆ ಅಗತ್ಯ ಕೃಷಿ ಭೂಮಿಯನ್ನು ಒದಗಿಸಬೇಕಿದೆ.

* ಕೃಷಿ ಪದ್ಧತಿಯಲ್ಲಿ ಹಲವಾರು ಸುಧಾರಣೆಗಳಾಗಬೇಕಿದೆ. ಉಪಕರಣಗಳನ್ನು ಆಧುನಿಕ, ರಸಗೊಬ್ಬರಗಳು, ಬೀಜಗಳನ್ನು ಸಹಕಾರಿ ಕ್ಷೇತ್ರದಿಂದ ಸಾಲದ ರೂಪದಲ್ಲಿ ನೀಡಬೇಕೆಂದು ಹಾಗೂ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರವನ್ನು ಕೋರಿದ್ದಾರೆ.

* ತಾಂಡಗಳಲ್ಲಿರುವ ಸಾರಾಯಿ ಅಂಗಡಿಗಳು ಹೆಚ್ಚಾಗಿವೆ. ಅವುಗಳನ್ನು ಮೊದಲು ಮುಚ್ಚಬೇಕು. ಇದರಿಂದ ತಾಂಡಗಳಲ್ಲಿನ ಜನರು ದುಡಿದದ್ದನ್ನು ಉಳಿಸುವ ಮನೋಭಾವನೆ ಬಂದು ಅದೇ ದುಡ್ಡಿನಿಂದ ತಮ್ಮ ಮಕ್ಕಳನ್ನಾದರೂ ಓದಿಸಬಹುದು ಹಾಗೂ ಹಣವನ್ನು ಪೋಲು ಮಾಡುವುದು ಕೂಡ ನಿಲ್ಲುತ್ತದೆ.

* ಗುಡಿಕೈಗಾರಿಕೆಗಳಿಗೆ ಸಾಲದ ಸೌಲಭ್ಯ, ತರಬೇತಿ, ಶಿಕ್ಷಣ ನೀಡಬೇಕು. ಆರ್ಥಿಕ ಸ್ವಾವಲಂಬಿಗಳನ್ನಾಗಿ ಇವರನ್ನು ಮಾಡಬೇಕು.

* ಅಂಗವಿಕಲ, ವೃದ್ಧರನ್ನು ವಿಧವೆಯರನ್ನು ಗುರುತಿಸಿ ಮಾಶಾಸನವನ್ನು ಕಡ್ಡಾಯವಾಗಿ ನೀಡುವಂತೆ ಮಾಡಬೇಕು. ಏಕೆಂದರೆ ತಾಂಡಗಳಲ್ಲಿ ಎಷ್ಟೋ ಜನರಿಗೆ ಈ ಮಾಶಾಸನಗಳು ದೊರೆಯುತ್ತಿಲ್ಲ. ಹಾಗೂ ಈ ರೀತಿ ಸಹಾಯ ಧನವನ್ನು ನೀಡುತ್ತಾರೆ ಎಂಬ ಮಾಹಿತಿ ಕೂಡ ಇಲ್ಲ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಇವರಿಗೆ ಸೂಕ್ತ ಸಹಾಯ ಮಾಡಬೇಕೆಂದು

* ಅಂಗವಿಕಲರಿಗೆ ಸ್ವಉದ್ಯೋಗದ ಬಗ್ಗೆ ಮಾಹಿತಿ, ತರಬೇತಿ, ಆರ್ಥಿಕ ಸಹಾಯ, ನೀಡಬೇಕು. ಏಕೆಂದರೆ ಇವರಿಗೆ ಅಂಗವೈಕಲ್ಯ ಇರುವುದರಿಂದ ಉಳಿದವರ ಜೊತೆ ಸ್ಪರ್ಧಿಸಲಾರರು ಅದಕ್ಕೆ ಇವರಿಗೆ ಸಹಾಯ ನೀಡಿ ಇವರು ಕೂಡ ನಮ್ಮ ಹಾಗೆ ಜೀವಿಸುವಂತೆ ಮಾಡಬೇಕು.

* ಭೂಹೀನರನ್ನು, ಬಗರ್‌ಹುಕಂ ಜಮೀನು ಹೊಂದಿರುವವರನ್ನು ಗುರುತಿಸಿ ಇವರಿಗೆ ಪಟ್ಟವನ್ನು ಒದಗಿಸಬೇಕು.

* ತಾಂಡಗಳ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ನೀಡಬೇಕು.

* ತಾಂಡಗಳಲ್ಲಿ ಸಾರಿಗೆ ಸಂಪರ್ಕವನ್ನು ಅಭಿವೃದ್ಧಿ ಪಡಿಸಬೇಕಿದೆ. ಸಾರಿಗೆ ಸಮಸ್ಯೆಯಿಂದ ತಾಂಡವಾಸಿಗಳು ಒಂದು ರೀತಿಯಲ್ಲಿ ದ್ವೀಪದಲ್ಲಿ ವಾಸಿಸುವಂತಾಗಿ ಸಂಪರ್ಕವಿಲ್ಲದಂತಾಗಿದ್ದಾರೆ. ಸಾರಿಗೆ ಸಮಸ್ಯೆಯಿಂದ ತಾಂಡಗಳ ಅಭಿವೃದ್ಧಿಯು ಸಹ ಕುಂಠಿತಗೊಳ್ಳುತ್ತಾ ಸಾಗುತ್ತಿದೆ. ಅದಕ್ಕೆ ಮೊಟ್ಟಮೊದಲು ರಸ್ತೆ ಅಭಿವೃದ್ಧಿಯಾಗಬೇಕು ಎಂಬುವುದು ಸಮುದಾಯದ ಇಚ್ಛೆಯಾಗಿದೆ.

*ಹೆಣ್ಣುಮಕ್ಕಳ ವಿವಾಹವನ್ನು ೧೮ ವರ್ಷಕ್ಕೆ ಕಡ್ಡಾಯವಿದ್ದರು ತಾಂಡಗಳಲ್ಲಿ ೧೨-೧೩ವರ್ಷಕ್ಕೆ ಮದುವೆ ಮಾಡಿಸುವುದರ ಬಗ್ಗೆ ಗಮನಹರಿಸಿ. ಈ ರೀತಿ ಮಾಡದಂತೆ ಪೋಷಕರಿಗೆ ತಿಳಿವಳಿಕೆಯನ್ನು ನೀಡಬೇಕು.

## ೩. ಸಾಮಾಜಿಕ ಬದಲಾವಣೆಗಳಿಗೆ ಕಾರಣಗಳು

"ಪರಿವರ್ತನೆಯು ಸರ್ವವ್ಯಾಪಕವಾದ ಪ್ರಕ್ರಿಯೇ. ಯಾವುದೇ ಸಮಾಜವಾದರೂ ಕೂಡ ಪರಿವರ್ತನೆಗೆ ಅದರಲ್ಲಿ ಒಳಪಡದೆ ಜಡವಾಗಿರಲು ಸಾಧ್ಯವಿಲ್ಲ. ನಿಸರ್ಗವು ಜಡವಾದುದಲ್ಲ ಪರಿವರ್ತನಶೀಲವಾದುದು. ಪರಿವರ್ತನೆಯು ಅದರಲ್ಲಿ ಅಂತರ್ಗತವಾಗಿದೆ. ಪರಿವರ್ತನೆಯು ಜಗತ್ತಿನ ಎಲ್ಲಾ ರಂಗಗಳಲ್ಲೂ ಕೂಡ ಕಂಡುಬರುತ್ತದೆ. ಪರಿವರ್ತನೆಯ ನಿಸರ್ಗದ ನಿಯಮ ಅಂತೆಯೇ ಮಾನವ ಸಮಾಜವು ಕೂಡ ಈ ನಿಯಮಕ್ಕೆ ಬದ್ಧವಾಗಿದೆ. ಮಾನವ ಸಮಾಜವು ಆದಿಯಿಂದಲೂ ಅವ್ಯಾಹತವಾಗಿಯೇ ಬದಲಾಗುತ್ತಲೇ

ಇದೆ."[1] ಸಮಾಜ ನಿತ್ಯ ಪರಿವರ್ತನಾಶೀಲವಾದುದಾಗಿದೆ. ಬದಲಾವಣೆಯು ಇಲ್ಲದ ಸಮಾಜವಾಗಲಿ, ಸಮುದಾಯವಾಗಲಿ ಇಲ್ಲವೆನ್ನಬಹುದು. ಅದು ಬುಡಕಟ್ಟು, ಆದಿವಾಸಿ, ಕೆಳಸಮುದಾಯ, ಆಧುನಿಕ ಗ್ರಾಮ, ನಗರ, ಸಮುದಾಯವಾಗಿರಬಹುದು, ಆದರೆ ಬದಲಾವಣೆಯ ತೀವ್ರತೆ ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ, ಸಮುದಾಯದಿಂದ ಸಮುದಾಯಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ವಿರಬಹುದೇ ಹೊರತು ಬದಲಾವಣೆ ಜೀವಂತ ಸಮುದಾಯಗಳಿಗೆ ಸಹಜ ಪ್ರಕ್ರಿಯೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸನ್ನಿವೇಶದಲ್ಲಿ ಲಂಬಾಣಿ ಸಮುದಾಯವೂ ಸಹ ಬದಲಾವಣಾ ಪ್ರಕ್ರಿಯೆಗೆ ಒಳಗಾಗಿದೆ. ಈ ಬದಲಾವಣೆಗೆ ಹಲವಾರು ಕಾರಣಗಳಿವೆ. ಅದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಜೀವಿಸುವ ಜೀವನ ಶೈಲಿಯಲ್ಲಿರಬಹುದು. ಈ ಮೂಲಾಂಶಗಳಲ್ಲಿ ಬದಲಾವಣೆಗಳಾಗುತ್ತಿವೆ. ಇದಕ್ಕೆ ಮುಖ್ಯ ಪ್ರೇರಕವಾದ ಅಂಶವಾಗಿರುವುದು ಸಾರಿಗೆ ಸಂಪರ್ಕ, ಕಾನೂನುಗಳು, ನೀರಾವರಿ ಸೌಲಭ್ಯ, ಭೂ ಹಂಚಿಕೆ, ಶಿಕ್ಷಣ, ರಾಜಕೀಯ ಮತ್ತು ಶೈಕ್ಷಣಿಕ ಮೀಸಲಾತಿ ಮುಂತಾದ ಹತ್ತು ಹಲವಾರು ಅಂಶಗಳು ಲಂಬಾಣಿ ಸಮುದಾಯದ ಸಾಮಾಜಿಕ ಬದಲಾವಣೆಗಳಿಗೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕಾರಣವಾಗಿವೆ.

ಸಂಪ್ರದಾಯಬದ್ಧವಾದ ಲಂಬಾಣಿ ಸಂಸ್ಕೃತಿಯು ಬದಲಾಗುತ್ತಿದೆ. ಆದರೆ ಇವರ ಇಡೀ ಜೀವನ ಕ್ರಮವೆ ಈ ಅಂಶಗಳಿಂದ ಸಂಪೂರ್ಣವಾಗಿ ಬದಲಾಗಿದೆ ಎಂದರೆ ತಪ್ಪಾಗುತ್ತದೆ. ಏಕೆಂದರೆ ಇಂದಿಗೂ ಬಡತನ, ಅನಕ್ಷರತೆ, ನಿರುದ್ಯೋಗ, ಆರ್ಥಿಕ, ಸಾಮಾಜಿಕ ಹಿನ್ನಡೆ, ಭೂರಹಿತತೆ, ಸಾರಿಗೆ ಸಂಪರ್ಕ, ಆರೋಗ್ಯ ಸೌಲಭ್ಯ ರಹಿತತೆ ಮುಂತಾದ ಹಲವಾರು ಸಮಸ್ಯೆಗಳು ತಾಂಡಗಳಲ್ಲಿವೆ. ಕಂದಾಯ ಗ್ರಾಮಗಳಿಗೆ ಈ ಸೌಲಭ್ಯ ದೊರೆತರೆ, ಕಂದಾಯರಹಿತ ಗ್ರಾಮಗಳಿಗೆ ಇವುಗಾಳಾವವು ದೊರೆಯದೆ ಸಾಮಾಜಿಕವಾಗಿ ಇಂದಿಗೂ ಹಿಂದುಳಿದಿವೆ.

ಸಾಮಾಜಿಕ ಬದಲಾವಣೆಯು ಸಂಪೂರ್ಣವಾಗಿ ಲಂಬಾಣಿ ಸಮುದಾಯದಲ್ಲಿ ಆಗದೆ ಇಂದಿಗೂ ಇಲ್ಲಿನ ಮಹಿಳೆಯರ ಉಡುಗೆ-ತೊಡುಗೆಯಲ್ಲಿ ಸ್ವಲ್ಪ ಬದಲಾವಣೆಗೊಳಗಾಗಿರುವುದನ್ನು ಬಿಟ್ಟರೆ ಬಹುಭಾಗ ಹಿರಿಯರು ಈಗಲೂ ತಮ್ಮ ವೇಷಭೂಷಣಗಳನ್ನು ಧರಿಸುವುದು ಕಾಣಬರುತ್ತದೆ. ಭಾಷೆ, ಗೋರ ಪಂಚಾಯಿತಿ, ಪ್ರತ್ಯೇಕ ವಾಸಸ್ಥಾನದ ತಾಂಡಗಳೂ ಇಂದಿಗೂ ಅಸ್ಥಿತ್ವದಲ್ಲಿವೆ. ಕೆಲವೊಂದು ಬದಲಾವಣೆಯ ಹೊರೆತಾಗಿ ಇವುಗಳನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು.

ಸಾರಿಗೆ, ಸಂಪರ್ಕ ಸಾಧನಗಳಾದ ರೈಲು, ಬಸ್ಸು, ದೂರವಾಣಿ, ದೂರದರ್ಶನ, ಆಕಾಶವಾಣಿ, ಅಂಚೆಕಛೇರಿಗಳು, ತಾಂಡಗಳನ್ನು ಸಂಪರ್ಕದ ಬಲೆಯಲ್ಲಿ ಹಾಕಿಕೊಂಡಿವೆ. ಜನರು ಉದ್ಯೋಗ ನಿಮಿತ್ತ ಪಟ್ಟಣ, ನಗರಗಳೆಡೆಗೆ ವಲಸೆ ಹೋಗುತ್ತಿದ್ದಾರೆ. ಹಾಗೆ ಹೋಗದವರೂ ಇವರೊಡನೆ ಹೆಚ್ಚುಹೆಚ್ಚು ಸಂಪರ್ಕವನ್ನು ಇರಿಸಿಕೊಳ್ಳುವುದರಿಂದ ನಗರದ ಮೌಲ್ಯಗಳು ಜೀವನ ಶೈಲಿಯು ತಾಂಡಗಳಿಗೆ ಹರಿದು ಹೋಗಲು ಸಾಧ್ಯವಾಗುತ್ತಿದೆ.

ಶಿಕ್ಷಣವು ತಾಂಡಗಳಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪಡೆಯುವಲ್ಲಿ ತಾಂಡದ ವಿದ್ಯಾರ್ಥಿಗಳು ಹೆಚ್ಚು ಆಸಕ್ತರಾಗಿದ್ದಾರೆ. ಅರ್ಹಪ್ರತಿಭಾನ್ವಿತ ವಿದ್ಯಾರ್ಥಿಗಳು

ಮೀಸಲಾತಿ ಅನ್ವಯ ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾಗಿ, ತಮ್ಮ ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ಉತ್ತಮ ಪಡಿಸಿಕೊಳ್ಳುತ್ತಿದ್ದಾರೆ. ಆದರೆ ಇವರ ಸಂಖ್ಯೆ ಹೆಚ್ಚಿಲ್ಲ. ಬಡತನವು, ಹಣದ ತೊಂದರೆಯು ಶಿಕ್ಷಣ ಪಡೆಯಲು ಸಾಧ್ಯವಾಗದೆ ಇರುವ ಸ್ಥಿತಿಯು ಕೂಡ ತಾಂಡದಲ್ಲಿ ಇದೆ.

ಲಂಬಾಣಿ ಸಮುದಾಯವು ಪರಿವರ್ತನೆಗೊಳ್ಳುತ್ತಿದೆ. ಲಂಬಾಣಿಗರ ಸ್ಥಾನಮಾನಗಳು ಕೂಡ ಬದಲಾಗುತ್ತಿವೆ. ಇವರ ಜೀವನ ವಿಧಾನ ಪರಿಸರ ಇತ್ಯಾದಿಗಳು ಮಾರ್ಪಾಡುಗಳಿಗೆ ಒಳಗಾಗಿವೆ. ಶೈಕ್ಷಣಿಕ ಪ್ರಸಾರ ಅಷ್ಟು ಗಮನಾರ್ಹವಾಗದಿದ್ದರೂ ಕ್ರಮೇಣವಾಗಿ ಶಿಕ್ಷಣವನ್ನು ಪಡೆಯುತ್ತಿರುವುದು ಕಂಡುಬರುತ್ತದೆ. ಈಗೀಗ ತಾಂಡದಲ್ಲಿರುವ ಸುಶಿಕ್ಷಿತರಾದ ಉದ್ಯೋಗಸ್ಥರು, ವ್ಯಾಪಾರಸ್ಥರು, ತಮ್ಮದೇ ಆದ ಹೊಲ, ಮನೆ, ಗದ್ದೆಗಳನ್ನು ಮಾಡಿಕೊಂಡಿದ್ದಾರೆ. ಹಾಗೂ ಸುತ್ತಮುತ್ತಿಲಿನ ಸಮುದಾಯಗಳ ಜೊತೆ ಸರಿಸಮಾನರಾಗಿ ಸ್ಪರ್ಧಿಸುವ ಮನೋಭಾವನೆಯನ್ನು ತಾಳಿದ್ದಾರೆ. ಸರ್ಕಾರವು ಇವರಿಗೆ ಕೆಳಸಮುದಾಯಗಳಿಗೆ ನೀಡಲಾಗುವ ಸೌಕರ್ಯಗಳನ್ನು ಕೆಲವರು ಪಡೆಯುತ್ತಿರುವರು. ತಮ್ಮ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ. ಮಣ್ಣಿನಿಂದ ಕಟ್ಟುತ್ತಿದ್ದ ಗುಡಿಸಲುಗಳನ್ನು ಬದಲಾಯಿಸಿ ಹಂಚಿನ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

ತಮ್ಮ ಮಕ್ಕಳಿಗೂ ಶಾಲಾ-ಕಾಲೇಜುಗಳಿಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುತ್ತಿದ್ದಾರೆ. ತಾಂಡಗಳಲ್ಲಿ ಶಿಕ್ಷಣದ ಪರಿಣಾಮ, ಸಮೂಹ ಮಾಧ್ಯಮದಲ್ಲಿನ ಜಾಹೀರಾತಿನ ಪರಿಣಾಮವಾಗಿಯೂ ಅವರಲ್ಲಿ ಕುಟುಂಬ ಯೋಜನೆಯ ಪ್ರಜ್ಞೆಯೂ ಮೂಡುತ್ತಿದೆ. ಆದರೆ ಹೆಣ್ಣಿಗೆ ತೆರೆಕೊಡುವ ಪದ್ಧತಿ ಇದ್ದರು, ವರದಕ್ಷಿಣೆ ಪದ್ಧತಿ ಮಾತ್ರ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ.

ತಾಂಡಗಳಲ್ಲಿ ಲಂಬಾಣಿಗರು ಸಮಕಾಲೀನ ಸಮಾಜದಲ್ಲಿ ತಮ್ಮ ಸ್ಥಾನಮಾನ, ಪರಿಸ್ಥಿತಿಯನ್ನು ಉತ್ತಮಪಡಿಸಲು ಉತ್ಸುಹಕರಾಗಿದ್ದಾರೆ. ಸಮಕಾಲೀನ ಸ್ಥಿತಿಗಳಿಗೆ ಹೊಂದಾಣಿಕೆಯಾಗುವಂತೆ ಬದುಕಲು ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಈ ಸಮುದಾಯಗಳಿಗೆ ಇದು ಅವಶ್ಯಕ ಕೂಡ ಏಕೆಂದರೆ ಕೆಳಸಮುದಾಯಗಳ ಜೀವನಮಟ್ಟ ಎತ್ತರಿಸಲು ಯೋಜನೆಗಳು ಅತ್ಯಾವಶ್ಯಕವಾಗಿರುವವು. ಲಂಬಾಣಿಗರ ಬದುಕಿನಲ್ಲಿಯ ಬದಲಾವಣೆಗಳಿಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ನ್ಯಾಯಿಕ, ಅಂಶಗಳೊಂದಿಗೆ ಸರಕಾರಿ ಸೇವಾ ಸೌಲಭ್ಯಗಳೂ ಕಾರಣವಾಗಿವೆ. ಆದರೆ ಸರಕಾರದ ಯೋಜನೆಗಳು ಸರಿಯಾಗಿ ಅವರಲ್ಲಿಗೆ ದೊರೆಯುತ್ತಿಲ್ಲ ಜೊತೆಗೆ ಈ ಯೋಜನೆಗಳನ್ನು ತಲುಪಿಸುವಲ್ಲಿ ಸರ್ಕಾರ ಕೂಡ ವಿಫಲವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಆದಾಗ್ಯೂ ಆಧುನೀಕರಣದ ಪ್ರಭಾವದಿಂದ ಅವರಲ್ಲಿ ಬದಲಾವಣೆಗಳು ಸಂಭವಿಸುತ್ತಿವೆ. ಇವರ ಜೀವನ ವಿಧಾನ ಭಾಗವಾದ ಉಡುಗೆ-ತೊಡುಗೆ, ವೃತ್ತಿ, ಭಾಷೆ, ಮಂದಗತಿಯಲ್ಲಿ ಬದಲಾವಣೆ ಆಗಿರುವುದು ಸ್ಪಷ್ಟವಾಗಿದೆ.

ಸಾಂಸ್ಕೃತಿಕವಾಗಿ ಈಚೆಗೆ ಇವರಲ್ಲಿ ಗಮನಾರ್ಹವಾದ ಬದಲಾವಣೆಗಳಾಗಿರುವುದು ಕಂಡುಬರುತ್ತಿದೆ. ಶಿಕ್ಷಣದ ಪ್ರಭಾವದಿಂದ ತಮ್ಮ ಸಾಂಸ್ಕೃತಿಕ, ಸಾಮಾಜಿಕ, ರೀತಿ ರೀವಾಜುಗಳಿಂದ ದೂರ ಉಳಿದಿದ್ದಾರೆ. ಮೂಢನಂಬಿಕೆ ಅನಿಷ್ಟ ಪದ್ಧತಿಗಳನ್ನು ಬಿಟ್ಟು ಹೊರಬರುತ್ತಿದ್ದಾರೆ. ಲಂಬಾಣಿಗರ ಮದುವೆ ರೀತಿ-

ರೀವಾಜುಗಳಲ್ಲಿ ಬದಲಾವಣೆಗಳಾಗುತ್ತಿವೆ. ಅವಿಭಕ್ತ ಕುಟುಂಬಗಳು ಇಲ್ಲವಾಗುತ್ತಿವೆ. ವಿಭಕ್ತ ಕುಟುಂಬಗಳು ಹೆಚ್ಚಿವೆ. ಇತ್ತೀಚಿಗೆ ಹೆಣ್ಣುಮಕ್ಕಳನ್ನು ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿಸುವ ಪ್ರಾಮಾಣ ಕಡಿಮೆಯಾಗುತ್ತಿದೆ. ಇಂದಿಗೂ ೧೨-೧೩ ವರ್ಷದ ಹೆಣ್ಣುಮಕ್ಕಳನ್ನು ಮದುವೆ ಮಾಡಿಸುತ್ತಿರುವ ಘಟನೆಗಳನ್ನು ವರದಕ್ಷಿಣೆ ಪದ್ದತಿ ದಿನೇದಿನೇ ಹೆಚ್ಚಾಗುತ್ತಿದೆ. ಮದುವೆಗಳನ್ನು ಛತ್ರದಲ್ಲಿ ಬ್ರಾಹ್ಮಣ ಪುರೋಹಿತರ ಮೂಲಕ ಮಾಡಿಸಲಾಗುತ್ತದೆ.

ಲಂಬಾಣಿಗರು ಶತಮಾನಗಳಿಂದ ಅಲೆಮಾರಿ ಜೀವನಕ್ರಮವನ್ನು ಕಳೆಯುತ್ತಾ ಬಂದು ಇಂದು ಒಂದಡೆ ಸ್ಥಿರವಾಗಿ ವಸತಿಗಳನ್ನು ಹೊಲ, ಮನೆಗಳನ್ನು ಹೊಂದುತ್ತಿದ್ದಾರೆ. ಹಿಂದೆ ವ್ಯಾಪಾರಿಗಳಾಗಿದ್ದ ಇವರ ವೃತ್ತಿ ಬದಲಾಗಿ ಕೂಲಿ, ಜೀತ, ಕೃಷಿ, ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದಾರೆ.

ಹಾಗೆಯೇ ಮತ್ತೊಂದು ಗುಂಪು ಬಡತನದ ಬೇಗೆಗೆ ಒಳಗಾಗಿ ದಿನಾ ಕಾಡಿಗೆ ಹೋಗಿ ಕಟ್ಟಿಗೆ ಕಡಿದು ಕಾಡಿನ ಹಣ್ಣುಗಳನ್ನು, ಮಾರಿ ಜೀವನ ಸಾಗಿಸುತ್ತಾ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದಕ್ಕಾಗಿ ಕಷ್ಟಪಟ್ಟು ದುಡಿದು ತಮ್ಮ ದುಡಿಮೆಯಲ್ಲಿನ ಆದಾಯದಲ್ಲಿ ಕೆಲವರು ಉಳಿತಾಯ ಮಾಡುವ ಮನೋಭಾವ ಹೊಂದಿ ಜಮೀನು ಪಡೆದಿದ್ದಾರೆ. ಹಣವಂತರು ಹಣ ಖರ್ಚುಮಾಡಿ ಗ್ರಾಮ ಪಂಚಾಯ್ತಿಯಲ್ಲಿ, ರಾಜಕೀಯದಲ್ಲಿ ಭಾಗವಹಿಸಿ, ಸ್ಥಾನವನ್ನು ಪಡೆಯುತ್ತಿದ್ದಾರೆ. ಶಿಕ್ಷಣ ಹೊಂದಿದ ಪದವೀಧರ, ಆಧುನಿಕ ಶಿಕ್ಷಣ ಕ್ರಮ, ತರಬೇತಿ ಕೌಶಲ್ಯ ಹೊಂದಿದವರು ಉನ್ನತ ಹುದ್ದೆಯನ್ನು ಸರ್ಕಾರಿ ಸಾಮಾನ್ಯ ಹುದ್ದೆಯನ್ನು ಹೊಂದಿ ಸರಕಾರದ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಇವೆಲ್ಲದರ ಅರಿವಿಲ್ಲದೆ ಜನಸಾಮಾನ್ಯರು ಕೂಡ ತಾಂಡಗಳಲ್ಲಿ ಕಂಡುಬಂದಿದ್ದು ತಮ್ಮ ಪಾಡಿಗೆ ತಾವೂ ಜೀವನ ಸಾಗಿಸುತ್ತಾ ಯಾರ ಗೋಜಿಗೂ ಹೋಗದೆ ಕೂಲಿ ಮಾಡುತ್ತಿದ್ದಾರೆ.

ಶಿಕ್ಷಣ ಹೊಂದುವ ಮನೋಭಾವನೆ ಹೊಂದಿದವರು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣ ದವರೆಗೂ ತಮ್ಮ ಛಾಪನ್ನು ಮೂಡಿಸುತ್ತಿದ್ದು ಗಣ್ಯರಾಗಿದ್ದಾರೆ. ಇವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಇದೆ. ಹೀಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಬದಲಾವಣೆಗಳಿಗೆ ಶಿಕ್ಷಣ, ಉದ್ಯೋಗ, ಆಧುನಿಕತೆ, ಕೈಗಾರಿಕೀಕರಣ, ಸಾರಿಗೆ ಸಂಪರ್ಕ, ಸಮೂಹಮಾಧ್ಯಮ ಇತರ ಸಮುದಾಯಗಳ ಜೊತೆಗಿನ ಒಡನಾಟ ಮುಂತಾದವು ಮುಖ್ಯವಾಗಿ ಗೋಚರವಾಗಿವೆ. ಹಾಗೆಯೇ ಆಧುನಿಕತೆಗೆ ಒಳಗಾಗಿ ಸಾಮಾಜಿಕ ಪರಿವರ್ತನೆಗೆ ಒಳಗಾಗಿರುವುದು ಸತ್ಯ. ಆದರೆ ಅಷ್ಟೇ ಸತ್ಯ ಇಂದಿಗೂ ತಮ್ಮ ಸಾಂಸ್ಕೃತಿಕ ಅನನ್ಯತೆ, ವೇಷಭೂಷಣ ಭಾಷೆ ಆಚಾರ, ವಿಚಾರ, ಸಂಪ್ರದಾಯ, ಹಬ್ಬ, ಆಚರಣೆ, ಕುಲದೇವರು, ನ್ಯಾಯ ಪಂಚಾಯ್ತಿಯನ್ನು ತಾಂಡದ ಮೂಲ ಸಂಸ್ಕೃತಿಯನ್ನು ಹಾಳುಮಾಡದೆ ಮುಂದುವರೆಸಿಕೊಂಡು ಬಂದಿದ್ದಾರೆ. ಸರ್ಕಾರ ಇಂತಹ ಕೆಳ ಸಮುದಾಯಗಳ ಬಗ್ಗೆ ಅಭಿವೃದ್ಧಿ ಚಿಂತನೆ ನಡೆಸಿ ಇವುಗಳ ಆರ್ಥಿಕ, ರಾಜಕೀಯ ಮುಂದುವರಿಕೆಗೆ ಅವಕಾಶ ಮಾಡಿಕೊಡಬೇಕು.

ಬದಲಾವಣೆಯನ್ನು ಅದರಲ್ಲೂ ಪರಿವರ್ತನೆಯ ಕಾರಣಗಳನ್ನು ವಿಶ್ಲೇಷಿಸುವಾಗ ಕೆಲವು ನೇರವಾಗಿಯೂ ಕೆಲವು ಪರೋಕ್ಷವಾಗಿಯು ಸಮಾಜದ ರಾಚನೀಕತೆಯ ಮೇಲೆ ಪ್ರಭಾವ ಬೀರುತ್ತಿವೆ.ಭೌತ

ಅಥವಾ ಪ್ರಾಕೃತಿಕ ವಿಷಯಗಳಲ್ಲಾಗುವ ಸಹಜ ಬದಲಾವಣೆಗಳೇ ಜನರ ಆರ್ಥಿಕ ಸ್ಥಿತಿಯ ಮೇಲೆ ಪ್ರಾಭಾವವನ್ನು ಬೀರುತ್ತದೆ. ಅನಾವೃಷ್ಟಿ, ಅತಿವೃಷ್ಟಿಗಳು, ಬಿರುಗಾಳಿ, ಭೂಕಂಪಗಳು ಕೆರೆ, ಕಾಲುವೆಗಳು, ಆಣೆಕಟ್ಟು, ಸೇತುವೆಗಳು ವಿವಿಧ ಸಂಪರ್ಕ ಸಾಧನಗಳ ಹೆಚ್ಚಳ, ಅರಣ್ಯನಾಶ, ಅಭಿವೃದ್ಧಿ ಸ್ವಾಭಾವಿಕ, ಇಂಧನಗಳ ಶೋಧ ಉಪಯೋಗಗಳು ಇತ್ಯಾದಿಗಳೆಲ್ಲಾ ಭೌತ ಪರಿಸರವನ್ನು ಪರಿವರ್ತಿಸುವುದರ ಮೂಲಕ ಆರ್ಥಿಕ ವ್ಯವಸ್ಥೆಯ ನಾನಾ ನಿಟ್ಟುಗಳಲ್ಲಿ ಬದಲಾವಣೆಯನ್ನು ತರುತ್ತಿವೆ. ಸಾಮಾಜಿಕ ಅಂಶಗಳಾದ ಶಿಕ್ಷಣ, ಧರ್ಮ, ಕಾನೂನು, ಆರ್ಥಿಕತೆ, ಜಾತಿ ವ್ಯವಸ್ಥೆ ಇತ್ಯಾದಿಗಳು ಪರಂಪರೆಯ ಮೂಲಕ ಬದಲಾಗುವುದರ ಜೊತೆಗೆ ಆಧುನಿಕ ಶಕ್ತ್ರಂಶಗಳಿಂದ ತೀವ್ರಗತಿಯಲ್ಲಿ ಪಾರಸ್ಪರಿಕವಾಗಿ ಬದಲಾಗುತ್ತಲಿದೆ.”[೩] ಹೀಗೆ ಕೆಳಸಮುದಾಯದ ಸಂಪ್ರದಾಯಗಳು ಬದಲಾಗುವುದಕ್ಕೆ ಸರಕಾರ, ಸಂವಿಧಾನದ ಮುಖ್ಯವಾದ ಕಾರಣಕರ್ತ ಅಂಶಗಳಾಗಿವೆ. ಭಾರತಕ್ಕೆ ಸ್ವತಂತ್ರ್ಯ ದೊರಕಿದ ಮೇಲೆ ಭಾರತದ ಸಂವಿಧಾನವನ್ನು ರಚಿಸಲು ಕರಡು ತಯಾರಿಕಾ ಸಮಿತಿಯ ಅಧ್ಯಕ್ಷರಾಗಿ ಡಾ. ಅಂಬೇಡ್ಕರ್ ಅವರು ನೇಮಕವಾದುದು ಒಂದು ವಿಪರ್ಯಾಸ. ಬಲಪ್ರಯೋಗವೇ ಸವರ್ಣೀಯರ ಹೃದಯ ವರ್ತನೆಯ ಬಗ್ಗೆ ವಿಶ್ವಾಸವಿಲ್ಲದೆ ಕಾನೂನಿನ ಬಲ ಪ್ರಯೋಗವೇ ಅಸ್ಪೃಶ್ಯತಾ ನಿವಾರ ಮಾರಾಕಾಸ್ತ್ರವೆಂದು ಅಚಲವಾಗಿ ನಂಬಿದ್ದ ಅಂಬೇಡ್ಕರ್ ೧೯೪೯ರಲ್ಲಿ ರಚಿಸಿದ ಸಂವಿಧಾನದಲ್ಲಿ ಎಸ್.ಸಿ.ಎಸ್.ಟಿ ಆದಿಮ ಜಾತಿಯೆಂದು ನೇಮಕ ಮಾಡಿ ಈ ವರ್ಗದವರಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಕ್ಕುಗಳನ್ನು ಕೊಡುವಂತೆ ಮಾಡಿದರು.

ಹೀಗೆ ನಮ್ಮ ಕೆಳಸಮುದಾಯಗಳ ಜೀವನದಲ್ಲಿ ಕೆಲವೊಂದು ಮಹತ್ತರವಾದ ಬದಲಾವಣೆಗಳು ಸಂಭವಿಸಲು ಅಗತ್ಯದ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಸಂವಿಧಾನಬದ್ಧವಾಗಿ ರಕ್ಷಣೆಯನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.

೧. ಸಾಮಾಜಿಕ ರಕ್ಷಣೆ

೨. ಆರ್ಥಿಕ ರಕ್ಷಣೆ

೩. ರಾಜಕೀಯ ರಕ್ಷಣೆ

### ಸಾಮಾಜಿಕ ರಕ್ಷಣೆ

“ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ರಕ್ಷಣೆ ಅತ್ಯಗತ್ಯ. ಸಮಾಜದಲ್ಲಿ ಪರಿಶಿಷ್ಟ ಜನಾಂಗಕ್ಕೆ ಈ ರಕ್ಷಣೆ ಇರಲಿಲ್ಲ. ಇವರು ಅತ್ಯಂತ ಹೀನಾಯ ಸ್ಥಿತಿಯಲ್ಲಿ ಜೀವನ ನಡೆಸಬೇಕಾಗಿತ್ತು. ಇವರ ನೆರಳು ಮತ್ತೊಬ್ಬರ ಮೇಲೆ ಬೀಳದಂತೆ ತಮ್ಮ ನೆರಳಿಗೆ ತಾವೇ ಹೆದರಿ ಜೀವಿಸಬೇಕಾಗಿತ್ತು. ಇವರು ಕೇವಲ ದುಡಿಯುವ ಯಂತ್ರಗಳಾಗಿದ್ದರು. ಅದು ಇವರನ್ನು ಹೀನಾಯವಾದ ಕೆಲಸಗಳಲ್ಲಿ ತೊಡಗಿಸಲಾಗಿತ್ತು”[೪] ಈ ರೀತಿ ಇವರ ತುಳಿತಕ್ಕೆ ಒಳಗಾಗಿ ವಸಾಹತುಶಾಹಿ ಕಾಲದಲ್ಲಿ ೧೮೭೧ರಲ್ಲಿ ಅಪರಾಧಿ ಬುಡಕಟ್ಟುಗಳೆಂಬ ಕ್ರೂರ ಹಣೆಪಟ್ಟಿಯನ್ನು ಹೊಂದಿ ಜೀವನದಲ್ಲಿ ನರಕಯಾತನೆ ಅನುಭವಿಸಿ ಸಮಾಜದಲ್ಲಿ ಎಲ್ಲರ ನಿಂದನೆಗೆ, ಅವಮಾನಕ್ಕೆ ಗುರಿಯಾಗಿದ್ದರು. ಸಾರ್ವಜನಿಕ ಅಧಿಕಾರದಿಂದ

ವಂಚಿತರಾಗಿದ್ದರು. ಸ್ವಾತಂತ್ರ್ಯ ದೊರೆತು (೧೯೪೭, ಆಗಸ್ಟ್ ೧೫) ೫ ವರ್ಷ ೧೬ ದಿನಗಳ ನಂತರ ಬುಡಕಟ್ಟು ಕೆಳಜಾತಿಗಳಿಗೆ ವಿಮುಕ್ತ, ಅಲೆಮಾರಿ, ಆದಿವಾಸಿಗಳಿಗೆ ೧೯೫೨ ಅಪರಾಧಿ ವಿಮುಕ್ತಿ”[೫] ಘೋಷಿಸಿ ಸ್ವಾತಂತ್ರ್ಯ ದೊರಕಿಸಿಲಾಯಿತು. ಅಂದರೆ ಅಪರಾಧಿ ಬುಡಕಟ್ಟುಗಳೆಂಬ ಕಾಯ್ದೆಯಿಂದ ಈ ಸಮುದಾಯಗಳು ವಿಮುಕ್ತವಾಗಿವೆ ಎಂದು ಘೋಷಿಸಿದರು. ಆದರೆ ಇದರಿಂದ ಇವರು ಜೀವನ ಪರ್ಯಾಂತ ಅಪರಾಧಿಗಳೆಂಬುವುದರಿಂದ ಸಮಾಜದಲ್ಲಿ ಮುಕ್ತರಾಗಿಲ್ಲ. ಇಂತಹ ಒಂದು ಸ್ಥಿತಿಯಲ್ಲಿದ್ದ ಹಲವಾರು ಕೆಳಸಮುದಾಯಗಳಿಗೆ ಸಾಮಾಜಿಕ ರಕ್ಷಣೆಯನ್ನು ಕಾಯ್ದೆಯ ಮೂಲಕ ನೀಡಲಾಯಿತು. “ಸಮಾಜದ ಒಂದು ಅವಿಭಾಜ್ಯ ಅಂಗವಾದ ಪರಿಶಿಷ್ಟ ಜನಾಂಗಕ್ಕೆ ಪೌರವ ಹಕ್ಕುಗಳಿರಲ್ಲಿಲ್ಲ. ಸಮಾಜದಲ್ಲಿ ಅವರಿಗೆ ಯಾವ ಸ್ಥಾನಮಾನಗಳು ಇರಲಿಲ್ಲ”[೬] ಅವರಿಗೆ ಸಾಮಾಜಿಕವಾಗಿ ಯಾವ ರಕ್ಷಣೆಯು ಇರಲಿಲ್ಲ. ಇಂತಹ ಒಂದು ಸ್ಥಿತಿಯಲ್ಲಿಯೇ ಎಲ್ಲಾ ಕೆಲ ಸಮುದಾಯಗಳಂತೆ ಲಂಬಾಣಿಗರು ಸಹ ಇಂತಹ ತುಳಿತಕ್ಕೆ ಒಳಗಾಗಿದ್ದವು. ಇವತ್ತಿಗೂ ಈ ಪರಿಸ್ಥಿತಿ ಆಚರಣೆಯಲ್ಲಿದೆ. ಮೇಲ್ಜಾತಿಯವರು ಲಂಬಾಣಿಗರನ್ನು ಕೀಳಾಗಿ ನೋಡುತ್ತಾರೆ. ಆದರೆ ಮೊದಲಿನಂತಹ ಕ್ರೂರ ಅಸಮಾನತೆ ಇಲ್ಲದಿದ್ದರೂ ಜಾತಿಯತೆಯ ಭಾವನೆಗಳು ಸೂಕ್ಷ್ಮವಾಗಿವೆ.

ನಾಗರೀಕ ಹಕ್ಕುಗಳು ಕೆಳಸಮುದಾಯಕ್ಕೆ ದೊರಕುವಂತಾದದ್ದು ಅವರಿಗೆ ದೇವಾಲಯಗಳಲ್ಲಿ ಪ್ರವೇಶವಿಲ್ಲದೆ, ಊರಿನಲ್ಲಿ ಕೆರೆ ಮತ್ತು ಬಾವಿಗಳಲ್ಲಿ ನೀರನ್ನು ಉಪಯೋಗಿಸುವಂತಿರಲಿಲ್ಲ. ಸುವರ್ಣ ಹಿಂದುಗಳು ನೀರನ್ನು ಹಾಕುವ ಊರೊಳಗೆ ವಾಸಿಸುವಂತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ತಿರುಗಾಡುವಂತಿಲ್ಲ. ಶಾಲೆಗಳಲ್ಲಿ ಉತ್ತಮರ ಮಕ್ಕಳೊಡನೆ ಕುಳಿತು ಕಲಿಯುವಂತಿಲ್ಲ. ಹೀಗೆ ಸಮಾಜದಲ್ಲಿ ಕೆಳಜಾತಿಗಳು ತಮ್ಮ ಹಕ್ಕುಗಳಿಂದ ಸಂಪೂರ್ಣವಾಗಿ ವಂಚಿತರಾಗಿದ್ದರು. ಭಾರತ ಸ್ವಾತಂತ್ರ್ಯ ಪಡೆದ ಕೆಲವರ್ಷದ ನಂತರ ಸಂವಿಧಾನದಲ್ಲಿ ಈ ಕೆಳಸಮುದಾಯಗಳಿಗೆ ಸಾಮಾಜಿಕ ರಕ್ಷಣೆಯನ್ನು ಕೊಡಲಾಯಿತು.

ಅಸ್ಪೃಶ್ಯರೆಂದು ಕರೆಸಿಕೊಳ್ಳುತ್ತಿದ್ದ ಈ ಜನರನ್ನು ಈಗ ಈ ರೀತಿ ಸಂಬೋಧಿಸಿದರೆ ಅದು ಕಾನೂನಿನ್ವಯ ದಂಡನೀಯ. ಮೇಲು-ಕೀಳೆಂಬ ಭೇದಭಾವವಿಲ್ಲದೆ ಸಂವಿಧಾನಬದ್ಧವಾದ, ಮೂಲಭೂತವಾದ ಹಕ್ಕುಗಳನ್ನು ಎಲ್ಲರು ಅನುಭವಿಸಬಹುದು. ಸಾರ್ವಜನಿಕರ ಸ್ಥಳಗಳಾದ ರೈಲು, ಬಸ್ಸುಗಳಲ್ಲಿ ಸಹ ಪ್ರಯಾಣ, ದೇವಾಲಯ, ಶಾಲೆ ಕಾಲೇಜುಗಳು, ಹೋಟೆಲಗಳು, ಆಸ್ಪತ್ರೆ ಮುಂತಾದ ಕಡೆ ಚಲಿಸುವ ಅವಕಾಶ ಹೊಂದಿವೆ. ಹೀಗೆ ಸಂವಿಧಾನ ಕೆಳಸಮುದಾಯಗಳಿಗೆ ಸಾಮಾಜಿಕ ರಕ್ಷಣೆ ದೊರಕಿಸಿ ಕೊಟ್ಟಿದ್ದರ ಪರಿಣಾಮ ಇಂದು ಅವರು ಮುಕ್ತವಾಗಿ ಎಲ್ಲಾ ಕಡೆ ಪ್ರವೇಶಿಸಬಹುದು. ಉದ್ಯೋಗ, ಶಿಕ್ಷಣ ರಾಜಕೀಯದಲ್ಲಿ ಮೀಸಲಾತಿಯನ್ನು ನೀಡಿ ಇದರ ಫಲವಾಗಿ ಸಾಮಾಜಿಕ ಸ್ಥಾನಮಾನದಲ್ಲಿ ಚಲನೆ ಉಂಟಾಯಿತು.

ಕೆಳ ಹಂತದ ಸ್ಥಾನದಲ್ಲಿದ್ದು ತಮ್ಮ ಸಾಮರ್ಥ್ಯ ಬುದ್ಧಿವಂತಿಕೆ, ಶಿಕ್ಷಣ ಕೌಶಲ್ಯದಿಂದ ಸಾಮಾಜಿಕ ಕೀಳರಿಮೆಯನ್ನು ಮೀರಿ ನಿಲ್ಲುವಂತಾಗಿದೆ.

## ಆರ್ಥಿಕ ರಕ್ಷಣೆ

ಯಾವುದೇ ಸಮುದಾಯ ಅಭಿವೃದ್ಧಿಯಾಗಬೇಕಾದರೆ ಆ ಸಮುದಾಯ ಆರ್ಥಿಕವಾಗಿ ಸ್ವಾವಲಂಬಿಯಾಗಿರಬೇಕು. ಆರ್ಥಿಕವಾಗಿ ಮುಂದುವರೆದರೆ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಆರ್ಥಿಕ ನೆರವು ದೊರೆತರೆ ಕೆಳಸಮುದಾಯ ಅಭಿವೃದ್ಧಿಯತ್ತ ಸಾಗಬಹುದು. "ಸಂವಿಧಾನದಲ್ಲಿ ಈ ಸಮುದಾಯಗಳಿಗೆ ಆರ್ಥಿಕ ನೆರವನ್ನು ಕೊಡುವಂತೆ ನೇರವಾಗಿ ಎಲ್ಲಿಯೂ ಉಲ್ಲೇಖವಿಲ್ಲ."[೭] ಆದರೆ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಇವುಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಉನ್ನತ ಶಿಕ್ಷಣ, ಸರ್ಕಾರಿ ಸೇವೆಗಳಲ್ಲಿ ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಹಲವಾರು ಶತಮಾನಗಳಿಂದ ಶೋಷಣೆಗೊಳಗಾಗಿದ್ದ ಕೆಳಸಮುದಾಯದ ಭಾಗ್ಯದ ಬಾಗಿಲು ತೆರೆದಿದ್ದು ಸಂವಿಧಾನದಲ್ಲಿ ಕೆಳಸಮುದಾಯಕ್ಕೆ ಕೊಟ್ಟ ಹಲವಾರು ಹಕ್ಕುಗಳಿಂದ ರಾಜಕೀಯ, ಸಾಮಾಜಿಕ, ಆರ್ಥಿಕ, ರಕ್ಷಣೆಗಳನ್ನು ಒದಗಿಸಿ, ದಮನಿಸಲ್ಪಟ್ಟ ಈ ವರ್ಗವನ್ನು ಅಭಿವೃದ್ಧಿ ಮಾಡಲು ಶೋಷಣೆಯಿಂದ ಬಿಡುಗಡೆ ಮಾಡಲು ಸಂವಿಧಾನ ಅವಕಾಶ ಮಾಡಿಕೊಟ್ಟಿದೆ."[೮] ಹೀಗೆ ಸಂವಿಧಾನವು ಕೆಳಸಮುದಾಯಗಳಿಗೆ ಆರ್ಥಿಕ ರಕ್ಷಣೆ ನೀಡುವುದರ ಜೊತೆಗೆ ಇವರ ಅಭಿವೃದ್ಧಿಗಾಗಿ ಹತ್ತು ಹಲವಾರು ಯೋಜನೆಯನ್ನು ಮಾಡಿದೆ. ಹಾಗೆಯೇ ಉದ್ಯೋಗ ಸ್ವಾತಂತ್ರ್ಯವನ್ನು ನೀಡಿದೆ.

"ಭಾರತೀಯ ಪ್ರತಿಯೊಬ್ಬ ಪ್ರಜೆಯು ತನಗೆ ಇಷ್ಟ ಬಂದ ಉದ್ಯೋಗವನ್ನು ಅಥವಾ ಕಸಬನ್ನು ಅವಲಂಬಿಸಬಹುದು. ಇದು ಸಂವಿಧಾನ ನೀಡಿರುವ ವೃತ್ತಿ ಸ್ವಾತಂತ್ರ್ಯದ ರಕ್ಷಣೆಯಾಗಿದ್ದು, ಇದನ್ನು ನೀಡುವ ಮೊದಲು ಕೆಳಸಮುದಾಯಗಳು ಸರ್ವಣೀಯರ ವೃತ್ತಿಯನ್ನು ಅನುಸರಿಸುವ ಹಾಗಿರಲಿಲ್ಲ. ಯಂತ್ರಯುಗ ಆರಂಭವಾದ ಮೇಲೆ ಕುಲಕಸಬುಗಳ ಮೇಲೆ ಪ್ರಭಾವ ಬೀರಿ ವೃತ್ತಿಹೀನವಾದವು. ಆದರೂ ಇವರು ಮೇಲ್ಜಾತಿಯ ವೃತ್ತಿಗಳನ್ನು ಅನುಸರಿಸುವಂತಿಲ್ಲ."[೯] ಆದರೆ ಇಂದು ಕೆಳಸಮುದಾಯದ ದಲಿತ ತನಗೆ ಇಷ್ಟ ಬಂದ ವೃತ್ತಿಯನ್ನು ಮಾಡಬಹುದಾಗಿದೆ.

## ರಾಜಕೀಯ ರಕ್ಷಣೆ

"ಯಾವುದೇ ಜನಾಂಗಕ್ಕೆ ರಾಜಕೀಯ ರಕ್ಷಣೆ ಇಲ್ಲದಿದ್ದರೆ ಅವರ ಸ್ವಾತಂತ್ರ್ಯ ಮತ್ತು ಪೌರ ಹಕ್ಕುಗಳನ್ನು ಕಾಪಾಡಿಕೊಳ್ಳಲು ಕಷ್ಟವಾಗುತ್ತದೆ."[೧೦] ಕೆಳಸಮುದಾಯಗಳಿಗೆ ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಮೇಲ್ಜಾತಿ, ಮೇಲ್ವರ್ಗದವರಿಂದ ಸಾಧ್ಯವಾಗುತ್ತಿರಲಿಲ್ಲ. ಇಂದು ಶಾಸಕಾಂಗದಲ್ಲಿ ಸ್ಥಾನಗಳನ್ನು ಕೊಡುವಂತೆ ಸಂವಿಧಾನ ಅವಕಾಶ ಮಾಡಿದೆ. ಲೋಕಸಭೆ, ರಾಜ್ಯಸಭೆ, ವಿಧಾನಸಭೆಯಲ್ಲಿ ಕೆಳಸಮುದಾಯದ ಜನಸಂಖ್ಯೆಯ ಆಧಾರದ ಮೇಲೆ ಇವರಿಗೆ ಸ್ಥಾನಮಾನಗಳನ್ನು ಮೀಸಲಾಗಿಸಲಾಗಿದೆ. ಈ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಿ ಇವರ ಸ್ಥಿತಿಗತಿಗಳನ್ನು ಸುಧಾರಿಸಲು ಅನುಕೂಲವಾಗಿದೆ.

"ಶಾಸನಗಳನ್ನು ರಚಿಸುವಾಗ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಸಾಧ್ಯವಾಗುತ್ತಿದೆ. ರಾಜಕೀಯ ರಕ್ಷಣೆ ಇಲ್ಲದೆ ಸಂವಿಧಾನದಲ್ಲಿ ಕೊಡಲಾಗಿರುವ ಹಕ್ಕುಗಳು ಸೌಲಭ್ಯ ದೊರೆಯಲಾರವು".[೧೧] ತಾಂಡಗಳಲ್ಲಿ ಇಂದು ಈ ಸೌಲಭ್ಯದ ಫಲವಾಗಿ ಮೀಸಲಾತಿಯಿಂದಾಗಿ ಗ್ರಾಮಪಂಚಾಯ್ತಿಯಲ್ಲಿ ಸ್ಪರ್ಧಿಸುವ ಅವಕಾಶ ಪಡೆದಂತಾಗಿದೆ.

"ಸಂವಿಧಾನದ ೭೩ನೇ ತಿದ್ದುಪಡಿಯು ದುರ್ಬಲ ವರ್ಗದವರಿಗೆ ಮತ್ತು ಹಿಂದುಳಿದ ಜನಾಂಗದವರಿಗೆ ಪಂಚಾಯತ್ ಸಂಸ್ಥೆಗಳಲ್ಲಿ ಸ್ಥಾನ, ಮೀಸಲಾತಿ ಕೊಡುವುದರ ಮೂಲಕ ಉನ್ನತ ಮಟ್ಟದ ಹಾಗೂ ಕ್ರಾಂತಿಕಾರಕ ಸುಧಾರಣೆಯನ್ನು ತಂದಿದೆ. ಹಿಂದುಳಿದ ಜನಾಂಗಕ್ಕೆ ೩೩%, ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಜನಸಂಖ್ಯಾನುಗುಣವಾಗಿ ಸದಸ್ಯತ್ವ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದವಿಗಳಿಗೆ ಸ್ಥಾನಗಳನ್ನು ಮೀಸಲಾಗಿರಿಸಲಾದ ರಾಜ್ಯವೆಂದರೆ ಕರ್ನಾಟಕ. ಇದರ ಪರಿಣಾಮವಾಗಿ ಜಿಲ್ಲಾ ಪಂಚಾಯತ್‌ನ ಒಟ್ಟು ೯೧೯ ಸ್ಥಾನಗಳ ಪೈಕಿ ೧೯೮ ಸ್ಥಾನಗಳು ಹಿಂದುಳಿದ ಜನಾಂಗದ, ೧೯೭ ಸ್ಥಾನಗಳು ಪರಿಸಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದ ಮತ್ತು ೩೩೫ ಸ್ಥಾನಗಳು ಮಹಿಳೆಯರ ಪಾಲಾಗಿವೆ. ಜಿಲ್ಲಾ ಪರಿಷತ್ತಿನ ಒಟ್ಟು ೨೦ ಅಧ್ಯಕ್ಷ ಮತ್ತು ೨೦ ಉಪಾಧ್ಯಕ್ಷರ ಸ್ಥಾನಗಳಲ್ಲಿ ೫ ಸ್ಥಾನಗಳು (ಎರಡರಲ್ಲೂ) ಹಿಂದುಳಿದ ಜನಾಂಗದವರಿಗೆ, ೪ ಪರಿಶಿಷ್ಟ ಜಾತಿಯವರಿಗೆ ಮತ್ತು ೭ ಸ್ಥಾನಗಳು ಮಹಿಳೆಯರಿಗೆ ಹೋಗಿವೆ"[೧೨] ಇದರಿಂದ ತಿಳಿಯುವದೆಂದರೆ ಇತ್ತೀಚಿನ ದಿನಗಳವರೆಗೂ ಪಂಚಾಯತ್ ಸಂಸ್ಥೆಗಳಲ್ಲಿ ಮೇಲ್ಜಾತಿಯವರ ಮಂದುವರೆದ ಸಮುದಾಯದವರೆ ಸಾಮಾಜಿಕ, ಆರ್ಥಿಕ ಪ್ರಾಬಲ್ಯ ಹೊಂದಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿ, ಗ್ರಾಮಗಳ ಮೇಲೆ ಏಕಸ್ವಾಮ್ಯವನ್ನು ಸಾದಿಸಿದ್ದರು. ಆದರೆ ಸಂವಿಧಾನದ ಹೊಸ ಮೀಸಲಾತಿಯ ಪರಿಣಾಮ, ಶೋಷಿತ ಸಮುದಾಯಗಳು ಮತ್ತು ಮಹಿಳೆಯರು ಸಹ ಭಾಗವಹಿಸುವಂತಾಯಿತು. ಇದರಿಂದ ಚುನಾಯಿತ ನಾಯಕರು ತಮ್ಮ ಸಮುದಾಯದ ಕುಂದು ಕೊರತೆಗಳನ್ನು ತಾವೇ ನಿವಾರಿಸಲು ಮುಂದಾಗುತ್ತಿದ್ದಾರೆ.

ಇಂದು ಕೆಳಸಮುದಾಯಗಳು. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿಯಷ್ಟೆ ಅಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಗ್ರಾಮಪಂಚಾಯ್ತಿ, ಪುರಸಭೆ, ನಗರಸಭೆ, ನಗರಪಾಲಿಕೆ ಈ ಎಲ್ಲಾ ಸಂಸ್ಥೆಗಳಲ್ಲಿ ಇರುವುದ ರಿಂದ ಈ ಸಮುದಾಯಗಳಿಗೆ ಸೌಲಭ್ಯಗಳು ದೊರಕಬೇಕಾದದ್ದು ದೊರೆಯುವಂತಾಗಿದೆ. ಹಾಗೂ ಇವುಗಳು ದೊರೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಇದೆ.

ಇಂದು ಸಂವಿಧಾನ ಕೆಳ ಸಮುದಾಯಗಳಿಗೆ ನೀಡಿರುವ ಆರ್ಥಿಕ, ಸಾಮಾಜಿಕ, ಉದ್ಯೋಗ, ರಾಜಕೀಯ ರಕ್ಷಣೆಯಿಂದ ಇವತ್ತು ಮೀಸಲಾತಿ ಕ್ಷೇತ್ರದಲ್ಲಿ ಆಶ್ಚರ್ಯವೆಂಬಂತೆ ಸ್ತ್ರೀಯರು ಸಹ ಭಾಗವಹಿಸುವಂತಾಗಿದ್ದಾರೆ. ರಾಜಕೀಯ ರಕ್ಷಣೆ ಇಲ್ಲದಿದ್ದರೆ ಮೇಲ್ಜಾತಿಯವರು ಈ ಸಮುದಾಯಗಳಿಗೆ ಬದುಕಲು ಬಿಡದೆ ಎಲ್ಲಾ ಹಕ್ಕುಗಳಿಂದ ವಂಚಿತರನ್ನಾಗಿಸಿ ಗುಲಾಮರಂತೆ ತಮ್ಮ ಸ್ವಾರ್ಥಕ್ಕಾಗಿ ಬಳಸಿ ಕೊಳ್ಳುತ್ತಿದ್ದರು. ಆದರೆ ಇದಕ್ಕೆ ಅಪವಾದವೆಂಬಂತೆ ಈಗಿನ ರಾಜಕೀಯದಲ್ಲಿ ಶೈಕ್ಷಣಿಕ, ಔದ್ಯೋಗಿಕ, ಉದ್ಯೋಗ, ಆರ್ಥಿಕ, ಸಾಮಾಜಿಕ, ಮುಂತಾದ ಎಲ್ಲಾ ಕ್ಷೇತ್ರದಲ್ಲಿ ಮೇಲ್ಜಾತಿಯವರದೆ ಪ್ರಾಬಲ್ಯ. ಕೆಳಸಮುದಾಯದ ಬೆರಳೆಣಿಕೆಯಷ್ಟು ಜನ ರಾಜಕೀಯ ಅಧಿಕಾರ ಪಡೆದು, ಶಿಕ್ಷಣ, ಉದ್ಯೋಗ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು ಹೊಂದುತ್ತಾ ಇದ್ದಾರೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಇಂದು ಕೆಳಸಮುದಾಯದ ಹಾಗೂ ಭಾರತೀಯ ಸಮಾಜದ ರಚನೆಯಲ್ಲಿ ಅಮೂಲಾಗ್ರವಾದ ಬದಲಾವಣೆಗಳಾದವು. ಇಲ್ಲದಿದ್ದರೆ ಇಂದಿಗೂ ಇವೆಲ್ಲದರಿಂದ ವಂಚಿತವಾಗಿ ಉಳಿದು "ಇವರ ಬಾಳು ಗೋಳಾಗಿಯೇ ಉಳಿಯುತ್ತಿತ್ತು. ಮತ್ತು ಭಾವೀ ಭವಿಷ್ಯ

ಶೂನ್ಯವಾಗಿ ಇರುತ್ತಿತ್ತು."[೧೩] ಲಂಬಾಣಿಗರ ಜೀವನದಲ್ಲಿ ಸಾಮಾಜಿಕ ಬದಲಾವಣೆ ಸಂಭವಿಸಿರುವುದಕ್ಕೆ ಕಾರಣ ಮೇಲ್‌ಸ್ತರದಲ್ಲಿ ಶಿಕ್ಷಣ, ಸಾರಿಗೆ ಸಂಪರ್ಕ ಮಾಧ್ಯಮ, ಆರ್ಥಿಕ, ಸಾಮಾಜಿಕ, ರಾಜಕೀಯ, ಉದ್ಯೋಗ ಮುಂತಾದ ಅಂಶಗಳು ಕಾರಣವಾಗುತ್ತವೆ. ಆದರೆ ಇವುಗಳೆಲ್ಲ ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಒಂದು ಕೆಳ ಸಮುದಾಯ ಅಭಿವೃದ್ಧಿ ಹೊಂದಲು ಸರಕಾರದ ಸಹಕಾರ ಸಂವಿಧಾನದ ಪಾತ್ರ ಮಹತ್ವವಾದದ್ದು ಎಂಬುದನ್ನು ಕಡೆಗಣಿಸುವಂತಿಲ್ಲ. ನಮಗೆ ಈ ರೀತಿಯಲ್ಲಿ ಕಾಯ್ದೆಗಳನ್ವಯ ರಕ್ಷಣೆ ನೀಡದಿದ್ದರೆ ಮೊದಲೇ ಹಿಂದುಳಿದಿರುವ ಸಮುದಾಯಗಳು ಇನ್ನು ತುಂಬಾ ಹಿಂದುಳಿದಿರುತ್ತಿದ್ದವು ಎಂಬುದರಲ್ಲಿ ಆಶ್ಚರ್ಯವಿಲ್ಲ.

**ಅಡಿಟಿಪ್ಪಣಿ**

೧. ಎರವಲು ಪದಕೋಶ, ಪ್ರೊ.ಜಿ. ವೆಂಕಟಸುಬ್ಬಯ್ಯ, ಪು.೫, ೧೯೯೮

೨. ಸಮಾಜಶಾಸ್ತ್ರ ಪರಿಚಯ, ಚ.ನ.ಶಂಕರ್‌ರಾವ್, ಪು.೧೮೭, ೨೦೦೧

೩. ಗ್ರಾಮೋನ್ನತಿ, ಡಾ.ಎಚ್.ಎಂ.ಮರುಳಸಿದ್ದಯ್ಯ, ಪು.೪, ೧೯೯೩

೪. ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಸಂ.ಆರಾಧ್ಯ ಬಿ.ಎಂ.ಎಂ, ಪು.೫, ೧೯೮೫

೫. ಭಾರತ ಬಂಜಾರ್ ಪತ್ರಿಕೆ, ಪು.೨, ೨೦೦೨

೬. ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಸಂ.ಆರಾಧ್ಯ ಬಿ.ಎಂ.ಎಂ, ಪು.೫, ೧೯೮೫

೭. ಅದೇ. ಪು.೮

೮. ಅದೇ. ಪು.೯

೯. ಅದೇ. ಪು.೯೪

೧೦. ಅದೇ. ಪು.೭

೧೧. ಅದೇ. ಪು.೭

೧೨. ಕನ್ನಡ ಅಧ್ಯಯನ, ಕರ್ನಾಟಕ ಆರ್ಥಿಕತೆ, ಪ್ರೊ.ಅಬ್ದುಲ್ ಅಜೀಜ್, ಕೆ.ಜಿ.ವಾಸುಕಿ, ಪು.೨೦೨, ೧೯೯೭

೧೩. ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಸಂ.ಆರಾಧ್ಯ ಬಿ.ಎಂ.ಎಂ, ಪು. ೮, ೧೯೮೫

# ಸಮಾರೋಪ

## ಸಮಾರೋಪ

ಪ್ರಸ್ತುತ ಅಧ್ಯಯನವು ಒಂದು ಅಲೆಮಾರಿ ಸಮುದಾಯದ ವರ್ತಮಾನದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳುವ ಒಂದು ಪ್ರಯತ್ನವಾಗಿದೆ. ಅಲೆಮಾರಿ ಸಮುದಾಯವೊಂದು ನೆಲೆನಿಲ್ಲುವ ಸಂದರ್ಭದಲ್ಲಿ ಎದುರಿಸುವ ತಲ್ಲಣ ಮತ್ತು ಅದು ಮುಖಾಮುಖಿಯಾಗುವ ಸಂಘರ್ಷಗಳನ್ನು ಅವಲೋಕಿಸುವ ನಮ್ರ ಪ್ರಯತ್ನವಾಗಿದೆಯೆಂದು ಭಾವಿಸಿದ್ದೇನೆ. ಈ ದೇಶದ ವಿಷಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಲಂಬಾಣಿಗಳಂತಹ ಸಮುದಾಯಗಳು ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳಿಗೋಸ್ಕರ ನಡೆಸಿದ ಹೋರಾಟದ ಚರಿತ್ರೆ ನಮ್ಮೆಲ್ಲರಿಗೂ ಗೊತ್ತೇ ಇದೆ. ದುಡಿವ ಶ್ರಮಜೀವಿಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನೇ ಕಿತ್ತುಕೊಂಡ ಈ ದೇಶದಲ್ಲಿ ಅಲೆಮಾರಿಗಳಂತಹ ಸಮುದಾಯಗಳು ತಮ್ಮ ಹಕ್ಕುಗಳಿಗಾಗಿ ಕಾಲೂರಿ ನಿಲ್ಲುವ ಕಾಲಘಟ್ಟವಿದು. ಹೀಗೆ ಎಚ್ಚೆತ್ತುಕೊಳ್ಳುವ ಹಂತದಲ್ಲಿ ಶೋಷಿತ ಸಮುದಾಯಗಳು ಹಲವು ಸಂಘರ್ಷಗಳನ್ನೆದುರಿಸಬೇಕಾಗುತ್ತದೆ. ಆಳುವ ವರ್ಗದ ಪಿತೂರಿಗಳ ಜೊತೆಯಲ್ಲಿಯೇ ಆಂತರಿಕ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ. ಈ ಬಗೆಯ ಬಿಕ್ಕಟ್ಟುಗಳು ಚಾರಿತ್ರಿಕವಾಗಿ ಎಲ್ಲಾ ಸಮುದಾಯಗಳನ್ನು ಬೆನ್ನಟ್ಟಿ ಬಂದಿವೆ. ಸಾವಿರಾರು ವರ್ಷಗಳ ಶೋಷಣೆಯ ಇತಿಹಾಸವಿರುವ ಈ ದೇಶದಲ್ಲಿ ಶೋಷಣೆಗೊಳಗಾದ ಸಮುದಾಯಗಳನ್ನು ಸಬಲೀಕರಿಸುವುದು ಸುಲಭದ ಮಾತೇನಲ್ಲ. ಆದರೆ ಸಬಲೀಕರಣಗೊಳ್ಳುವ ಮತ್ತು ಬದಲಾಗುವ ಸಮುದಾಯಗಳ ವರ್ತಮಾನದ ಬದುಕಿನ ಚಲನೆಗಳನ್ನು ವಿವರಿಸಿಕೊಳ್ಳುವುದು ಇಂದಿನ ಹಲವು ತುರ್ತುಗಳಲ್ಲೊಂದಾಗಿದೆ. ಈ ಬಗೆಯ ಪ್ರಯತ್ನ ಕೇವಲ ಸಮುದಾಯಗಳ ಬಾಹ್ಯ ಒತ್ತಡಗಳನ್ನು ಅರ್ಥಮಾಡಿಕೊಳ್ಳುವ ಹಂತಕ್ಕೆ ಮಾತ್ರ ನಿಲ್ಲುವುದಿಲ್ಲ. ಅದು ಸಮುದಾಯಗಳು ಬಯಸುವ ರೂಪಾಂತರಗಳ ತವಕಗಳನ್ನೂ ವಿವರಿಸಿಕೊಳ್ಳುವ ಪ್ರಯತ್ನವಾಗಿರುತ್ತದೆ.

ಈ ಕಾರಣಕ್ಕಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ನಾಲ್ಕು ತಾಂಡಾಗಳನ್ನು ಆಯ್ದು ಕೊಂಡು ಲಂಬಾಣಿಗರ ಬದಲಾದ ಬದುಕಿನ ಏರಿಳಿತಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಿದ್ದೇನೆ. ಕೆಳಜಾತಿಗಳ ಬದಲಾವಣೆಯನ್ನು "ಸಂಸ್ಕೃತೀಕರಣ, ಪಾಶ್ಚಾತ್ಯೀಕರಣ" ಎಂಬ ಪರಿಭಾಷೆಯಲ್ಲಿ ಮಾತ್ರ ವಿವರಿಸಿಕೊಳ್ಳಲಾಗಿದೆ. ಆದರೆ ಬದಲಾವಣೆಯನ್ನು ಅದಕ್ಕೂ ಮೀರಿದ ನಿತ್ಯದ ಬವಣೆಗಳನ್ನು ಪೂರೈಸಿಕೊಳ್ಳುವ ಪ್ರಕ್ರಿಯೆಯೆಂದು ಭಾವಿಸುವ ಅಗತ್ಯವಿದೆಯೆಂದು ಇಲ್ಲಿ ಭಾವಿಸಲಾಗಿದೆ. ಏಕೆಂದರೆ ನಾನು ಆಯ್ದುಕೊಂಡ ನಾಲ್ಕು ತಾಂಡಾಗಳಲ್ಲಿ 'ಸಂಸ್ಕೃತೀಕರಣ' ಎಂಬ ಬದಲಾವಣೆಯ ಚೌಕಟ್ಟಿಗೆ ಒಗ್ಗುವವರು ಮೇಲ್‌ಮಧ್ಯಮ ವರ್ಗದವರು ಮಾತ್ರ. ನಿತ್ಯ ದುಡಿವ ಮತ್ತು ದುಡಿದುಣ್ಣಲೇಬೇಕಾದ ಸ್ಥಿತಿಯಲ್ಲಿರುವ ಲಂಬಾಣಿಗರಂತಹ ಜನಕ್ಕೆ ಬದಲಾವಣೆಯ ಪ್ರಶ್ನೆಯೆನ್ನುವುದು ಕೇವಲ ಒಪ್ಪತ್ತಿನ ಊಟದ ಪ್ರಶ್ನೆಯೇ ಆಗಿದೆ. ಸಾಮಾಜಿಕಾರ್ಥಿಕ

[illegible]

ಕ್ಷೇತ್ರದಲ್ಲಿ ಸ್ವಾವಲಂಬನೆ ಮತ್ತು ಆತ್ಮಪ್ರತ್ಯಯಗಳನ್ನು ಹೊಂದುವ ನಿಟ್ಟಿನಲ್ಲಿ ಲಂಬಾಣಿಗರು ಹಲವು ಪ್ರಯತ್ನಗಳನ್ನು ಮಾಡಿದ್ದಾರೆ. ಕೆಲವು ಕಡೆ ಇವರು ಯಶಸ್ಸನ್ನು ಕಂಡಿದ್ದರೂ, ಹಲವು ಕಡೆ ಈ ಪ್ರಯತ್ನಗಳು ಫಲ ನೀಡಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಹೀಗೆ ತಮ್ಮ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಸದರಿ ಸಮುದಾಯ ಕೈಗೊಂಡ ಪ್ರಯತ್ನಗಳು ಸೋತು ಹೋಗಿಲ್ಲ. ಅವು ಸಮುದಾಯ ಬದಲಾವಣೆಯ ಕಡೆ ಮತ್ತು ಆತ್ಮಪ್ರತ್ಯಯದ ಕಡೆ ಸಾಗುವ ರಚನಾತ್ಮಕ ಹೆಜ್ಜೆಗಳೆಂದೇ ಹೇಳಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಸದರಿ ಸಂಪ್ರಬಂಧದಲ್ಲಿ ಲಂಬಾಣಿಗರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ನಾನು ಅಧ್ಯಯನಕ್ಕೆ ಆಯ್ದುಕೊಂಡ ನಾಲ್ಕು ಮಾದರಿ ತಾಂಡಾಗಳಿಂದ ಅಂಕಿಅಂಶಗಳನ್ನು ಪಡೆದುಕೊಂಡು, ಅಲ್ಲದೆ ಈ ತಾಂಡಾಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದು ಪಡೆದ ಮತ್ತು ನನ್ನ ಸ್ವಂತ ಅನುಭವದ ಮಾಹಿತಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇಲ್ಲಿನ ಅಧ್ಯಾಯಗಳಲ್ಲಿ ನಾನು ಪಡೆದ ಅಂಕಿಅಂಶಗಳನ್ನು ಮತ್ತು ಮಾಹಿತಿಗಳನ್ನು ಸದ್ಯದ ಸಮಾಜಶಾಸ್ತ್ರದ ಪ್ರಮೇಯಗಳ ಮೂಲಕ ವಿವರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದೇನೆ.

ಮೂಲತಃ ಆದಿವಾಸಿಯಾಗಿದ್ದ ಮಾನವ ಹಂತಹಂತವಾಗಿ ತನ್ನನ್ನು ಬದಲಾಯಿಸಿಕೊಳ್ಳುತ್ತಾ ಇಂದಿನ ಸ್ಥಿತಿಗೆ ಬಂದಿದ್ದಾನೆ. ಹೀಗೆ ಪರಿವರ್ತನೆಯಾಗುತ್ತಾ ಸಮಾನತೆ ಇದ್ದ ಸಮಾಜದಲ್ಲಿ ಸ್ವಾರ್ಥ ವೆಂಬುದು ಅಸಮಾನತೆಯನ್ನು ಹುಟ್ಟು ಹಾಕಿತು. ಸಮುದಾಯ ಸಮುದಾಯಗಳ ನಡುವೆ ಸಮಾಜ ಸಮಾಜಗಳ ನಡುವೆ ಇದು ಹೆಚ್ಚಾಗಿ ಗೋಚರವಾಗುತ್ತಾ ಸೃಷ್ಟಿಯಲ್ಲಿ ಮೇಲು ಕೀಳು, ಉಳ್ಳವ ಉಳ್ಳದೆ ಇರುವವ, ಬಡವ ಶ್ರೀಮಂತ, ಎಂಬ ವರ್ಗಗಳು ರೂಪಗೊಂಡವು. ಈ ವರ್ಗ ತಾರತಮ್ಯ ಎಷ್ಟರ ಮಟ್ಟಿಗೆ ಪ್ರಚಲಿತದಲ್ಲಿದೆಯೆಂದರೆ ಶ್ರೀಮಂತ ಬಂಡವಾಳಶಾಹಿ ಗಣ್ಯರಿಗೆ ಮಾತ್ರ ಬದುಕುವ ಹಕ್ಕಿದೆ ಹೊರತು ಬಡವರಿಗೆ ಇಲ್ಲ ಎನ್ನುವಷ್ಟರ ಮಟ್ಟಿಗೆ ಶೋಷಣೆ ಸಮಾಜದಲ್ಲಿ ರಾರಾಜಿಸುತ್ತದೆ. ಹಾಗೆಯೇ ಸಮಾಜದಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳೆಂದೂ ಅಸ್ತಿತ್ವವನ್ನು ಏಕಕಾಲದಲ್ಲಿ ತಮ್ಮ ಅಸ್ತಿತ್ವವನ್ನು ಪ್ರಕಟಿಸುತ್ತಿವೆ.

ಅತ್ಯಂತ ಪುರಾತನ ಹಾಗೂ ಅತ್ಯಂತ ಆಧುನಿಕ ಮೌಲ್ಯಗಳು ಇಂದಿಗೂ ಸಮುದಾಯದೊಳಗಡೆ ಜೀವಂತವಾಗಿವೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವ ಹಾಗೂ ದೇಶೀಯ ಜ್ಞಾನವನ್ನು ಬಳಸಿಕೊಳ್ಳುವು ದನ್ನು ಸಹ ನಾವು ಕಾಣುತ್ತೇವೆ. ಸಮುದಾಯಗಳ ಜನ ಜೀವನದಲ್ಲಿ ಕಂಡುಬರುವ ವೈವಿಧ್ಯತೆ ಹಾಗೂ ಭಿನ್ನತೆ ಈ ಸಮುದಾಯದ ವೈಶಿಷ್ಟ್ಯಗಳಲ್ಲಿ ಒಂದು. ಅಸಮಾನತೆ ಎಂಬುದು ಸಮಾಜದಲ್ಲಿ ಅಸ್ತಿತ್ವದಲ್ಲಿರುವುದು ಜಾತಿಯ ಮೂಲಕ, ಈ ಅಸಮಾನತೆಯನ್ನು ಗುರುತಿಸಲಾಗುತ್ತಿದ್ದು ಇಂದೂ ಆರ್ಥಿಕ ಅಂಶಗಳ ಮೂಲಕ. ಇದು ಹೆಚ್ಚು ಪ್ರಚಲಿತದಲ್ಲಿ ಇರುವುದನ್ನು ಕಾಣಬಹುದಾಗಿದೆ.

ಇಂಡಿಯಾದಂತಹ ಶ್ರೇಣೀಕೃತ ಸಮಾಜದಲ್ಲಿ ಹಲವು ಬಗೆಯ ಮತಧರ್ಮ, ಜಾತಿ, ವರ್ಗಗಳಿದ್ದು ಏಣಿ ಶ್ರೇಣಿಯನ್ನು ಸತತವಾಗಿ ಪೋಷಿಸಿಕೊಂಡು ಬರಲಾಗಿದೆ. ದೇಶಾದ್ಯಂತ ಸಮುದಾಯಗಳನ್ನು ಅವರ ಜಾತಿಯಿಂದ ಗುರುತಿಸಲ್ಪಟ್ಟು, ಹುಟ್ಟಿನಿಂದಲೇ ಅವರ ಸಾಮಾಜಿಕ ಸ್ಥಾನಮಾನ ನಿರ್ಧರಿಸಲ್ಪಡುತ್ತದೆ.

ಜಾತಿ ವ್ಯವಸ್ಥೆ ತನ್ನೆಲ್ಲ ಶಿಥಿಲ ಅವಸ್ಥೆಯ ಜೊತೆಗೂ ಇಂದೂ ಬದುಕಿದೆ ಎಂಬುದೇ ಆಧುನಿಕ ಜಗತ್ತಿನ ವ್ಯಂಗ್ಯಗಳಲ್ಲೊಂದಾಗಿದೆ.

ಇಂದು ಆರ್ಥಿಕ ಸ್ಥಿತಿಗತಿ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತವೆ. ಆರ್ಥಿಕ ಅಸಮಾನತೆ ಸಮುದಾಯವೊಂದರ ಮುಂದುವರಿಕೆ ಹಾಗೂ ಹಿಂದುಳಿಯುವಿಕೆಯ ಮೇಲೆ ಪ್ರಭಾವ ಬೀರುತ್ತಲೇ ಇರುತ್ತದೆ. ಸ್ವಾತಂತ್ರ್ಯಾನಂತರ ಜಾತಿವ್ಯವಸ್ಥೆಯ ಬಿಗಿಪಟ್ಟು ಸ್ವಲ್ಪ ಮಟ್ಟಿಗೆ ಸಡಿಲವಾಗಿರುವುದು ನಿಜ. ಆದರೆ ಶತಮಾನಗಳಿಂದ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳಿಂದ ದೂರ ಉಳಿದ ಸಮುದಾಯಗಳು ಇಂದು ಬರ್ಬರ ವರ್ತಮಾನದಲ್ಲಿ ಬದುಕುತ್ತಿದ್ದಾರೆ.

ಆದರೆ ಬಹುಪಾಲು ಕೆಳಸಮುದಾಯಗಳು ಇಂದೂ ಮುಖ್ಯ ಪ್ರವಾಹದ ಜೊತೆಗೆ ಸೇರಲಾಗದೆ ಸ್ಥಗಿತ ನಿಲುವಿನಲ್ಲಿ ಉಳಿದು ಬಿಟ್ಟಂತೆ ಭಾಸವಾಗುತ್ತದೆ. ಇಂಡಿಯಾದ ಶ್ರೇಣೀಕೃತ ವ್ಯವಸ್ಥೆ ದುರ್ಬಲ ಸಮುದಾಯಗಳ, ಆಳುವ ವರ್ಗಗಳ ನಡುವೆ ಅಂತರ್ ಸೃಷ್ಟಿಯಾಗಿದ್ದು, ಉತ್ಪಾದನಾ ಸಾಧನಗಳ ಒಡೆತನ ಆಳುವ ವರ್ಗಗಳ ಕೈಯಲ್ಲಿದ್ದು, ಹೀಗೆ ಕೆಳ ಸಮುದಾಯಗಳಿಗೆ ಇವು ಸಮರ್ಪಕವಾಗಿ ದೊರೆಯದೆ ಇದ್ದಾಗ ಹಲವು ಸಲ ಬಹಿರಂಗ ಹೋರಾಟಕ್ಕಿಳಿಯುವುದನ್ನು ನಾವು ಚರಿತ್ರೆಯಲ್ಲಿ ಕಾಣಬಹುದಾಗಿದೆ. ಶೋಷಿತರ ಪ್ರತಿಭಟನೆ, ಹೋರಾಟಗಳು, ಹೀಗೆ ಸಂಕೇತದ ಹಂತದಲ್ಲೆಯೇ ಉಳಿದು ಬಿಡುವುದಕ್ಕೆ ಲೌಕಿಕದಲ್ಲಿಯೂ ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ ಒತ್ತಡ ಕಾರಣಗಳಾಗಿರುತ್ತವೆ. ಈ ರೀತಿ ನಮ್ಮ ಸಮಾಜದಲ್ಲಿ ಆಳುವ ವರ್ಗಕ್ಕೆ ಸಂವಾದಿಯಾಗಿ ದುಡಿವ ಶೋಷಿತ ವರ್ಗಗಳು ಪ್ರತಿ ರಾಜಕಾರಣವನ್ನು ಕಲ್ಪಿಸಿಕೊಂಡು ವ್ಯವಸ್ಥಿತ ಹೋರಾಟಕ್ಕಿಳಿದಿರುವುದು ನಮ್ಮ ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ.

ಈ ರೀತಿ ಕೆಳಸಮುದಾಯ ಬುಡಕಟ್ಟು, ಆದಿವಾಸಿಗಳು, ದುಡಿವಶ್ರಮಿಕ ವರ್ಗಗಳು ಹೋರಾಟ ಕ್ಕಿಳಿಯುವುದನ್ನು ಬಹುಪಾಲು ಶಮನಗೊಳಿಸಲು ವಸಾಹತುಶಾಹಿ ಸರಕಾರ ಪ್ರಯತ್ನಿಸಿತು. ನಂತರ ನಮ್ಮ ಇಂದಿನ ಸರಕಾರ, ವ್ಯವಸ್ಥೆಯ ಒಳಗಡೆ ತಂತ್ರಗಳನ್ನು ರೂಪಿಸುತ್ತಲೇ ಇರುತ್ತದೆ. ಒಟ್ಟಿನಲ್ಲಿ ಈ ಬಗೆಯ ಹೋರಾಟಗಳನ್ನು ಸೃಷ್ಟಿಯಾಗದಂತೆ ಆಡಳಿತಾರೂಢ ಸರಕಾರ ಎಚ್ಚರವಹಿಸಿ ತಮ್ಮ ಸ್ವಾರ್ಥಕ್ಕಾಗಿ ಈ ಸಮುದಾಯಗಳನ್ನು ಅಂತಿಮವಾಗಿ ಬಲಿಕೊಡುತ್ತದೆ. ಆದರೆ ಹೀಗೆ ಶೋಷಿತ ಸಮುದಾಯಗಳ ಪ್ರತಿರೋಧಕ ಧ್ವನಿಗಳನ್ನು ಅಭಿವ್ಯಕ್ತಿಗೊಳಿಸುವುದನ್ನು ಅವುಗಳ ಸಾಮುದಾಯಿಕ ಆಗುಹೋಗುಗಳ ಭಾಗವಾಗಿಯೇ ನೋಡಬೇಕಾದ ಜರೂರಿದೆ.

ಕೆಳ ಸಮುದಾಯಗಳು ವಸಾಹತುಶಾಹಿ ಕಾಲದಲ್ಲಿ ಯಂತ್ರನಾಗರೀಕತೆಯ ಮುಂದೆ ಸ್ಪರ್ಧಿಸಲಾಗದೆ, ತಮ್ಮ ಪಾರಂಪರಿಕ ವೃತ್ತಿಗಳನ್ನು ಕಳೆದುಕೊಂಡು ಸಂದಿಗ್ಧ ಸ್ಥಿತಿಯಲ್ಲಿ ಸಿಲುಕಿದವು. ಇದನ್ನು ಪ್ರತಿಭಟಿಸುವ, ವಸಾಹತುಶಾಹಿಯನ್ನು ಎದುರಿಸುವ ಅಗಾಧ ಶಕ್ತಿಯು ದುರ್ಬಲವರ್ಗದ ಅಂತರಂಗದಲ್ಲಿ ಒಟ್ಟುಗೂಡುತ್ತಿದ್ದರೂ, ವಸಾಹತುಶಾಹಿ ಸರಕಾರ ಇಂತಹ ಸಮುದಾಯಗಳನ್ನು 'ಅಪರಾಧಿ ಬುಡಕಟ್ಟು' ಗಳೆಂದು ಪರಿಗಣಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಿತು. ಹೀಗೆ ಕೆಳ ಸಮುದಾಯಗಳನ್ನು ನಿಷ್ಕ್ರಿಯ

ಗೊಳಿಸಲು ಇಂಡಿಯಾದಲ್ಲಿ ಇಲ್ಲಿಯದೇ ಆದ ರಾಜಕೀಯ ಹುನ್ನಾರಗಳು ಅಂದಿನಿಂದಲೂ ರೂಪುಗೊಳ್ಳುತ್ತಲೇ ಬಂದಿವೆ. ಇಂದಿಗೂ ಅದು ಮುಂದುವರೆಯುತ್ತಿದೆ.

ನಮ್ಮ ಶ್ರೇಣೀಕೃತ ವ್ಯವಸ್ಥೆಯ ದೇಶದಲ್ಲಿ ಹಲವಾರು ಬುಡಕಟ್ಟು, ಕೆಳಸಮುದಾಯಗಳಲ್ಲಿ ಲಂಬಾಣಿಗರು ಅತ್ಯಂತ ವೈಶಿಷ್ಟ ಪೂರ್ಣವಾದ ಸಂಸ್ಕೃತಿಯುಳ್ಳ ಸಮುದಾಯವಾಗಿದೆ.

ಅಲೆಮಾರಿತನ ತೊರೆದು ಊರುಗಳಿಂದ ಸ್ವಲ್ಪ ದೂರ ತಮ್ಮ ತಾಂಡಾಗಳನ್ನು ಕಟ್ಟಿಕೊಂಡು ನಿರ್ದಿಷ್ಟ ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ರಾಜಸ್ಥಾನದಿಂದ ವಲಸೆ ಬಂದು ಕರ್ನಾಟಕದ ಬಹುತೇಕ ಎಲ್ಲಾ ಕಡೆ ಲಂಬಾಣಿ ಸಮುದಾಯವು ನೆಲೆ ನಿಂತು ಕನ್ನಡದ ಸಮುದಾಯವಾಗಿ ಬೆರೆತು ಹೋಗಿದೆ. ಗೋರಬೋಲಿ ಭಾಷೆಯನ್ನಾಡುವ ಇವರು ಸಾಮಾನ್ಯವಾಗಿ ಆಯಾ ಪ್ರಾದೇಶೀಕತೆಗಳಿಗನುಗುಣವಾಗಿ ವ್ಯಾವಹಾರಿಕವಾಗಿ ಕನ್ನಡವನ್ನು ಇತರ ಭಾಷೆಯನ್ನು ಮಾತನಾಡುತ್ತಾರೆ. ಎಲ್ಲಾ ಬುಡಕಟ್ಟು ಭಾಷೆಗಳಂತೆಯೇ ಈ ಗೋರ್‌ಬೋಲಿ ಭಾಷೆಗೂ ಸಹ ಸ್ವಂತ ಲಿಪಿಯಿಲ್ಲ.

ಲಂಬಾಣಿಗರು ಮೊದಲಿನಿಂದಲೂ ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಇಂಡಿಯಾದ ಶ್ರೇಣೀಕರಣದ ಫಲವಾಗಿ ಇವರು ಅತ್ಯಂತ ಕೆಳಜಾತಿಯ ಸ್ಥಾನಮಾನಗಳನ್ನು ಪಡೆದಿದ್ದು, ಇಂದಿಗೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಬಯಲುಸೀಮೆಗಳಲ್ಲಿ ಕುರಚಲು ಕಾಡುಗಳನ್ನು ಕಡಿದು ಕೃಷಿ ಭೂಮಿಯನ್ನು ಹೊಂದಲೆತ್ನಿಸಿರುವುದು ಕಂಡುಬರುತ್ತದೆ. ಮತ್ತು ಇವರು ತಮ್ಮ ಸಾಂಪ್ರದಾಯಿಕ ವೃತ್ತಿಗಳನ್ನು ಬಿಟ್ಟು ಕೃಷಿಕರಾಗಿ ನೆಲೆನಿಂತಿದ್ದಾರೆ. ಇಲ್ಲಿ ಇವರ ಜೀವನ ವಿಧಾನವನ್ನು ಮತ್ತು ಇವರ ಆರ್ಥಿಕ ಬದುಕು ಹೇಗೆ ಸಾಮಾಜಿಕ ಸ್ಥಾನಮಾನಗಳನ್ನು ಬದಲಾಯಿಸಿದೆ ಎಂಬುದನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಹಾಗೂ ಈ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಶೈಕ್ಷಣಿಕ ಸ್ಥಿತಿಗತಿಗಳ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ.

ಇವರ ಕಸುಬು, ಉಪಕಸುಬು ಮುಂತಾದ ಆರ್ಥಿಕ ಚಟುವಟಿಕೆಯ ಬಗ್ಗೆ ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಸಮಾಜದಲ್ಲಿ ಬದಲಾವಣೆಗಳಾದರೂ ಇಂದಿಗೂ ಒಂದು ವಿಶೇಷವಾದ ಸಾಂಸ್ಕೃತಿಕ ಏಕತೆಯನ್ನು ಇಲ್ಲಿ ಕಾಣುತ್ತೇವೆ. ಮೂಲತಃ ಅಲೆಮಾರಿಗಳಾಗಿದ್ದ ಇವರು ದೇಶದಾದ್ಯಂತ ವಿವಿದೆಡೆಗಳಲ್ಲಿ ಚಲಿಸಿದರೂ, ತಮ್ಮ ಮೂಲಸ್ವರೂಪವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿದ್ದಾರೆ. ಹೀಗೆ ಅಲೆಮಾರಿಗಳಾಗಿದ್ದ ಸಂದರ್ಭದಲ್ಲಿ ಅಲೆಮಾರಿತನವನ್ನು ಬಿಟ್ಟು ಒಂದೆಡೆ ನೆಲೆಸಿ ಅಲೆಮಾರಿತನಕ್ಕೆ ತಿಲಾಂಜಲಿಯನ್ನಿಟ್ಟು ಈಗ ಎಲ್ಲಾ ಸಮುದಾಯಗಳಂತೆಯೇ ಇವರೂ ಸಹ ಒಂದೆಡೆ ವಾಸಿಸುತ್ತಿದ್ದಾರೆ. ಹೀಗೆ ಒಂದೆಡೆಯಲ್ಲಿಯೇ ನೆಲೆ ನಿಂತು ಬಾಳುವೆ ಮಾಡುವಾಗ ಅನೇಕ ಸಂಘರ್ಷಗಳಿಗೆ ಮುಖಾಮುಖಿಯಾಗಿದ್ದಾರೆ. ಏಕೆಂದರೆ ವರ್ಷಪೂರ್ತಿ ಅಲೆಮಾರಿತನದಿಂದಲೇ ಜೀವಿಸುತ್ತಿದ್ದ ಇವರು ಒಂದೆಡೆ ನೆಲೆ ನಿಲ್ಲುವಾಗ ಪರಿಸರಕ್ಕೆ ತಮ್ಮ ಜೀವನದ ಒಂದೇ ಮುಖಗಳನ್ನು ಬದಲಿಸಿಕೊಳ್ಳಬೇಕಾಗಿತ್ತು. ನೆಲೆ ನಿಂತ ಪ್ರದೇಶದಲ್ಲಿ ಬದಲಾದ ಅನೇಕ ವೃತ್ತಿಯಿಂದುಂಟಾದ ಸಮಸ್ಯೆ, ಆಹಾರ, ನೀರಿನ ಸಮಸ್ಯೆ, ಇತರ ಸಮುದಾಯಗಳೊಂದಿಗೆ

ಹೊಂದಾಣಿಕೆ ಹಾಗೂ ವ್ಯವಸಾಯಕ್ಕೆ ಅಂಟಿಕೊಳ್ಳಲು ಆಗದಿರುವಿಕೆ ಮುಂತಾದ ಸಮಸ್ಯೆಗಳಿಗೆ ಇವರು ಮುಖಾಮುಖಿಯಾಗಿದ್ದಾರೆ.

ಲಂಬಾಣಿ ಸಮುದಾಯವು ತನ್ನ ಮೂಲ ಪಾರಂಪರಿಕ ಕಸುಬಿನಿಂದ ಮತ್ತೊಂದು ಕಸುಬಿಗೆ ಬದಲಾಗಬೇಕಾದ ಸಂದರ್ಭದಲ್ಲಿ ಒಂದು ಸಂಘರ್ಷವೇರ್ಪಡುತ್ತದೆ. ಅದೇ ರೀತಿ ಈ ಸಮುದಾಯಕ್ಕೆ ವ್ಯವಸಾಯ ತಿಳಿಯದ ವೃತ್ತಿಯಾಗಿತ್ತು. ಆದರೆ ಕೃಷಿ ಇವರಿಗೆ ಅನಿವಾರ್ಯದ ಆರ್ಥಿಕ ಮೂಲವಾಗಿ ಪರಿಣಮಿಸಿತು. ಅಲ್ಲದೆ ಸ್ವಾತಂತ್ರ್ಯ ಸಿಕ್ಕು ಹಲವು ದಶಕಗಳ ನಂತರ ಇವರಿಗೆ ಲಭಿಸಿದ ಸಂವಿಧಾನಬದ್ಧ ಅನುಕೂಲಗಳೂ ಸಹ ಇವರ ಬದುಕಲ್ಲಿ ತೀವ್ರ ಬದಲಾವಣೆಗಳಾಗಲು ಕಾರಣವಾಗಿವೆ. ಆದರೆ ಕೆಳ ಸಮುದಾಯಗಳಿಗೆ ಈ ರೀತಿ ಸಂವಿಧಾನದ ಮೂಲಕ ಮೀಸಲಾತಿಯನ್ನು ನೀಡಿದಾಕ್ಷಣ ಈ ಸಮಾಜದಲ್ಲಿ ಫಲಾನುಭವಿ ಕೆಳ ಸಮುದಾಯಗಳು ಅಭಿವೃದ್ಧಿಯಾಗಿ ಬಿಟ್ಟಿವೆ. ಅವರಿಗಾಗಿ ಮೀಸಲಿಟ್ಟ, ಹಣ ಯೋಜನೆಗಳಿಂದ ಆರ್ಥಿಕ, ಸಾಮಾಜಿ, ರಾಜಕೀಯ, ಶೈಕ್ಷಣಿಕ ಮುಂತಾದ ರಂಗದಲ್ಲಿ ಈ ಸಮುದಾಯಗಳು ಸಬಲೀಕರಣಗೊಂಡಿವೆ ಎಂಬುದು ಕೇವಲ ಸಾಂದರ್ಭಿಕವಾದ, ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಸಂವಿಧಾನಬದ್ಧ ಅನುಕೂಲಗಳನ್ನು ಮತ್ತು ಸರಕಾರದ ಹಲವು ಕಲ್ಯಾಣ ಯೋಜನೆಗಳ ಲಾಭವನ್ನು ಈ ಸಮುದಾಯಗಳ ಎಲೈಟ್ ಜನರು ಮಾತ್ರ ಪಡೆಯುವಂತಾಗಿದೆ. ಈ ಅನುಕೂಲಗಳನ್ನು ಬಳಸಿಕೊಂಡ ಈ ಎಲೈಟ್ ಗುಂಪುಗಳ ಬದುಕಲ್ಲಿ ಹಲವು ಕ್ಷಿಪ್ರ ಬದಲಾವಣೆಗಳು ಸಂಭವಿಸಿದ್ದರೂ, ಬಹುಸಂಖ್ಯಾತ ಶೋಷಿತರು ಈ ಅನುಕೂಲಗಳನ್ನು ಪಡೆದುಕೊಳ್ಳುವ ಪ್ರಾಥಮಿಕ ಹಂತಕ್ಕೂ ಬಂದು ನಿಂತಿಲ್ಲ. ಈ ಹಿನ್ನಲೆಯಲ್ಲಿ ಇಂದಿಗೂ ಲಂಬಾಣಿಗರು ವಾಸಿಸುತ್ತಿರುವ ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿ ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿದ್ದಾರೆ. ಇಂದಿಗೂ ಕೆಳಸ್ತರದಲ್ಲಿರುವ ಅನೇಕ ಲಂಬಾಣಿಗರು ಉದ್ಯೋಗ ಶ್ರೇಣಿಯಲ್ಲಿ ಕೆಳಸ್ತರದಲ್ಲಿರುವ ಉದ್ಯೋಗಗಳನ್ನೆ ಅನುಸರಿಸುತ್ತಿದ್ದಾರೆ. ಸಮಾಜದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಕೃಷಿಕಾರ್ಮಿಕರಲ್ಲಿ ಬಹುತೇಕ ಮಂದಿ ಲಂಬಾಣಿ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಇಂದಿಗೂ ನಾನು ಕ್ಷೇತ್ರಕಾರ್ಯ ಮಾಡಿದ ಬಹುಪಾಲು ಲಂಬಾಣಿ ಸಮುದಾಯದ ಸದಸ್ಯರು ಕೂಲಿಕೃಷಿಯನ್ನು ತಮ್ಮ ಆರ್ಥಿಕ ಮೂಲವನ್ನಾಗಿ ಕಂಡುಕೊಂಡಿದ್ದಾರೆ. ಆದರೆ ಜಾತಿ ಹಾಗೂ ಆರ್ಥಿಕ ಪರಾವಲಂಬನೆ ಒಂದು ರೀತಿಯ ವಿಷವರ್ತುಲವಾಗಿರುವುದರಿಂದ ಲಂಬಾಣಿಗರು ಸಾಮಾಜಿಕ ಶ್ರೇಣಿಯಲ್ಲಿ ಮೇಲೆ ಚಲಿಸಲು ಸಾಧ್ಯವಾಗುತ್ತಿಲ್ಲ.

ಆದರೆ ತಾಂಡಗಳಲ್ಲಿ ಸರಕಾರದ ಯಾವುದೇ ಸೌಲಭ್ಯ, ಸವಲತ್ತುಗಳು ನೀಡಿದರು ಅದು ಸಮುದಾಯದ ತನಕ ಬರುವಷ್ಟರಲ್ಲಿ ನಿಸ್ತೇಜಗೊಂಡಿರುತ್ತದೆ. ಇದರಿಂದಾಗಿ ಯೋಜನೆಗಳ ಪೂರ್ಣ ಲಾಭವನ್ನು ಸಮುದಾಯಗಳು ಪಡೆಯಲಾಗುವುದಿಲ್ಲ. ಇದರಿಂದ ಸಮಾಜದಲ್ಲಿ ಅಸಮಾನತೆಯೂ ಸಮುದಾಯದ ಸಮುದಾಯಗಳ ನಡುವೆ ಹೆಚ್ಚಾಗಿ ಅಂತರವನ್ನು ಸೃಷ್ಟಿಸುತ್ತಾ ಇದೆ.

ಲಂಬಾಣಿಗರ ಜೀವನ ವಿಧಾನದಲ್ಲಿ ಆರ್ಥಿಕ ಅಂಶವು ಪ್ರಗತಿಹೊಂದಿದಂತೆ ತನ್ನ ಬಾಹ್ಯ ರೂಪಗಳನ್ನು ಬದಲಾಸಿದೆ. ಇವರು ಬದಲಾದ ಸಮಾಜದೊಂದಿಗೆ ತಮ್ಮ ಜೀವನವನ್ನು ಅದಕ್ಕೆ ತಕ್ಕ ಹಾಗೆ ಹೊಂದಿಸಿಕೊಂಡು ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಉಳಿಸಿಕೊಂಡಿದ್ದಾರೆ.

ಶತಮಾನಗಳಿಂದ ಕಾಲಚಕ್ರಕ್ಕೆ ಸಿಲುಕಿ ದಿನವು ಈ ಸಮುದಾಯದ ಸ್ವರೂಪ ಬದಲಾಗುತ್ತಲೇ ಇದೆ. ಆದರೆ ಕ್ರಾಂತಿಕಾರಿ ಬದಲಾವಣೆಗಳಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ನಾನು ಕ್ಷೇತ್ರಕಾರ್ಯ ಮಾಡಿದ ತಾಂಡಗಳಲ್ಲಿನ ಜನರ ಸ್ವಪ್ರಯತ್ನಗಳಿಂದ. ಸರ್ಕಾರದ ಕೆಲವು ಸೌಲಭ್ಯಗಳನ್ನು ಬಳಸಿಕೊಂಡು ಚಿಕ್ಕಬಾಸೂರು ತಾಂಡ, ಮಲೆಕುಂಬಳೂರು ತಾಂಡಾಗಳು ತೆರಿಗೆ ಗ್ರಾಮಗಳಾಗಿ ಇತ್ತೀಚಿನ ದಿನಗಳಲ್ಲಿ ರೂಪಗೊಂಡು, ಕೆಲವೊಂದು ಮೂಲ ಸೌಲಭ್ಯಗಳನ್ನು ಹೊಂದಿ ಸ್ವಲ್ಪಮಟ್ಟಿನ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುತ್ತಾ ಇವೆ. ಆದರೆ ಗುಡ್ಡಳ್ಳಿ ತಾಂಡ, ಸೂರಗೊಂಡನಕೊಪ್ಪ ತಾಂಡಗಳು ಈ ಮಟ್ಟಿನ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವಲ್ಲಿ ಹಿಂದುಳಿದಿವೆ. ಈ ತಾಂಡಗಳ ಲಂಬಾಣಿಗರು ಪಟ್ಟಣಗಳ ಜೊತೆ ಅತ್ಯಂತ ಕಡಿಮೆ ಮಟ್ಟದ ಸಂಪರ್ಕವನ್ನು ಹೊಂದಿದ್ದಾರೆ. ಇದಕ್ಕೆ ವಿರುದ್ಧವಾದ ಆರ್ಥಿಕ, ಸಾಮಾಜಿಕ, ಸನ್ನಿವೇಶವನ್ನು ಮಲೆಕುಂಬಳೂರು, ಚಿಕ್ಕಬಾಸೂರು ತಾಂಡಗಳಲ್ಲಿ ನಾವೂ ಗುರುತಿಸಬಹುದು. ಪಟ್ಟಣದ ಜೊತೆ ಸಂಪರ್ಕ ಹೊಂದಿ ಒಂದಕ್ಕಿಂತ ಹೆಚ್ಚಿನ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿರುವ ಕುಟುಂಬಗಳು ಸ್ವಲ್ಪ ಹೆಚ್ಚಿನ ಸಾಮಾಜಿಕ, ಆರ್ಥಿಕ, ಅಭಿವೃದ್ಧಿಯನ್ನು ಸಾಧಿಸಿವೆ. ಅಲ್ಲದೆ ಚಿಕ್ಕಬಾಸೂರು ಮತ್ತು ಮಲೆ ಕುಂಬಳೂರು ತಾಂಡಾಗಳಲ್ಲಿ ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಅವಕಾಶವಿದ್ದು ಇಲ್ಲಿನ ಲಂಬಾಣಿಗರು ಬಹು ಬಗೆಯ ವ್ಯಾಪಾರಗಳಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೆ ತಕ್ಕಮಟ್ಟಿಗೆ ಕೃಷಿಭೂಮಿ ಲಭ್ಯವಾಗಿರುವುದರಿಂದ ಇವರು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. ಆದರೆ ಗುಡ್ಡಳ್ಳಿ ಮತ್ತು ಸೂರಗೊಂಡನ ಕೊಪ್ಪ ತಾಂಡಾಗಳು ಇದಕ್ಕೆ ತದ್ವಿರುದ್ಧ ಸ್ಥಿತಿಯಲ್ಲಿವೆ. ನಿಶ್ಚಿತ ಆರ್ಥಿಕ ಮೂಲ ಮತ್ತು ಹೊರ ಜಗತ್ತಿನ ಮುಕ್ತ ಆರ್ಥಿಕ ಚಟುವಟಿಕೆಗಳ ಬೆಂಬಲವಿಲ್ಲದೆ ಈ ತಾಂಡಾಗಳು ಆರ್ಥಿಕವಾಗಿ ಸೊರಗಿಹೋಗಿದೆ.

ಸರ್ಕಾರಿ ವೃತ್ತಿಗಳಲ್ಲಿ ಹಾಗೂ ಆ ವೃತ್ತಿಗಳಲ್ಲಿ ತೊಡಗಿರುವವರ ಹಿನ್ನೆಲೆ ಕೂಲಿ ದುಡಿಮೆಯವರಿಂದ ಬೆಂಬೆಲಯುತವಾಗಿದೆ. ಉತ್ತಮ ಸರಕಾರಿ ವೃತ್ತಿ ಮತ್ತು ಆಧುನಿಕ ವೃತ್ತಿಗಳಲ್ಲಿ ಇರುವವರು ಆದಾಯ, ಜೀವನ ಶೈಲಿಯನ್ನು ಗಮನಿಸಿ ಕೆಲವು ಲಂಬಾಣಿಗರಲ್ಲಿ ಉನ್ನತ ಶಿಕ್ಷಣದ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಇತ್ತೀಚಿನ ಸರಕಾರಿ ನೀತಿಗಳು ಬಂದು ಇವರನ್ನು ಕೆಳಸಮುದಾಯವೆಂದು ಗುರುತಿಸಿವುದರಿಂದ ಸ್ವಲ್ಪಮಟ್ಟಿನ ಸರಕಾರಿ ಸೌಲಭ್ಯಗಳು ಸರಕಾರಿ ನೌಕರಿಗಳು, ಶೈಕ್ಷಣಿಕ ಸವಲತ್ತುಗಳು, ಅಭಿವೃದ್ಧಿ ಕಾರ್ಯಕ್ರಮಗಳು ಸೌಲಭ್ಯಗಳು ಇವರಿಗೆ ದೊರಕುತ್ತಿವೆ.

ಇತರ ಮುಂದುವರೆದ ಸಮುದಾಯಗಳ ಜೊತೆ ಅವಶ್ಯಕವಾಗಿ ಸಂಪರ್ಕವನ್ನು ಇಟ್ಟುಕೊಳ್ಳ ಬೇಕಾಗಿರುವುದರಿಂದ ಸಾಮಾಜಿಕ ಪ್ರಕ್ರಿಯೆಯು ಹಿಂದೆ ನಿಧಾನವಾಗಿತ್ತು ಆದರೆ ಇಂದು ಇದರ ತೀವ್ರತೆ ಹೆಚ್ಚುತ್ತಿರುವುದನ್ನು ಕಾಣಬಹುದಾಗಿದೆ. ಅನೇಕ ಲಕ್ಷಣಗಳನ್ನು ಸ್ಥಳೀಯ ಪ್ರಬಲ ಜಾತಿ ಸಮಾಜದಿಂದ ಎರವಲಾಗಿ ಪಡೆದುಕೊಂಡು ಪ್ರಾದೇಶಿಕ ಐಕ್ಯತೆಯನ್ನು ಹೊಂದುತ್ತಿದ್ದಾರೆ. ಇದು ಏಕೆಂದರೆ ಆರ್ಥಿಕ, ಸಾಮಾಜಿಕ, ರಾಜಕೀಯ, ಅಂತರಸಂಪರ್ಕ ಮತ್ತು ಅವಲಂಬನೆಯು ಇಂದು ಅವಶ್ಯಕವಾಗಿದೆ.

ಇಂದು ಮುಖ್ಯಧಾರೆಗಳಿಗೆ ಸೇರಿರುವ ಸುಶಿಕ್ಷಿತ ಲಂಬಾಣಿ ಕುಟುಂಬಗಳು ಕಣ್ಣಿಗೆ ಕಾಣುವ ಹಾಗೆ ಮುಂದುವರೆದು ಇತರ ಮುಖ್ಯಧಾರೆಗೆ ಒಳಪಟ್ಟು ಸಮುದಾಯದ ಜೊತೆ ಬೆರೆತ್ತಿದ್ದಾರೆ. ಹಾಗೆಯೇ

ಗ್ರಾಮೀಣ ಸಮುದಾಯಗಳ ಒಳಗೆ ಕೂಡ ಸಾಂಪ್ರದಾಯಿಕ, ಸಾಮಾಜಿಕ ನಿಯಂತ್ರಣಗಳ ಮಹತ್ವ ಕಡಿಮೆಯಾಗುತ್ತಿದೆ. ಅನೇಕ ಬಗೆಯ ಸ್ವಾತಂತ್ರ್ಯದಿಂದ ಜೀವನಾನುಭವ ಮಾರ್ಗಗಳು ಮಾರ್ಪಾಡಾಗುತ್ತಿವೆ. ತಾಂಡಗಳಲ್ಲಿ ಮಹಿಳೆಯರು ಆಧುನಿಕ ಮಾದರಿಯ ಉಡುಗೆಗಳನ್ನು ಅಳವಡಿಸಿಕೊಂಡಿದ್ದಾರೆ. ಪಟ್ಟಣ ಮತ್ತು ನಗರ ಸಂಪರ್ಕ ಹೊಂದಿದ್ದರಿಂದ ತಮ್ಮಲ್ಲಿ ದೊರಕುವ ಆರ್ಥಿಕ ಅಂಶಗಳಿಂದ ಬದಲಾವಣೆಯ ಮಹತ್ವಕಾಂಕ್ಷೆಯನ್ನು ಹೊಂದಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಜೀವನಕ್ಕಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿದ್ದರು ಬಡತನದಲ್ಲಿ ಬಹುಪಾಲು ಜನರು ಇದ್ದಾರೆ. ಸಾಕ್ಷರತೆ ಪ್ರಮಾಣವು ಸಹ ಗಣನೀಯವಾಗಿ ಇಳಿಮುಖವಾಗುತ್ತಿದೆ. ಗಳಿಸುವ ಆದಾಯವು ಕುಟುಂಬದ ನಿರ್ವಹಣೆಗೆ ಸಾಕಾಗದೆ ಶಿಕ್ಷಣ ಪಡೆಯಲು ಸಹ ಆಗುತ್ತಿಲ್ಲ. ಶಿಕ್ಷಣ ಪಡೆದ ಕೆಲವೊಬ್ಬರು ಸರಕಾರಿ ನೌಕರಿಯಲ್ಲಿದ್ದು ಮುಖ್ಯಧಾರೆಗೆ ಸೇರಿ ತಮ್ಮ ಸ್ಥಾನಮಾನವನ್ನು ಉತ್ತಮಪಡಿಸಿಕೊಂಡಿದ್ದಾರೆ. ಆದರೆ ಉಳಿದಂತೆ ತಾಂಡಗಳಲ್ಲಿ ಲಂಬಾಣಿಗರು ಜಮೀನು ಹೊಂದಿದ್ದರೂ ಬರಗಾಲದಿಂದ ಸಕಾಲಕ್ಕೆ ಮಳೆಯಾಗದೆ ಬೆಳೆ ಹಾನಿಯಾಗಿ ಇವರ ಆರ್ಥಿಕ ಸ್ಥಿತಿಯು ಕುಸಿದಿದೆ. ಬಹಳಷ್ಟು ಲಂಬಾಣಿಗರು ಒಡುಳಿದವರಾಗಿದ್ದಾರೆ. ಒಣ ಭೂಮಿಯಿಂದ ಲಾಭವೆನ್ನುವುದು ಹೊಗಲಿ ಒಂದು ಹೊತ್ತಿನ ಗಂಜಿಗೆ ಸಾಕಾಗದ ಪರಿಸ್ಥಿತಿ ಉಂಟಾಗಿದೆ. ಇಂದು ಈ ಪರಿಸ್ಥಿತಿಯಿಂದ ಹೊರಬರುವ ಅನಿವಾರ್ಯದಿಂದ ದುಡಿಯಲು ಕೂಲಿ ದೊರಯುವ ಕಡೆ ತಾತ್ಕಾಲಿಕ ವಲಸೆ ಹೋಗಿ ಕಡಿಮೆ ಕೂಲಿ ಪಡೆದೂ ವಿಧಿ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಸಾಲವೆಂಬುದು ದುಡಿಮೆಯ ಸಿಂಹಪಾಲನ್ನು ನುಂಗಿ ಹಾಕುತ್ತಿದೆ. ಇನ್ನು ಉಳಿತಾಯವೆನ್ನುವುದು ಇವರಿಂದ ಸಾಧ್ಯವಾಗದೆ ಆರ್ಥಿಕ ಹಿನ್ನಡೆಯನ್ನು ದಿನದಿಂದ ದಿನಕ್ಕೆ ಹೆಚ್ಚಾಗಿ ಹೊಂದತ್ತಲೆ ಇದ್ದಾರೆ.

ಕಾಲ ಬದಲಾದಂತೆ ಇವರ ಹಲವಾರು ಆಚರಣೆಗಳು, ರೂಢಿಸಂಪ್ರದಾಯಗಳು, ಬದಲಾಗುತ್ತಾ ಹೊಸ ರೂಪವನ್ನು ಪಡೆದರೆ ಮತ್ತೆ ಕೆಲವು ಮಾಯಾವಾಗುತ್ತಿದೆ, ಆಧುನಿಕ ಜೀವನಕ್ರಮವನ್ನು ಅಳವಡಿಸಿಕೊಂಡು ಶಿಕ್ಷಣ, ಉದ್ಯೋಗ, ಪಡೆಯಲು ಹೆಚ್ಚು ಆಸಕ್ತರಾಗಿ ತಮ್ಮ ಸ್ಥಾನವನ್ನು ಉತ್ತಮ ಪಡಿಸಿಕೊಳ್ಳಬೇಕು, ತಾವು ಕೂಡ ಆಸ್ತಿ, ಅಂತಸ್ತು, ಉದ್ಯೋಗ ಪಡೆಯಬೇಕೆಂಬ ಮನೋಭಾವನೆ ತಾಳುತ್ತಿದ್ದಾರೆ. ಬಹುಪಾಲು ಲಂಬಾಣಿಗರ ಆರ್ಥಿಕ ಮೂಲ ಕೃಷಿ ಮತ್ತು ಕೃಷಿ ಕೂಲಿಯಾಗಿದೆ. ಇತ್ತೀಚಿಗೆ ಸಣ್ಣಪುಟ್ಟ ಅಂಗಡಿ ಇಟ್ಟುಕೊಂಡು ಕೆಲವರು ಜೀವನ ಸಾಗಿಸುತ್ತಾ ಇದ್ದಾರೆ. ಆದರೆ ಭೂರಹಿತರು ನಾಲ್ಕು ತಾಂಡಗಳಲ್ಲಿ ಹೆಚ್ಚಾಗಿದ್ದು, ಇದುವರೆಗೆ ಇವರಿಗೆ ಜಮೀನು ದೊರೆಯದಿರುವುದು, ಸರಕಾರದ ಯೋಜನೆಗಳು ಬಂದರೂ ಕಾರ್ಯರೂಪಕ್ಕೆ ಬರುವುದು ಅಷ್ಟಕಷ್ಟೆ. ಪ್ರಾಥಮಿಕ ಶಾಲೆಯೊಂದೇ ತಾಂಡಗಳಲ್ಲಿ ಇರುವುದರಿಂದ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಪಡೆಯುತ್ತಾರೆ. ಮುಂದಿನ ಶಿಕ್ಷಣವನ್ನು ಬಹುಪಾಲು ವಿದ್ಯಾರ್ಥಿಗಳು ಶಾಲೆ ದೂರವಿರುವ, ಸಾರಿಗೆ ವ್ಯವಸ್ಥೆ ಸರಿ ಇಲ್ಲದೆ, ಬಸ್ಸಿನ ಸೌಕರ್ಯವಿಲ್ಲದೆ, ಬಡತನ, ಆರ್ಥಿಕ ಸಂಕಷ್ಟವಿರುವುದರಿಂದ ಅರ್ಧದಲ್ಲಿಯೇ ಬಿಟ್ಟು ಕೂಲಿ ಇಲ್ಲವೆ ಜೀತ ಮಾಡಲು ತೊಡಗಿಕೊಳ್ಳುತ್ತಾರೆ.

ನಾಲ್ಕು ತಾಂಡಗಳಲ್ಲಿ ಒಬ್ಬಿಬ್ಬರು ಮಾತ್ರ ಉನ್ನತ ತಾಂತ್ರಿಕ, ವೈದ್ಯಕೀಯ, ಶಿಕ್ಷಣವನ್ನು ಹೊಂದಿರುವವರನ್ನು ಬಿಟ್ಟರೆ ಯಾರು ಸ್ನಾತಕೋತ್ತರ ಪದವೀಧರರು ಕಂಡುಬರಲಿಲ್ಲ. ಹೊಸಹೊಸ ಬದಲಾವಣೆಗಳು ಸಮಾಜದಲ್ಲಿ ಆಗುತ್ತಿದ್ದರು, ತಾಂಡಗಳಲ್ಲಿ ಇದುವರೆಗೂ ಸಾರಿಗೆ ಸಂಪರ್ಕ, ಮೂಲ ಸೌಲಭ್ಯಗಳು, ತೆರಿಗೆರಹಿತ ಗ್ರಾಮಗಳಾಗಿರುವ ಒಂದೇ ಕಾರಣಕ್ಕೆ ದೊರೆಯದೆ ಇರುವುದು ಹೆಚ್ಚು ವಿಷಾದನೀಯ ಸಂಗತಿಯಾಗಿದೆ.

ಎಲ್ಲಿಯವರೆಗೂ ಈ ಸಮುದಾಯಕ್ಕೆ ಸರಕಾರದ ಯೋಜನೆಗಳು ಸರಿಯಾದ ರೀತಿಯಲ್ಲಿ ತಾಂಡಗಳಿಗೆ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಮೂಲ ಸೌಲಭ್ಯಗಳಿಂದ ವಂಚಿತವಾಗಿವೆ ಎಂಬ ಕಾರಣ, ಸಮಾಜದಲ್ಲಿ ಕೆಳ ಹಾಗೂ ಅನಭಿವೃದ್ಧಿ ಹೊಂದಿದ ಸಮುದಾಯವೆಂದು ಶೋಷಣೆಗೆ ಗುರಿಯಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿಯತ್ತಲೇ ಇರುತ್ತವೆ. ಆದ್ದರಿಂದ ಸರಕಾರವಷ್ಟೇ ಇದರ ಬಗ್ಗೆ ಕಾಳಜಿ ವಹಿಸಿದರೆ ಸಾಲದು. ಜೊತೆಗೆ ಸಮುದಾಯದಲ್ಲಿನ ಜನರಿಗೂ ಜವಾಬ್ದಾರಿಗಳಿದ್ದು ತಾಂಡಗಳ ಅಭಿವೃದ್ಧಿಗೆ ಹೆಚ್ಚು ಶ್ರಮಿಸಬೇಕು.

ಕೆಳಸಮುದಾಯಗಳಿಗೆ ಶತಮಾನಗಳಿಂದ ಇಂಡಿಯಾದ ಸಾಮಾಜಿಕ ವ್ಯವಸ್ಥೆಯು ಜೀವನದ ವಿವಿಧ ರಂಗಗಳಲ್ಲಿ ಸಮಾನ ಅವಕಾಶಗಳನ್ನು ನಿರಾಕರಿಸುತ್ತಲೇ ಬಂದಿದೆ. ಸಂವಿಧಾನಾತ್ಮಕವಾಗಿರುವ ಹಕ್ಕುಗಳಿದ್ದರೂ ಬಹುತೇಕ ಲಂಬಾಣಿಗರ ಪರಿಸ್ಥಿತಿಯಲ್ಲಿ ಯಾವ ಗಮನಾರ್ಹವಾದ ಬದಲಾವಣೆಯಾಗಿಲ್ಲ. ಶತಮಾನಗಳ ಇತಿಹಾಸವನ್ನು ಹೊಂದಿರುವ ಅಸಮಾನತೆಯನ್ನು, ದಶಕಗಳ ಇತಿಹಾಸವನ್ನು ಮಾತ್ರ ಹೊಂದಿರುವ ಸಮಾನತಾ ಪ್ರಯತ್ನಗಳಿಂದ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಅನೇಕ ಶತಮಾನಗಳಿಂದ ತುಳಿತಕ್ಕೆ ಒಳಗಾಗುತ್ತಿದ್ದ ಸಾಮಾಜಿಕ ವ್ಯವಸ್ಥೆಯಿಂದಲೇ ಹೊರಗೆ ಇಡಲ್ಪಟ್ಟು ಒಮ್ಮಿಂದೊಮ್ಮಲೇ ಸಮಾನತೆಯನ್ನು ನೀಡಿದ ಮಾತ್ರಕ್ಕೆ ಎಲ್ಲರಿಗೂ ಈ ಸಮಾನತೆಯ ಪ್ರಯೋಜನವನ್ನು ಸಮಾನ ರೀತಿಯಲ್ಲಿ ಪಡೆಯ ಲಾಗುವುದಿಲ್ಲ. ಸಮಾನ ಅಂಶಗಳ ಪ್ರಯೋಜನವನ್ನು ಪಡೆಯಲು ನಡೆಯುವ ಸ್ಪರ್ಧೆಯಲ್ಲಿ ಭಾಗವಹಿಸುವವರೆಲ್ಲರಿಗೂ ಸಮುದಾಯಗಳಿಗೆ ಸಾಮಾಜಿಕ, ಆರ್ಥಿಕ ಹಿನ್ನಲೆಯ ಸೌಲಭ್ಯವಿಲ್ಲದಂತಾಗಿದೆ. ವಾಸ್ತವ್ಯದಲ್ಲಿ ಸಮಾನತೆಗಾಗಿ ಹೋರಾಟ ಅಸಮಾನರ ನಡುವೆ ನಡೆಯುತ್ತಲೇ ಇದೆ. ಇದರಿಂದ ಹೊರತಾಗಿ ಒಂದು ಕೆಳಸಮುದಾಯವಾದ ಲಂಬಾಣಿಗರು ತಮ್ಮ ಸ್ವಪ್ರಯತ್ನದಿಂದ, ತಮ್ಮ ಹಕ್ಕು ಭಾದ್ಯತೆಗಳನ್ನು ತಾವು ಸ್ವಂತ ಅರಿತು ಹೋರಾಡಬೇಕು. ಹೀಗೆ ಹೋರಾಡಲು ಸಂಘಟಿತರಾಗಬೇಕು. ಈ ನಿಟ್ಟಿನಲ್ಲಿ ಶಿಕ್ಷಣ ಒಂದು ಸಾಧನವಾಗಿ ಮಾರ್ಪಡುತ್ತದೆ ಎಂಬುದು ನನ್ನ ಭಾವನೆ.

# ಅನುಬಂಧಗಳು

## ಓದಿದ ಪುಸ್ತಕಗಳು


ಅಬ್ದುಲ್ ಅಜೀಜ್ ಕೆ.ಜಿ.ವಾಸುಕಿ. **ಕನ್ನಡ ಅಧ್ಯಯನ,** ಕರ್ನಾಟಕದ ಆರ್ಥಿಕತೆ, ಕನ್ನಡ ವಿ.ವಿ., ೧೯೯೭

ಅನಂತರಾಮಯ್ಯ ಎನ್., **ಭಾರತದ ಗ್ರಾಮೀಣ ಅಭಿವೃದ್ಧಿ ಒಂದು ವಿಮರ್ಶೆ,** ಅಂಬುಜ ಪ್ರಕಾಶನ ಬೆಂಗಳೂರು, ೧೯೯೩

ಆರಾಧ್ಯ ಬಿ.ಎಂ.ಎಂ., **ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ,** ಕರ್ನಾಟಕ ಸರ್ಕಾರ ಬೆಂಗಳೂರು, ೧೯೮೫

ಗಿರಿಜ ಟಿ. ದಾವಣಗೆರೆ, **ಇದು ನಮ್ಮ ಜಿಲ್ಲೆ,** ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧

ಗೋಪಾಲಕೃಷ್ಣರಾವ್, **ಸಾಮಾಜಿಕ ರಾಜಕೀಯ ಜ್ಞಾನದ ಮೂಲ ಪಾಠಗಳು,** ಅನುವಾದ ಪ್ರಗತಿ ಪ್ರಕಾಶನ, ೧೯೮೯

ಚಿದಾನಂದಮೂರ್ತಿ ಎಂ., **ಸಂಶೋಧನಾ ತರಂಗ,** ಸ,೨ ಬೆಂಗಳೂರು, ವಿ.ವಿ, ಬೆಂಗಳೂರು, ೧೯೭೦

ಚಂದ್ರಶೇಖರ್ ಬಿ.ದಾಮ್ಲೆ, **ಭಾರತೀಯ ಸಾಮಾಜಿಕ ಅಧ್ಯಯನ,** ನವೀನ ಪ್ರಕಾಶನ, ಬೆಂಗಳೂರು, ೧೯೯೭

ಚಮನ್‌ಲಾಲ್, ಜಿಪ್ಸಿ **ಭಾರತ್ ಕಿ ವಿಸ್ಮೃತಿ ಸಂತತಿ,** ಪ್ರಕಾಶನ ವಿಭಾಗ, ಸುಚನಾ ಔರ್ ಪ್ರಸಾರಣ್ ಮಂತ್ರಾಲಯ, ಭಾರತ್ ಸರ್ಕಾರ್, ೧೯೮೪

ದೇವೇಂದ್ರ ಕುಮಾರ ಹಕಾರಿ, ಕೆ.ಎಸ್.ಸಂಧ್ಯಾರೆಡ್ಡಿ, **ಗ್ರಾಮೀಣ ಪಶುಸಾಕಣೆ,** ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ದೇವೇಂದ್ರ ಕುಮಾರ ಹಕಾರಿ, ಕೆ.ಎಸ್.ಸಂಧ್ಯಾರೆಡ್ಡಿ, **ಗ್ರಾಮೀಣ ವೃತ್ತಿಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ದೇವೇಂದ್ರ ಕುಮಾರ ಹಕಾರಿ, ಕೆ.ಎಸ್.ಸಂಧ್ಯಾರೆಡ್ಡಿ, **ಗ್ರಾಮೀಣ ಉಡುಗೆ ತೊಡುಗೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ನಾಯಕ ಡಿ.ಬಿ., ಲಂಬಾಣಿ ಜನಪದ ಸಾಹಿತ್ಯ, **ಬಂಜಾರಾ ಪ್ರಕಾಶನ,** ಗುಲ್ಬರ್ಗ, ೨೦೦೦

ನಾಯಕ ಡಿ.ಬಿ., ಗಿರಿಜನ ಸಿರಿ, **ಪ್ರೊ.ಪಿ.ಕೆ.ಖಂಡೋಬಾ ಅಭಿನಂದನಾ ಸಮಿತಿ,** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿ.ವಿ. ಗುಲ್ಬರ್ಗ, ೨೦೦೩

ನಾಗೇಶ್ ಎಚ್.ವ್ಹಿ., **ಗ್ರಾಮಾಂತರ,** ಸುಜಾತ ಪ್ರಕಾಶನ, ಧಾರವಾಡ, ೧೯೮೮

ನಾಗೇಶ್ ಎಚ್.ವ್ಹಿ., **ಗ್ರಾಮ ವ್ಯಾಸಂಗ,** ಚಂದ್ರನಾಥ ಪ್ರಕಾಶನ, ಧಾರವಾಡ, ೧೯೮೧

ನಾಗೇಶ್ ಎಚ್.ವ್ಹಿ., **ಭಾರತೀಯ ಗ್ರಾಮ,** ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೮೬

ನಾರಾಯಣ ಎ. ವಿಶ್ವ, **ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ,** ಚೇತನ್ ಬುಕ್ ಹೌಸ್, ಮೈ, ೧೯೯೩

ನಾರಾಯಣ ಎ. ವಿಶ್ವ, **ಸಾಮಾನ್ಯ ಸಮಾಜಶಾಸ್ತ್ರ,** ಚೇತನ್ ಬುಕ್ ಹೌಸ್, ಮೈ, ೧೯೯೬

ಪ್ರಭಾಕರ ಎ.ಎಸ್., **ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು,** ಕನ್ನಡ ವಿ.ವಿ. ಹಂಪಿ, ೨೦೦೦

ಬಸವರಾಜ ನೆಲ್ಲಿಸರ, **ಲಂಬಾಣಿಗರು,** ಐ.ಬಿ.ಎಚ್. ಪ್ರಕಾಶನ, ೧೯೮೦

ಬಸವರಾಜ ನೆಲ್ಲಿಸರ, **ಲಂಬಾಣಿಗರು ಮತ್ತು ಬಗ್ಗರು,** ಯಕ್ಷ ಪ್ರಕಾಶನ, ಮೈಸೂರು, ೧೮೭೭

ಭೈರಪ್ಪ ಕೆ,. **ಸಮಾಜಶಾಸ್ತ್ರ,** ಜೈ ಭಾರತ ಪ್ರಕಾಶನ, ಬೆಂಗಳೂರು, ೧೯೮೭

ಭೈರಪ್ಪ ಕೆ., **ಸಮಾಜಶಾಸ್ತ್ರ,** ಭಾಗ ೨, ಪ್ರಕಾಶ ಸಾಹಿತ್ಯ, ಬೆಂಗಳೂರು, ೧೯೮೨

ಮೊಗಳ್ಳಿ ಗಣೇಶ್, **ದಲಿತರು ಮತ್ತು ಜಾಗತೀಕರಣ,** ಕನ್ನಡ ವಿ.ವಿ. ಹಂಪಿ, ೧೯೯೯

ಮೋಹನ್‌ರಾವ್ ಬಿ., **ಸಮಾಜಶಾಸ್ತ್ರ,** ವಿಜಯ ಬುಕ್ ಡಿಪೊ, ಗದಗ, ೧೯೮೭

ಮರುಳಸಿದ್ದಯ್ಯ ಎಚ್.ಎಂ., **ಗ್ರಾಮೋನ್ನತಿ,** ಲಕ್ಷ್ಮಿಮುದ್ರಾಣಾಲಯ, ಬೆಂಗಳೂರು, ೧೯೯೩

ಮಾಳಿ ಎಚ್.ಬಿ., **ಸಮಾಜಶಾಸ್ತ್ರ,** ಭಾರತ ಬುಕ್ ಡಿಪೋ ಮತ್ತು ಪ್ರಕಾಶನ, ಧಾರವಾಡ, ೧೯೮೫

ರೂಪಚಂದ್ರವರ್ಮ, **ಭಾರತೀಯ ಜನ ಜಾತೀಯು,** ಪ್ರಕಾಶನ ವಿಭಾಗ, ಸೂಚನಾ ಔರ್ ಪ್ರಸಾರಣ್ ಮಂತ್ರಾಲಯ್, ಭಾರತ ಸರಕಾರ, ೨೦೦೨

ವೆಂಕಟಸುಬ್ಬಯ್ಯ ಜಿ., ಎರವಲು **ಪದಕೋಶ,** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ. ಬೆಂಗಳೂರು, ೧೯೯೮

ಲಕ್ಕಪ್ಪಗೌಡ ಎಚ್.ಜೆ., (ಪ್ರ.ಸಂ) **ಕರ್ನಾಟಕದ ಬುಡಕಟ್ಟುಗಳು,** ಸ.೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

ಸದಾಶಿವಯ್ಯ ಎಚ್.ಎಂ., **ಸಮಾಜಶಾಸ್ತ್ರ,** ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೭೮

ಸಣ್ಣರಾಮ, **ಲಂಬಾಣಿ ಸಂಸ್ಕೃತಿ,** ಮಲ್ನಾಡು ಪಬ್ಲಿಕೇಷನ್ಸ್, ಶಿವಮೊಗ್ಗ, ೧೯೯೯

ಸಣ್ಣರಾಮ, **ಲಂಬಾಣಿ ಗಾದೆಗಳು,** ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

ಶಂಕರನಾರಾಯಣ ತೀ.ನಂ., **ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು,** ಪ್ರಸಾರಂಗ, ಮೈ.ವಿ.ವಿ. ೧೯೮೨

ಶಂಕರರಾವ್ ಚ.ನ., **ಸಮಾಜಶಾಸ್ತ್ರ ಪರಿಚಯ,** ಜೈ ಭಾರತ್ ಪ್ರಕಾಶನ, ಮಂಗಳೂರು, ೧೯೯೫

Abbe .J. Dubois, **Hindu Manners, Customs and Ceremonis,** Oxford at Thee clarendon Press

Iyer L.K.A, **The Mysore Tribes and castes,** Mysore Govt. Press, R.P1978

Cumberlej .F.N, **Monograph on the Bangara Clan,** 1969

Chaturbhuj Sahu, **Indian Tribal Life, Sarup and Sons,** New Delhi, 2001

E.Thurston and Rangachari, **Castes and Tribes of Southern India,** v-iv, Madras Govt Press

Nanjundayya H.V Iyer, **The Mysore Tribes and Castes,** V-II Mysore Govt Press, 1928

Singh K.S., **People of India,** Nation Seeries V-II, **The Scheduled Castes,** Neilobrien Oxford University Press, 1993

Singh K.S., **People of India,** Nation Seeries V-XXVI part 2, The Scheduled castes, Neilobrin oxford University Press, 2003

Naik D.B., **The Art and Literature of Banjara Lambanis,** Abhinv publications, New Delhi, 2000

H.C. Upadhyay, **Status of Sheduled Tribes in India,** Anmol publications, pvt. Ltd, New Delhi, 1999

B.K.Roy, Burman, **Report of committe on Forest and Tribals in India,** Govt of India, Ministry of Human Affairs, New Delhi, 1982

R.R. Prasad, Bhotia, **Tribals of India Gian publishing Houses,** New Delhi, 1982

M.N. Srinivas, **Social change in Modern India**, Allied publications, Bomboy, 1966

V.H. Enthoven, **The Tribes and Castes of Bombay,** Bombay, Govt Press, 1990

Report of the Karnataka, second Backword classes commision Vol.1

M.N. Srinivas, **Collected Esaays,** Oxford University Press, New Delhi, 2002

Orlando Fals Borda, **The Challange of social changes,** sage publications Ltd., New Delhi, 1986

**ವಿಶ್ವಕೋಶಗಳು, ನಿಘಂಟು**

ಭಾರತದ ಗ್ಯಾಜಿಟೇರಿಯರ್

ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

ಕನ್ನಡ ಕಿಟಲ್ ಇಂಗ್ಲೀಷ್ ಡಿಕ್ಷನರಿ

ಕರಕುಶಲ ಕಲೆಗಳು, ಸಂ. ಕರೀಗೌಡ ಬೀಚನಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಸ.೨., ಕನ್ನಡ ವಿ.ವಿ. ಹಂಪಿ, ೨೦೦೦.

**ಪತ್ರಿಕೆಗಳು**

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೩, ಜುಲೈ ೧, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೨ ಅಂಕ ೩, ಜುನ್ ೫, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೧, ಜುನ್ ೧, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೧೪, ಡಿಸೆಂಬರ್ ೧೫, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧, ಅಂಕ ೧೩, ಡಿಸೆಂಬರ್ ೧, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೬ಮತ್ತು ೭, ಆಗಸ್ಟ್ ೧೫, ಸೆಪ್ಟಂಬರ್ ೧, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೧೨, ನವೆಂಬರ್ ೧೫, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೫, ಆಗಸ್ಟ್ ೧, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೪, ಜುಲೈ ೧೫, ೨೦೦೨

ಭಾರತ ಬಂಜಾರ ಪತ್ರಿಕೆ, ಸಂ.೧ ಅಂಕ ೮, ಸೆಪ್ಟಂಬರ್ ೧೫, ೨೦೦೨

ಹೊನ್ನಾಳಿ ತಾಲೂಕು ಅಂಕಿ ಅಂಶಗಳು, ತಾಲೂಕು ಕಛೇರಿಯ ಕಡತದ ವಿವರಗಳು

ಕರ್ನಾಟಕ ಬಂಜಾರ ಕೈಪಿಡಿ. ೧೯೯೭.

Annual Report 15.02.2001 to 14.2.2002. Sant Shree sevadas Maharaj Memorial Trust mevagad.

A Perspctive view of Banjars of India spread in 26 states and 5Mega cities. All India Bangara Sevasangh Bangra Mumbai.

# ಪ್ರಮುಖ ವಕ್ತೃಗಳ ವಿವರ

| ಕ್ರ.ಸ | ಹೆಸರು | ವಯಸ್ಸು | ವೃತ್ತಿ |
|---|---|---|---|
| **ಚಿಕ್ಕಬಾಸುರು ತಾಂಡ** | | | |
| ೦೧. | ರಾಮಚಂದ್ರನಾಯ್ಕ | ೫೦ | ಸರ್ಕಾರಿ ನೌಕರಿ |
| ೦೨. | ಶಾಂತಬಾಯಿ.ಎನ್ | ೪೫ | ವ್ಯಾಪಾರ |
| ೦೩. | ದೇನ್ಯಾನಾಯ್ಕ | ೭೮ | ವ್ಯವಸಾಯ |
| ೦೪. | ಶಾಂತಿಬಾಯಿ | ೪೫ | ಅಂಗನವಾಡಿ ಸಹಾಯಕಿ |
| ೦೫. | ಮೀನಾಕ್ಷಿ | ೨೫ | ವಿದ್ಯಾರ್ಥಿ |
| ೦೬. | ವೆಂಕಟೇಶ್‌ನಾಯ್ಕ | ೫೧ | ವ್ಯವಸಾಯ |
| ೦೭. | ಮೋಹನ್‌ಕುಮಾರ್ | ೨೦ | ವಿದ್ಯಾರ್ಥಿ |
| ೦೮. | ಜಿಮ್ಲಾನಾಯ್ಕ | ೭೦ | ವ್ಯವಸಾಯ |
| ೦೯. | ಸೋಮಶೇಖರ್.ಬಿ | ೨೬ | ವ್ಯಾಪಾರಸ್ಥ |
| ೧೦. | ತೀರ್ಥನಾಯ್ಕ | ೧೯ | ಜೀತ |
| ೧೧. | ಪರಮೇಶನಾಯ್ಕ | ೯೦ | ಕೂಲಿ |
| **ಮಲೆಕುಂಬಳೂರು** | | | |
| ೧೨. | ಆನಂದನಾಯ್ಕ | ೩೬ | ವ್ಯಾಪಾರ |
| ೧೩. | ಹನುಮಂತನಾಯ್ಕ | ೪೨ | ತಾತ್ಕಾಲಿಕ ನೌಕರಿ |
| ೧೪. | ಈಶ್ವರ ನಾಯ್ಕ | ೫೫ | ವ್ಯವಸಾಯ |
| ೧೪. | ಮಂಜಾನಾಯ್ಕ | ೪೨ | ವ್ಯವಸಾಯ |
| ೧೫. | ಸೀತಾಬಾಯಿ | ೬೯ | ವ್ಯವಸಾಯ |
| ೧೬. | ಮೂರ್ತಿನಾಯ್ಕ.ಡಿ.ಎನ್ | ೪೦ | ವ್ಯಾಪಾರ |
| ೧೭. | ರಂಜಿತಾ | ೨೦ | ವಿದ್ಯಾರ್ಥಿ |
| ೧೮. | ಲಚ್ಚಿಬಾಯಿ | ೪೨ | ಕೂಲಿ |
| **ಗುಡ್ಡಳ್ಳಿ ತಾಂಡ** | | | |
| ೧೯. | ತುಳಸಿಬಾಯಿ | ೩೩ | ಕೂಲಿ |
| ೨೦. | ಮಂಜಾನಾಯ್ಕ | ೩೦ | ಗ್ರಾ.ಪಂ.ಅಧ್ಯಕ್ಷ |
| ೨೧. | ಉಮಾ | ೧೨ | ಬಾಲ ಕಾರ್ಮಿಕಳು |
| ೨೨. | ಹನುಮಾನಾಯ್ಕ | ೪೭ | ಸರ್ಕಾರಿ ನೌಕರ |
| **ಸೂರಗೊಂಡನಕೊಪ್ಪ ತಾಂಡ** | | | |
| ೨೩. | ಕೃಷ್ಣನಾಯಕ್ | ೪೫ | ಪೂಜಾರಿ |
| ೨೪. | ಸೋಮಶೇಖರ್‌ನಾಯ್ಕ | ೨೬ | ವ್ಯಾಪಾರ |


[illegible]

# ಕೋಷ್ಟಕಗಳು


# ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಜನಸಂಖ್ಯೆ ಮತ್ತು ವಯೋಗುಂಪುಗಳು

| ತಾಲ್ಲೂಕುಗಳು | ತಾಂಡದ ಹೆಸರುಗಳು | ಕುಟುಂಬ | ಜನಸಂಖ್ಯೆ | | | ವಯೋಗುಂಪು: ೦ - ೪ ವರ್ಷ | | | ೫ - ೧೭ ವರ್ಷ | | | ೧೮ - ೪೦ ವರ್ಷ | | | ೪೧ - ೬೦ ವರ್ಷ | | | ೬೧ರ ಮೇಲ್ಪಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಹೊನ್ನಾಳಿ | ಚಿಕ್ಕಬಾಸೂರು ತಾಂಡ ವಿಜಯಾಪುರ | ೨೬೨ | ೭೨೫ | ೭೨೫ | ೧೪೫೦ | ೪೬ | ೬೧ | ೧೦೭ | ೧೭೩ | ೧೮೦ | ೩೫೩ | ೩೨೨ | ೩೩೧ | ೬೫೩ | ೧೪೩ | ೧೨೫ | ೨೬೮ | ೪೧ | ೨೮ | ೬೯ |
| | ಗುಡ್ಡಳ್ಳಿ ತಾಂಡ | ೬೫ | ೧೫೪ | ೧೫೬ | ೩೧೦ | ೧೦ | ೧೩ | ೨೩ | ೫೧ | ೪೭ | ೯೮ | ೭೨ | ೭೩ | ೧೪೫ | ೧೫ | ೧೬ | ೩೧ | ೪ | ೮ | ೧೨ |
| | ಮಲೆ ಕುಂಬಳೂರು | ೭೫ | ೨೪೪ | ೨೨೦ | ೪೬೪ | ೧೨ | ೧೪ | ೨೬ | ೭೧ | ೬೧ | ೧೩೨ | ೧೦೧ | ೯೪ | ೧೯೫ | ೪೫ | ೩೪ | ೭೯ | ೧೪ | ೨೦ | ೩೪ |
| | ಸೂರಗೊಂಡನ ಕೊಪ್ಪ | ೬೨ | ೧೫೬ | ೧೫೦ | ೩೦೬ | ೧೩ | ೧೧ | ೨೪ | ೬೩ | ೪೬ | ೧೦೯ | ೫೨ | ೬೭ | ೧೧೯ | ೨೫ | ೧೯ | ೪೪ | ೫ | ೪ | ೯ |
| | | ೪೬೪ | ೧೨೭೯ | ೧೨೫೧ | ೨೫೩೦ | ೮೧ | . ೯೯ | ೧೮೦ | ೩೫೮ | ೩೩೪ | ೬೯೨ | ೫೪೭ | ೫೬೫ | ೧೧೧೨ | ೨೨೮ | ೧೯೪ | ೪೨೨ | ೬೪ | ೬೦ | ೧೨೪ |

| | |
|---|---|
| ಗಂಡು | 1279 |
| ಹೆಣ್ಣು | 1251 |




| | |
|---|---|
| 0-4 | 180 |
| 5- 17 | 692 |
| 18-40 | 1112 |
| 41-60 | 422 |
| 61-abo | 124 |



## ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಲಂಬಾಣಿಗರ ವೈವಾಹಿಕ ಸ್ಥಾನಮಾನಗಳು


ವೈವಾಹಿಕ ಸ್ಥಾನಮಾನಗಳು

| | ಅವಿವಾಹಿತ | | | ವಿವಾಹಿತ | | | ವಿಧುರು, ವಿಧವೆ | | |
|---|---|---|---|---|---|---|---|---|---|
| ತಾಂಡಗಳ ಹೆಸರುಗಳು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಿಕ್ಕಬಾಸೂರು ತಾಂಡ | ೩೬೬ | ೩೨೦ | ೬೮೬ | ೩೪೯ | ೩೫೪ | ೭೦೩ | ೧೦ | ೪೧ | ೫೦ |
| ಗುಡ್ಡಳ್ಳಿ ತಾಂಡ | ೮೭ | ೬೯ | ೧೫೬ | ೬೨ | ೬೨ | ೧೨೪ | ೫ | ೨೪ | ೨೯ |
| ಮಲೆ ಕುಂಬಳೂರು | ೧೨೯ | ೯೮ | ೨೨೭ | ೧೧೦ | ೧೧೦ | ೨೨೦ | ೨ | ೧೫ | ೧೭ |
| ಸೂರಗೊಂಡನ ಕೊಪ್ಪ | ೯೦ | ೬೯ | ೧೫೭ | ೬೪ | ೬೪ | ೧೨೮ | ೪ | ೧೬ | ೨೦ |
| | ೬೭೨ | ೫೫೬ | ೧೨೨೬ | ೫೮೫ | ೫೯೦ | ೧೧೭೫ | ೨೧ | ೯೬ | ೧೧೬ |

ಅವಿವಾಹಿತ ೧೨೨೬

ವಿವಾಹಿತ ೧೧೭೫

ವಿಧುರ, ವಿಧವೆ ೧೧೬




ವೈವಾಹಿಕ ಸ್ಥಾನಮಾನ

ಗಂಡು

ಅವಿವಾಹಿತ ೬೭೨

ವಿವಾಹಿತ ೫೮೫

ವಿಧುರ, ವಿಧವೆ ೨೧

ಹೆಣ್ಣು

ಅವಿವಾಹಿತ ೫೫೬

ವಿವಾಹಿತ ೫೯೦


ವಿಧುರ, ವಿಧವೆ ೯೬

# ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಲಂಬಾಣಿಗರ ಶೈಕ್ಷಣಿಕ ಸ್ಥಾನಮಾನಗಳು

ಶೈಕ್ಷಣಿಕ ಸ್ಥಾನಮಾನಗಳು

| | ಪ್ರಾಥಮಿಕ ಶಿಕ್ಷಣ | | | ಮಾಧ್ಯಮಿಕ ಶಿಕ್ಷಣ | | | ಪ್ರೌಢಶಿಕ್ಷಣ | | | ಪದವಿ ಪೂರ್ವ ಶಿಕ್ಷಣ | | | ಡಿಪ್ಲೊಮಾ ಶಿಕ್ಷಣ | | | ಪದವಿ ಶಿಕ್ಷಣ | | | ಸ್ನಾತಕೋತ್ತರ | | ಇತರೆ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಗ್ರಾಮದ ಹೆಸರುಗಳು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಿಕ್ಕಬಾಸೂರು ತಾಂಡ | ೧೦೮ | ೧೧೩ | ೨೨೧ | ೧೦೭ | ೮೨ | ೧೮೯ | ೧೨೧ | ೭೬ | ೧೯೭ | ೩೬ | ೧೬ | ೫೨ | ೬ | | ೬ | ೩೬ | ೬ | ೪೨ | ೧ | ೧ | ೨೧ | ೯ | ೩೦ |
| ಗುಡ್ಡಳ್ಳಿ ತಾಂಡ | ೨೨ | ೨೬ | ೪೮ | ೩೩ | ೨೨ | ೫೫ | ೨೦ | ೨ | ೨೨ | ೫ | | ೫ | | | | ೫ | | ೫ | | | | | |
| ಮಲೆ ಕುಂಬಳೂರು | ೨೯ | ೩೩ | ೬೨ | ೪೦ | ೨೭ | ೬೭ | ೨೯ | ೧೮ | ೪೭ | ೭ | ೬ | ೧೩ | ೫ | | ೫ | ೧೧ | ೧ | ೧೨ | ೧ | ೧ | ೧ | ೫ | ೬ |
| ಸೂರಗೊಂಡನ ಕೊಪ್ಪ | ೧೯ | ೧೮ | ೩೭ | ೩೧ | ೨೦ | ೫೧ | ೧೭ | ೮ | ೨೫ | ೧ | | ೧ | | | | ೩ | | ೩ | ೧ | ೧ | | | |
| | ೧೭೮ | ೧೯೦ | ೩೬೮ | ೨೧೧ | ೧೫೧ | ೩೬೨ | ೧೮೭ | ೧೦೪ | ೨೯೧ | ೪೯ | ೨೨ | ೭೧ | ೧೧ | | ೧೧ | ೫೫ | ೭ | ೬೨ | ೩ | ೩ | ೨೨ | ೧೪ | ೩೬ |

| | |
|---|---|
| 1-4th | 368 |
| 4-7th | 362 |
| highschool | 291 |
| puc | 71 |
| diploma | 11 |
| Graduation | 62 |
| post graduation | 3 |
| other | 36 |




# ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಕಸಬುಗಳು

ಕಸಬುಗಳು

| | ಕೃಷಿಕರು | | | ಕೃಷಿಕೂಲಿಗಳು | | | ಸರಕಾರಿ ನೌಕರಸ್ಥರು | | | ಇತರ ಕಸಬುಗಳು | | |
|---|---|---|---|---|---|---|---|---|---|---|---|---|
| ತಾಂಡದ ಹೆಸರುಗಳು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಿಕ್ಕಬಾಸೂರು ತಾಂಡ | ೧೨೮ | ೩೧ | ೧೫೯ | ೧೪೧ | ೧೧೧ | ೨೫೨ | ೩೩ | ೧೦ | ೪೩ | ೧೦೨ | ೭೧ | ೧೭೩ |
| ಗುಡ್ಡಳ್ಳಿ ತಾಂಡ | ೧೬ | ೫ | ೨೧ | ೭೭ | ೮೬ | ೧೬೩ | ೧ | ೦ | ೧ | ೧೦ | ೩ | ೧೩ |
| ಮಲೆ ಕುಂಬಳೂರು | ೩೫ | ೯ | ೪೪ | ೮೮ | ೮೭ | ೧೭೫ | ೯ | ೫ | ೧೪ | ೧೮ | ೫ | ೨೩ |
| ಸೂರಗೊಂಡನ ಕೊಪ್ಪ | ೩೧ | ೬ | ೩೭ | ೬೮ | ೭೯ | ೧೪೭ | ೦ | ೦ | ೦ | ೪ | ೨ | ೬ |
| | ೨೧೦ | ೫೧ | ೨೬೧ | ೩೭೪ | ೩೬೨ | ೭೩೬ | ೪೩ | ೧೫ | ೫೮ | ೧೩೪ | ೮೧ | ೨೧೫ |


| | |
|---|---|
| agricultrist | 261 |
| agricultural labour | 736 |
| govt. employees | 58 |
| other | 215 |



# ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಂಡಾಗಳ ಮನೆ ಮಾದರಿಗಳು

ಮನೆಗಳು

| ತಾಂಡಗಳ ಹೆಸರುಗಳು | ಟೆಂಟು ಗುಡಿಸಲು | ಟಿನ್‌ಮನೆ | ಮಾಳಿಗೆ | ಆರ್.ಸಿ.ಸಿ. | ಹೆಂಚಿನ | ಬಾಡಿಗೆ | ಜನತಾಮನೆ | ಪಡಿತರ ಚೀಟಿ | ವಿದ್ಯುತ್ |
|---|---|---|---|---|---|---|---|---|---|
| ಚಿಕ್ಕಬಾಸೂರು ತಾಂಡ | ೮ | ೧ | | ೧ | ೧೮೬ | | ೬೬ | ೨೬೨ | ೧೫೧ |
| ಗುಡ್ಡಳ್ಳಿ ತಾಂಡ | ೬ | ೨ | | | ೨೨ | | ೩೪ | ೬೫ | ೩೧ |
| ಮಲೆ ಕುಂಬಳೂರು | ೩ | | | ೧ | ೪೯ | ೨ | ೨೦ | ೭೫ | ೫೯ |
| ಸೂರಗೊಂಡನ ಕೊಪ್ಪ | ೩ | | ೧ | | ೨೪ | | ೩೫ | ೬೨ | ೪೦ |
| | ೨೦ | ೩ | ೧ | ೨ | ೨೮೧ | ೨ | ೧೫೫ | ೪೬೪ | ೨೮೧ |



MEHABOOB PRINTERS
1st Ward, Chittawadgi, HOSPET-583 211.